ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕು

ಒಂದು ಅಧ್ಯಯನ

(ಶಿಲ್ಪಕಲಾ ಅಕಾಡೆಮಿಯ 2015–16ನೇ ಸಾಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ
ವಿಶೇಶ ಘಟಕ ಯೋಜನೆಯಡಿ ಫೆಲೋಶಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)



ಸಂಶೋಧಕರು

ಬಸವರಾಜ ಎಸ್. ಕಲೆಗಾರ

ಎಂ.ವಿ.ಎ, ಎಂ.ಫಿಲ್,(ಪಿ.ಹೆಚ್‌ಡಿ)

ಮಾರ್ಗದರ್ಶಕರು

ಡಾ. ಎಸ್.ಸಿ.ಪಾಟೀಲ

ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ
ಪ್ರಾದೇಶಿಕ ಕಛೇರಿ ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು

ಕನ್ನಡ ಭವನ, 1ನೇ ಮಹಡಿ, ಮೇಲ್ಮನೆ ಜೆ.ಸಿ. ರಸ್ತೆ ಬೆಂಗಳೂರು

2017

ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕು
ಒಂದು ಅಧ್ಯಯನ

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2015–16ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು

ಬಸವರಾಜ ಎಸ್ ಕಲೆಗಾರ

ಎಂ.ವಿ.ಎ., ಎಂ.ಫಿಲ್, (ಪಿಹೆಚ್.ಡಿ)

ಮಾರ್ಗದರ್ಶಕರು

ಡಾ. ಎಸ್.ಸಿ.ಪಾಟೀಲ

ವಿಶೇಷಾಧಿಕಾರಿಗಳು

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,

ಪ್ರಾದೇಶಿಕ ಕಚೇರಿ

ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಮೇಲ್ಮನೆ ಚಾಲುಕ್ಯ ವಿಭಾಗ

ಕನ್ನಡ ಭವನ, ಜೆ.ಸಿ.ರಸ್ತೆ ಬೆಂಗಳೂರು

ಕರ್ನಾಟಕ ಸರಕಾರ

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬಾದಾಮಿ

ಪ್ರಾದೇಶಿಕ ಕಛೇರಿ : ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಟ್ಟಡ

ಅಭಯ ಸಂಕೀರ್ಣ ಭವನ, ಕೆಳಮಹಡಿ-05, ನಂ.55, ರಿಸಾಲ್ದಾರ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020

ದೂ. 080-23460019 ಮೊ. +91 94485 63687 ಇ-ಮೇಲ್ : karnatakafineartuniversity@gmail.com,

---

ಪ್ರೊ. ಎಸ್. ಸಿ. ಪಾಟೀಲ
ವಿಶೇಷಾಧಿಕಾರಿಗಳು

ಸಂಖ್ಯೆ: ಕಲವಿವಿ:೨೦:ದೈ.ಪ:೨೦೧೭-೧೮/೧೬೪ ದಿನಾಂಕ : ೨೭.೦೪.೨೦೧೭

ಇವರಿಗೆ,
ರೆಜಿಸ್ಟ್ರಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು

ಮಾನ್ಯರೆ,

ವಿಷಯ : ವಿಶೇಷ ಘಟಕ ಯೋಜನೆಯಡಿ ೨೦೧೫-೧೬ನೇ ಸಾಲಿನ ಫೆಲೋಶಿಪ್ ಅಧ್ಯಯನವನ್ನು ಪೂರ್ಣಗೊಳಿಸಿದ ಕುರಿತು ದೃಢೀಕರಣ ಪತ್ರ

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಮಾರ್ಗದರ್ಶನದಲ್ಲಿ **ಶ್ರೀ. ಬಸವರಾಜ ಎಸ್. ಕಲೆಗಾರ** ಅವರು ಕಿರುಸಂಶೋಧನಾ ಯೋಜನೆ : **"ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕು – ಒಂದು ಅಧ್ಯಯನ"** ಎಂಬ ಯೋಜನೆಯನ್ನು ಪೂರ್ಣಗೊಳಿಸಿದ್ದು, ಅವರು ಹಸ್ತಪ್ರತಿಯನ್ನು ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸುತ್ತಿದ್ದಾರೆ. ಅವರಿಗೆ ಫೆಲೋಷಿಪ್ ಅನ್ನು ನಿಯಮಾನುಸಾರ ನೀಡಲು ಈ ಮೂಲಕ ಶಿಫಾರಸ್ಸು ಮಾಡುತ್ತಿದ್ದೇನೆ. ಪ್ರಕಟಣೆಯ ಹಂತದಲ್ಲಿ ಒಂದಿಷ್ಟು ಪರಿಷ್ಕರಣೆಯನ್ನು ಮಾಡಿ ಮುದ್ರಣ ಮಾಡಬಹುದಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ
27/4/2017
(ಪ್ರೊ. ಎಸ್. ಸಿ. ಪಾಟೀಲ)

ಪ್ರತಿ
೧. ಕಛೇರಿ ಪ್ರತಿ

ಪ್ರಮಾಣ ಪತ್ರ

ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕು ಒಂದು ಅಧ್ಯಯನ ಎಂಬ ಸಂಶೋಧನಾ ಪ್ರಬಂಧವನ್ನು **ಡಾ. ಎಸ್.ಸಿ.ಪಾಟೀಲ** ಅವರ **ಮಾರ್ಗದರ್ಶನದಲ್ಲಿ** ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2015–16ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಷಿಪ್‌ಗಾಗಿ **ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಈ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಕೊಂಕಲ್

ದಿನಾಂಕ: 28/4/2017

ಸಂಶೋಧಕರು

ಬಸವರಾಜ ಎಸ್.ಕಲೆಗಾರ

ಮೊ: ಕೊಂಕಲ್ ತಾ.ಶಹಾಪುರ

ಜಿ. ಯಾದಗಿರಿ–585355

ಪರಿವಿಡಿ

ಅಧ್ಯಾಯ – ೧

ಅಧ್ಯಯನ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಕಲೆ ಮಾನವನ ಅಭಿವ್ಯಕ್ತಿ ಕ್ರಮಗಳಲ್ಲಿ ಮೊದಲನೆಯದು ಎಂಬ ಪ್ರತಿವಾದದ ಪರವಾಗಿ ಅನೇಕ ಕಲೆಯ ನೆಲೆಗಳು ನಮ್ಮ ಕಣ್ಮುಂದೆ ಕಾಣುತ್ತಿರುವುದು ಸತ್ಯದ ಸಂಗತಿಯಾಗಿದೆ. ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನಾಟ್ಯ ಹೀಗೆ ಲಲಿತಕಲೆಗಳ ಪ್ರಾಯೋಗಿಕ ಅನುಸಂಧಾನದ ಪ್ರಕ್ರಿಯೆಯೇ ಸಾಕ್ಷಿ. ಮಾನವ ಬದುಕಿನ ವಿಶೇಷ ಸಂಗತಿಗಳನ್ನು ಸೌಂದರ್ಯದ ಮೀಮಾಂಸೆಯಾಗಿ, ಕಾರ್ಯರೂಪದ ಪ್ರಕ್ರಿಯೆಯಾಗಿ, ಸಾಮಾಜಿಕ ವಿಶ್ಲೇಷಣೆಯಾಗಿ ಹೊರ ಹೊಮ್ಮುವ ಮೂಲಕ ತನ್ನತನವನ್ನು ಕಾಪಾಡಿಕೊಂಡು ಅಧ್ಯಯನಕ್ಕೆ ಮೂಲ ಆಕರವಾಗಿ ಪರಿಣಮಿಸಿದೆ.

ಕಲೆ, ಕಲಾವಿದ, ಕಲಾಕೃತಿ ನೋಡುಗ ಅರ್ಥೈಸಿಕೊಳ್ಳುವ ಸಹೃದಯಿಗಳ ಮಧ್ಯೆ ಅರ್ಥ–ವಿನ್ಯಾಸಗಳ ಮೂಲ ಪರಿಕಲ್ಪನೆಯಲ್ಲಿ ವಿಮರ್ಶೆಗೊಳಪಡುವ ಕಲಾಲೋಕ ಹಲವು ಸಾಮರ್ಥ್ಯಗಳ ಪ್ರತಿಬಿಂಬವಾಗಿದೆ. ಮಾನವ ಕುಲದ ಪ್ರತಿಷ್ಠೆಯ ಪದವಾಗಿ, ಆಂತರಿಕ ಸಂವೇದನೆಯ ಮೂಲ ಸ್ವರೂಪವಾಗಿ ಕಲೆ ಅನಾವರಣಗೊಂಡಿದೆ. ಇಂತಹ ಕಲೆಯ ನೆಲೆಗಳನ್ನು ತಮ್ಮ ಬದುಕಿನುದ್ದಕ್ಕೂ

ಸಂರಕ್ಷಿಸುತ್ತ, ಅದನ್ನೆ ಬದುಕಿನ ಕಲೆಯಾಗಿ ಉಸಿರಾಡುತ್ತ ಬಂದಿರುವ ಜನಪದ ಕಲಾಲೋಕ ನಮ್ಮೆಲ್ಲರಿಗೆ ಮಾದರಿಯಾಗಿದೆ. ಕಲಾ ಪ್ರಕಾರಗಳಲ್ಲಿ ಒಂದಾದ ಜನಪದ ಶಿಲ್ಪಕಲೆ ಜನರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪ್ರಮುಖ ಕಲಾಭಿವ್ಯಕ್ತಿಯಾಗಿದೆ. ಜನಪದರು ತಮ್ಮ ದಿನನಿತ್ಯ ಕಾಯಕದ ಸಂದರ್ಭಗಳಲ್ಲಿ ವಿಶೇಷ ಚಟುವಟಿಕೆಯ ಕ್ರಿಯೆಯಾಗಿ ಹೊರ ಹೊಮ್ಮುವ ಮೂಲಕ ಜನಪದ ಶಿಲ್ಪಕಲೆ ಎಂಬ ಮೆರಗನ್ನು ಪಡೆದುಕೊಳ್ಳುತ್ತದೆ.

ಅಧ್ಯಯನ ಉದ್ದೇಶ :

ನಾಡಿನ ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ಜನಪದ ಶಿಲ್ಪ ಪ್ರಕಾರವು ತನ್ನದೇಯಾದ ಮಹತ್ವ ಪಡೆದುಕೊಂಡಿದೆ. ಗ್ರಾಮೀಣ ಜನ ಜೀವನದ ಕಲಾ ಉಸಿರಾಟವೇ ಈ ಕಲೆಯ ತಾತ್ವಿಕ ಸ್ವರೂಪದ ಲಕ್ಷಣಗಳಾಗಿವೆ. ಬಡಿಗೇರರು, ಕಮ್ಮಾರರು, ಪಂಚಾಳರು (ಕುಂಬಾರರು), ವಿಶ್ವಕರ್ಮ, ಮಾದರರು, ಹೊಲೆಯರು ಸೇರಿದಂತೆ ಅನೇಕ ಸಮುದಾಯಗಳು ಶಿಲ್ಪಕೆತ್ತನೆಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ವಂಶಪರಂಪರೆಯ ನೆಲೆಯಲ್ಲಿ ಹವ್ಯಾಸದ, ಪ್ರತಿನಿತ್ಯದ ಪ್ರಯತ್ನ, ತಾಳ್ಮೆಯ ಪ್ರತೀಕವಾಗಿ ಜನಪದ ಶಿಲ್ಪಕಲೆ ಪಸರಿಸುತ್ತದೆ. ಈ ಜನಪದ ಶಿಲ್ಪಕಲೆಯು ಸಗರನಾಡಿನ ಮಣ್ಣಲ್ಲಿ ಸತ್ವಭರಿತ ಕಲೆಯಾಗಿ ಹೊರಹೊಮ್ಮುವುದನ್ನು ಕಾಣುತ್ತೇವೆ. ಸಗರನಾಡು ಪ್ರದೇಶದಲ್ಲಿ ಅತ್ಯಂತ ಪ್ರತಿಭಾವಂತ ಕಲಾವಿದರು ನೆಲೆಸಿದ್ದಾರೆ. ವಂಶ ಪರಂಪರೆಯ ಹಾಗೂ ಪ್ರಭಾವ ಪ್ರೇರಿತ ಕಲಾವಲಯದ ನೆರಳಲ್ಲಿ ಪಳಗಿ ಅತ್ಯುತ್ತಮ ಶಿಲ್ಪಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಕದುರೆಶಿಲ್ಪ, ಪಡಸಾಲಿ ಜೋಡಣೆ, ಗ್ರಾಮದೇವತೆ ಕೆತ್ತನೆ, ಗೌರಿ ಮಾಡದ ಕುಸುರಿ ಕೆಲಸ, ರಥಶಿಲ್ಪ ನಿರ್ಮಾಣ, ಗಂಗೆ, ಗೌರಿ, ಶಿವ, ಪಾರ್ವತಿ, ಪಲ್ಲಕ್ಕಿ ಹಾಗೂ ರೈತರ ವ್ಯವಸಾಯಕ್ಕೆ ಬೇಕಾಗುವ ಸಲಕರಣೆಗಳ ತಯಾರಿಕೆಯಲ್ಲಿ ಜನಪದ ಶಿಲ್ಪಿಗಳು ತಮ್ಮ ಜೀವನವನ್ನೇ ಮುಡುಪಾಗಿಟ್ಟುಕೊಂಡಿದ್ದಾರೆ. ಹೊಟ್ಟೆಪಾಡಿಗಾಗಿ ಈ ಕಲೆ ಎಂದೆನಿಸಿದರೂ ಸಹ ಜನಪದ ಶಿಲ್ಪಿಗಳ ಮರಗೆತ್ತನೆ ಶಿಲ್ಪಗಳು ಅಕಾಡೆಮಿಕ್ ವಲಯದ ಜ್ಞಾನಕೇಂದ್ರಿತ ಶಿಲ್ಪಗಳಂತೆ ಕಂಡುಬರುವುದರಲ್ಲಿ ಯಾವ ಅನುಮಾನವು ಇಲ್ಲ. ಅಧ್ಯಯನ ಶಿಸ್ತಿನ ಹಾದಿಯಂತೆ ನೈಜರೂಪ ಪಡೆದುಕೊಂಡಿರುವ ಜನಪದ ಶಿಲ್ಪಿಗಳ ಶಿಲ್ಪಕಲೆಯು ಅಧ್ಯಯನಕಾರರಿಗೆ ವಿಶೇಷ ಆಕರ

ಸಾಮಗ್ರಿಗಳಾಗಿ ಕಂಡುಬರುತ್ತವೆ. ಶಾಸ್ತ್ರೀಯ ಹಿನ್ನಲೆಯ ಅಧ್ಯಯನವಿಲ್ಲದೆ, ವಂಶಪರಂಪರೆಯ ಎಳೆಯಾಗಿ, ಹಿರಿಯ ಕಲಾ ಮನೆತನದ ಪ್ರಭಾವ ಕೇಂದ್ರಿತ ನೆಲೆಯಾಗಿ ಗ್ರಹಿಸಿಕೊಂಡು ಉತ್ತಮ ಶಿಲ್ಪಗಳನ್ನು ರಚಿಸುವಲ್ಲಿ ಸಗರನಾಡಿನ ಜನಪದ ಶಿಲ್ಪ ಕಲಾವಿದರು ಕ್ರಿಯಾಶೀಲರಾಗಿದಾರೆ. ಇಂತಹ ಹಿರಿಯ ತಲೆಮಾರಿನ ಅನೇಕ ಶಿಲ್ಪಿಗಳು ಸಗರನಾಡಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಅಂತಹವರ ಕಲೆ ಮತ್ತು ಬದುಕಿನ ಸ್ಥಿತ್ಯಂತರಗಳ ಕುರಿತು ನಡೆಯಬೇಕಾದ ಅನಿವಾರ್ಯತೆಯಿರುವುದರಿಂದ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಅಧ್ಯಯನದಿಂದ ಸಗರನಾಡಿನ ಮಹತ್ವ, ಸಾಂಸ್ಕೃತಿಕ ಪರಿಸರ, ಜನಪದ ಕಲಾಪರಂಪರೆಯ ನೋಟ, ಜನಪದ ಶಿಲ್ಪಿಗಳ ಪ್ರಸ್ತುತ ಸ್ಥಿತಿ–ಗತಿ ಮತ್ತು ಅವರ ಮೇಲಿನ ಪ್ರಭಾವ ಪ್ರೇರಣೆ ಇತ್ಯಾದಿ ಸಂಗತಿಗಳನ್ನರಿಯುವುದರೊಂದಿಗೆ ಶಿಲ್ಪಕಲಾವಿದರಿಗೆ ಆರ್ಥಿಕ ಧನ ಸಹಾಯವಾಗಿ ಮಾಶಾಸನದ ಪ್ರಕ್ರಿಯೆಯನ್ನು ಒಳಗೊಂಡಂತೆ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕಿನ ವಿಶೇಷ ಅಧ್ಯಯನದ ಸಂಗತಿ ಇದಾಗಿದೆ.

ಸ್ವರೂಪ :

ಪ್ರಸ್ತುತ ಈ ಸಂಶೋಧನೆಯ ಅಧ್ಯಯನವನ್ನು ಆರು ಅಧ್ಯಾಯನಗಳನ್ನಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಾಯ – ೧ : ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ – ೨ : ಸಗರನಾಡಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು

ಈ ಎರಡನೆಯ ಅಧ್ಯಾಯದಲ್ಲಿ ಸಗರನಾಡಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳ ಕುರಿತಂತೆ ಸ್ಥೂಲವಾದ ಭೂಮಿಕೆಯನ್ನು ಒದಗಿಸಲಾಗಿದೆ.

ಅಧ್ಯಾಯ – ೩ : ಸಗರನಾಡಿನ ಜನಪದ ಶಿಲ್ಪ ಪರಂಪರೆ

ಮೂರನೆಯ ಅಧ್ಯಾಯದಲ್ಲಿ ಸಗರನಾಡಿನ ಜನಪದ ಶಿಲ್ಪಗಳ ವೈವಿಧ್ಯತೆ, ಅರ್ಥ, ಆಚರಣೆಯ ವಿಧಾನ ಸೇರಿದಂತೆ ಜನಪದ ಶಿಲ್ಪ ಪರಂಪರೆಯ ವಿವರಣಾತ್ಮಕ ನೋಟವನ್ನು ಕಟ್ಟಿಕೊಡಲಾಗಿದೆ.

ಅಧ್ಯಾಯ – ೪ : ಸಗರನಾಡಿನ ಜನಪದ ಶಿಲ್ಪಿಗಳು

ಈ ಅಧ್ಯಾಯದಲ್ಲಿ ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಹಾಗೂ ಅವರ ಬದುಕಿನ ಸ್ಥಿತ್ಯಂತರಗಳ ಕುರಿತಂತೆ ಸಮಗ್ರವಾಗಿ ಚರ್ಚಿಸಲಾಗಿದೆ.

ಅಧ್ಯಾಯ – ೫ : ಸಗರನಾಡಿನ ಜನಪದ ಶಿಲ್ಪಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಈ ಅಧ್ಯಾಯದಲ್ಲಿ ಸಗರನಾಡಿನ ಜನಪದ ಶಿಲ್ಪಿಗಳಿಗೆ ಪ್ರಭಾವ ಪ್ರೇರಣೆಯಾದ ಸಂಗತಿಗಳು, ಹಾಗೂ ಕಲಾಕೃತಿಗಳನ್ನು ರಚಿಸುವ ತಂತ್ರಗಾರಿಕೆ, ಶೈಲಿಯ ಕುರಿತಂತೆ ವಿವರಿಸಲಾಗಿದೆ.

ಅಧ್ಯಾಯ – ೬ : ಸಮಾರೋಪ

ಈ ಅಧ್ಯಾಯದಲ್ಲಿ ಒಟ್ಟು ಅಧ್ಯಾಯಗಳಲ್ಲಿ ಕಂಡು ಬಂದಿರುವ ಫಲಿತಗಳನ್ನು ಇಲ್ಲಿ ಸಮೀಕ್ಷೆ ಮಾಡಿ ದಾಖಲಿಸಲಾಗಿದೆ.

ಅಧ್ಯಯನದ ವ್ಯಾಪ್ತಿ :

ಈ ಅಧ್ಯಯನವು ಸಗರನಾಡಿನ ಭೂಮಿಕೆಯನ್ನು ಪ್ರಸ್ತುತ ಪಡಿಸಿದಂತೆ ಪ್ರಮುಖವಾಗಿ ಶಹಾಪುರ ತಾಲೂಕು, ಸುರಪುರ ತಾಲೂಕು, ಜೇವರ್ಗಿ ತಾಲೂಕುಗಳ ವ್ಯಾಪ್ತಿಯನ್ನು ಮಾತ್ರ ಹೊಂದಿದೆ. ಈ ಮೂರು ತಾಲೂಕುಗಳ ಒಳಗೊಂಡಂತೆ ಸಗರನಾಡಿನ ವ್ಯಾಪ್ತಿಯಾಗಿದೆ. ಆ ಕಾರಣಕ್ಕಾಗಿ ಅಧ್ಯಯನ ಶೀರ್ಷಿಕೆಯಂತೆ ಶಹಾಪುರ, ಸುರಪುರ, ಜೇವರ್ಗಿ ತಾಲೂಕಿನ ವ್ಯಾಪ್ತಿಯೊಳಗೆ ಬರುವಂತಹ ಹಿರಿಯ ತಲೆಮಾರಿನ ಕಲಾವಿದರ ಕಲೆ ಮತ್ತು ಬದುಕನ್ನು ಪ್ರತಿಬಿಂಬಿಸುವ ಅಧ್ಯಯನದ ವ್ಯಾಪ್ತಿ ಇದಾಗಿದೆ.

ಅಧ್ಯಯನದ ವಿಧಾನ : ಈ ಅಧ್ಯಯನಕ್ಕೆ ಎರಡು ರೀತಿಯ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿಗಳು

೨. ಆನುಷಂಗಿಕ ಆಕರ ಸಾಮಗ್ರಿಗಳು

೧. ಮೂಲ ಆಕರ ಸಾಮಗ್ರಿಗಳು :

ಮೂಲ ಆಕರ ಸಾಮಗ್ರಿಗಳಲ್ಲಿ ಕ್ಷೇತ್ರಕಾರ್ಯ ಅತ್ಯಂತ ಪ್ರಮುಖವಾದುದಾಗಿದೆ. ಅಧ್ಯಯನದ ಕ್ರಮದಂತೆ ಅಗತ್ಯವಾದಂತಹ ವಿಧಾನ ಇದಾಗಿದೆ.

ಯಾವುದೇ ಪ್ರಕಾರದ, ದೇಶದ ಸಂಶೋಧನೆಯಿರಲಿ, ಅಲ್ಲಿನ ಇತಿಹಾಸ, ಕಲೆ, ಸಂಸ್ಕೃತಿ ಹೀಗೆ ಹಲವು ಬಗೆಯಲ್ಲಿ ಸಂಶೋಧನೆ ಕೈಗೊಂಡಾಗ ಕ್ಷೇತ್ರಕಾರ್ಯ ಪ್ರಮುಖವಾದದ್ದು. ಇದು ಮೂಲ ಆಕರ ಸಾಮಗ್ರಿಯಾಗಿ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿಗಳು :

ಸಂಶೋಧನಾ ಪ್ರಬಂಧವನ್ನು ರಚಿಸುವಲ್ಲಿ ಎರಡನೆಯ ವಿಧಾನ ಆನುಷಂಗಿಕ ಆಕರ ಸಾಮಗ್ರಿಯಾಗಿದ್ದು, ಇದಕ್ಕೆ ಪ್ರಕಟಿತ ಮತ್ತು ಅಪ್ರಕಟಿತ ಸಾಹಿತ್ಯ ಹಾಗೂ ವಿವಿಧ ಗ್ರಂಥಗಳು, ಪತ್ರಿಕಾ ಲೇಖನಗಳು, ವರದಿಗಳು, ಸಂಪುಟಗಳು, ಅನುವಾದಿತ ಗ್ರಂಥಗಳು, ವಿಶ್ವಕೋಶಗಳು, ಸಂಶೋಧನಾ ಮಹಾ ಪ್ರಬಂಧಗಳು ಹೀಗೆ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಆನುಷಂಗಿಕ ಆಕರ ಸಾಮಗ್ರಿಗಳನ್ನಾಗಿ ಸಂಗ್ರಹಿಸಿ ಅಧ್ಯಯನವನ್ನು ಮಾಡುವ ಮೂಲಕ ಈ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ – ೨
ಸಗರನಾಡಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು

ಅಧ್ಯಾಯ – ೨

ಸಗರನಾಡಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು

ಕನ್ನಡ ನಾಡಿನ ಮಿಡಿತದಲ್ಲಿ ಸಗರನಾಡಿಗೆ ಅತ್ಯಂತ ಪ್ರಾಮುಖ್ಯತೆಯಿದೆ. ಸಗರನಾಡು ಅಂದರೆ ಸಡಗರ ಸಂಭ್ರಮದಿಂದ ಕಂಗೊಳಿಸುವ ಸಗರ ಚಕ್ರವರ್ತಿಯ ಆಳ್ವಿಕೆಯ ನಾಡು. ಕೃಷ್ಣ–ಭೀಮೆಯ ಒಡಲಲ್ಲಿರಿಸಿಕೊಂಡು ಹರಿಯುವ ತಾಯ್ನಾಡು.

ಈ ಪ್ರದೇಶದಲ್ಲಿ ರಾಷ್ಟ್ರಕೂಟರು, ಬಾದಾಮಿ ಚಾಲುಕ್ಯರು, ಬಹಮನಿ ಅರಸರು, ಹೈಹಯರು, ಕಳಚೂರ್ಯರು, ವಿಜಯನಗರ ಅರಸರು, ಜೊತೆಗೆ ಸುರಪುರ ಅರಸರ ಸ್ವಾತಂತ್ರ್ಯ ಸಂಗ್ರಾಮದ ವೀರಭೂಮಿ. ಸಗರನಾಡಿನ ವಿಸ್ತೀರ್ಣತೆ ೩೦೦ ರಿಂದ ೫೦೦ ಪ್ರದೇಶದವರೆಗೆ ಇದೆಯೆಂದು ಪ್ರತೀತಿಯಿದೆ. ಎವೂರಿನ ಕ್ರಿ.ಶ. ೧೦೭೭ರ ಶಾಸನಗಳಲ್ಲಿ ಚಾಲುಕ್ಯರಿಗೆ ಒಳಪಟ್ಟಿರುವ ಈ ಸಗರನಾಡು ೩೦೦ ಎಂದಿದೆ. ಕ್ರಿ.ಶ. ೧೧೯೯ ರ ಕಲಚೂರಿ ಅರಸರ ಕೊಲ್ಲೂರು ಮತ್ತು ದೇವಪುರ ಶಾಸನದಲ್ಲಿ ಸಗರ ೫೦೦ ಎಂದು ಉಲ್ಲೇಖಿಸಲಾಗಿದೆ.

ಸಗರನಾಡು ಎಂಬ ಹೆಸರು ಬಂದದ್ದು ಭೌಗೋಳಿಕವಾಗಿ ಹೇಳುವುದಾದರೆ ಕೃಷ್ಣಾ

ಮತ್ತು ಭೀಮಾ ನದಿಗಳ ನಡುವೆ ಇರುವ ಪ್ರದೇಶವೇ (ವಿಜಯಪುರ ಜಿಲ್ಲೆ ಹಲವು ಪ್ರದೇಶ) ಸಗರನಾಡು, ಶಹಾಪುರ, ಸುರಪುರ, ಜೇವರ್ಗಿ ಈ ಮೂರು ತಾಲೂಕುಗಳು ಪ್ರಮುಖ ಕೇಂದ್ರ ಸ್ಥಾನ. ಪುರಾಣಾಧಾರಿತ ಕಥೆಯೊಂದು ಕೇಳುವುದಾದರೆ ಸಗರ ಚಕ್ರವತಿ 'ಸಗರ' (ಶಹಾಪುರ ತಾಲೂಕಿನ ಗ್ರಾಮ)ವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಸತ್ಯ ಹರಿಶ್ಚಂದ್ರನ ವಂಶಜ ಬಾಹುಕ, ಬಾಹುಕನಿಂದ ಶತ್ರುಗಳು ರಾಜ್ಯವನ್ನು ಕಸಿದುಕೊಂಡು ಆತ ಕಾಡಿಗೆ ಓಡಿಹೋದ. ಅರಮನೆಯಲ್ಲಿದ್ದ ಅವನ ಪತ್ನಿ ತಾಯಿ ಆಗುತ್ತಾಳೆ ಅನ್ನುವ ವಿಷಯ ಸವತಿಗೆ ತಿಳಿಯುತ್ತದೆ. ಗರ್ಭಪಾತವಾಗಲಿ ಅನ್ನುವ ದೃಷ್ಟಿಯಿಂದ ಆಕೆಯ ಸವತಿ ಊಟದೊಳಗೆ ಗರ (ವಿಷ) ಬೆರೆಸುತ್ತಾಳೆ. ಗರ್ಭದಲ್ಲಿರುವ ಮಗು ವಿಷವನ್ನು ಮೆಟ್ಟಿ ವಿಷದೊಂದಿಗೆ ಹುಟ್ಟಿದ ಮಗುವೇ ಯಶಸ್ವಿ ಸಾಮ್ರಾಟ 'ಸಗರ ಚಕ್ರವರ್ತಿ'. ಅದುವೇ 'ಸ + ಗರ = ಸಗರ' ನಾಡಾಯಿತು[೧] ಎಂಬ ಪೌರಾಣಿಕ ಕಥೆಯಿದೆ.

ಈ ಸಗರನಾಡಿನ ನೆಲದಲ್ಲಿ ಅನೇಕ ಶರಣರು ಜನಿಸಿ ಆಧ್ಯಾತ್ಮದನುಭವನ್ನು ಸಾರಿ ಸರ್ವಧರ್ಮ ಸಮನ್ವಯತೆಯನ್ನು ಕಟ್ಟಿಕೊಟ್ಟಿದ್ದಾರೆ. ಶರಣ ತಿಂಥಣಿಯ ಮೌನೇಶ್ವರ, ಗೋಗಿಯ ಸಂತ ಚಂದಾಹುಸೇನಿ, ದಿಗ್ಗಿಯ ಸಂಗಮನಾಥ, ಅಂತೆಯೇ ಕಾಲಜ್ಞಾನದ ಶರಣ ಕೊಡೆಕಲ್ಲ ಬಸವಣ್ಣ, ಆದ್ಯ ವಚನಕಾರ ದೇವರ ದಾಸಿಮಯ್ಯ, ಶರಣೆ ದುಗ್ಗಳೆ, ಕೆಂಬಾವಿ ಭೋಗಣ್ಣ, ಹಾವಿನಾಳ ಕಲ್ಲಯ್ಯ, ಜೇವರ್ಗಿಯ ಷಣ್ಮುಖ ಶಿವಯೋಗಿಗಳು, ಕೊಂಡಗುಳಿ ಕೇಶಿರಾಜ ಶಹಾಪುರ ತಾಲೂಕಿನ, ಕನ್ಯಾಕೊಳೂರು ಕೊಡಗೂಸು, ಹೀಗೆ ಅನೇಕ ಶರಣ ತತ್ವ ಪರಂಪರೆ ಈ ನಾಡಿನಲ್ಲಿ ಶಾಂತಿಯ ಕಿರಣವಾಗಿ ಹೊರಹೊಮ್ಮಿದೆ. ಶರಣ ತತ್ವದ ವಿವೇಚನೆಯಂತೆ ಸಾಹಿತ್ಯ ಪ್ರಕಾರವು ಹುಟ್ಟಿಕೊಂಡು ನಾಡಿನ ಮಿಡಿತಕ್ಕೆ ಸಹಕಾರಿಯಾಗಿದೆ.

ಭೌಗೋಳಿಕ ಪ್ರದೇಶದ ಭೂಮಿಕೆಯಲ್ಲಿ ಗಮನಿಸಿದಾಗ ಸಗರನಾಡು ಪ್ರದೇಶವು ಬೆಟ್ಟ, ಗುಡ್ಡಗಳ ಸಾಲುಗಳಿಂದ ಶಿಖರವಾಗಿ ಕಂಗೊಳಿಸುತ್ತದೆ. ಬೆಟ್ಟದೊಳು ಹೊಕ್ಕು ಗಮನಿಸಿದರೆ ಅನೇಕ ಕೋಟೆ, ಕೊತ್ತಲುಗಳಿಂದ ರಾಜಾಶ್ರಯದ ಹೆಜ್ಜೆಗಳು ಅರಿವಿಗೆ ಬರುತ್ತವೆ. ಅಂತೆಯೇ

೧. ಜಿ.ವಿ. ಶಿವಕುಮಾರ – ಸುರಗಿರಿ: ಡಾ. ವಾಸುದೇವ ಸೇಡಂ ಎಚ್. ಅವರ ಲೇಖನ, ಪು. ಸಂ. –೪೮೨

ಆಯಾ ಅರಸು ಮನೆತನಗಳ ಆಳ್ವಿಕೆಯಲ್ಲಿ ಲಲಿತಕಲೆಗಳ ಉಗಮ ಮತ್ತು ವಿಕಾಸದ ಕಿರಣಗಳು ಕಣ್ಣಿಗೆ ಗೋಚರಿಸಿ ಅಚ್ಚರಿಯನ್ನು ಉಂಟು ಮಾಡುತ್ತವೆ. ನೆಲದ ಹಸಿರು ಬದುಕುವ ಜೀವಿಗಳಿಗೆ ಸದಾ ಅನ್ನವನ್ನುಣಿಸಿ ಪೊರೈಸುತ್ತಿದೆ. ಈ ನೆಲದ ಮಹತ್ವದ ಬೆಳೆಯಾಗಿ ಜೋಳ, ಹೆಸರು, ಹತ್ತಿ, ಸೇಂಗಾ, ತೊಗರಿ ಬೆಳೆಗಳ ಫಸಲು ಅತ್ಯಂತ ಪರಿಣಾಮಕಾರಿಯಾಗಿ ಬೆಳೆಯುತ್ತವೆ. ಗುಡ್ಡಗಾಡು ತಿರುಗಿದಂತೆ ಹಣ್ಣು ಹಂಪಲು ಜೊತೆಗೆ ಹಸಿರು ತಪ್ಪಲುಗಳ ತಂಪು ಬದುಕುವ ಜೀವರಾಶಿಗಳಿಗೆ ಬಲೂ ಕಂಪಾದ ಇಂಪು ನೀಡುತ್ತದೆ.

ಬಹು ಸಂಸ್ಕೃತಿಯ ಚಿಂತನೆಯ ಫಲವಾಗಿ ಈ ನಾಡಿನಲ್ಲಿ ಹಿಂದೂ, ಮುಸ್ಲಿಂ ಭಾವೈಕ್ಯತೆಯ ಕೇಂದ್ರ ಬಿಂದುವಾಗಿ ನಾಡಿನ ಶ್ರೇಷ್ಠತೆಗೆ ಹೆಸರಾಗಿದೆ. ಸಾಹಿತ್ಯದ ಸ್ವಾದವನ್ನರಿಯುವ ಕಾರ್ಯದಲ್ಲಿ ಸಗರನಾಡಿನ ಸಾಹಿತ್ಯ ಅತ್ಯಂತ ಮೌಲ್ಯಯುತವಾದದ್ದು. ದೇವಪುರದ ಲಕ್ಷ್ಮೀಶನ ಜೈಮಿನಿ ಭಾರತ, ಚನ್ನಬಸವನ ಪುರಾಣ, ಸುರಪುರ ರಾಜರ ಅಷ್ಟದಿಗ್ಬಂಧನ ದಿನಚರಿ ಹೀಗೆ ಹಲವಾರು ಸಾಹಿತ್ಯ ಕೃತಿಗಳು ಹುಟ್ಟಿಕೊಂಡು ಕನ್ನಡ ಸಾಹಿತ್ಯದ ಶ್ರೇಷ್ಠತೆಗೆ ದಾರಿಮಾಡಿಕೊಂಡ ಸತ್ಯದ ಅರಿವು ನಮ್ಮ ಕಣ್ಮುಂದಿದೆ.

ಸಗರನಾಡು ಚಾರಿತ್ರಿಕವಾಗಿ, ಪೌರಾಣಿಕವಾಗಿ ಎಷ್ಟು ಮಹತ್ವವೋ ಹಾಗೆಯೇ ಸ್ಥಳಗಳಾದ ಸುರಪುರ, ಶಹಾಪುರ, ದೇವಪುರ, ಕಕ್ಕೇರಿ, ರಾಜನ ಕೊಳೂರು, ಹಗರಟಗಿ, ಕೆಂಭಾವಿ, ಏವೂರು, ಶಿರವಾಳ, ಹುರಸಗುಂಡಗಿ, ಭೀಮರಾಯನಗುಡಿ, ಸಗರ ವಿಭೂತಿಹಳ್ಳಿ, ಜೇವರ್ಗಿ ತಾಲೂಕಿನ ಕುಳಗೇರಿ ಮುಂತಾದ ಸ್ಥಳಗಳಲ್ಲಿ ಆದಿಮ ಜನಾಂಗದ ಅವಶೇಷಗಳು ದೊರೆತಿವೆ.

ಸುರಪುರ ಸಂಸ್ಥಾನದಲ್ಲಿ ಅಂದು ಬ್ರಿಟಿಷ್ ಸರಕಾರದ ರಾಜಕೀಯ ಪ್ರತಿನಿಧಿಯಾಗಿ ಬಂದ ಮೆಡೋಸ ಟೇಲರ್ ಹಾಗೂ ಕರ್ನಾಟಕದ ಸಂಶೋಧಕರಾದ ಡಾ.ಕೆ. ಪದ್ದಯ್ಯನವರು, ಡಾ. ಹನುಮಾಕ್ಷಿ ಗೋಗಿ, ಡಾ. ಎಸ್.ಕೆ. ಅರುಣಿ ಮುಂತಾದ ಸಂಶೋಧಕರಿಂದ ಹಲವಾರು ಶಾಸನ, ಪ್ರಾಚೀನ ಸ್ಮಾರಕ, ದೇಗುಲಗಳು ಬೆಳಕು ಕಂಡಿವೆ.

ಸಗರನಾಡಿನ ಖನಿಜ ಸಂಪತ್ತನ್ನು ಗಮನಿಸಿದಾಗ ಶಹಾಪುರ ತಾಲೂಕಿನ ಗೋಗಿ ಗ್ರಾಮದಲ್ಲಿ ಯುರೇನಿಯಂ ದೊರೆತಿದೆ. ಮರ್ಕಲ್, ಕೊಳೂರಿನಲ್ಲಿ ವಜ್ರದ ನಿಕ್ಷೇಪವಿದ್ದು (ಕೊಹಿನೂರ

ವಜ್ರ) ಅಲ್ಲದೆ ದೋರನಹಳ್ಳಿ, ಸಿರವಾಳ, ಧರಿಯಾಪುರ, ರಾಜಾಪುರ, ಅಣಬಿ, ಕರ್ಕಿಹಳ್ಳಿ, ಹೊಸಕೇರಾ, ನಾಗನಟಗಿ ಮುಂತಾದ ಗ್ರಾಮಗಳಲ್ಲಿ ಸುಣ್ಣದಕಲ್ಲು (ಸೇದಿಕಲ್ಲು) ದೊರೆಯುತ್ತದೆ.

ಅಲ್ಲದೆ ಸುರಪುರ ತಾಲೂಕಿನ ಮಂಗಳೂರು, ಮಾವಿನಮಟ್ಟಿ, ಚನಾಪುರ, ನಗಾನೂರು ಪ್ರದೇಶಗಳಲ್ಲಿ ಚಿನ್ನದ ಗಣಿಗಳಿದ್ದವೆಂದು ಭೂಗರ್ಭ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ತಿಂಥಣಿ ಗ್ರಾಮದಲ್ಲಿ ತಾಮ್ರದ ಅದಿರು, ಹುಣಸಗಿ, ವಜ್ಜಲ, ಚನ್ನೂರು ಗ್ರಾಮಗಳಲ್ಲಿ ಸಿಮೆಂಟ್ ತಯಾರಿಕೆಗೆ ಬೇಕಾಗುವ ಸುಣ್ಣದಕಲ್ಲು ದೊರೆಯುತ್ತದೆ.

ಜನಪದರ ಸಾಂಸ್ಕೃತಿಕ ಶ್ರೀಮಂತಿಕೆಯಿಂದಾಗಿ, ಕಲೆ, ಸಾಹಿತ್ಯ, ಆಚರಣೆಗಳೆಲ್ಲವನ್ನು ಒಳಗೊಂಡಂತೆ ಸಗರನಾಡಿನ ಧಾರ್ಮಿಕ ಜಾತ್ರೆಗಳು ಕೂಡ ವಿಶೇಷವಾಗಿವೆ. ಉದಾ: ಶಹಾಪುರದ ಚರಬಸವೇಸ್ವರ ಜಾತ್ರೆ, ತಿಂಥಣಿ ಮಾನಪ್ಪಯ್ಯನ ಜಾತ್ರೆ, ಹಾಲಗೇರಿ ಯಲ್ಲಮ್ಮನ ಜಾತ್ರೆ, ಸಗರದ ಎಲ್ಲಮ್ಮ, ದಿಗ್ಗಿ ಸಂಗಮೇಶನ ಜಾತ್ರೆ, ಭೀಮರಾಯನ ಗುಡಿಯ ಬಲಭೀಮೇಶ್ವರನ ಜಾತ್ರೆ, ಸುರಪುರ ವೇಣುಗೋಪಾಲಸ್ವಾಮಿ ಆರಾಧನಾ ಪರಂಪರೆ ಹೀಗೆ ನಾನಾ ಬಗೆಯ ಜಾತ್ರೆಗಳಿಂದ ಜನಪದರ ಆರಾಧನೆ, ಕಲೆ, ಸಾಹಿತ್ಯ ನಂಬಿಕೆಗಳ ಪ್ರತೀಕವಾಗಿ ವಿಜೃಂಭಿಸುತ್ತವೆ.
ಹಾಗೆಯೇ ಗ್ರಾಮದೇವತೆಗಳ ಜಾತ್ರಾ ಮಹೋತ್ಸವಗಳು ಅಲ್ಲಿನ ಸಾಂಸ್ಕೃತಿಕ ತಳಪಾಯಗಳು ಕಲಾತ್ಮಕ ನೆಲೆಗಳಿಂದ ಕಂಗೊಳಿಸುತ್ತವೆ.

ಸಗರನಾಡಿನ ಸಾಂಸ್ಕೃತಿಕ ಹಿರಿಮೆಗಳು ನಾಡಿನ ವಿವಿಧ ಆಚರಣೆಗಳಿಗಿಂತ ಭಿನ್ನವಾಗಿ ಪಸರಿಸುವುದರೊಂದಿಗೆ ಗಮನ ಸೆಳೆಯುತ್ತವೆ.

ಸಗರನಾಡಿನ ಲಲಿತಕಲೆಗಳು

ಸಗರನಾಡಿನ ಪರಿಸರದಲ್ಲಿ ಲಲಿತಕಲೆಗಳು ಉಗಮಗೊಂಡು ತನ್ನದೇಯಾದ ಹಿರಿಮೆಯನ್ನು ಗಳಿಸಿವೆ. ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನಾಟಕ, ಸಾಹಿತ್ಯ ರಚನೆ ಸೇರಿದಂತೆ ಲಲಿತಕಲೆಗಳ ಭಾವಸಂಗಮ ಈ ಸಗರನಾಡು. ಪ್ರತಿಯೊಂದು ಕಲಾಭಿವ್ಯಕ್ತಿಯ ಕ್ರಮದಲ್ಲಿ ವಿಶಿಷ್ಟ ಹೊಳಹುಗಳನ್ನು ನೀಡುವುದರೊಂದಿಗೆ ಇಲ್ಲಿನ ಕಲೆ ವಿಸ್ತಾರಗೊಳ್ಳುತ್ತದೆ. ಸಗರನಾಡಿನ ಶಿಲ್ಪಕಲೆಯ ನೆಲೆಗಳನ್ನು ವಿಕ್ಷೀಸಿದಾಗ ಶಿರವಾಳದ ದೇಗುಲಗಳ ಸಮುಚ್ಚಯ (ಶಹಾಪುರ ತಾ॥) ಸುರಪುರ ತಾಲೂಕಿನ

ಏವೂರ ಶಿಲ್ಪ ದೇಗುಲಗಳು, ಸುರಪುರ ವೇಣುಗೋಪಾಲಸ್ವಾಮಿ ದೇವಾಲಯ, ರೋಜಾ ಗ್ರಾಮದ ಗುಂಬಜ್‌ಗಳು, ಗೋಗಿ ಚಂದಾ ಹುಸೇನಿ ಗುಂಬಜ್‌ನ ಕಲಾ ವಿನ್ಯಾಸಗಳು, ಅನೇಕ ಗ್ರಾಮಗಳ ಕಲಾತ್ಮಕ ವಾಡೆಗಳು, ಅಲ್ಲಿನ ಕಲಾ ನೈಪುಣ್ಯತೆ, ಅರಸು ಮನೆತನಗಳು ರೂಪಿಸಿದ ದೇವಾಲಯದ ಶಿಲ್ಪ ಸಂಸ್ಕೃತಿ, ಕೋಟೆ ಕೊತ್ತಲುಗಳ ಶಿಲ್ಪಕಲೆ ಹಾಗೆಯೇ ಜನಪದ ಕಲಾವಿದರು ರಚಿಸುವ ಮರಗೆತ್ತನೆಯ ಕುದುರೆಶಿಲ್ಪಗಳು (ಸಗರನಾಡಿನ ವಿಶೇಷತೆ ಸಾರುವ ಜನಪದ ಮರಗೆತ್ತನೆ ಕಲೆ) ತಲಬಾಗಿಲ ವಿನ್ಯಾಸಗಳು, ರಥ, ಪಲ್ಲಕ್ಕಿ, ಹೀಗೆ ಸಂಪ್ರದಾಯಿಕ ಶಿಲ್ಪಕಲೆಯ ಆಗರವಾಗಿ ಸಗರನಾಡು ಕಂಗೊಳಿಸುತ್ತದೆ.

ಚಿತ್ರಕಲೆಯ ದೃಷ್ಟಿಯಿಂದ ನೋಡಿದಾಗ ಸಗರನಾಡಿನಲ್ಲಿ ಮೆರೆದ ಗರುಡಾದ್ರಿ ಕಲೆ ನಾಡಿನ ಕಿರುರೂಪ ಚಿತ್ರಕಲೆ ಎಂದೆ ಪ್ರಸಿದ್ಧಿ ಪಡೆದಿದೆ. ರಾಜಾಶ್ರಯ ಚಿತ್ರ ನೆಲೆಗಳಿಗಿಂತ ಹಿಂದೆ ಹೋದರೆ ಸಗರನಾಡಿನ ಪ್ರದೇಶದಲ್ಲಿ ಹಗರಟಗಿ, ಹಿರೇಹೆಬ್ಬಾಳ, ಹಿರೇಹಳ್ಳ, ಹುಣಸಗಿ ಪರಿಸರದಲ್ಲಿ ಆದಿಮರು ರಚಿಸಿದ ಪ್ರಾಗೈತಿಹಾಸಿಕ ಚಿತ್ರಗಳು ಕಂಡು ಬರುತ್ತವೆ. ಆದಿ ಮಾನವನ ಅಂದಿನ ಸ್ಥಿತಿಗತಿ, ಸಾಂಸ್ಕೃತಿಕ ಪ್ರಜ್ಞೆಯನ್ನು ವಿಸ್ತರಿಸುತ್ತವೆ. ಮುಂದುವರೆದ ಭಾಗವಾಗಿ ರಾಜಾಶ್ರಯ ನೆಲೆಯಲ್ಲಿ ಸುರಪುರ ಸಂಸ್ಥಾನದ ಗರುಡಾದ್ರಿ ಕಲೆಯು ಹಲವು ವಿಧಗಳಾಗಿ ರೂಪ ಪಡೆದು ನಾಡಿನ ಸಾಂಸ್ಕೃತಿಕ ವಲಯದಲ್ಲಿ ಶ್ರೇಷ್ಠತೆಗೆ ದಾರಿಮಾಡಿಕೊಂಡಿದೆ. ಸಾಂಪ್ರದಾಯಿಕ ಚಿತ್ರಕಲೆಯ ಅನೇಕ ಹೊಳಹುಗಳು ಸಮಕಾಲೀನ ಕಲೆಯ ಚಿಂತನೆಯಲ್ಲಿ ಅಡಕವಾಗಿ ಪರಂಪರೆಯ ಮೆರಗನ್ನು ಮತ್ತೆ ಮತ್ತೆ ಮರುಕಳಿಸುತ್ತ ಚಿತ್ರಕಲಾ ಲೋಕವೊಂದು ಮಹತ್ವದ ನೆಲೆಯಾಗಿ ಸಗರನಾಡಿನ ಇತಿಹಾಸದಲ್ಲಿ ದಾಖಲೆಗೊಂಡಿದೆ.

ಚಿತ್ರಕಲೆ, ಶಿಲ್ಪಕಲೆಯಂತಹ ಅನೇಕ ಕಲೆಗಳಾದ ಸಂಗೀತ ಪರಂಪರೆಯು ಸಗರನಾಡಿನ ಇತಿಹಾಸದಲ್ಲಿ ಹೆಗ್ಗಳಿಕೆಯಿದೆ. ಸಂಗೀತ, ನಾಟಕ, ಸಾಹಿತ್ಯ, ಜನಪದ ಕಲೆ, ಮುಂತಾದ ಲಲಿತಕಲೆಗಳು ಹುಟ್ಟಿಕೊಂಡು ತಮ್ಮದೇಯಾದ ನಿಲುವಿನಲ್ಲಿ ಬೆಳೆದು ಸಗರನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತಿವೆ.

ಅಧ್ಯಾಯ – ೩

ಸಗರನಾಡಿನ ಜನಪದ ಶಿಲ್ಪ ಪರಂಪರೆ

ಅಧ್ಯಾಯ – ೩
ಸಗರನಾಡಿನ ಜನಪದ ಶಿಲ್ಪ ಪರಂಪರೆ

ದೃಶ್ಯಾತ್ಮಕ ನೆಲೆಯ ಪ್ರಕ್ರಿಯೆಯಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವ ಜನಪದ ಕಲಾಪರಂಪರೆ ಜನರ ಮನಸ್ಸಿನ ಅಂತರಂಗದ ಸಾಂಸ್ಕೃತಿಕ ಸೊಬಗಾಗಿ ಮೆರೆದಿರುವುದು ಅತ್ಯಂತ ವಿಶೇಷವಾಗಿದೆ. ಸಗರನಾಡಿನ ಜನಪದ ಕಲಾ ರಚನೆಗಳು ಕೂಡ ಕುತೂಹಲಕಾರಿಯಾಗಿ ನಮ್ಮೊಂದಿಗೆ ಸಂವಾದಿಸುತ್ತಿರುವುದು ಕಣ್ಮುಂದಿದೆ. ಜನಪದ ಶಿಲ್ಪಕಲೆ ಎಂದರೆ ಜನಸಾಮಾನ್ಯರು ಯಾವ ಓದಿನ (ಶಿಕ್ಷಣ) ಅರಿವಿಲ್ಲದೆ ತಮಗೆ ಹೇಗೆ ಶಿಲ್ಪ ರೂಪಿಸಬೇಕೋ ಹಾಗೆಯೇ ರಚಿಸಿ ಸಂಭ್ರಮ ಪಡುವ, ಸಂತೋಷ ಆಚರಣೆ ಹೀಗೆ ಹಲವು ವಿಧಾನದ ಆಸಕ್ತಿಯ ಕೇಂದ್ರವಾಗಿ ಹೊರ ಹೊಮ್ಮುವ ಮುಕ್ತವಾದ ಅಭಿವ್ಯಕ್ತಿಯೆಂದೆ ಕರೆಯುತ್ತಾರೆ. ಗ್ರಾಮೀಣ ಜನರ ಜೀವನಾಡಿಯಾಗಿ ಜನಪದ ಶಿಲ್ಪಕಲೆ ಮೈತಾಳುತ್ತದೆ. ಕಲಾ ನೆಲೆಯ ಪ್ರಾಚೀನ ಪರಂಪರೆಯ ಕುರುಹುಗಳಾದಿಯಾಗಿ ಜನಪದರ ಶಿಲ್ಪ ರಚನಾ ಪ್ರಕ್ರಿಯೆಯೂ ಸಹ ಮೊದಲ (ಆರಂಭಿಕ) ಕಲಾ ರಚನೆಯೆಂದರೆ

ಎಲ್ಲರೂ ಒಪ್ಪುವಂತಹದು. ಈ ಜನಪದ ಶಿಲ್ಪ ಪ್ರಕಾರದ ಮುಂದುವರೆದಂತೆ ಶಿಷ್ಟ ಸಂಪ್ರದಾಯದ ಶಿಲ್ಪಗಳು ರೂಪಗೊಂಡು ಅಳತೆ, ಅಧ್ಯಯನ ಶೀಲತೆ, ತಾಳಮಾನ, ಶಾಸ್ತ್ರೀಯ ಹೀಗೆ ಕ್ರಮಬದ್ಧತೆಯ ಜ್ಞಾನ ಪ್ರಕ್ರಿಯೆಯಾಗಿ ಜಾಗತೀಕರಣದ ವಾಸ್ತವ ನೆಲೆಯಿಂದ ಅಭಿವ್ಯಕ್ತಿ ಪಡೆವ ವಿಧಾನ ಶಿಷ್ಟ ಸಂಪ್ರದಾಯದ ಜನಪದ ಶಿಲ್ಪಕಲೆಯೆಂದು ವ್ಯಾಖ್ಯಾನಿಸಬೇಕಾಗುತ್ತದೆ. ಜನಪದ ಶಿಲ್ಪಕಲೆ ಜನರ ಮೆಚ್ಚುಗೆಯ, ಧರ್ಮ ಪ್ರಧಾನ ಕೇಂದ್ರಿತ ಒತ್ತಡದ ಸೂಕ್ಷ್ಮತೆಗಳಿಗೆ ಒಳಗಾಗುವಂತಹ ಸೂಕ್ಷ್ಮತೆಗಳಿಂದ ರೂಪ ಪಡೆದು ಆಚರಣೆಗೆ ಮುಂದಾಗುವ ಕಲಾಭಿವ್ಯಕ್ತಿ, ನೋಡಿದರೆ ಭಯಾನಕ ರೂಪದರ್ಶನ, ಅಷ್ಟೇ ಶಾಂತಿಯ ಹೊಳಪು, ಅಳತೆಯಿಲ್ಲದಂತಿದ್ದರೂ ಅರ್ಥದ ಲೆಕ್ಕಾಚಾರದಲ್ಲಿ ವಾಸ್ತವತೆಗೆ ಬಲೂ ಹತ್ತಿರವೆಂಬಂತೆ ಜನಪದ ಶಿಲ್ಪಗಳು ರೂಪಗೊಳ್ಳುತ್ತವೆ. ಬಣ್ಣ, ರೇಖೆ, ಬಳಸುವ ವಿಧಾನ, ವಿಷಯದ ವಸ್ತು ನಿಷ್ಠತೆ, ಪ್ರಮಾಣ, ರೂಪ ಲಾವಣ್ಯ, ಎಲ್ಲವೂ ನೈಜ ಜನಪದ ಜೀವನದ ಸಾಂಸ್ಕೃತಿಕ ಸೊಬಗಾಗಿ ಈ ಜನಪದ ಶಿಲ್ಪಕಲೆ ರೂಪ ಪಡೆದುಕೊಂಡಿರುತ್ತದೆ. ಆದರೆ ಶಿಷ್ಟಪದ ಜನಪದ ಕಲಾಪರಂಪರೆ ಸಮಕಾಲೀನ ಕಲಾವಲಯದ ಅನೇಕ ಹೊಳಹುಗಳು ಒಂದಕ್ಕೊಂದು ಪೂರಕವೆಂಬಂತೆ ಸಮ್ಮಿಶ್ರವಾಗಿ ಅಭಿವ್ಯಕ್ತಿಗೊಂಡು ಅಕಾಡೆಮಿಕ ವಲಯದಲ್ಲಿ ತನ್ನ ಅಸ್ತಿತ್ವವನ್ನು ಪಸರಿಸಿಕೊಂಡಿದೆ. ಈ ಎಲ್ಲ ಜನಪದ ಶಿಲ್ಪ ಪರಂಪರೆಯ ಪ್ರಕಾರಗಳು ಸಗರನಾಡಿನ ಭಾಗದಲ್ಲಿ ಹೇಗೆ ವಿಧಗಳನ್ನು ಕಂಡಿದೆ ಎಂಬುದನ್ನು ಈ ಕೆಳಗಿನಂತೆ ಕಾಣುತ್ತೇವೆ.

ಸಗರನಾಡಿನ ಪ್ರದೇಶವಾದ ಶಹಾಪುರ, ಸುರಪುರ, ಜೇವರ್ಗಿ ತಾಲೂಕುಗಳಲ್ಲಿ ಕಂಡು ಬರುವ ಜನಪದ ಶಿಲ್ಪಗಳು ಬಹುತೇಕ ಮಣ್ಣು, ಮರ, ಶಿಲೆ, ಹೆಂಡಿ (ಸೆಗಣಿ), ಹೀಗೆ ಹಲವು ಮಾಧ್ಯಮಗಳಲ್ಲಿ ರಚನೆಯಾಗುತ್ತವೆ. ಅದರಲ್ಲಿ

೧. ಮಣ್ಣಿನ ಮಾಧ್ಯಮದ ಶಿಲ್ಪಗಳು

೨. ಮರದ ಮಾಧ್ಯಮದ ಶಿಲ್ಪಗಳು

೩. ಕಲ್ಲಿನಲ್ಲಿ ಅರಳಿದ ಜನಪದ ಶಿಲ್ಪಗಳು

೪. ಲೋಹ ಮಾಧ್ಯಮದ ಜನಪದ ಶಿಲ್ಪಕಲೆ ಎಂಬ ನಾಲ್ಕು ಬಗೆಯಾಗಿ ಕಾಣುತ್ತೇವೆ.

೧. ಮಣ್ಣಿನ ಮಾಧ್ಯಮ ಶಿಲ್ಪಗಳು

* ಮಣ್ಣೆತ್ತಿನ ಶಿಲ್ಪಗಳು

ಸಗರನಾಡಿನ ಭಾಗದಲ್ಲಿ ಮಣ್ಣೆತ್ತಿನ ಅಮವಾಸೆ ಬಂತೆಂದರೆ ಜನಪದರ ಬದುಕಿನಲ್ಲಿ ಸಂತಸ, ಸಂಭ್ರಮ, ಮಣ್ಣಿನ ಮಗನೆಂದೆ ಹೆಸರಾದ ರೈತನ ಜೀವಾಳ ಮಣ್ಣು ಮತ್ತು ಎತ್ತುಗಳು. ಈ ಎರಡು ಜೀವಗಳ ಧ್ಯಾನ ಕ್ರಿಯೆ ಸ್ವರೂಪದಲ್ಲಿ ರೈತರು ಆದಿನ ಹಬ್ಬವನ್ನು ಆಚರಿಸುವ ಮೂಲಕ ಸಂತಸಪಡುತ್ತಾರೆ. ಮಣ್ಣೆತ್ತಿನ ಹಬ್ಬವೆಂದೆ ಖ್ಯಾತಿ ಪಡೆದ ದಿನದಂದು ಹೋಳಿಗೆ, ತುಪ್ಪ, ಹಾಲು, ಬಂಧು-ಬಾಂಧವ್ಯದ ಬೇಸುಗೆಯಾಗಿ ಸಿಹಿ ತಿನ್ನುವ ವಿಶೇಷ ದಿನವಾಗಿ ಕಾಣುತ್ತಾರೆ. ಜನಪದರು ಈ ಮಣ್ಣೆತ್ತಿನ ಕಾರ್ಯವನ್ನು ಹಬ್ಬದ ಪೂರ್ವ ದಿನಗಳಿಂದೇಯೇ ಊರ ಕೆರೆಯ ಅಂಟುದ್ರಾವಕ ಮಣ್ಣನ್ನು ಮನೆಗೆ ತಂದು ಸರಿಯಾಗಿ (ಹದವರಿತವಾಗಿ) ನೀರಲ್ಲಿ ನೆನೆ ಹಾಕುತ್ತಾರೆ. ಗುಟಾಡು (ಅಂಟು) ಮಿಶ್ರಕ್ರಿಯೆಯ ಮಣ್ಣನ್ನು (ಕೆಸರು) ನುಣುಪಾಗುವಂತೆ ಕಾಲಿಂದ ತುಳಿದು, ತೆಳು, ಗಟ್ಟಿ, ಅಂಟು, ಹೀಗೆ ಹಲವು ಪ್ರಕಾರದ ಇತಿ-ಮಿತಿಯ ಶೈಲಿಯಲ್ಲಿ ಮತ್ತು ತಂತ್ರಗಾರಿಕೆಯಲ್ಲಿ ಜನಪದರು ಮಣ್ಣೆತ್ತನ್ನು ಮಾಡುತ್ತಾರೆ. ಮನೆಯ ದೇವರ ಗದ್ದುಗೆಯ ಮೇಲೆ ಎರಡೆತ್ತುಗಳನ್ನು ಇಟ್ಟು ಎತ್ತುಗಳ ಮುಂದೆ ಗ್ವಾದಲಿಯನ್ನು ಮಾಡುತ್ತಾರೆ. ಗ್ವಾದಲಿಯಲ್ಲಿ ಹಸಿರು ಕಡ್ಡಿಯ ಹುಲ್ಲನ್ನು ಹಾಕಿ ಎತ್ತುಗಳು ನೈಜವಾಗಿ ಹುಲ್ಲನ್ನು ತಿನ್ನುತ್ತಿವೆ ಎಂಬ ಆಶಾದಾಯಕ ಸಂದೇಶವನ್ನು ಹುಟ್ಟು ಹಾಕುವುದರೊಂದಿಗೆ ಎತ್ತುಗಳನ್ನು ರೈತರು ಪೂಜಿಸುತ್ತಾರೆ. ದೇವರ ಗದ್ದುಗೆಯ ಮೇಲೆ ನಿಂತುಕೊಂಡಿರುವ ಎತ್ತುಗಳಿಗೆ ವಿಭೂತಿ, ಕುಂಕುಮ, ಕಾಯಿ, ಕರ್ಪೂರ, ಅಗರಬತ್ತಿ, ಹೋಳಿಗೆ, ಹಾಲು, ತುಪ್ಪ, ನೈವೇದ್ಯವನ್ನು ಮಾಡುವ ಮೂಲಕ ಪೂಜೆ ಸಲ್ಲಿಸಿದ ನಂತರ ಮನೆಯವರೆಲ್ಲರೂ ಊಟ ಮಾಡುತ್ತಾರೆ. ನಂತರ ಸೂರ್ಯ ಮುಳುಗುವ ಸಮಯದಲ್ಲಿ ಕೇರಿಯ (ವಠಾರ), ಗಲ್ಲಿ, ಊರು ಹುಡುಗರೆಲ್ಲರೂ (ಮನೆಗೆ ಒಬ್ಬ ಹುಡುಗ) ಕೂಡಿ ಎರಡೆತ್ತುಗಳನ್ನು ಕೈಯಲ್ಲಿ ಹಿಡಿದುಕೊಂಡು ಊರ ಅಗಸಿಯ ಬಾಗಿಲಿಗೆ ಕಟ್ಟಿದ ತೋರಣ*ವನ್ನು ಎಲ್ಲರೂ ಓಡಿಬಂದು ಹರಿಯಬೇಕು. ಈ ವಿಧಾನಕ್ಕೆ ಕರಿ ಹರಿಯೋದು ಎಂದು ಕರೆಯುತ್ತಾರೆ. ಊರ, ಕೇರಿ, ಹುಡುಗರ ದಂಡುಗಳಲ್ಲಿ

---

* ತೋರಣ : ಊರ ಅಗಸಿ ದ್ವಾರ ಬಾಗಿಲಿಗೆ ಬೇವಿನ ಹಸಿರೆಲೆ, ಚಿಗುರಿದ ರೆಂಬೆ, ಕೊಂಬೆಗಳನ್ನು ಉದ್ದಾದ ದಾರಕ್ಕೆ ಕಟ್ಟಿ ಹರಿಯುವ ವಿಧಾನ. ಇದಕ್ಕೆ ಕರಿ ಹರಿಯೋದು ಎಂದರ್ಥ. ಓಡಿಬಂದು ತೋರಣ ಹರಿದ ನಂತರ ಆ ಬೇವಿನ ಹಸಿರೆಲೆ ಚಿಗುರಿನ ಹೂವನ್ನು ಸಿಹಿಪಾಕದಲ್ಲಿ ಹಾಕಿಕೊಂಡು ಕುಡಿಯುತ್ತಾರೆ. ಇದಕ್ಕೆ ಬೇವು-ಬೆಲ್ಲ ಎಂದು ಕರೆಯುತ್ತಾರೆ.

ಯಾವ ವ್ಯಕ್ತಿ ಮೊದಲು ಓಡಿಬಂದು ತೋರಣ ಹರಿಯುತ್ತಾನೆ ಅದೇ ವ್ಯಕ್ತಿ (ಅಂದರೆ ಆ ಎತ್ತುಗಳು ಊರಿಗೆ ಮಾದರಿ ಸಂಕೇತ)ಯ ಎತ್ತುಗಳು ಆ ಗ್ರಾಮಕ್ಕೆ ಮಾದರಿ ಎಂದು ನಾಮಕರಣ ಮಾಡುವ, ಊರ ಗೌಡನ ಗೌರವವನ್ನು ಸ್ವೀಕರಿಸುತ್ತಾನೆ. ಇಂತಹ ವಿಶಿಷ್ಟ ಆಚರಣೆಯ ಮಣ್ಣೆತ್ತಿನ ಅಮವಾಸೆ ಜನಪದರ ಕಲಾಕೃತಿಗೆ ಸಲ್ಲುವ ವಿಶೇಷ ಆಚರಣೆ ಎಂದೆನಿಸುತ್ತದೆ. ಈ ಮಣ್ಣೆತ್ತಿನ ಶಿಲ್ಪಗಳನ್ನು ಗ್ರಾಮೀಣ ಪ್ರದೇಶದಲ್ಲಿ ಅವರವರ ಮನೆಯಲ್ಲಿ ತಂದೆ ಮಕ್ಕಳು ಮಾಡಿದರೂ ಸಹ ಕುಂಬಾರರು ಮಾಡಿದ ಎತ್ತುಗಳನ್ನೇ ಪೂಜಿಸಬೇಕೆಂಬ ನಿಯಮವಿರುವುದರಿಂದ ಸಗರನಾಡಿನ ಪ್ರದೇಶದಲ್ಲಿ ಕುಂಬಾರರ ಮಣ್ಣೆತ್ತಿನ ಶಿಲ್ಪಗಳಿಗೆ ವಿಶೇಷ ಸ್ಥಾನಮಾನವಿದೆ.

*** ಜೋಕುಮಾರ ಶಿಲ್ಪ**

ಈ ಜೋಕುಮಾರನ ಹೆಸರನ್ನು ಕೇಳಿದಂತೆ ಜೋ + ಕುಮಾರ, ಜೋಕುಮಾರ, ಮಹಿಳೆಯರು ಜೋ... ಜೋ ಎಂದು ಹಾಡುವ, ನೆನೆಯುವ ಮತ್ತು ದೇವತಾ ಮನುಷ್ಯನೆಂದು ಆರಾಧಿಸುವ ಕಾರಣಕ್ಕಾಗಿ ಜೋಕುಮಾರ ಎಂದು ಹೆಸರಿರಬೇಕೆಂದು ಅನಿಸುತ್ತದೆ.

ಮಣ್ಣಿನಲ್ಲಿ ರೂಪಗೊಳ್ಳುವ ಈ ಶಿಲ್ಪಕ್ಕೆ ಗ್ರಾಮೀಣ ಪ್ರದೇಶದಲ್ಲಿ ವಿಶೇಷ ಪೂಜೆ, ಆಚರಣೆಗಳು ನಡೆಯುತ್ತವೆ. ಸಗರನಾಡಿನ ಅನೇಕ ಹಳ್ಳಿಗಳಲ್ಲಿ ಜನಪದರು ಜೋಕುಮಾರನ ಹಬ್ಬಕ್ಕೆ ಜೋಕ್ಯಾನ ಹುಣ್ಣಿಮೆ ಎಂದು ಕರೆಯುವ ವಾಡಿಕೆಯಿದೆ. ಯಾವುದಾದರೂ ಆ ದಿನದಂದು ಗಂಡು ಮಗು ಜನಿಸಿದರೆ ಆ ಮಗುವಿಗೆ ಜೋಕುಮಾರ ಎಂದು ಹೆಸರಿಡುವ ಸಂಪ್ರದಾಯವಿದೆ. ಜನಪದ ಆರಾಧನಾ ದೇವರ ಶಿಲ್ಪವಾದ ಈ ಜೋಕುಮಾರನ ಶಿಲ್ಪವನ್ನು ಕುಂಬಾರರೇ ಸಗರನಾಡಿನ ಭಾಗದಲ್ಲಿ ಮಾಡುತ್ತಾರೆ. ಉದ್ದಾದ ಗಡಸು ಮೀಸೆ, ಬಾಯ್ತೆರೆದ ಭಂಗಿಯ ತುಟಿಯಲ್ಲಿ ಬೆಣ್ಣೆ, ವಿಕಾರವಾದ (ಅಂದವೂ ಸೇರಿದಂತೆ) ಮೂಗು, ಚಿಕ್ಕಗಾತ್ರದ ದೇಹ, ದೇಹಕ್ಕೆ ವಿರುದ್ಧವಾದಂತಿರುವ ಪುರುಷಾಂಗ, ಮಣ್ಣು, ಕೂದಲು, ಬೆಣ್ಣೆ ಸೇರಿದಂತೆ ಹಲವು ವಿಧದ ರೀತಿಯಲ್ಲಿ ರೂಪ ಪಡೆದ ಜೋಕುಮಾರನ ಶಿಲ್ಪವು ಜನರ ನಂಬಿಕೆಯಂತೆ ಮಳೆ, ಬೆಳೆ, ಊರ ಸಂಪತ್ತನ್ನು ತರುವ ದೇವರು ಎಂಬ ನಂಬಿಕೆಯಿಂದ ಜೋಕುಮಾರ ಹಬ್ಬವನ್ನು ಆಚರಿಸುತ್ತಾರೆ. ಕೊರವರು ಎಣೆದ ಇಚಲು ಬಿದಿರನ ಬುಟ್ಟಿಗೆ ಕೆಮ್ಮಣ್ಣು ಸಗಣಿಯ ಸಾರಿಸಿ, ಬುಟ್ಟಿಯನ್ನು ಅಂದವಾಗಿ

ಮಾಡುವುದರೊಂದಿಗೆ ಹಸಿರು ಬೇವಿನ ತಪ್ಪಲುದೊಳಗೆ ಜೋಳದ ರಾಶಿಯಲ್ಲಿ ಕುಳಿತು ಕಂಗೊಳಿಸುವ ಈ ಶಿಲ್ಪಕ್ಕೆ ಗಂಗಾಮತಸ್ಥ ಸ್ತ್ರೀಯರು ತಲೆಯ ಮೇಲೆ ಹೊತ್ತು ಊರೆಲ್ಲ ಏಳುದಿನ ತಿರುಗಾಡಿ ಹಾಡನ್ನು ಹಾಡುವ ಮೂಲಕ ಸಂಭ್ರಮಿಸುವ ವಿಧಾನವಿದೆ. ಅಂತಿಮ ಏಳನೇ ದಿನದಂದು ದಲಿತರ (ಹೊಲೆಯರ) ಹಿರಿಕರ ಮನೆಯ ಅಂಗಳದಲ್ಲಿ ಊರ ತುಂಬ ಮೆರವಣಿಗೆಯಿಂದ ಬಂದು ಕೊನೆಗೆ ಒನಕೆಯ ತುದಿಯಿಂದ ತಲೆ ಜಜ್ಜಿಕೊಂಡು ಸಾಯುವ ವಿಧಾನ, ಗಂಗಾಮತಸ್ಥ ಹೆಣ್ಣು ಮಕ್ಕಳು ಕಣ್ಣೀರು ಹಾಕುತ್ತ ಮನೆಗೆ ತೆರಳುವ ಸಂಭ್ರಮ ಕುತೂಹಲಕಾರಿಯಾಗಿರುತ್ತದೆ. ಹೊಲೆಯರ (ನಾಯಕತ್ವ) ಹಿರಿಕರ ಮನೆಯ ಅಂಗಳದಲ್ಲಿ ಊರ ಜನರು ಮೆರವಣಿಗೆಯೊಂದಿಗೆ ಬಂದು ಮಳೆ, ಬೆಳೆ, ತಮ್ಮ ವಯಕ್ತಿಯ ಸಮಸ್ಯೆಗಳಿಗೆ ಪರಿಹಾರವನ್ನು ಕೇಳುವುದು ಮುಗಿದ ನಂತರ ಕೊನೆಗೆ ಊರ (ಹೊಲೆಯ) ಜನಾಂಗದವರು ಮನೆಯೊಳಗೆ ಹೊಯ್ದು, ಜೋಕುಮಾರನ ಬಾಯಲ್ಲಿ ಬೆಲ್ಲ ಇಟ್ಟು ತಲೆಯನ್ನು ಒನಕೆಯಿಂದ ಜಜ್ಜುತ್ತಾರೆ. ಮರುದಿನ ಬೆಳ್ಳಂಬೆಳಿಗ್ಗೆ ಜೋಕುಮಾರನನ್ನು ಒಯ್ದು ಸ್ಮಶಾನದ ಹತ್ತಿರವಿರುವ ಹಳ್ಳದಂತಹ ಕಲ್ಲುಬಂಡೆಯ ಸಂದಿನಲ್ಲಿ ಇಟ್ಟು ಬರುತ್ತಾರೆ. ಇದಾದ ನಂತರ ಊರಿನ ಜನರು ಮೂರು ದಿನದ ನಂತರ ಆ ಶಿಲ್ಪವನ್ನು ಗಮನಿಸುತ್ತಾರೆ. ಸತ್ತಿರುವ ಜೋಕುಮಾರನ ಬಾಯಲ್ಲಿ ಹುಳುಗಳು ತುಂಬಿಕೊಂಡರೆ ಈ ವರ್ಷ ಮಳೆ ಬೆಳೆ ಸರಿಯಾಗಿ ಆಗುತ್ತದೆಂಬ ನಂಬಿಕೆಯಿಂದ ಜನಪದರು ಜೀವಿಸುತ್ತಾರೆ.

ಇಷ್ಟೇಲ್ಲ ಸಡಗರದಿಂದ ಆಚರಣೆಗೆ ಒಳಪಡುವ ಜೋಕುಮಾರನು ಪೌರಾಣಿಕ ಕಥನದ ಹಿನ್ನಲೆಯಲ್ಲಿ ಈತ ಜೋಕ ಋಷಿಯ ಮಗನಾಗಿರುತ್ತಾನೆ. ಜೋಕುಮಾರನು ಅತಿಯಾದ ಕಾಮುಕನೆಂಬ ಕುರಿತಂತೆ ಅನೇಕ ಕಥನಗಳಿವೆ ಎಂಬ ಅಭಿಪ್ರಾಯಗಳು ಕೂಡ ಇವೆ.

ದೇವಿಯ ಗುಡಿ

ಸಗರನಾಡಿನ ಪ್ರಸಿದ್ಧ ಗ್ರಾಮದೇವತೆಗಳಾದ ಮರಗಮ್ಮ, ದ್ಯಾವಮ್ಮ, ಯಲ್ಲಮ್ಮ, ಕೆಂಚಮ್ಮ, ಇತ್ಯಾದಿ ಜಾತ್ರೆಗಳು ಅದ್ದೂರಿಯಾಗಿ ನಡೆಯುತ್ತವೆ. ಆಯಾ ಭಕ್ತರ ಬೇಡಿಕೆಯಂತೆ ಅರಿಕೆ ಸಲ್ಲಿಸುವ ವಿಧಾನದಲ್ಲಿ ದೇವಿಯ ಗುಡಿಯನ್ನು ಮಾತಂಗಿ ಮಕ್ಕಳು (ಮಾದಿಗ ಸಮುದಾಯದ ಜನರು) ಕಟ್ಟುವ ವಿಧಾನ ಈ ಭಾಗದಲ್ಲಿದೆ. ಉದಾಹರಣೆಗೆ ಹೇಳುವುದಾದರೆ ಸಗರದ ಯಲ್ಲಮ್ಮ,

ಮಾತ್ಪಳ್ಳಿ, ಯಲ್ಲಮ್ಮದೇವಿ, ಹಾಲಗೇರಾ ಯಲ್ಲಮ್ಮ, ಕುನ್ಸಿ ಯಲ್ಲಮ್ಮ ಹೀಗೆ ಹಲವು ದೇವರುಗಳಿಗೆ ಅರಿಕೆ ಸಲ್ಲಿಸುವ ವಿಧಾನದಲ್ಲಿ (ಮನೆಯ ಮುಂದೆ ದೇವರು ಮಾಡಿದಾಗ) ಅಂಗಳದಲ್ಲಿ ಸಗಣಿಯನ್ನು ಅಂದವಾಗಿ ಸಾರಿಸಿ (ನೆಲಕ್ಕೆ ಸಗಣಿ ಲೇಪನ) ಮಣ್ಣಿನ ಮುದ್ದೆಗಳಿಂದ ಯಲ್ಲಮ್ಮ ದೇವಿಯ ಗುಡಿಯನ್ನು ಕಟ್ಟುವ ಕಲೆಗಾರಿಕೆ ಸಗರನಾಡಿನ ಮಹಿಳೆಯರ ವಿಶಿಷ್ಟ ಕಲೆಯಾಗಿದೆ. ಕೇಸರಿನಿಂದ ರೂಪಗೊಂಡಿರುವ ದೇವಿಯ ಗುಡಿಗೆ ಭತ್ತ, ಹಣ್ಣು, ಹಂಪಲು, ಮುದ್ದೆ, ಕಾಳು ಇತ್ಯಾದಿ ನೈವಿದ್ಯದಿಂದ ಪೂಜಿಸಿದ ನಂತರ ಮೇಕೆ, ಕುರಿಗಳ ಹರಕೆಯಾಗಿ ಕೊಯ್ಯುವುದು, ಈ ತರಹದ ದೇವಿಯ ಅರಿಕೆ ಸಂಭ್ರಮದಲ್ಲಿ ರೂಪಗೊಳ್ಳುವ ದೇವಿಯ ಕಟ್ಟಡ ಕಲೆಗಾರಿಕೆ ಸಗರನಾಡಿನ ವಿಶೇಷ ಕಲೆಯಾಗಿದೆ.

*** ಗಣಪತಿ ಶಿಲ್ಪ**

ಮಣ್ಣಿನಿಂದ ರೂಪಗೊಳ್ಳುವ ಗಣಪತಿ ಶಿಲ್ಪವು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಮಣ್ಣಿನ ಗಣಪ ಸಗರನಾಡಿನ ಪ್ರದೇಶದಲ್ಲಿ ವಿಶೇಷವಾಗಿ ರೂಪಗೊಳ್ಳುತ್ತಾನೆ. ಜೋಕುಮಾರ ಹೋದ ನಂತರ ಹುಟ್ಟುವವನೇ ಗಣಪ. ಹತ್ತಾರು ದಿನ ಬದುಕಿ ತನ್ನ ಪವಾಡವನ್ನು ತೋರಿಸಿದ ಗಣಪನು ಪೌರಾಣಿಕ ಹಿನ್ನಲೆಯಲ್ಲಿ ಮಣ್ಣಿನಿಂದಲೇ ಹುಟ್ಟಿದ ಗಣಪನೆನ್ನುವ ನಂಬಿಕೆಯಿಂದ ಗಣಪನು ವಿಶೇಷ ಪೂಜೆ ಪುನಸ್ಕಾರಗಳಿಂದ ಆಚರಣೆಗೆ ಒಳಪಡುತ್ತಾನೆ. ಮಣ್ಣಿನಿಂದ ರೂಪ ಪಡೆಯುವ ಗಣಪತಿ ಶಿಲ್ಪವು ಸಗರನಾಡಿನ ಗ್ರಾಮೀಣ ಜನರ ವಿಶೇಷ ಶಿಲ್ಪವಾಗಿ ರೂಪಗೊಳ್ಳುತ್ತಾನೆ.

*** ಗಂಗಮ್ಮನ ಪೂಜೆಯ ಶಿಲ್ಪಗಳು**

ಸಗರನಾಡಿನ ಹಲವಾರು ಹಳ್ಳಿಗಳಲ್ಲಿ ಮಹಿಳೆಯರು ಬಾಣಂತಿಯಾದಾಗ ಐದು ದಿನದ ನಂತರ ಗಂಗಮ್ಮನ ಪೂಜೆಯನ್ನು ಮಾಡುತ್ತಾರೆ. ಬೋರವೆಲ್‌ನ ಸುತ್ತ ಮಣ್ಣಿನಿಂದ ಮುದ್ದೆಯಾಕಾರದ ಐದು ಶಿಲ್ಪಗಳನ್ನು ಮಾಡಿಟ್ಟು, ಆರತಿ ಬೆಳಗಿ ಸಿಹಿ ನೈವೇದ್ಯವನ್ನು ಮಾಡುತ್ಥಾರೆ. ನಂತರ ಸಿಹಿ ತಿನಿಸು ತಿಂದು ಮನೆಗೆ ತೆರಳುವ ವಿಧಾನವಾಗಿದೆ. ಐದು ಶಿಲ್ಪಗಳನ್ನು ಮಾಡುವುದುರಿಂದ ಪಾಂಡವರ ಶಿಲ್ಪವೆಂದೇ ಪರಭಾವಿಸುವ ಕಲ್ಪನೆಯಿದೆ.

* **ಭಾನಾಮತಿ ಶಿಲ್ಪಗಳು**

ದುರಾಲೋಚನೆಯ, ದ್ವೇಷದಿಂದಿರುವ ಹಲವರು ಮತ್ತೊಬ್ಬರಿಗೆ ಕೆಟ್ಟದಾಗಲೆಂಬ ದುಷ್ಟಬುದ್ದಿಯ ಸಂದರ್ಭದ ಸಾಂಕೇತಿಕತೆಯನ್ನು ಸಾರುವ ಶಿಲ್ಪಗಳೆಂದರೆ ಅವುಗಳೇ ಬಾನಾಮತಿ ಶಿಲ್ಪಗಳೆಂದು ಕರೆಯುತ್ತಾರೆ. ಮಣ್ಣಿನ ಮುದ್ದೆಯಾಕಾರದ ನೋಡಿದರೆ ಹೆದರುವ ಹಾಗೆ ಜೀವ ತುಂಬುವ ವಿಶಿಷ್ಟ ಕಲೆ ಎಂಬಂತೆ ಕಂಡುಬರುವ ಈ ಶಿಲ್ಪಗಳನ್ನು ನೋಡಿದರೆ ಆದಿವಾಸಿ ಜನಾಂಗದ (ಬುಡಕಟ್ಟು) ಶಿಲ್ಪಗಳಂತೆ ಕಂಡುಬರುತ್ತವೆ. ಈ ತರಹದ ಜನಪದ ಶಿಲ್ಪಗಳು ಸಗರನಾಡಿನ ಕೆಲವು ಭಾಗದ ಹಳ್ಳಿಗಳಲ್ಲಿ ಈ ಕಲೆ ಗೌಪ್ಯದಿಂದ ಆಗಾಗ ಅನಾವರಣಗೊಳ್ಳುತ್ತದೆ. ಕೆಡಕು ಸಂಕೇತದ ದೃಷ್ಟಿಯಿಂದ ರೂಪಗೊಳ್ಳುವ ಈ ಬಾನಾಮತಿ ಶಿಲ್ಪಗಳು ವಿಶೇಷ ಆಕಾರ ಪಡೆದುಕೊಂಡು ಜನರನ್ನು ಹೆದರಿಸುತ್ತವೆ. ಇಂತಹ ಶಿಲ್ಪಗಳು ಸಗರನಾಡಿನ ಭಾಗದಲ್ಲಿ ಆಗಾಗ ಕಾಣಿಸಿಕೊಳ್ಳುತ್ತವೆ.

೨. ಮರದ ಮಾಧ್ಯಮದ ಜನಪದ ಶಿಲ್ಪಗಳು

ಮರ ಮತ್ತು ಮನುಷ್ಯ ಒಂದಕ್ಕೊಂದು ಪೂರಕವೆಂಬಂತೆ ಬದುಕಿದ ಸಂದರ್ಭಗಳಿವೆ. ಮರವಿಲ್ಲದೆ ಮನುಷ್ಯನಿಲ್ಲ, ಮನುಷ್ಯನ ರಕ್ಷಣೆಯಿಲ್ಲದೆ ಮರವಿಲ್ಲ. ಮರದಿಂದ ಮಾನವನ ಉಸಿರಾಟ, ಕಲೆ ಎಲ್ಲವೂ ರೂಪಗೊಳ್ಳುತ್ತವೆ. ನಮ್ಮ ಜನಪದ ಶಿಲ್ಪಿಗಳ ಪ್ರಮುಖ ಕಲಾ ಮಾಧ್ಯಮವೆಂದರೆ ಅದು ಕಟ್ಟಿಗೆ. ಅದಕ್ಕಾಗಿಯೇ ಇರಬೇಕು ಶಿಲ್ಪಿಯು ತನ್ನ ಬದುಕಿನುದ್ದಕ್ಕೂ ಮರಗೆತ್ತನೆಯ ಕೆಲಸದಿಂದಲೇ ತನ್ನ ಕಲಾ ಬದುಕಿನ ಶ್ರೇಷ್ಠತೆಯನ್ನು ಹೆಚ್ಚಿಸಿಕೊಂಡಿದ್ದಾನೆ. ಮರದಿಂದ ರಚನೆಯಾದ ಸಗರನಾಡ ಜನಪದ ಶಿಲ್ಪಕಲೆ ಜನರ ಮೆಚ್ಚುಗೆಯನ್ನು ಪಡೆದು ಅತ್ಯುನ್ನತ ಗೌರವದ ಸ್ಥಾನ ಪಡೆದುಕೊಂಡಿದೆ. ಉದಾಹರಣೆಗೆ ಗಮನಿಸುವುದಾದರೆ ಸಗರನಾಡಿನ ಜನಪದ ಶಿಲ್ಪಿ ನಾಗಣ್ಣ ಬಡಿಗೇರ ಅವರಿಗೆ ಸಂದ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವವೇ ಸಾಕ್ಷಿ ಪ್ರಜ್ಞೆಯಾಗಿದೆ. ಸಗರನಾಡಿನ ಮರಗೆತ್ತನೆಯ ಜನಪದ ಶಿಲ್ಪಗಳನ್ನು ಈ ಕೆಳಗಿನಂತೆ ಗಮನಿಸಬಹುದು.

* **ಸಗರನಾಡಿನ ಕುದುರೆ ಶಿಲ್ಪಗಳು**

ಸಗರನಾಡಿನ ಜನಪದ ಶಿಲ್ಪ ಪ್ರಕಾರದಲ್ಲಿ ವಿಶೇಷ ಸ್ಥಾನವನ್ನು ಪಡೆದ ಕುದುರೆ ಶಿಲ್ಪಗಳು

ನೋಡಲು ಅತ್ಯಂತ ಆಕರ್ಷಕ. ಸುರಪುರ, ಶಹಾಪುರ, ಜೇವರ್ಗಿ ತಾಲೂಕಿನ ಹಲವು ಹಳ್ಳಿಗಳಲ್ಲಿ ಜನಪದ ಶಿಲ್ಪಿಗಳು ಕುದುರೆ ಶಿಲ್ಪಗಳನ್ನು ಮಾಡುತ್ತಲೇ ಜೀವನ ಸಾಗಿಸುತ್ತಿದ್ದಾರೆ. ಮನೆಯ ಬಾಗಿಲಿಗೆ ಮತ್ತು ಗೌರಿ ಮಾಡದ ಎರಡು ಕಡೆ ಕುದುರೆಗಳಿರುವುದರಿಂದ ಆ ಮನೆಯ ಬಾಗಿಲು ಅಂದವಾಗಿ ಕಾಣಿಸುವುದಲ್ಲದೇ ಕುದುರೆಯಿದ್ದ ಮನೆಯು ಚಲನಶೀಲವಾಗಿರುತ್ತದೆ ಎಂಬರ್ಥಗಳಿವೆ. (ಅರ್ಥ: ಮುಂದುವರೆಯುತ್ತಿರಲೇ, ಪ್ರತಿಯೊಂದು ಶುಭಕಾರ್ಯ ನಡೆಯುವವು) ಎಂಬ ನಂಬಿಕೆಗಳಿಂದ ಮನೆಯ ಬಾಗಿಲಲಿಗೆ ಕುದುರೆ ಶಿಲ್ಪಗಳನ್ನು ಕೂಡಿಸುತ್ತಾರೆ. ಎರಡು ಅಡಿ, ಆರು, ಐದು, ಮೂರು ಅಡಿ ಅಗಲ ಮತ್ತ ಎತ್ತರ ಆಕಾರದಲ್ಲಿ ರೂಪ ತಾಳುವ ಕುದುರೆ ಶಿಲ್ಪಗಳು ಸೃಜನಾತ್ಮಕತೆಯಿಂದ ನೈಜತೆಯನ್ನು ಪಡೆದುಕೊಂಡಿರುತ್ತವೆ. ಬೇವಿನ ಮರದ ಕಟ್ಟಿಗೆಯಿಂದ ಕುದುರೆ ಹೆಚ್ಚಿನ ಸಂಖ್ಯೆಯಲ್ಲಿ ಮಾಡಲಾಗುತ್ತದೆ. ನೆಟ್ಟಗೆ ಸೆಟೆದ ಕಿವಿಗಳು, ಕೊರಳಲ್ಲಿ ಅಲಂಕಾರಿಕ ಪಟ್ಟಿಕೆಗಳು, ಮೂಗಿನ ಲಾಳಿ, ಹಗ್ಗ, ಸರಪಳಿ, ವಿವಿಧ ಎಲೆ, ಹೂ, ಪ್ರಾಣಿ, ಪಕ್ಷಿ ವಿನ್ಯಾಸಗಳ ಕೆತ್ತುವಿಕೆಯೊಂದಿಗೆ ಅಲಂಕಾರಿಕ ಶಿಲ್ಪಗಳಾಗಿ ಕುದುರೆ ಶಿಲ್ಪಗಳು ಕಂಡು ಬರುತ್ತವೆ. ಸುರಪುರ ತಾಲೂಕಿನ ಗೋನಾಳ, ದೇವಾಪುರ, ಕೋನಾಳ, ಜೇವರ್ಗಿ ತಾಲೂಕಿನ ಸಾತಖೇಡ, ನಂದಿಹಳ್ಳಿ, ಶಹಾಪುರ ತಾಲೂಕಿನ ಶಿರವಾಳ, ಚನ್ನೂರು (ಜೆ) ಗ್ರಾಮಗಳ ಕುದುರೆ ಶಿಲ್ಪಗಳು ಅತ್ಯಂತ ಪ್ರಸಿದ್ಧಿ ಪಡೆದಿವೆ.

ಗ್ರಾಮದೇವತೆ ಶಿಲ್ಪಗಳು

ಸಗರನಾಡಿನ ಜನಪದ ಶಿಲ್ಪಗಳ ಪ್ರಮುಖ ಕಲೆಯಾಗಿ ಗ್ರಾಮದೇವತೆ ಶಿಲ್ಪಗಳು ರಚನೆಯಾಗಿವೆ.

* ದ್ಯಾವಮ್ಮನ ಶಿಲ್ಪ
* ಮರಗಮ್ಮನ ಶಿಲ್ಪ, ಮಾರೆಮ್ಮ, ಮಾರಿಕಾಂಬೆ
* ಕೆಂಚಮ್ಮ ದೇವಿ ಶಿಲ್ಪ
* ತೆಲಿಪಟರಾಯನ ಶಿಲ್ಪ
* ಚೌಡೇಶ್ವರಿ, ಚೌಡಮ್ಮ ದೇವಿ

* ಗಾಳಿ ಮರಗಮ್ಮ
* ದುರಗ ಮುರಗಿ (ಪೋತರಾಜ) ದುರ್ಗಿ ಪೆಟ್ಟಿಗೆ
* ಸೀಮೆ ಮರಗಮ್ಮ, ಮಾರಿ, ಮರಿಗಿ, ದುರಗಿ

ಹೀಗೆ ಹಲವಾರು ಹೆಸರಿನ ಗ್ರಾಮದೇವತೆ ಶಿಲ್ಪಗಳು ರೂಪಗೊಂಡು ಹಲವು ಬಗೆಯ ಆಚಾರ-ವಿಚಾರ, ಆಚರಣೆ ಪದ್ಧತಿಗಳಿಂದ ಪೂಜಿಸಲ್ಪಡುತ್ತಿವೆ. ಊರಿನ ಅಧಿದೇವತೆಗಳಾದ ದ್ಯಾವಮ್ಮದೇವಿ, ಮರಗಮ್ಮದೇವಿ, ಕೆಂಚಮ್ಮದೇವಿ, ಹುಲಗಮ್ಮ ದೇವಿ ಮುಂತಾದ ದೇವತೆ ಶಿಲ್ಪಗಳು ಆಯಾ ಜನದಪ ಶಿಲ್ಪಿಯ ಸೃಜನಾತ್ಮಕತೆಯಿಂದ ರೂಪ ಪಡೆಯುತ್ತವೆ. ಹತ್ತು ಕೈಗಳು ಹೊಂದಿದ ಗ್ರಾಮದೇವತೆಗಳು ಪ್ರತಿಯೊಂದು ಕೈಯಲ್ಲಿ ತನ್ನದೇಯಾದ ಅವತಾರ ರೂಪಿತ ಆಯುಧ ಸಾಮಗ್ರಿಗಳನ್ನಿಡಿಯುವ ಮೂಲಕ ಶಕ್ತಿ ದೇವತೆಯಾಗಿ ಕಾಣಿಸುತ್ತಾಳೆ. ಚಕ್ರ, ತ್ರಿಶೂಲ, ಖಡ್ಗ, ಶಂಖ, ಹೂ, ಡಮರು, ಹಾವು, ರಾಕ್ಷಸನ ರುಂಡ ಹೀಗೆ ಹಲವು ಬಗೆಯ ಸಾಮಗ್ರಿಗಳು ದೇವತೆಯ ಕೈಗಳಲ್ಲಿ ಕಾಣಿಸಿಕೊಳ್ಳುತ್ತವೆ.

*** ಗ್ರಾಮದೇವತೆಯ ಮೇಲಿನ ನಂಬಿಕೆಗಳು**

* ಊರಿನ ದೇವತೆಯನ್ನು ಪೂಜಿಸುವ, ಆರಾಧಿಸುವುದರಿಂದ ನಾವೆಲ್ಲರೂ ಸುಖದಿಂದ ಇರುತ್ತೇವೆ.
* ದೇವಿಯ ಜಾತ್ರೆ, ದೇವರು ಮಾಡುವುದರಿಂದ ದೇವಿ ಊರನ್ನು ಚೆನ್ನಾಗಿ ಕಾಯುತ್ತಾಳೆ.
* ಕೆಡುಕು ಮಾಡುವವರನ್ನು ಸಂಹರಿಸುತ್ತಾಳೆ.
* ದೇವಿಯು ಕೋಣ, ಸಿಂಹ, ಆನೆ, ರಾಕ್ಷಸನನ್ನು ವಾಹನವನ್ನಾಗಿಸುವುದರೊಂದಿಗೆ ಚಲನಶೀಲವಾಗಿರುತ್ತಾಳೆ.
* ಈ ದೇವತಾ ಶಿಲ್ಪವನ್ನು ವಿಶ್ವಕರ್ಮ ಜನಾಂಗದ ಶಿಲ್ಪಿಗಳೇ ಮಾಡುವುದರಿಂದ ದೇವಿ ಪೂಜೆಗೆ ಅರ್ಹಳಾಗುತ್ತಾಳೆ.
* ದಲಿತ, ತಳವರ್ಗದ ಸಮುದಾಯದ ಶಿಲ್ಪಿಗಳು ಈ ದೇವತೆ ಶಿಲ್ಪಗಳನ್ನು ಮಾಡಿದರೆ ಪೂಜೆಗೆ ಅರ್ಹವಾಗುವುದಿಲ್ಲ.

* ದೇವಿ ಚನ್ನಾಗಿದ್ದರೆ ನಾಡು, ಊರು, ಸೀಮೆ ಚೆನ್ನಾಗಿರುತ್ತದೆ.

ಹೀಗೆ ಹಲವಾರು ನಂಬಿಕೆಗಳಿಂದ ರೂಪ ಪಡೆದ ಗ್ರಾಮ ದೇವತೆಗಳು ಜನಪದ ಕಲಾವಿದರ ಧಾರ್ಮಿಕ ಪರಂಪರೆಯ ಪ್ರತೀಕವಾಗಿ ಬೆಳೆದು ಬಂದಿವೆ. ಈ ಗ್ರಾಮ ದೇವತೆಗಳ ವಾಹನವಾಗಿರುವ ಸಿಂಹ, ಆನೆ, ಕೋಣ, ರಾಕ್ಷಸ ಶಿಲ್ಪಗಳು ಸಹ ದೇವಿಯ ವೈಭವಕ್ಕೆ ತಕ್ಕ ಉತ್ತಮ ಶಿಲ್ಪಗಳಾಗಿ ಕಂಡುಬರುತ್ತವೆ. ಸಗರನಾಡಿನ ಭಾಗದ ಶಹಾಪುರ ತಾಲೂಕಿನ ಸಗರ, ಚನ್ನೂರು (ಜೆ), ತುಮಕೂರು, ರೊಟ್ನಡಗಿ, ದೋರನಹಳ್ಳಿ, ಸುರಪುರ ತಾಲೂಕಿನ ಕೋನಾಳ ಮತ್ತು ಗೋನಾಲ ಗ್ರಾಮಗಳು ಗ್ರಾಮದೇವತೆ ಶಿಲ್ಪ ರಚನೆಯಲ್ಲಿ ಪ್ರಮುಖ ಪಾತ್ರವಾಗಿವೆ.

ಬಣ್ಣ ಲೇಪನ ವಿಧಾನ

ಗ್ರಾಮ ದೇವತೆಗಳಿಗೆ ಬಣ್ಣ ಲೇಪಿಸುವುದು ಮಹತ್ವದ ತಂತ್ರಗಾರಿಕೆಯಾಗಿರುತ್ತದೆ. ಕುರುಡುತನದ ಆಕಾರದ ಕಟ್ಟಿಗೆ ಶಿಲ್ಪಕ್ಕೆ ನೈಜವಾಗಿ ಜೀವ ತುಂಬುವ ಕಲೆಗಾರಿಕೆ ಜನಪದ ಶಿಲ್ಪಿಗಳ ಬಣ್ಣ ಲೇಪನ ಕಾರ್ಯ ಅತ್ಯಂತ ಕುತೂಹಲಕಾರಿಯಾಗಿದೆ.

* ಬೆಳ್ಳಗೆ, ಸಾದಾ ಹಳದಿ ಕಟ್ಟಿಗೆಗೆ ತಿಳಿವರ್ಣದ ನೀರಿನಂತಹ ಬಿಳಿವರ್ಣ ಲೇಪನ ಮಾಡಿದ ನಂತರ ಆ ಬಣ್ಣವು ಒಣಗಿದ ಮೇಲೆ ನೇರವಾಗಿ ಕೆಂಪು, ಹಳದಿ, ಹಸಿರು, ಕಪ್ಪು ವರ್ಣಗಳ ಬಳಕೆ ದಟ್ಟವಾಗಿ ಲೇಪಿಸುವುದು ಪ್ರಮುಖವಾಗಿರುತ್ತದೆ.

* ಜನಸಾಮಾನ್ಯರ ದೃಷ್ಟಿಯಿಂದ ದೇವತೆ ಎಂದರೆ ಮುಖ ಪೂರ್ಣ ಕೆಂಪು ಬಣ್ಣವಾಗಿರಬೇಕು. ಕಣ್ಣುಗಳೆಂದರೆ ಬಿಳಿ ಗುಡ್ಡೆಯ ಮೇಲೆ ಕಪ್ಪು ಚುಕ್ಕಿ ನೇರವಾಗಿ ನೋಡುತ್ತಿರಬೇಕು. ದೇವಿಯನ್ನು ದಿಟ್ಟಿಸಿ ನೋಡಿದರೆ ಭಯ ಹುಟ್ಟುವಂತಿರಬೇಕು. ಹೀಗೆಲ್ಲ ಬಣ್ಣ ಲೇಪನ ಮಾಡುವುದರಿಂದ ದೇವಿಯು ಶಕ್ತಿದೇವತೆ ಎಂದು ಅನಿಸಿಕೊಳ್ಳುತ್ತಾಳೆ. ಅದಕ್ಕಾಗಿ ನಮ್ಮ ಜನಪದ ಶಿಲ್ಪಿಗಳು ಗ್ರಾಮದೇವತೆ ಶಿಲ್ಪಗಳಿಗೆ ಜನರ ಮೆಚ್ಚುಗೆ ಮತ್ತು ಆರಾಧನಾ ದೃಷ್ಟಿಯಿಂದ ಸರಿಯಾಗಿ ಬಣ್ಣ ಲೇಪಿಸಬೇಕು ಎಂದು ಜನಪದ ಶಿಲ್ಪಿಗಳ ಹೇಳಿಕೆಯಾಗಿದೆ.

*** ಮನೆಯ ತಲಬಾಗಿಲು ಕೆತ್ತನೆ**

ಸಗರನಾಡಿನ ಮನೆಗಳಿಗೆ ಬೃಹತ್ತಾದ ತಲಬಾಗಿಲು ಕೂಡಿಸಿ ಅದಕ್ಕೆ ಎರಡು ಸುಂದರ

ಕುದುರೆಗಳನ್ನು ಕೂಡಿಸುವ ವಿಶೇಷತೆ. ದೊಡ್ಡ ಗಾತ್ರದ ತಲಬಾಗಿಲಿಗೆ ಮೂರು ಮತ್ತು ನಾಲ್ಕು ಚೌಪಟ್ಟಿಗಳನ್ನು ಮಾಡಿಕೊಂಡು ಪ್ರತಿಯೊಂದು ಪಟ್ಟಿಕೆಯು ಹೂ, ಎಲೆ, ಬಳ್ಳಿಗಳು, ಚಿಗುರು, ಪ್ರಾಣಿ, ಪಕ್ಷಿಗಳು, ಜ್ಯಾಮಿತಿ ನಕ್ಷಾ ವಿನ್ಯಾಸಗಳು, ಸರಳಗೈ ಚಿತ್ರಣದ ಹಾದಿಯಂತೆ ಅನೇಕ ವಿನ್ಯಾಸಗಳಿಂದ ಬಾಗಿಲು ಅಲಂಕಾರಿಕ ಶಿಲ್ಪವಾಗಿ ಮನೆಯನ್ನು ಆಕರ್ಷಿಸುತ್ತದೆ. ಬಾಗಿಲ ಪಟ್ಟಿಕೆಗಳ ಮೇಲೆ ಚಿತ್ರ ಚಿತ್ತಾರದ ವಿನ್ಯಾಸದ ಸೂಕ್ಷ್ಮತೆಗಳನ್ನು ಗಮನಿಸಿದಂತೆ ಬಾಗಿಲ ಮುಚ್ಚುವ ದೊಡ್ಡ ಹಲಗೆಯ ಮೇಲೆ ಸಮಾಜ ಸೇವಕರ, ದಾರ್ಶನಿಕರ ಉದಾಹರಣೆಗಾಗಿ ಗಮನಿಸುವುದಾದರೆ ಬುದ್ಧ, ಬಸವಣ್ಣ, ಅಂಬೇಡ್ಕರ ಅಲ್ಲದೆ ಶಿವ, ಪಾರ್ವತಿ, ಲಕ್ಷ್ಮೀ, ಸರಸ್ವತಿ ದೇವತೆಗಳ ಉಬ್ಬು ಶಿಲ್ಪದ ಮಾದರಿಯಲ್ಲಿ ಕೆತ್ತನೆಯಾಗಿರುತ್ತದೆ. ಸಗರನಾಡಿನ ತಲಬಾಗಿಲ ಮನೆಗಳಿಂದ ಜನಪದ ಶಿಲ್ಪಕಲಾ ಸೂಕ್ಷ್ಮತೆಗಳು ಎಷ್ಟು ಆಕರ್ಷಕವಾಗಿವೆ ಎಂಬುದನ್ನು ಕಾಣಬಹುದಾಗಿದೆ.

*** ಗೌರಿ ಮಾಡದ ಕಲಾಕುಸುರಿ ಮತ್ತು ಪಡಸಾಲಿ ಜೋಡಣೆ**

ಗ್ರಾಮೀಣ ಪ್ರದೇಶದ ಹಲವಾರು ಮನೆಯ ಪಡಸಾಲಿ ಜೋಡಣೆ ಮೂರು ಅಂಕಣ ಮತ್ತು ಐದು ಅಂಕಣದ ಮನೆಗಳಿರುತ್ತವೆ. ಪಡಸಾಲಿ ಮನೆಯ ಜೋಡಣೆಯಲ್ಲಿ ಕಾಣುವ ಕಲಾತ್ಮಕ ಕಂಬಗಳು, ತಲೆದಿಂಬು, ಬೋದು, ತೆಂಗಿನಕಾಯಿ, ವಿನ್ಯಾಸದ ಕಮಾನು ಆಕಾರ, ಅದಕ್ಕೆ ಹೂ, ಎಲೆ, ಕಾಯಿ, ಬಳ್ಳಿಯ ವಿನ್ಯಾಸದ ಸುರುಳಿಗಳು ಆಕರ್ಷಕವಾಗಿ ಕೆತ್ತನೆಯಾಗಿರುತ್ತವೆ. ವಿನ್ಯಾಸದ ಸುಳಿವುಗಳಲ್ಲಿ ಗಿಳಿ, ನವಿಲು, ತೆಂಗಿನಕಾಯಿ, ಹಲವು ಪ್ರಾಣಿ ಚಿತ್ತಾರದ ಸಂಗತಿಗಳನ್ನು ಕಾಣುತ್ತೇವೆ. ಹಾಗೆಯೇ ಪಡಸಾಲೆಯ ಎದುರು ಗೋಡೆಗೆ ಕಂಡುಬರುವ ಗೌರಿ ಮಾಡವು ಸಹ ಚಿತ್ರ ವಿನ್ಯಾಸದ ಕೆತ್ತನೆಯಿಂದ ಚಿಕ್ಕದಾಗಿ ಮತ್ತು ಸುಂದರವಾಗಿ ದೇವರ ಗುಡಿ ಆಯಾಮದಲ್ಲಿ ಕಂಡುಬರುತ್ತದೆ. ಸಗರ ನಾಡಿನ ಭಾಗದಲ್ಲಿ ಗೌರಿ ಮಾಡವೆಂದೇ ಪ್ರಸಿದ್ಧಿ. ಈ ಗೌರಿ ಮಾಡದ ಎಡ ಮತ್ತು ಬಲಭಾಗದಲ್ಲಿ ಎರಡು ಚಿಕ್ಕದಾಗಿರುವ ಕುದುರೆ, ನವಿಲು, ಗಿಳಿಯ ಶಿಲ್ಪಗಳನ್ನು ಕೂಡಿಸಲಾಗುತ್ತದೆ. ಹಾಗೆಯೇ ಗಂಗೆ, ಗೌರಿ ಎಂಬ ದೇವತೆಯನ್ನು ಕೂಡಿಸಿ ಹಬ್ಬ, ಹರಿದಿನಗಳಲ್ಲಿ ಪೂಜಿಸಿ ಬೆಳಗುವ ವಿಶೇಷ ಪದ್ಧತಿಯಿದೆ.

*** ಬೃಹತ್ತಾದ ಮನೆಗಳಿಗೆ ತಲಬಾಗಿಲು**

ಎರಡು ಬದಿಗೆ ಕಲ್ಲಿನ ಕುದುರೆಗಳನ್ನು ಕೂಡಿಸುವ ಪದ್ಧತಿಯಿದೆ. ಅವುಗಳಿಗೆ ಕಲ್ಲಿನ ಕುದುರೆಗಳೆಂದೇ ಪ್ರಸಿದ್ಧಿ. ಆ ಕುದುರೆ ಶಿಲ್ಪಗಳು ತೆಂಗಿನಕಾಯಿಯ ಸ್ವರೂಪದಲ್ಲಿ ಕೆಳಗೆ ಮುಖಮಾಡಿಕೊಂಡು ಜೋತುಬೀಳುವ ಸನ್ನಿವೇಶ ಶಿಲ್ಪಗಳಾಗಿವೆ. ಎರಡು, ನಾಲ್ಕು, ಆರು, ಎಂಟು, ಕಲ್ಲಿನ ಕುದುರೆ ಶಿಲ್ಪಗಳನ್ನು ಕೂಡಿಸಿ ಅದರ ಸುತ್ತಲೂ ಹೂ, ಎಲೆ, ಬಳ್ಳಿ, ಪ್ರಾಣಿ, ಪಕ್ಷಿಗಳ ಚಿತ್ತಾರ ಕೆತ್ತಿ ಇಡೀ ತಲಬಾಗಿಲ ವಿನ್ಯಾಸದ ತಕ್ಕಂತೆ ಈ ಕಲ್ಲಿನ ಕಲಾ ವಿನ್ಯಾಸ ರೂಪಗೊಂಡಿರುತ್ತದೆ. ಈ ಕಲ್ಲಿನ ಕುದುರೆ ಕೆತ್ತನೆ ಸಗರನಾಡಿನ ಭಾಗದಲ್ಲಿ (ಗೌಂಡಿ) ಮನೆ ಕಟ್ಟುವ ಕಲಾಕಾರರು ಈ ಕೆಲಸ ಸುಂದರವಾಗಿ ಮಾಡಿರುವುದನ್ನು ಕಾಣುತ್ತೇವೆ.

*** ರಥ ಮತ್ತು ಪಲ್ಲಕ್ಕಿ ಶಿಲ್ಪಗಳು**

ಜನಪದ ಶಿಲ್ಪ ಪ್ರಕಾರಗಳಲ್ಲಿ ಒಂದಾದ ರಥ (ತೇರು) ಮತ್ತು ಪಲ್ಲಕ್ಕಿ ಶಿಲ್ಪಗಳು ಪ್ರಾಚೀನ ಕಾಲದಿಂದಲೂ ಹಾಗೂ ಇತ್ತೀಚಿನ ಕೆಲವು ದೇವಸ್ಥಾನ ರಥ, ಪಲ್ಲಕ್ಕಿಗಳು ಬಹುತೇಕ ಮರದ ಕಟ್ಟಿಗೆಯಿಂದಲೇ ರಚನೆಯಾಗಿರುತ್ತವೆ. ಜನಪದ ಶಿಲ್ಪಿಗಳು ಸರಿಯಾದ ನಿಯಮ, ಆಚರಣೆಗಳನ್ನು ಪಾಲಿಸುವುದರೊಂದಿಗೆ ರಥ, ಪಲ್ಲಕ್ಕಿ ಕೆತ್ತನೆಯ ಕಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಬಹು ಕಂಬಗಳ, ಕಮಾನುಗಳ, ಐದು, ಒಂಭತ್ತು ಹಂತಗಳ ಎತ್ತರದ ರಥವು ಸುತ್ತಲೂ ದುಂಡು ಆಕಾರದ ಹಿನ್ನಲೆಯಲ್ಲಿ ಐದು ಮತ್ತು ಎಂಟು ಕೋನ ಪ್ರತಿಬಿಂಬ ಸಂಕೇತವಾಗಿ ರೂಪಗೊಂಡಿರುತ್ತದೆ. ಪ್ರತಿ ಹಂತದ ಆಯಾಮಗಳು ಎತ್ತರವಾಗಿ ಮೇಲೆ ಹೋದಂತೆ ಚಿಕ್ಕ ಚಿಕ್ಕ ಗಾತ್ರದ ನೆಲೆಯಿಂದ ಪೂರ್ತಿ ಮೇಲ್ಭಾಗ ಸುಂದರ ಕಳಸವನ್ನು ಹೊಂದಿ (ಶಿಖರ) ಎತ್ತರದ ಗಾತ್ರದಿಂದ ನೆರೆದ ಜನರನ್ನು (ಜಾತ್ರೆಯಲ್ಲಿ) ತಲುಪಿ ಆಕರ್ಷಿಸುತ್ತದೆ. ಎಲೆ, ಹೂ ವಿನ್ಯಾಸ, ರೆಂಬೆ, ಕೊಂಬೆ, ಪ್ರಾಣಿ, ಪಕ್ಷಿಗಳು, ಮಾನವಾಕೃತಿ, ದೇವತಾ ಉಬ್ಬು ಶಿಲ್ಪಗಳು ವಿಶೇಷವಾಗಿ ಸಂಯೋಜನೆಗೊಂಡು ಕಂಗೊಳಿಸುತ್ತವೆ. ಮರಗೆತ್ತನೆಯಿಂದ ರೂಪ ಪಡೆದ ರಥ ಶಿಲ್ಪಕ್ಕೆ ನಾಲ್ಕು ಕಲ್ಲಿನ ಗಾಲಿಗಳನ್ನು ಕಲಾತ್ಮಕವಾದ ಕೆತ್ತನೆಯಿಂದ ಕೂಡಿರುತ್ತವೆ. ಈ ರಥದ ಗಾಲಿಗಳನ್ನು ಜನಪದ ಶಿಲ್ಪಿಗಳೇ ಕೆತ್ತನೆ ಮಾಡಿರುತ್ತಾರೆ.

* **ಪಲ್ಲಕ್ಕಿ ಶಿಲ್ಪಗಳು**

ದೇವರಿಗಾಗಿಯೇ ರೂಪಿಸುವ ಪಲ್ಲಕ್ಕಿ ಶಿಲ್ಪಗಳು ಜನಪದರ ದೃಷ್ಟಿಯಲ್ಲಿ ದೇವರನ್ನು ನದಿಸ್ನಾನಕ್ಕೆ ಹೊಯ್ಯುವ ಮೆರವಣಿಗೆ ಸಂಭ್ರಮದ ದೇವರ ಹೊಯ್ಯಾಲೆಯೆಂದೆ ಕಂಡು ಬರುತ್ತದೆ. ಆಕರ್ಷಕ ವರ್ಣ, ಬಟ್ಟೆಗಳ ವಿನ್ಯಾಸದಿಂದ ರಚನೆಯಾದ (ಬಿಲ್ಲಿನಾಕಾರದ) ಈ ಪಲ್ಲಕ್ಕಿ ಶಿಲ್ಪವು ಜನಪದ ಶಿಲ್ಪಿಗಳ ವಿಶಿಷ್ಟ ಶಿಲ್ಪಕಲೆಯಾಗಿದೆ. ಇಬ್ಬರು, ನಾಲ್ಕು ಜನ ಈ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗುವ ವಿಧಾನ. ದಪ್ಪನೆಯ ನೊಗದಿಂದ, ಚಿಕ್ಕ ಗಾತ್ರದ, ಎತ್ತರದ ಕೋಲುಗಳು, ತೊಟ್ಟಿಲು ಸಂಕೇತದ ದೃಷ್ಟಿಯಿಂದ ಎಂಬಂತೆ ಪಲ್ಲಕ್ಕಿಗಳು ಆಕಾರ ಪಡೆದುಕೊಂಡಿರುತ್ತವೆ. ಊರಿನ ಗ್ರಾಮ ದೇವತೆಗಳ ಹಾಗೂ ಬೇರೆ ಬೇರೆ ಪ್ರಸಿದ್ಧ ದೇವರಗಳಿಗೆ ಮಾಡಿಕೊಡುವ ಪಲ್ಲಕ್ಕಿ ಶಿಲ್ಪಕಲೆ ಜನಪದರು ಅತ್ಯಂತ ಗೌರವದಿಂದ ಕಾಣುವ ವಿಶಿಷ್ಟ ಶಿಲ್ಪಕಲೆ ಎಂದೇ ಪ್ರಖ್ಯಾತಿ ಹೊಂದಿದೆ.

* **ವ್ಯವಸಾಯ ಕೇಂದ್ರಿತ ಉಪಕರಣ ಶಿಲ್ಪಕಲೆ**

ರೈತರ ಬದುಕಿಗೆ ಬೇಕಾಗುವ ವಿಶಿಷ್ಟ ಶಿಲ್ಪಗಳೆಂದರೆ ಎತ್ತಿನ ಬಂಡಿ, ಚಕ್ಕಡಿ ಬಂಡಿ, ಕೂರಿಗೆ ದಿಂಡು, ಕುಂಟೆದಿಂಡು, ಉದ್ದಿಗೆಗಳು, ಮೇಳಿ, ಕೊರಮ, ಕೊಡಲಿ ಕಾವುಗಳು ಹೀಗೆ ವ್ಯವಸಾಯ ಕೇಂದ್ರಿತ, ಅಲಂಕಾರಿಕ ವಿನ್ಯಾಸಗಳಲ್ಲದೆ ಸಹಜವಾಗಿ ಹುಟ್ಟಿಕೊಳ್ಳುವ ರೈತರ ಬದುಕಿನ ಅತ್ಯವಶ್ಯಕ ಶಿಲ್ಪಕಲೆಯಾಗಿ ಈ ಶಿಲ್ಪಗಳು ರೂಪ ಪಡೆಯುತ್ತವೆ. ಜನಪದ ಶಿಲ್ಪಿಗಳ ಸಹಜವಾದ ಬದುಕಿನ ಕಲೆ ಸಗರನಾಡಿನ ಪರಿಸರದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

* **ಕಲ್ಲಿನಲ್ಲಿ ಅರಳಿದ ಜನಪದ ಶಿಲ್ಪಗಳು**

ಮಾನವ ಬದುಕಿನ ಪ್ರತಿ ಹೆಜ್ಜೆಗಳಲ್ಲಿ ಕಲ್ಲು ವಿಶಿಷ್ಟ ಸಾಧನವಾಗಿ ಬಳಕೆಯಾಗಿದೆ. ಎಂದೆಂದೂ ಅಳಿಯದ ಹಾಗೆ ಉಳಿಯುವ ಶಿಲ್ಪವೆಂದರೆ ಅದು ಕಲ್ಲಿನಲ್ಲಿ ರೂಪ ಪಡೆದ, (ಶಿಲಾ ಮಾಧ್ಯಮದ) ಶಿಲ್ಪಕಲೆಯಾಗಿದೆ.

ಜನಪದರ ಧಾರ್ಮಿಕ ಹಿನ್ನಲೆಯಲ್ಲಿ ಹಾಗೂ ಸಾಮಾಜಿಕ ನೆಲೆಯ ಮತ್ತು ಬದುಕಿನ ವಾಸ್ತವತೆಯ ಸಹಜ ಕ್ರಿಯೆಯಾಗಿ ಹುಟ್ಟಿಕೊಳ್ಳುವ ಶಿಲ್ಪಕಲೆ ಈ ಶಿಲಾ ಮಾಧ್ಯಮ ಕಲೆಯಾಗಿದೆ.

ಶಿಲಾ ಮಾಧ್ಯಮದ ಜನಪದ ಶಿಲ್ಪಕಲೆಯೆಂದರೆ ಉದಾಹರಣೆಗಾಗಿ ಈ ಶಿಲ್ಪಗಳನ್ನು ಗಮನಿಸಬಹುದು.

ಆಲುಗಂಭ (ದೀಪಸ್ತಂಭ), ಗಣಪತಿ ಶಿಲ್ಪ, ನಾಗಶಿಲ್ಪ, ಲಜ್ಜಾಗೌರಿ ಶಿಲ್ಪ, ದುರ್ಗಿ, ಕಾಳಿ, ಶೆಟಗೆವ್ವ ತಾಯಿ, ಹನುಮಂತ ದೇವರು, ಶಿವಪಾರ್ವತಿ, ಮಹಾಸತಿ ಶಿಲ್ಪ, ಆತ್ಮ ಬಲಿದಾನಗಳ ಶಿಲ್ಪ, ವೀರ ಮರಣ ಶಿಲ್ಪಗಳು, ಗೌರಮ್ಮ, ಶೀಗಮ್ಮನ ಶಿಲ್ಪ, ಕಲ್ಲಿನ ವಳ್ಳು, ಬೀಸುವ ಕಲ್ಲು, ಸಂಗ್ರಾಣಿ ಕಲ್ಲು (ಸ್ಪರ್ಧೆಗಾಗಿ ಜಾತ್ರೆ, ವಿಶೇಷ ದಿನಗಳಲ್ಲಿ ಒಂದೇ ಕೈಯಿಂದ ಎತ್ತುವ ಶಕ್ತಿ ಪ್ರದರ್ಶನದ ಕಲ್ಲುಗಳು) ಸೂರ್ಯ ಚಂದ್ರರ ಶಿಲ್ಪಗಳು, ಉಗುಳು ಮಾರಿ ದೇವರ ಅಮೂರ್ತತೆಯ ಶಿಲ್ಪ, ಹೀಗೆ ಜನಪದರ ನಂಬಿಕೆಗೆ ಮಾಡಿದ ಮೂರ್ತ, ಅಮೂರ್ತ ಕಲ್ಪನೆಯ ರೂಪಗಳು ದೇವರ ಕಾಯಕದ ಶಿಲ್ಪಗಳಾಗಿ ಜನಪದರ ಕೈಯಲ್ಲಿ ವಿಶೇಷವಾಗಿ ರಚನೆಯಾಗಿವೆ.

*** ಲೋಹ ಮಾಧ್ಯಮದ ಜನಪದ ಶಿಲ್ಪಕಲೆ**

ಸಗರನಾಡಿನ ಶಿಲ್ಪ ಪರಂಪರೆಯಲ್ಲಿ ಲೋಹಗಳಿಂದ ರೂಪಗೊಳ್ಳುವ ವೃತ್ತಿಗಾರಿಕೆ ಶಿಲ್ಪಗಳಾದ ಕಮ್ಮಾರಿಕೆ, ಪತ್ತಾರರು, ಬೈಲಕ್ಷರು (ಬಂಗಾರ ಆಭರಣಗಳನ್ನು ಮಾಡುವ ಜನಾಂಗ), ಶೀಲವಂತರು, ಹೀಗೆ ಹಲವು ಮನೆತನಗಳು ಮಾಡುವ ವಿಶಿಷ್ಟ ಕಲೆ ಅದು ಲೋಹ ಶಿಲ್ಪಕಲೆ ಎಂದೇ ಕರೆಯುತ್ತಾರೆ. ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳೆ ಹೀಗೆ ಹಲವು ವಿಧದ ಮಾಧ್ಯಮದಿಂದ ರಚನೆಯಾಗುವ ಸೂಕ್ಷ್ಮಕಲಾ ಕುಸುರಿ ಕೆಲಸವಾಗಿದೆ. ಉದಾಹರಣೆಗಾಗಿ ಈ ಶಿಲ್ಪಕಲೆಯನ್ನು ಗಮನಿಸುವುದಾದರೆ – ದೇವರ ಪಲ್ಲಕ್ಕಿ, ದೇವರ ಮುಖ, ಕಣ್ಣು, ತೊಟ್ಟಿಲುಗಳು, ಕೊರಳಲ್ಲಿ ಕಟ್ಟಿಕೊಳ್ಳುವ ದೇವರ ಪಾದಗಳು ಲಿಂಗ (ಜನಪದರು ಅರಿಕೆ ತೀರಿಸುವ ಹಾಗೂ ದೇವರ ಧ್ಯಾನದ ಪ್ರಕ್ರಿಯೆಗಾಗಿ ಈ ಶಿಲ್ಪಗಳು ರೂಪ ಪಡೆದು) ನಾಡಿನಾದ್ಯಂತ ಪಸರಿಸಿಕೊಂಡಿವೆ. ತಿಂಥಣಿಯ ಮಾನಪ್ಪಯ್ಯ, ಸಗರದ ಎಲ್ಲಮ್ಮದೇವಿ, ಹುಲಗಮ್ಮನ ಪಾದುಕೆಗಳು, ಹಲವು ದೇವರುಗಳ ತೊಟ್ಟಿಲು, ಪಾಲ್ಕಿ, ಕುದುರೆ, ಕಣ್ಣು ಹೀಗೆ ಹಲವಾರು ನೆಲೆಯ ಧಾರ್ಮಿಕ ಪ್ರಧಾನ ಕಲೆಯಾಗಿ ಈ ಲೋಹ ಮಾಧ್ಯಮ ಜನಪದ ಶಿಲ್ಪಕಲೆ ಅರಳಿನಿಂತಿವೆ.

*** ಶವ ಸಂಸ್ಕಾರದ ದಂಟಿನ ಶಿಲ್ಪಗಳು**

ಸಗರನಾಡಿನ ಪ್ರದೇಶದಲ್ಲಿ ಶವ ಸಂಸ್ಕಾರದ ದಿನದಂದು ರೂಪ ಪಡೆಯುವ ವಿಶಿಷ್ಟ

ಶಿಲ್ಪಕಲೆ ಈ ದಂಟಿನ ಶಿಲ್ಪಕಲೆಯಾಗಿದೆ.

ಹಿರಿಯರು ತೀರಿಕೊಂಡಾಗ ಶವವನ್ನು ಮಸಣಕ್ಕೆ ಹೊಯ್ಯುವ ಮುನ್ನ ಸಾಯಂಕಾಲದ ಮೆರವಣಿಗೆ ಸಂದರ್ಭದಲ್ಲಿ ಈ ಶಿಲ್ಪಗಳ ಕುಣಿತದ ಆಟ ಬಲೂ ವಿಶೇಷವಾಗಿರುತ್ತದೆ. ಸ್ಪರ್ಧೆಯ ಪ್ರತೀಕವಾಗಿ ಎಂಬಂತೆ ಕಂಡುಬರುವ ಈ ದಂಟಿನ ಶಿಲ್ಪಗಳು ಆಟದ ಮೆರವಣಿಗೆಯಲ್ಲಿ ಕುಣಿತದ ಗೊಂಬೆಗಳಾಗಿ ಕಂಡುಬರುತ್ತವೆ.

ಈ ಶಿಲ್ಪ ಮಾಡುವ ವಿಧಾನ ಮತ್ತು ವಿಶಿಷ್ಟ ಶಿಲ್ಪವೆಂದರೆ ಜೋಳದ ದಂಟಿನ ಚಿಬಿಕೆ (ದಂಟಿನ ಮೇಲ್ಪದರು ಹೊದಿಕೆ ಹಳದಿ ವರ್ಣದ ತೊಗಟೆಯನ್ನು ಸುಲಿದು) ಬೆಂಡಿನ (ಹಗುರ ಭಾರದ ತುಣುಕುಗಳಿಂದ ಎತ್ತುಗಳನ್ನು ಮಾಡುವುದರೊಂದಿಗೆ), ಆ ಎತ್ತನ್ನು ನಾಲ್ಕು ಕಾಲುಗಳಿಂದ ರೂಪಿಸಿ ಹಲಗೆಯ ಮೇಲೆ ಕೂಡಿಸಿ, ಮತ್ತೊಬ್ಬ ಹಲಗೆ ವಾದದ ಕಲಾವಿದ ಈ ಎತ್ತಿನ ಶಿಲ್ಪವನ್ನು ಕೆಳಗೆ ಬೀಳಿಸುವ ವಿಧಾನವಾಗಿ, ಹಲಗೆ (ತಮಟೆ) ಚರ್ಮವಾದ್ಯವನ್ನು ಜೋರಾಗಿ ನುಡಿಸಿದಂತೆ ಈ ಎತ್ತಿನ ಶಿಲ್ಪವು ನಾದಕ್ಕೆ ಕುಣಿಯುತ್ತ ಹಲಗೆಯ ಸುತ್ತಲಿನ ಕಂಟದಿಂದ ಹೊರ ಬೀಳಬೇಕು. ಹಲಗೆ ಮೇಲಿನ ಎತ್ತು ಕೆಳಗೆ ಬೀಳಿಸುವ ಸ್ಪರ್ಧಾತ್ಮಕ ಕಲೆ ಪ್ರದರ್ಶನದಲ್ಲಿ ಹಣ ಗೆಲ್ಲುವ ಸ್ಪರ್ಧೆ ನೋಡುಗುವ ಕುತೂಹಲಕಾರಿ ಕಲೆಯಾಗಿ ಈ ಪ್ರದರ್ಶನ ಗಮನ ಸೆಳೆಯುತ್ತದೆ.

ದಂಟಿನ ಶಿಲ್ಪ ಪ್ರಕಾರಗಳಲ್ಲಿ ರೂಪಗೊಂಡಿರುವ ಶಿಲ್ಪಗಳೆಂದರೆ ರೈತನ ಶಿಲ್ಪ, ಎತ್ತುಗಳು, ಚಕ್ಕಡಿ ಬಂಡಿ, ವಿವಿಧ ಗೊಂಬೆಗಳು, ಮಕ್ಕಳ ಆಟಿಕೆಯ ಗೊಂಬೆಗಳು ಸೇರಿದಂತೆ ನಾನಾ ಬಗೆಯ ವಿಶಿಷ್ಟ ಶಿಲ್ಪಗಳಾಗಿ ಕಂಗೊಳಿಸುತ್ತವೆ.

* **ಈ ಶಿಲ್ಪಗಳು ಮಾಡುವ ಪರಿಕರ ಮತ್ತು ಮಾಡುವ ವಿಧಾನ**

* ಜೋಳದ ದಂಟು

* ದಂಟಿನ ಚಿಬಿಕೆ (ದಂಟಿನ ಮೇಲ್ಪದರ ಹೊದಿಕೆ)

* ಬೆಳ್ಳನೆಯ (ಹಾಲಿನ ಬಣ್ಣ) ಹಗುರವಾದ ಬೆಂಡಿಗೆ ನಾಲ್ಕು ಕಾಲುಗಳು, ಎರಡು ಕೊಂಬುಗಳಂತೆ ಕಡ್ಡಿಯಾಕಾರದ ಚಿಬಿಕೆಗಳನ್ನು ದುಂಡಾಕಾರದ (ಹಗುರ) ಹೊಟ್ಟೆಗೆ ಕಡ್ಡಿಯಂತೆ ಚುಚ್ಚಬೇಕು. ನೆಲಕ್ಕೆ ಸಮನಾಗಿ (ಕುಂಟದೇ) ನಿಲ್ಲುವಂತೆ ನಾಲ್ಕು ಕಾಲು, ನೇರ ನೋಟದ ಹಾಗೆ

ಎರಡು ಸೆಟೆದ ಕೋಡುಗಳು, ಕೆಳಗೆ ಮುಖ ಮಾಡಿದ ಶೈಲಿಯಲ್ಲಿ ಬಾಲದ ಗುರುತು ಹೀಗೆ ಎತ್ತಿನ ಆಕಾರದ ಪರಿಕಲ್ಪನೆಯಲ್ಲಿ ಚಿಬಿಕೆ ಶಿಲ್ಪಗಳು ರೂಪಗೊಳ್ಳುತ್ತವೆ.

ಸಗರನಾಡಿನ ಭಾಗದಲ್ಲಿ ಈ ಎತ್ತಿನ ಕುಣಿತದ ಆಟದ ಶಿಲ್ಪಕ್ಕೆ ಶವ ಸಂಸ್ಕಾರದ ದಂಟಿನ ಶಿಲ್ಪಗಳೆಂದೆ ಪ್ರಖ್ಯಾತಿ ಪಡೆದಿವೆ. ಗಮನಿಸುವುದಾದರೆ ಶವ ಸಂಸ್ಕಾರದ ಸಂದರ್ಭದಲ್ಲಿ ಈ ಕಲೆಯ ಪ್ರದರ್ಶನಗಳನ್ನು ಕಾಣಬಹುದು.

ಸಗರನಾಡಿನ ಜನಪದ ಶಿಲ್ಪ ಪರಂಪರೆ ತನ್ನದೇಯಾದ ಇತಿ–ಮಿತಿ, ಧಾರ್ಮಿಕ ಕಟ್ಟಳೆಯ ತಳಪಾಯದಲ್ಲಿ ರೂಪಗೊಂಡು ನಾಡಿನ ಜನಪದ ಶಿಲ್ಪ ಪ್ರಕಾರಗಳಲ್ಲಿ ತನ್ನ ಗುರುತನ್ನು ಪ್ರತಿಪಾದಿಸಿದೆ. ಅದರ ರೂಪ, ರಚನಾ ವಿಧಾನ, ತಂತ್ರಗಾರಿಕೆ, ಆಚರಣೆ ಸಂಗತಿಗಳು ಸೇರಿದಂತೆ ಪ್ರತಿಯೊಂದು ವಿವರಣಾತ್ಮಕ ವಿವೇಚನೆಯನ್ನು ಈ ಸಂದರ್ಭದಲ್ಲಿ ಕಾಣುತ್ತೇವೆ. ಜನಪದ ಶಿಲ್ಪ ಪ್ರಕಾರಗಳಲ್ಲಿ ಸಗರನಾಡಿನ ಕಲೆ ರಸವತ್ತಾದ ಕಲಾವೃಕ್ಷ ಈ ಭಾಗದಲ್ಲಿದೆ ಎಂಬುದನ್ನು ಇಲ್ಲಿ ಮನವರಿಕೆ ಮಾಡಿಕೊಳ್ಳಬೇಕಿದೆ.

ಅಧ್ಯಾಯ – ೪
ಸಗರನಾಡಿನ ಜನಪದ ಶಿಲ್ಪಿಗಳು

ಅಧ್ಯಾಯ–4
ಸಗರನಾಡಿನ ಜನಪದ ಶಿಲ್ಪಿಗಳು

ಸಗರ ನಾಡು ಜನಪದ ಶಿಲ್ಪಿಗಳ ಕಲೆ ಮತ್ತು ಅವರ ಬದುಕಿನ ಸ್ಥಿತ್ಯಂತರಗಳ ಕುರಿತಂತೆ ಸಮಗ್ರ ಆಲೋಚನಾ ಕ್ರಮದಿಂದ ಈ ಕೆಳಗಿನಂತೆ ಚಿಂತಿಸಲಾಗುವುದು. ಜನಪದ ಶಿಲ್ಪಿಗಳು ಎನ್ನು ಅರ್ಥ ವಿವರಣೆಯಂತೆ ಜನಸಾಮಾನ್ಯರ ಕಲಾತ್ಮಕ ನೆಲೆಯ ವಸ್ತು ವಿಷಯದ ವಾಸ್ತವತೆಯನ್ನು ಪುನರ್ ಮನನ ಮಾಡಿಕೊಳ್ಳುವ ವಿಧಾನವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ತಮ್ಮ ಬದುಕಿನೂದ್ದಕ್ಕೂ ಮರಗೆತ್ತನೆಯ ಮತ್ತು ಶಿಲಾ ಕೆತ್ತನೆಯ ಹಾದಿಯಲ್ಲಿ ದುಡಿಯುತ್ತಾ ಅದುವೇ ಬದುಕಿನ ಕಾಯಕವಾಗಿ ಶ್ರದ್ಧೆಯಿಂದ ಕಲಾ ಪಯಣ ನಡೆಸಿದ ಜನಪದ ಶಿಲ್ಪಿಗಳ ಕಲೆ ಮತ್ತು ಜೀವನದ ಹಲವು ಪ್ರಮುಖ ಸಂಗತಿಗಳನ್ನು ಈ ಕೆಳಗಿನಂತೆ ವಿವರಣಾತ್ಮಕವಾಗಿ ನೋಡಬಹುದಾಗಿದೆ. ಸಗರನಾಡ ವ್ಯಾಪ್ತಿಯಾದಂತಹ ಶಹಾಪುರ, ಸುರಪುರ, ಜೇವರ್ಗಿ ತಾಲೂಕಿನ ಹಲವು ಗ್ರಾಮೀಣ ಪರಿಸರದಲ್ಲಿ ಕುದುರೆ, ತಲಬಾಗಿಲು, ಪಡಸಾಲೆ ಜೋಡಣೆ, ಗ್ರಾಮದೇವತೆ ಕೆತ್ತನೆ, ಗೌರಿಮಾಡ, ರಥ ಕೆತ್ತನೆ ಸೇರಿದಂತೆ ಹಲವಾರು ಬಗೆಯ ಶಿಲ್ಪ ಕಲಾಕೃತಿಗಳನ್ನು ರಚಿಸುವುದರೊಂದಿಗೆ

ಸಗರನಾಡಿನ ಜನಪದ ಕಲಾ ಪರಂಪರೆಯನ್ನು ಶ್ರೀಮಂತಗೊಳಿಸಿದ ಅನೇಕ ಪ್ರತಿಭಾವಂತ ಜನಪದ ಶಿಲ್ಪಿಗಳು ಕಲಾ ಬದುಕಿನ ಕಾರ್ಯವನ್ನು ಇಲ್ಲಿ ಪ್ರಮುಖವಾಗಿ ಕಂಡಕೊಳ್ಳುತ್ತೇವೆ.

ಶಹಾಪುರ ತಾಲೂಕಿನ ಜನಪದ ಶಿಲ್ಪಿಗಳು:

1) ಬನ್ನಪ್ಪ ತಂದೆ ದೇವಿಂದ್ರಪ್ಪ ಬಡಿಗೇರ – ಚನ್ನೂರು (ಜೆ)

2) ದ್ಯಾವಣ್ಣ ತಂದೆ ದೇವಿಂದ್ರಪ್ಪ ಬಡಿಗೇರ – ಚನ್ನೂರು (ಜೆ)

3) ಕಾಶಿಪತಿ ತಂದೆ ಮೋನಪ್ಪ ಬಡಿಗೇರ – ಅನವಾರ

4) ಮಲ್ಲಯ್ಯ ತಂದೆ ಕಾಳಪ್ಪ – ದೊಡ್ಡ ಸಗರ

5) ಕಾಳಪ್ಪ ತಂದೆ ತಿಪ್ಪಣ್ಣ ಬಡಿಗೇರ – ದೊಡ್ಡ ಸಗರ

6) ಶಶಿಕುಮಾರ ಭಗವಂತಪ್ಪ ಆಚಾರ್ಯ – ದೊಡ್ಡ ಸಗರ

7) ಭಗವಂತಪ್ಪ ಆಚಾರ್ಯ – ದೊಡ್ಡ ಸಗರ

8) ಸಿದ್ದಲಿಂಗಪ್ಪ ತಂದೆ ದೇವಿಂದ್ರಪ್ಪ ಕಂಬಾರ – ಶಿರವಾಳ

9) ದೇವಿಂದ್ರಪ್ಪ ಕಂಬಾರ ಶಿಲ್ಪಿ – ಶಿರವಾಳ

10) ಕರಣಪ್ಪ ತಂದೆ ಗುರಪ್ಪ ಕಂಚಗಾರ – ದೋರನಹಳ್ಳಿ

11) ಮಲ್ಲೇಶಪ್ಪ ತಂದೆ ಸಂಗಪ್ಪ ಕಂಬಾರ – ದೋರನಹಳ್ಳಿ

12) ಗಂಗಾಧರ ತಂದೆ ಚನ್ನಬಸಪ್ಪ ಬಡಿಗೇರ – ತುಮಕೂರು

13) ಕಾಡಪ್ಪ ಬಡಿಗೇರ – ಕದರಾಪೂರು

14) ದಿ. ಶ್ರೀಧರ ಬಡಿಗೇರ – ತುಮಕೂರು.

15) ಸುರೇಂದ್ರ ಕೆ. ವಿಶ್ವಕರ್ಮ – ಕೊಳ್ಳೂರು (ಎಂ)

16) ಗಾಯತ್ರಿ ಎಸ್. ವಿಶ್ವಕರ್ಮ – ಕೊಳ್ಳೂರು (ಎಂ)

17) ಮರೆಪ್ಪ ತಂದೆ ದೇವಿಂದ್ರಪ್ಪ – ಶಿರವಾಳ

18) ಮಾನಪ್ಪ ತಂದೆ ಕಾಳಪ್ಪ ವಿಶ್ವಕರ್ಮ – ದೊಡ್ಡ ಸಗರ

ಬನ್ನಪ್ಪ ತಂದೆ ದೇವಿಂದ್ರಪ್ಪ ಬಡಿಗೇರ:

ಕರ್ನಾಟಕ ಮೂವತ್ತನೇ ಜಿಲ್ಲೆಯಾದ ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಚೆನ್ನೂರು (ಜೆ) ಗ್ರಾಮದ ಶಿಲ್ಪಿ ಬನ್ನಪ್ಪ ಬಡಿಗೇರ ಅವರು (ವಿಶ್ವಕರ್ಮ) ಸಗರನಾಡಿನ ಅತ್ಯಂತ ಕ್ರಿಯಾಶೀಲ ಮತ್ತು ಪ್ರತಿಭಾವಂತ ಕಲಾವಿದರು, ತಮ್ಮ ಬದುಕಿನೂದ್ದಕ್ಕೂ ಹಲವಾರು ಶಿಲ್ಪ ಕಲಾಕೃತಿಗಳನ್ನು ರಚಿಸುವುದರೊಂದಿಗೆ ಎಲೆ ಮರೆಯ ಕಾಯಿಯಂತೆ ಕಂಡುಬರುತ್ತಾರೆ. ಇವರ ಬದುಕನ್ನು ನೋಡಿದಾಗ ಆರ್ಥಿಕ ಸಮಸ್ಯೆಯೊಂದಿಗೆ ಸಾಗುತ್ತ ಸಾರ್ಥಕ ಕಲಾ ಬದುಕಿನ ಯಶಸ್ಸನ್ನು ಕಂಡುಕೊಂಡಿರುವುದು ಹರ್ಷದ ಸಂಗತಿಯಾಗಿದೆ.

ಕೌಟುಂಬಿಕ ಹಿನ್ನೆಲೆಯನ್ನು ಗಮನಿಸಿದಾಗ ಇವರ ತಂದೆ-ತಾಯಿ ಬಹಳ ಕಷ್ಟದ ಬದುಕನ್ನು ಎದುರಿಸಿದ ಅನೇಕ ಸವಾಲುಗಳಿವೆ ಎಂಬುದನ್ನು ಕಲಾವಿದ ಬನ್ನಪ್ಪನವರು ವಿವರಿಸುತ್ತಾರೆ. ಇವರ ತಂದೆಯು ಸಹ ಕಲೆಯ ಸೂಕ್ಷ್ಮತೆಗಳು ತಿಳಿದುಕೊಂಡಿರುವುದರಿಂದ ಸಾಮಾನ್ಯವಾಗಿ ಅವರ ಆಲೋಚನಾ ಕ್ರಮ ಮತ್ತು ಕಲೆಯ ಸಂಗತಿಗಳನ್ನು ತಾನಾಗಿಯೇ ಮಗ ಬನ್ನಪ್ಪನವರ ಕಲಾ ಬದುಕಿನಲ್ಲಿ ಕಾಣಿಸಿಕೊಂಡಿರುವುದು ಸಹಜದ ಸಂಗತಿಯಾಗಿದೆ.

ಕಲೆ ವಂಶಪರಂಪರೆಯ ನೆಲೆಯಾಗಿ ಅಭಿವ್ಯಕ್ತಿಗೊಂಡರೂ ಸಹ ಸತತ ಮತ್ತು ಪರಿಶ್ರಮ ಅಧ್ಯಯನದ ಅಗತ್ಯತೆ ಬೇಕೆ ಬೇಕು,. ಅಂದಾಗ ಮಾತ್ರ ಉತ್ತಮ ಕಲಾವಿದ ರೂಪಗೊಳ್ಳುವ ಸಾಧ್ಯತೆಗಳಿವೆ ಎಂಬ ಚರ್ಚೆಗಳಂತೆ, ಶಿಲ್ಪಿ ಬನ್ನಪ್ಪ ಬಡಿಗೇರರು ಸಹ ಸತತ ಪರಿಶ್ರಮದ ಮೂಲಕ ಕಲಾ ಬದುಕಿನಲ್ಲಿ ಬೆಳಕನ್ನು ಕಂಡುಕೊಂಡಿದ್ದಾರೆ.

ಜನಪದ ಶಿಲ್ಪಿಯಾದ ಬನ್ನಪ್ಪ ಬಡಿಗೇರ ಅವರಿಗೆ ಪ್ರೋತ್ಸಾಹದಾಯಕವಾಗಿ ಹೆಂಡತಿ ವಿಜಯಲಕ್ಷ್ಮೀ ಸೇವೆಯೂ ಸಹ ಮೆಚ್ಚುವಂತಹದ್ದು. ಬಡಿಗೇತನ ಮಾಡುವ ಕಾಯಕದಲ್ಲಿ ಬಂದಿರುವ ಅಲ್ಪ ಸ್ವಲ್ಪ ಹಣದಿಂದ ಜೀವನ ನಡೆಸಬೇಕಾದ ಸಂದರ್ಭದಲ್ಲಿ ಬನ್ನಪ್ಪನವರ ಕಲಾ ಕಾಯಕಕ್ಕೆ ಎಂದು ಅಡ್ಡಿಯಾಗದೇ, ಬಂದಿರುವ ಹಣದಿಂದಲೇ ಸಂತೃಪ್ತಿ ಬದುಕನ್ನು ಕಾಣುವುದರೊಂದಿಗೆ ಪ್ರೋತ್ಸಾಹಿಸಿದ ರೀತಿ ಅನನ್ಯವಾದದ್ದು. ವಿಜಯಲಕ್ಷ್ಮೀ ಗಂಡ ಬನ್ನಪ್ಪ ಬಡಿಗೇರ ಅವರಿಗೆ ನಾಲ್ಕು ಜನ ಮಕ್ಕಳು 1) ಮಂಜುಳಾ 2) ತಾರಮ್ಮ 3) ದೇವಿಂದ್ರಪ್ಪ 4)

ಗಾಯತ್ರಿ, ಶೈಕ್ಷಣಿಕ ಅರ್ಹತೆಯನ್ನು ಗಮನಿಸಿದಾಗ ಮಗ ದೇವಿಂದ್ರಪ್ಪ ಐಟಿಐ ಮುಗಿಸಿದ್ದು, ಪ್ರಸ್ತುತ ತಂದೆಯ ಕಾಯಕವಾದ ಮರಗೆತ್ತನೆಯ ಬಾಗಿಲು, ಕಿಟಕಿ, ಕುದುರೆ, ತಲಬಾಗಿಲು ಕೆತ್ತನೆಯ ಕಾರ್ಯದಲ್ಲಿ ಮುಂದುವರೆದಿದ್ದಾರೆ. ಮಗಳು ಗಾಯತ್ರಿ ಡಿಪ್ಲೋಮಾ ಮತ್ತು ಡಿ.ಇಡಿ ಪದವಿ ಪೂರೈಸಿದ್ದಾರೆ. ಇವರು ಸಹ ತಮ್ಮೂರಾದ ಚನ್ನೂರು (ಜೆ) ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಿಲ್ಪಿ ಬನ್ನಪ್ಪನವರು ಚಿಕ್ಕವರಿರುವಾಗಲೇ ಅಂಗವಿಕಲತೆಯಿಂದ ತನ್ನ ಬಲಗಾಲನ್ನು ಕಳೆದುಕೊಂಡು (ಚಿಕ್ಕ ಗಾತ್ರವಿದೆ) ಕುಂಟುತ್ತಲೇ ಬದುಕನ್ನು ಸಾಗಿಸಿದ್ದಾರೆ.

ಪ್ರಸ್ತುತ ಅರವತ್ತೈದು ವಯಸ್ಸಿನಲ್ಲಿರುವ ಬನ್ನಪ್ಪ ಬಡಿಗೇರ ಅವರಿಗೆ ಯಾವುದೇ ಸರಕಾರದಿಂದ ಮಾಶಾಸನ, ಗೌರವ ಧನ, ವಯೋವೃದ್ಧ ವೇತನ ಬರುತ್ತಿಲ್ಲ. ಹೀಗಾಗಿ ಕುಟುಂಬವು ಆರ್ಥಿಕ ಸಮಸ್ಯೆಯಲ್ಲಿರುವುದನ್ನು ಕಾಣಬಹುದು. ಮರಗೆತ್ತನೆಯ ಕಾಯಕದಲ್ಲಿ ಪುನಃ ತೊಡಗಿಸಿಕೊಂಡಿರುವ ಬನ್ನಪ್ಪ ಬಡಿಗೇರ ಅವರು ಸಗರನಾಡಿನ ಅತ್ಯಂತ ಮೇರು ಪ್ರತಿಭೆ ಎಂಬುದಲ್ಲಿ ಯಾವುದೇ ಅನುಮಾನವಿಲ್ಲ. ಹೀಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಂತಹ ಸಂಸ್ಥೆಗಳು ಈ ಶಿಲ್ಪಿಗೆ ಮಾಶಾಸನ ದೊರಕಿಸುವುದು ಅತ್ಯಂತ ಅವಶ್ಯಕವಾಗಿದೆ. ಬಡತನದಲ್ಲೇ ಬಾಳಿ ಬದುಕಿದ ಬನ್ನಪ್ಪ ಬಡಿಗೇರ ಕಲಾ ಕಾರ್ಯ ಈ ಕೆಳಗಿನಂತೆ ಪರಸರಿಸಿಕೊಂಡಿರುವುದನ್ನು ಕಾಣುತ್ತೇವೆ.

ಕಲಾಕಾರ್ಯ

ಜನಪದ ಶಿಲ್ಪಿಯೆಂದೆ ಕಂಡುಬರುವ ಬನ್ನಪ್ಪ ಬಡಿಗೇರ ಅವರು ಕುದರೆ, ತಲಬಾಗಿಲು, ಗ್ರಾಮದೇವತೆಗಳ ಕೆತ್ತನೆಯಲ್ಲಿ ಅತ್ಯಂತ ಕ್ರಿಯಾಶೀಲರು. ಅವರು ಕೆತ್ತನೆ ಮಾಡಿದ ಶಿಲ್ಪಕಲಾಕೃತಿಗಳು ಸಗರನಾಡಿನ ಹಲವು ಗ್ರಾಮಗಳಲ್ಲಿ ಆಕರ್ಷಿಸುತ್ತಿವೆ. ಉದಾಹರಣೆಗೆ ಹಲವು ಗಮನಿಸುವುದಾದರೆ, (ಬಸಲಿಂಗಪ್ಪ ತೆಲಗರ್ ಅವರ ಮನೆ, ಶಹಾಪೂರ ತಾಲೂಕಿನ ಕೊಂಕಲ್ ಗ್ರಾಮ) ಅಲ್ಲದೇ ದೇವದುರ್ಗ ತಾಲೂಕಿನ ಅನೇಕ ಗ್ರಾಮಗಳು, ಶಹಾಪೂರ ತಾಲೂಕಿನ ಯಕ್ಷಂತಿ, ಹಂಚಿನಾಳ, ವಡಗೇರಾ, ವಂಟೂರು, ಉಳ್ಳೇಸೂಗೂರು, ಕುರುಕುಂದಿ, ಟಿ.ವಡಗೇರಾ, ಚನ್ನೂರು (ಜೆ),

ಗೊಂದೆನೂರು, ಕುರಿಹಾಳ, ಐಕೂರು ಅನಸೂರು, ರಾಕುಂಪಿ, ಬಿಳ್ಹಾರ, ಬೂದಿನಹಾಳ, ಸೇರಿದಂತೆ ಸಗರನಾಡಿನ ವಿವಿಧ ಗ್ರಾಮಗಳಲ್ಲಿ ಕುದುರೆ, ತಲಬಾಗಿಲು, ಪಡಸಾಲಿ ಜೋಡಣೆ, ಗ್ರಾಮದೇವತೆ, ಗೌರಿಮಾಡಗಳನ್ನು ಕೆತ್ತನೆ ಮಾಡಿದ್ದಾರೆ. ಅಂಕಿ ಅಂಶಗಳ ಪ್ರಕಾರ ಕುದುರೆ ಶಿಲ್ಪಗಳು 500, ತಲಬಾಗಿಲು 250, ಪಡಸಾಲೆ ಜೋಡಣೆ ಕೆಲಸ 500 ಗೌರಿಮಾಡದ ಕೆತ್ತನೆ ಹಾಗೂ ಐದು ಗ್ರಾಮದೇವತೆಗಳನ್ನು ಸುಂದರವಾಗಿ ಕೆತ್ತನೆ ಮಾಡಿದ್ದಾರೆ. ಆಯಾ ಶಿಲ್ಪಸೃಷ್ಠಿಯ ಕಾರ್ಯದಲ್ಲಿ ತನ್ನದೇಯಾದ ನೈಜ ಸ್ವರೂಪವನ್ನು ಪಡೆದುಕೊಂಡು ಶ್ರೇಷ್ಠತೆಗೆ ದಾರಿಮಾಡಿಕೊಂಡಿವೆ.

ಗ್ರಾಮದೇವತೆ ಶಿಲ್ಪಗಳು

ಬನ್ನಪ್ಪ ಬಡಿಗೇರ ಅವರು ರಚಿಸಿದ ಗ್ರಾಮದೇವತೆ ಶಿಲ್ಪಗಳು ಜನರ ಆರಾಧ್ಯ ದೇವತೆಗಳಾಗಿ ರೂಪಗೊಂಡಿವೆ ಅವುಗಳನ್ನು ಈ ಕೆಳಗಿನಂತೆ ಕಾಣುತ್ತೇವೆ.

1) ಮರಗಮ್ಮ ದೇವಿ – ಚನ್ನೂರು (ಜೆ) ಸ್ವಗ್ರಾಮ ತಾ. ಶಹಾಪುರ, ಜಿ. ಯಾದಗಿರ

2) ದ್ಯಾವಮ್ಮ ದೇವಿ – ಚನ್ನೂರು (ಜೆ) ಸ್ವಗ್ರಾಮ ತಾ. ಶಹಾಪುರ, ಜಿ. ಯಾದಗಿರ

3) ಕೆಂಚಮ್ಮ ದೇವಿ – ವಡಗೇರ, ತಾ. ಶಹಾಪುರ, ಜಿ. ಯಾದಗಿರ

4) ದ್ಯಾವಮ್ಮ ದೇವಿ – ಬೂದಿನಾಳ ತಾ. ಶಹಾಪುರ, ಜಿ. ಯಾದಗಿರ

5) ದ್ಯಾವಮ್ಮ ದೇವಿ – ಗೊಂದೆನೂರು ತಾ. ಶಹಾಪುರ, ಜಿ. ಯಾದಗಿರ

ಒಟ್ಟು ಐದು ಗ್ರಾಮಗಳಲ್ಲಿ ದೇವತೆಯ ಶಿಲ್ಪವನ್ನು ರಚಿಸಿದ್ದಾರೆ. ಪ್ರತಿಯೊಂದು ಗ್ರಾಮದೇವತೆಗಳ ಕೈಗಳಲ್ಲಿ ಆಯಾ ಅವತಾರ ರೂಪಿತ ಕೇಂದ್ರವಾಗಿ ಎಂಟು ಕೈಗಳನ್ನು ದೇವಿ ಹೊಂದಿದ್ದಾಳೆ. ಪ್ರತಿ ಕೈಯಲ್ಲಿ ಶಂಖ, ಡಮರು, ಚಕ್ರ, ಆಯುಧ, ತ್ರಿಶೂಲ, ಗಧೆ, ಖಡ್ಗ, ಕೊಡಲಿ, ಹೂ ಹೀಗೆ ಹಲವು ಸಾಮಗ್ರಿಗಳನು ಹಿಡಿದುಕೊಂಡಿದ್ದಾಳೆ. ಚನ್ನೂರು ಗ್ರಾಮದ ದ್ಯಾವಮ್ಮ ದೇವಿಯು ಆನೆಯ ಮೇಲೆ ಕುಳಿತಿದ್ದಾಳೆ. ಹಾಗೆಯೇ ಅದೇ ಗ್ರಾಮದ ಮರಗಮ್ಮ ದೇವಿಯು ಹಸಿರು ಸೀರೆಯನ್ನುಟ್ಟು ಸಿಂಹದ ಮೇಲೆ ಕುಳಿತು ರಾಕ್ಷಸನನ್ನು ಸಂಹರಿಸುವ ದೃಶ್ಯಶಿಲ್ಪವಾಗಿದೆ. ಈ ಶಿಲ್ಪವು ಎಂಟು ಕೈಗಳನ್ನು ಹೊಂದಿದೆ. ಗೊಂದೆನೂರು ಗ್ರಾಮದ ದ್ಯಾವಮ್ಮನ ಶಿಲ್ಪವು ಸಹ ಎಂಟು ಕೈಗಳನ್ನು ಹೊಂದಿದ್ದು ಕೆಂಪು ಸೀರೆಯನ್ನುಟ್ಟು ಸಿಂಹದ ಮೇಲೆ

ಪಯಣಿಸುತ್ತ ರಾಕ್ಷಸನನ್ನು ಸಂಹರಿಸುವ ಶಿಲ್ಪಕಲಾಕೃತಿಯಾಗಿದೆ. ಮುಖಕ್ಕೆ ಕೆಂಪು ಬಣ್ಣ ಲೇಪಿಸುವುದರೊಂದಿಗೆ ಜನರ ಆಕರ್ಷಕ, ಮತ್ತು ಭಕ್ತಿ ಭಾವ ಕ್ರಿಯೆಯ ರೂಪವಾಗಿ ಗ್ರಾಮದೇವತೆಗಳನ್ನು ರೂಪಿಸುವಲ್ಲಿ ಶಿಲ್ಪಿ ಬನ್ನಪ್ಪ ಬಡಿಗೇರರ ಕಲಾಕಾರ್ಯ ಮೆಚ್ಚುವಂತಹದ್ದಾಗಿದೆ.

ತಲಬಾಗಿಲು ಮತ್ತು ಕುದುರೆ ಶಿಲ್ಪಗಳು:

ಸಗರನಾಡಿನ ಪ್ರದೇಶದ ಮನೆಗಳಿಗೆ ಆಕರ್ಷಕವಾದ ತಲಬಾಗಿಲುಗಳನ್ನು ಕೂಡಿಸುವ ಸಂಪ್ರದಾಯವಿದೆ. ತಲಬಾಗಿಲುಗಳಿರುವ ಮನೆ ಆಯಾ ಗ್ರಾಮದ ಪ್ರತಿಷ್ಠಿತ ಗೌರವಾನ್ವಿತ ಮನೆಗಳು ಎಂದು ಪ್ರಸಿದ್ಧಿಯು ಪಡೆದ ಸಂಗತಿಗಳಿವೆ. ಅದರಂತೆ ತಲಬಾಗಿಲುಗಳು ಅತ್ಯಂತ ಅಲಂಕಾರಿಕವಾಗಿ ಕೆತ್ತನೆ ಮಾಡಿದ್ದಾರೆ. ನಾಲ್ಕು, ಆರು, ಚೌಪಟ್ಟಿಗಳನ್ನು ಮಾಡಿಕೊಂಡು ಅದರ ಮೇಲೆ ಉಬ್ಬು ಶಿಲ್ಪದ ಮಾದರಿಯಲ್ಲಿ ಎಲೆ, ಹೂ, ಬಳ್ಳಿ ಪ್ರಾಣಿ, ಪಕ್ಷಿಗಳ ಸಮೂಹ ಸೇರಿದಂತೆ ಅನೇಕ ಕಲಾ ಕುಸುರಿ ಕೆತ್ತನೆಯಿರುತ್ತದೆ. ಹೂ ಬಳ್ಳಿಗಳು ಒಂದಕ್ಕೊಂದು ಅಪ್ಪಿಕೊಂಡಿರುವಂತೆ ತೊಡರು-ತೊಡಕುಗಳ ಸಮೂಹ, ಅವುಗಳ ಮಧ್ಯೆ ಗಿಳಿ, ನವಿಲುಗಳ ಸಂಯೋಜನಾ ಕ್ರಮ ಆಕರ್ಷಕವಾಗಿರುತ್ತದೆ. ಬೃಹತಾದ ತಲಬಾಗಿಲ ಮೇಲೆ ಎಡ ಮತ್ತು ಬಲಕ್ಕೆ ಎರಡು ಕುದುರೆ ಶಿಲ್ಪಗಳನ್ನು ಕೂಡಿಸುವ ಪದ್ಧತಿಯಿದೆ. ಬನ್ನಪ್ಪ ಬಡಿಗೇರರ ಕಲಾ ವಿಶೇಷತೆಯಿಂದ ಎರಡು ಅಡಿ ಎತ್ತರ ಗಾತ್ರದ ಕುದುರೆ ಶಿಲ್ಪಗಳು ನೈಜರೂಪದ ನೆಲೆಯಿಂದ ರೂಪ ಪಡೆದಿರುತ್ತೇವೆ. ತಲಬಾಗಿಲು ಮತ್ತು ಕುದುರೆ ಶಿಲ್ಪಗಳು ಮನೆಯ ಸೌಂದರ್ಯವನ್ನು ಹೆಚ್ಚಿಸುತ್ತ ದೊಡ್ಡದಾದ ಮನೆಯೊಂದಕ್ಕೆ ಕುದುರೆಗಳನ್ನು ಕೂಡಿಸಿದರೆ, ಆ ಮನೆಯು ಸದಾ ಮುಂದುವರೆಯುತ್ತದೆ ಎಂಬ ನಂಬಿಕೆಯಿದೆ. ಇಂತಹ ಕುದರೆ ಶಿಲ್ಪಗಳನ್ನು ಬನ್ನಪ್ಪ ಬಡಿಗೇರರ ಕೈಯಲ್ಲಿ ಅರಳುವ ಕಾರ್ಯ ಗಮನಾರ್ಹವಾಗಿವೆ. ಸೆಟೆದು ನಿಂತಿರುವ ಕಿವಿಗಳು, ಕುದುರೆಯ ಕಣ್ಣು, ಮೂಗು ನಾಲಗೆ, ಹಣೆಪಟ್ಟಿ, ಕೊರಳ ಪಟ್ಟಿಗಳು, ಹಗ್ಗಗಳು, ಸರಪಳಿ, ಹಣೆ, ಎದೆ, ಕೊರಳಪಟ್ಟಿಯ ನಕ್ಷಾ ವಿನ್ಯಾಸಗಳು ಸೌಂದರ್ಯದಿಂದ ಕೂಡಿರುತ್ತವೆ, ನೈಜ ಕುದುರೆಯ ವಾಸ್ತವತೆಯನ್ನು ಹಾಗೆ ಮರಗೆತ್ತನೆಯ ಕುದುರೆಗೆ ಜೀವ ತುಂಬುವ ರೀತಿ ಕೆತ್ತನೆ ಮಾಡುತ್ತಾರೆ. ಮರಗೆತ್ತನೆಯ ಕುದುರೆ ಶಿಲ್ಪಗಳು ಬನ್ನಪ್ಪ ಬಡಿಗೇರರ ವಿಶೇಷ ಕಲಾಭಿವ್ಯಕ್ತಿಯೆಂದೆ ಕಂಡುಬರುತ್ತವೆ. ಈ ಶಿಲ್ಪಿಗಳನ್ನು

ಗಮನಿಸುವುದಾದರೆ– ಶಹಾಪುರ ತಾಲೂಕಿನ ಕೊಂಕಲ್ ಗ್ರಾಮದಲ್ಲಿ ತೆಲಗರ ಬಸಲಿಂಗಪ್ಪ, ಗಣಪತಿ ಡೊಣ್ಣೆಗೌಡರು ಹಳಿಮನಿ ಚಂದಪ್ಪ, ಕುರುಬರ ನರಸಿಂಗಪ್ಪನವರ ಮನೆಯ ತಲಬಾಗಿಲು ಕುದುರೆಗಳನ್ನು ಕಾಣಬೇಕಾಗುತ್ತದೆ.

ಸಂಕೀರ್ಣತೆಯ ಶಿಲ್ಪಗಳು

ಬನ್ನಪ್ಪ ಬಡಿಗೇರ ಅವರು ಕುದುರೆ ಮತ್ತು ತಲಬಾಗಿಲು ಶಿಲ್ಪಗಳನ್ನು ಅಲ್ಲದೆ ಅನೇಕ ಪಡಸಾಲಿ ಜೋಡಣೆ ಕೆಲಸದಲ್ಲಿಯೂ ಹೆಸರುವಾಸಿಯಾಗಿದ್ದಾರೆ. ಮೂರು, ಐದು, ಆರು, ಅಂಕಣದ ಪಡಸಾಲೆಗೆ ಆಕರ್ಷಕ ಕಂಬಗಳು, ದಿಂಬು, ದಿಂಡು, ಸೇರಿದಂತೆ ಹಲವು ಬಗೆಯ ಕುಸುರಿ ಕೆತ್ತನೆಯಿಂದ ಪಡಸಾಲೆ ಆಕರ್ಷಕವಾಗಿ ಕಂಡುಬರುತ್ತದೆ. ಎಲೆ ಹೂ ಬಳ್ಳಿ, ಪ್ರಾಣಿ ಪಕ್ಷಿಗಳ ಸಮೂಹ ಚಿತ್ರಣದಿಂದ ರೂಪಗೊಂಡಿರುತ್ತದೆ. ಹಾಗೆಯೇ ಪಡಸಾಲೆಯ ಮಧ್ಯಗೋಡೆಗೆ ಚಿಕ್ಕದಾದ ಗೌರಿಮಾಡದ ಕಲಾ ಕುಸುರಿ ಕೆತ್ತನೆಯು ಅಂದವಾಗಿ ಗೌರಮ್ಮನ ದೇವರಗುಡಿ ಎಂಬಂತೆ ಮಾಡಿರುತ್ತಾರೆ. ಇಂತಹ ಗೌರಿಮಾಡಕ್ಕೆ ಎರಡು ಕುದುರೆ, ನವಿಲು, ಗಿಳಿಗಳು ಶಿಲ್ಪಗಳನ್ನು ಕೂಡಿಸುವ ಪದ್ಧತಿಯಿದೆ. ಎಲ್ಲ ಬಗೆಯ ಶಿಲ್ಪಗಳನ್ನು ರಚಿಸುವ ಬನ್ನಪ್ಪ ಬಡಿಗೇರರು ರೈತರ ವ್ಯವಸಾಯ ಸಲಕರಣೆಗಳನ್ನು ಮಾಡಿ ಕೊಡುವ ಮೂಲಕ ತಮ್ಮ ಕಲಾಬದುಕನ್ನು ಸಾರ್ಥಕವಾಗಿಸಿಕೊಂಡಿದ್ದಾರೆ.

ದೇವಣ್ಣ ತಂದೆ ದೇವಿಂದ್ರಪ್ಪ ಬಡಿಗೇರ

ಬನ್ನಪ್ಪ ಬಡಿಗೇರ ಅವರ ತಮ್ಮನಾದ ದೇವಣ್ಣನು ತಂದೆ ದೇವಿಂದ್ರಪ್ಪ, ತಾಯಿ ನಾರಾಯಣಮ್ಮನ ವರ 2ನೇ ಮಗನಾಗಿ ಜನಿಸಿದರು. ಅಣ್ಣನ ಕಾಯಕದಂತೆ ಇವರು ಸಹ ಕುದುರೆ, ಪಡಸಾಲೆ, ಜೋಡಣೆ ಕೆಲಸ, ಗೌರಿ ಮಾಡದ ಕಲಾಕುಸುರಿ ಕೆತ್ತನೆ, ಸೇರಿದಂತೆ ಅನೇಕ ಬಗೆಯ ಶಿಲ್ಪಗಳನ್ನು ರಚಿಸಿದ್ದಾರೆ. ಸ್ವಗ್ರಾಮ ಚೆನ್ನೂರು, ಕೊಂಕಲ್, ಗೊಂದೆನೂರು, ತೇಕರಾಳ, ವಡಗೇರ, ಹೀಗೆ ಹಲವಾರು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ತಲಬಾಗಿಲು, ಕುದುರೆ ಶಿಲ್ಪಗಳನ್ನು ಕೆತ್ತನೆ ಮಾಡುವುದರೊಂದಿಗೆ ಜೀವನ ಸಾಗಿಸಿದ್ದಾರೆ. ಆರ್ಥಿಕ ಸಮಸ್ಯೆಯ ದೃಷ್ಟಿಯಿಂದ ಚೆನ್ನೂರು (ಜೆ) ಗ್ರಾಮವನ್ನು ತೊರೆದು ಪ್ರಸ್ತುತ ವಡಗೇರ ಗ್ರಾಮದಲ್ಲಿ ನೆಲೆಸಿದ್ದಾರೆ. ನಿರಂತರ

ಕಲಾ ಕಾರ್ಯದ ಜೊತೆಯಲ್ಲಿ ನಗರ ಕೇಂದ್ರಿತ ಮನೆಗಳಿಗೆ ಬೇಕಾಗುವ ಬಾಗಿಲು, ಕಿಟಕಿಗಳ ವಿನ್ಯಾಸ ಕೆತ್ತನೆ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಜನಪದ ಕಲಾ ಪ್ರಕಾರದ ಶಿಲ್ಪಗಳನ್ನು ಸೃಷ್ಟಿಸುತ್ತಾ ಬದುಕಿದ ಈ ಶಿಲ್ಪಿಗೆ ಯಾವುದೇ ಸರಕಾರದಿಂದ ಪ್ರಶಸ್ತಿ, ಪುರಸ್ಕಾರ, ಸಹಾಯಧನ, ಮಾಶಾಸನ ಲಭಿಸಿರುವುದಿಲ್ಲ.

ವಿಶೇಷ ಕೆತ್ತನೆ:

ದೇವಣ್ಣ ಬಡಿಗೇರ ಅವರು ಅಣ್ಣನ ಕೆಲಸದಂತೆ ಕುದುರೆ ಶಿಲ್ಪ ಮತ್ತು ತಲಬಾಗಿಲು ಕೆಲಸ ಮಾಡುವುದರಲ್ಲಿ ಪ್ರಶಂಸನೀಯವಾಗಿದ್ದಾರೆ. ಕುದುರೆಯ ನೈಜರೂಪ ಅವುಗಳಿಗೆ ಜೀವ ತುಂಬುವ ವಿಶೇಷ ಕಲೆಗಾರಿಕೆ ಈ ಶಿಲ್ಪಿಯಲ್ಲಿರುವುದು ಕಂಡು ಬರುತ್ತದೆ. ಅಂಕಿ ಸಂಖ್ಯೆಗಳ ಪ್ರಕಾರ ಇವರು ಮಾಡಿದ ಶಿಲ್ಪಿಗಳ ವಿವರ ಈ ಕೆಳಗಿನಂತೆ ಗಮನಿಸಬಹುದಾಗಿದೆ.

1) ಪಡಸಾಲಿ ಜೋಡಣೆ ಕಾರ್ಯ – 150

2) ಗೌರಿಮಾಡ – 100

3) ಕುದುರೆ ಶಿಲ್ಪಗಳು – 50

4) ತಲಬಾಗಿಲು – 25

5) ಪಲ್ಲಕ್ಕಿ – 05

6) ವ್ಯವಸಾಯ ಕೇಂದ್ರಿತ ಶಿಲ್ಪಗಳು – 500

ಹೀಗೆ ಹಲವು ಪ್ರಕಾರಗಳಲ್ಲಿ ಕಂಡು ಬರುವ ಇವರ ಕಲಾ ಕೆತ್ತನೆಯ ಕೆಲಸ ಆಕರ್ಷಕ ನೆಲೆಯಲ್ಲಿ ಕಂಡುಬರುತ್ತದೆ. ಸಗರನಾಡಿನ ಪರಿಸರದಲ್ಲಿ ದೇವಣ್ಣನವರ ಕಲಾಕೆತ್ತನೆ ಕೆಲಸವು ಅಭಿನಂದನಾರ್ಹವಾಗಿರುವುದು ಕುತೂಹಲದ ಸಂಗತಿ.

ಕಾಶಿಪತಿ ತಂದೆ ಮೋನಪ್ಪ ಬಡಿಗೇರ:

ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಅನವಾರ ಗ್ರಾಮದ ಶಿಲ್ಪಿ ಕಾಶಿಪತಿಯವರು ಅತ್ಯುತ್ತಮ ಜನಪದ ಶಿಲ್ಪಗಳು, ಜನರ ಆರಾಧನೆ ಮತ್ತು ನಂಬಿಕೆಯ ಆಚರಣೆ ವಿಧಾನದ ಕುರಿತಂತೆ ಅನೇಕ ಗ್ರಾಮಗಳಲ್ಲಿ ದೇವತಾ ಶಿಲ್ಪಗಳನ್ನು ಮಾಡಿದ್ದಾರೆ. ಅಲ್ಲದೆ ಕುದುರೆ, ತಲಬಾಗಿಲುಗಳ

ಕೆತ್ತನೆಯನ್ನು ಮಾಡಿದ್ದಾರೆ. ವಿವಿಧ ಹಂತಗಳ ಪ್ರಕ್ರಿಯೆಯಲ್ಲಿ ಕಲಾ ಬದುಕಿನ ಬವಣೆಯನ್ನು ಗಮನಿಸಿದಾಗ ಬದುಕಿನೂದ್ದಕ್ಕೂ ಆರ್ಥಿಕ ಸಮಸ್ಯೆಗಳಿಂದಲೇ ಇವರ ಜೀವನ ನಡೆದಿರುವುದು ಕಂಡು ಬರುತ್ತದೆ. ಹೆಂಡತಿ ಭಗವಂತಮ್ಮನವರ ಆಸರೆ, ಪ್ರೋತ್ಸಾಹದ ಮೂಲಕ ಬದುಕಿನ ದುಃಖ ದುಮ್ಮಾನಗಳನ್ನು ನಿವಾರಿಸಿಕೊಳ್ಳವುದರೊಂದಿಗೆ ಕಲಾ ಪಯಣ ಮುಂದುವರೆಸುತ್ತಾರೆ. ಕಾಶಿಪತಿ ಮತ್ತು ಭಗವಂತಮ್ಮ ಈ ಇಬ್ಬರಿಗೆ ಎಂಟು ಜನ ಮಕ್ಕಳಿದ್ದಾರೆ. ಸಂಗಮ್ಮ, ಮೋನಮ್ಮ, ನಾಗೇಂದ್ರಪ್ಪ, ಮಲ್ಲಮ್ಮ, ಮನೋಹರ, ದೇವಪ್ಪ, ದೇವಮ್ಮ, ಶಾರದಾ, ಹೀಗೆ ಎಂಟು ಮಕ್ಕಳನ್ನು ಸಲುಹಿ ದೊಡ್ಡವರನ್ನಾಗಿಸುವುದರಲ್ಲೇ ನಮ್ಮ ಜೀವನ ಕಳೆದು ಹೋಯಿತು ಎಂದು ಕಾಶಿಪತಿಯವರು ತಿಳಿಸುತ್ತಾರೆ. ಆದರೆ ಮರಗೆತ್ತನೆಯ, ಕಂಬಾರಿಕೆಯ, ಕೆಲಸ ಮಾಡುವುದರೊಂದಿಗೆ ಅನೇಕ ಶಿಲ್ಪಕಲಾಕೃತಿಗಳನ್ನು ರಚಿಸುತ್ತಾ ಜನ ಸಾಮಾನ್ಯರ ಮನಗೆದ್ದಿರುವುದು ಈ ಶಿಲ್ಪಿಯ ವಿಶೇಷ ಕಾರ್ಯವಾಗಿದೆ.

ಜನಜೀವನದ ಮಧ್ಯೆ ಬದುಕಿ, ಜನರ ಸಾಂಸ್ಕೃತಿಕ ಹಿರಿಮೆಗಳಿಂದ ರೂಪ ಪಡೆಯುವ ಸಂಸ್ಕಾರಗೊಳ್ಳುವ, ಸತ್ಕರಿಸಿಕೊಳ್ಳುವ ಕ್ಷೇತ್ರವೆಂದರೆ ಅದು ಜನಪದ, ಕಲಾವಲಯ, ಹೀಗಾಗಿ ಜನಪದ ಶಿಲ್ಪಿಯಾದ ಕಾಶಿಪತಿಯವರು ಜನರ ಅಚ್ಚುಮೆಚ್ಚಿನ ಶಿಲ್ಪಕಲಾಕೃತಿಗಳನ್ನು ಮಾಡಿಕೊಡುವುದರೊಂದಿಗೆ ಹಲವಾರು ಸತ್ಕಾರಕ್ಕೆ ಒಳಪಡುತ್ತಾರೆ. ಇವರ ಶಿಲ್ಪ ಕಲಾಕೃತಿಗಳ ವಿವಿಧತೆಯನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

1) ಕುದುರೆ ಶಿಲ್ಪ ಕೆತ್ತನೆ

2) ತಲಬಾಗಿಲುಗಳ ಕೆತ್ತನೆ

3) ಪಲ್ಲಕ್ಕಿ ಶಿಲ್ಪಗಳ ಕೆತ್ತನೆ

4) ಗೌರಿ ಮಾಡಗಳ ಕಲಾ ಕುಸುರಿ

5) ಕೋಲು,

6) ಗಿಳಿ, ನವಿಲು

7) ರೈತರ ವ್ಯವಸಾಯ ಕೇಂದ್ರಿತ ಉಪಕರಣ ಶಿಲ್ಪಗಳಾದ ಕೂರಿಗೆ ಮಂಡಿ, ರಾವುಗಲ್, ಚಕ್ಕಡಿ

ಬಂಡಿ, ಕೊಡಲಿ, ಕಾವು, ಕೊರಪು, ಚಪ್ಪಗೊಡಲಿ, ಮುಂತಾದ ಶಿಲ್ಪಗಳನ್ನು ಮಾಡಿದ್ದಾರೆ. ಹಾಗೆಯೇ 1) ಶಿಗಮ್ಮನ ಶಿಲ್ಪಗಳು 2) ಗೌರಮ್ಮ, ಗಂಗೆ, ಶಿಲ್ಪಗಳ ಕೆತ್ತನೆ ಸೇರಿದಂತೆ ಹಲವು ಬಗೆಯಲ್ಲಿ ಇವರ ಶಿಲ್ಪಗಳು ರೂಪಗೊಂಡು ಜನ ಸಾಮಾನ್ಯರ ಮನದಲ್ಲಿ ಅಚ್ಚಳಿಯದಂತೆ ಮೂಡಿ ಕಾಶಿಪತಿಯವರ ಹೆಸರು ಸಗರನಾಡಿನೆಲ್ಲೆಡೆ ಪಸರಿಸಿಕೊಂಡಿದೆ.

ಪಲ್ಲಕ್ಕಿ ಶಿಲ್ಪಗಳು:

ಯಾದಗಿರಿ ಜಿಲ್ಲೆಯ ಬಾಡಿಯಾಳ ಗ್ರಾಮಕ್ಕೆ ಮತ್ತು ಯಾದಗಿರಿ, ಚಾಮನಾಳ, ರಾಯಚೂರು, ತೆಲಂಗಾಣದ ವಡವಟ್ಟಿ, ಚಿತ್ತಾಪುರ ತಾಲೂಕಿನ ಕುಣ್ಣೂರು ಹೀಗೆ ಹಲವಾರು ರಾಜ್ಯ ಮತ್ತು ಹೊರ ರಾಜ್ಯಗಳಿಗೆ ಪಲ್ಲಕ್ಕಿ ಶಿಲ್ಪಗಳನ್ನು ಮಾಡಿ ಕೊಟ್ಟಿರುತ್ತಾರೆ.

ಕುದುರೆ ಶಿಲ್ಪಗಳು:

ಕಾಶಿಪತಿಯವರು ಕುದುರೆ ಶಿಲ್ಪಗಳನ್ನು ಮಾಡಿ ಕೊಡುವುದರಲ್ಲಿಯೂ ಹೆಸರುವಾಸಿಯಾಗಿದ್ದಾರೆ. ಕುದುರೆಗಳ ನೈಜತೆ ಆಕರ್ಷಕವಾಗಿವೆ. ಸುಮಾರು 300 ಕುದುರೆ ಶಿಲ್ಪಗಳನ್ನು ಮಾಡಿದ್ದಾರೆ. ಉದಾಃ ಶಹಾಪುರ ತಾಲೂಕಿನ ಮುನಮುಟಗಿ ಗ್ರಾಮ, ಹಯ್ಯಾಳ(ಕೆ), ಹಯ್ಯಾಳ (ಬಿ), ಚನ್ನೂರು(ಜೆ), ಹತ್ತಿಕುಣಿ, ಅನವಾರ, ಗುಂಡಗುರ್ತಿ, ಹತ್ತಿಗೂಡುರು, ಸೇರಿದಂತೆ ಸಗರನಾಡಿನ ಭಾಗದ ಅನೇಕ ಗ್ರಾಮಗಳಿಗೆ ಕುದುರೆ ಶಿಲ್ಪಗಳನ್ನು ಮಾಡಿದ್ದಾರೆ. ಅಲ್ಲದೆ ದೆಹಲಿಗೆ ಕೂಡ ಕುದುರೆ ಶಿಲ್ಪಗಳನ್ನು ಮಾಡಿ ಕಳಿಸಿದ್ದಾರೆ. ಕುದರೆಯ ಮುಖ, ಭಂಗಿ, ಕಣ್ಣೋಟ, ಕಿವಿ, ಕೊರಳ ಪಟ್ಟಿಕೆಗಳು, ಸರಪಳಿ ಎಲ್ಲವೂ ನೈಜ ಕುದುರೆಯ ಹಾಗೆ ಕೆತ್ತನೆ ಮಾಡುವುದರಲ್ಲಿ ತುಂಬಿದ ಕ್ರಿಯಾಶೀಲರು.

ತಲಬಾಗಿಲು ಮತ್ತು ಗೌರಿಮಾಡ, ಪಡಸಾಲಿ ಜೋಡಣೆ:

ಸುಮಾರು ಐದು ದಶಕಗಳಿಂದ ಕಂಬಾರಿಕೆ, ಬಡಿಗೇತನ ಕಾಯಕ ಮಾಡುವುದರೊಂದಿಗೆ ತಮ್ಮ ಜೀವನವನ್ನು ಸಾಗಿಸಿದ ಕಾಶಿಪತಿ ಶಿಲ್ಪಿಗಳು ಸಗರನಾಡಿನ ವಿವಿಧತೆ ಮನೆಯ ತಲಬಾಗಿಲ ವಿನ್ಯಾಸ ಕೆತ್ತನೆ ಗೌರಿಮಾಡ, ಮತ್ತು ಪಡಸಾಲಿ, ಜೋಡಣೆ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕಾರ್ಯ ನಿರ್ವಹಿಸಿದ್ದಾರೆ. ಹತ್ತಿಕುಣಿ (ಯಾದಗಿರಿ ತಾ॥) ಬೊಮ್ಮನಳ್ಳಿ

(ಶಹಾಪುರ ತಾಲೂಕು) ಗುಂಡಗುರ್ತಿ, ಅನವಾರ,(ಚಾಮನಾಳ, ಯಾದಗಿರಿ ತಾ॥) ಹತ್ತಿಗೂಡುರು, ಹಯ್ಯಾಳ(ಕೆ), ಹಯ್ಯಾಳ (ಬಿ), ಸೇರಿದಂತೆ ಹಲವಾರು ಗ್ರಾಮಗಳಲ್ಲಿ ತಲಬಾಗಿಲು, ಗೌರಿಮಾಡ, ಪಡಸಾಲಿ ಜೋಡಣೆ ಕೆಲಸ ಮಾಡಿದ್ದಾರೆ. ಎಲೆ, ಹೂ ಬಳ್ಳಿಗಳು, ಗಿಳಿ, ಗುಬ್ಬಿ, ನವಿಲು ಪ್ರಾಣಿ, ಪಕ್ಷಿಗಳ ಸಮೂಹದೊಂದಿಗೆ ಅಲಂಕಾರಿಕ ವಿನ್ಯಾಸದೊಂದಿಗೆ ಸುಂದರವಾಗಿ ಕೆತ್ತನೆ ಮಾಡಿದ್ದಾರೆ.

ಗ್ರಾಮದೇವತೆ ಶಿಲ್ಪಗಳು:

ಕಾಶಿಪತಿ ಶಿಲ್ಪಿಗಳು ಗ್ರಾಮದೇವತೆಯ ಶಿಲ್ಪಗಳನ್ನು ಕೇವಲ ಎರಡು ಮಾತ್ರ ಮಾಡಿದ್ದಾರೆ. 1) ದ್ಯಾವಮ್ಮ ದೇವಿಯ ಶಿಲ್ಪ, ಹತ್ತಿಕುಣಿ ತಾ.ಜಿ.ಯಾದಗಿರಿ, 2) ಮರಗಮ್ಮ ದೇವಿಯ ಶಿಲ್ಪ ಹತ್ತಿಕುಣಿ, ತಾ.ಜಿ. ಯಾದಗಿರಿ, ದೇವಿಯು ಹತ್ತು, ಎಂಟು ಕೈಗಳನ್ನು ಹೊಂದಿದ್ದಾಳೆ. ದೇವಿಯ ಪ್ರತಿಯೊಂದು ಕೈಗಳಲ್ಲಿ ಆದಿಶೇಷ, ಚಕ್ರ, ಶಂಖ, ಡಮರು, ಖಡ್ಗ, ಗಧೆ, ಶ್ರೀ ಚಕ್ರ ಹೀಗೆ ಆಯಾ ಅವತಾರದ ಹಿನ್ನಲೆಯಲ್ಲಿ ಆಕರ್ಷಕವಾಗಿ ದೇವಿಯು ರೂಪಪಡೆದಿದ್ದಾಳೆ.

ಸಿಂಹದ ಮೇಲೆ ಪವಡಿಸಿದ ಗ್ರಾಮದೇವತೆಯ ಹಸಿರು ಸೀರೆಯನ್ನುಟ್ಟು ಹಸಿರು ಬಳೆಗಳನ್ನು ಹಾಕಿಕೊಂಡು, ಕೆಂಬಣ್ಣದ ಮುಖದಿಂದ ರಾರಾಜಿಸುವಂತೆ ವರ್ಣಲೇಪನ ಮಾಡಿದ್ದಾರೆ. ಹಾಗೆಯೇ ಗ್ರಾಮದೇವತೆಗಳ ರೂಪಿಸಿರುವಂತೆ ಪಲ್ಲಕ್ಕಿಗಳ ವರ್ಣ ಸಂಯೋಜನೆಯೂ ಸಹ ಆಕರ್ಷಕವಾಗಿ ವರ್ಣ ಲೇಪನ ಮಾಡಿದ್ದಾರೆ. ಕೆಂಪು, ಹಳದಿ, ಹಸಿರು, ಕಪ್ಪು, ಬಿಳಿ, ವರ್ಣಗಳ ದಟ್ಟವಾದ ಲೇಪನಾ ಕಾರ್ಯ ಗಮನಾರ್ಹವಾಗಿವೆ.

ಶ್ರೀ ಕಾಶಿಪತಿ ಶಿಲ್ಪಿಗಳು ಈ ದೇವತೆ ಶಿಲ್ಪಗಳಲ್ಲದೇ ವಿಶೇಷವಾಗಿ ವಯಸ್ಸಾದವರಿಗೆ ಆಸರೆಯ ಕೋಲುಗಳಿಗೆ ಗಿಳಿ, ನವಿಲು ಕೆತ್ತನೆಯು ಕೋಲು ಗಮನಾರ್ಹವಾಗಿ ಮಾಡಿಕೊಟ್ಟಿದ್ದಾರೆ. ಅಲ್ಲದೇ ರೈತರ ವ್ಯವಸಾಯ ಕೇಂದ್ರಿತ ಶಿಲ್ಪಗಳು, ಮಣ್ಣಿನ ಗಣಪತಿ ಶಿಲ್ಪ, ಗಂಗೆ, ಗೌರಿ, ಶೀಗಮ್ಮನ ಶಿಲ್ಪಗಳನ್ನು ಸಹ ಮಾಡಿಕೊಟ್ಟಿದ್ದಾರೆ. ಬದುಕಿನ ವಿವಿಧ ಸಂದರ್ಭಗಳು ಆರ್ಥಿಕತೆಯಿಮದ ತೊಂದರೆಯಾದರೂ ಸಹ ಮರಗೆತ್ತನೆಯ ಕೆಲಸ ಮಾತ್ರ ಬಿಟ್ಟಿಲ್ಲ. ಸದಾ ಕಲೆಯ ಲೋಕದಲ್ಲಿ ತಮ್ಮ ಬದುಕನ್ನು ಸವೆಸಿದ ಕಾಶಿಪತಿ ಶಿಲ್ಪಗಳಿಗೆ ಅತ್ಯುತ್ತಮ ಸಹಕಾರ, ಪ್ರೋತ್ಸಾಹ, ಮಾಶಾಸನ ಲಭಿಸಬೇಕಾಗಿದೆ.

ಮಲ್ಲಯ್ಯ ತಂದೆ ಕಾಳಪ್ಪ ಬಡಿಗೇರ

ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ದೊಡ್ಡ ಸಗರ ಗ್ರಾಮದ ಶಿಲ್ಪಿ ಮಲ್ಲಯ್ಯನವರು ತಂದೆ ಕಾಳಪ್ಪ ತಾಯಿ ಸಾವಿತ್ರಮ್ಮನವರ ಮಗನಾಗಿ ಜನಿಸಿದರು. ಇವರ ತಂದೆಯಾದ ಕಾಳಪ್ಪನವರ ಕಬ್ಬಿಣದ ಕೆಲಸ (ಕಂಬಾರಿಕೆ)ವನ್ನು ಮಾಡುವುದರೊಂದಿಗೆ ರೈತರ ಬದುಕಿಗೆ ಆಸರೆಯಾಗಿದ್ದರು ತಂದೆಯವರ ಕಲಾ ಕಾಯಕದ ಚಿಗುರು ಮಲ್ಲಯ್ಯನವರ ಬದುಕಲ್ಲಿ ಸಹಜವಾಗಿ ಬಂದಿರುವುದನ್ನು ಕಾಣುತ್ತೇವೆ.

ವಂಶ ಪರಂಪರೆಯ ವೃತ್ತಿ ಬದುಕಿನ ರೀತಿಯಂತೆ ಬದುಕಿದ ಮಲ್ಲಯ್ಯನಿಗೆ ಬಡತನವು ಬೆನ್ನಟ್ಟಿದರೂ ಸಹ ತಮ್ಮ ವೃತ್ತಿಯಾದ ಮರಗೆತ್ತನೆಯ ಕಾಯಕದಲ್ಲಿ ಜೀವನವನ್ನು ನಡೆಸಿದ್ದಾರೆ. ಪ್ರಸ್ತುತ ಈ ಶಿಲ್ಪಿಗೆ ಅರವತ್ತರ ವಯಸ್ಸಿನಲ್ಲಿಯೂ ಸಹ ವೃತ್ತಿಕಾಯಕದಲ್ಲಿ ಬದುಕುತ್ತಿದ್ದಾರೆ. ತುಂಬು ಕುಟುಂಬ ಹೊಂದಿದ ಇವರಿಗೆ ಮೋನಪ್ಪ, ಶ್ರೀಶೈಲ, ಲಕ್ಷ್ಮೀ, ದೇವಮ್ಮ ಶೈಲಾ, ರತ್ನಮ್ಮ ಎಂಬ ಆರು ಜನ ಮಕ್ಕಳಿದ್ದಾರೆ. ಗ್ರಾಮೀಣ ಪರಿಸರದಲ್ಲಿ ರೈತರ ವ್ಯವಸಾಯಕ್ಕೆ ಬೇಕಾಗಿರುವ ಸಾಮಗ್ರಿಗಳನ್ನು ತಯಾರಿಸಿಕೊಡುವುದರೊಂದಿಗೆ ಹಲವಾರು ಶಿಲ್ಪಗಳನ್ನು ಕೂಡ ಮಾಡಿದ್ದಾರೆ. ಅವುಗಳ ವಿವಿಧತೆಯನ್ನು ಈ ಕೆಳಗಿನಂತೆ ನೋಡಬೇಕಾಗುತ್ತದೆ.

1) ಕುದುರೆ ಶಿಲ್ಪಗಳು – 700

2) ತಲಬಾಗಿಲು – 50

3) ಚಕ್ಕಡಿ ಬಂಡಿಗಳು – 60

4) ಗೌರಿಮಾಡ – 20

5) ಪಡಸಾಲಿ ಜೋಡಣೆ– 20

6) ಗ್ರಾಮ ದೇವತೆ – 01 (ದ್ಯಾವಮ್ಮ ದೇವಿ, ಶಹಾಪುರ ತಾ॥ ವಸಕೇರಾ)

7) ರಥಶಿಲ್ಪ – 01 (ತಿಮ್ಮಾಪುರ ದ್ಯಾವಮ್ಮ ದೇವಿಯ ರಥ)

ವ್ಯವಸಾಯ ಕೇಂದ್ರೀತ ಶಿಲ್ಪಗಳು ಸೇರಿದಂತೆ ನಾನಾ ಬಗೆಯ ಶಿಲ್ಪಗಳನ್ನು ಮರದ ಮಾಧ್ಯಮದಿಂದ ಕೆತ್ತನೆ ಮಾಡಿದ್ದಾರೆ. ಕುದುರೆ ಶಿಲ್ಪಗಳು, ತಲಬಾಗಿಲು, ಪಡಸಾಲಿ ಜೋಡಣೆ,

ಚಕ್ಕಡಿ ಬಂಡಿಗಳು, ಗೌರಿಮಾಡ, ಈ ತರಹದ ಶಿಲ್ಪಕಲಾಕೃತಿಗಳನ್ನು ಸಗರನಾಡಿನ ವ್ಯಾಪ್ತಿಯಲ್ಲಿ, ಹಲವಡೆ ಮಾಡಿದ್ದಾರೆ. ಉದಾಃ ಸಗರ, ಕನ್ಯಾಕೋಳೂರು, ವನದುರ್ಗ, ತಾಲೂಕು ಕೇಂದ್ರಗಳಾದ ಸುರಪುರ, ಯಾದಗಿರಿ, ತಾಲೂಕ ವ್ಯಾಪ್ತಿಯಲ್ಲಿ ಇವರ ಕಲಾ ಕೆಲಸವನ್ನು ಗಮನಿಸಬಹುದು. ನಿರಂತರ ಮರಗೆತ್ತನೆಯ ಕಲೆಯಲ್ಲಿ ಶ್ರಮಿಸುತ್ತಿರುವ ಮಲ್ಲಯ್ಯನವರಿಗೆ ಸರಕಾರದಿಂದ ಯಾವುದೇ ಮಾಶಾಸನವಾಗಲಿ, ಗೌರವ ಪ್ರಶಸ್ತಿ ಪುರಸ್ಕಾರಗಳಾಗಲಿ ದೊರೆತಿಲ್ಲ, ಪ್ರಾಮಾಣಿಕ ಕರ್ತವ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಗ್ರಾಮೀಣ ಜನ ಜೀವನದ ಆರಾಧನಾ ರೀತಿಯ ಶಿಲ್ಪಕಲಾಕೃತಿಗಳನ್ನು ರಚಿಸಿದ ಮಲ್ಲಯ್ಯ ಬಡಿಗೇರರು ಸಗರನಾಡಿನ ಹೆಮ್ಮೆ ಜನಪದ ಶಿಲ್ಪಿ ಎಂಬುದು ಗಮನಾರ್ಹ ಸಂಗತಿಯಾಗಿದೆ. ಇವರ ಬಡಿಗೇತನದ ಕಾಯಕವನ್ನು ಮಗನಾದ ಮೋನಪ್ಪನವರು ಮುಂದುವರೆಸಿದ್ದಾರೆ. ಕುದುರೆ, ತಲಬಾಗಿಲ, ಪಡಸಾಲಿ ಜೋಡಣೆ, ಕೆಲಸದಲ್ಲಿ ತುಂಬಾ ಕ್ರಿಯಾಶೀಲರಾಗಿದ್ದಾರೆ.

ಕಾಳಪ್ಪ ತಂದೆ ತಿಪ್ಪಣ್ಣ ಬಡಿಗೇರ

ಮೂಲತಃ ದೊಡ್ಡ ಸಗರ ಗ್ರಾಮದವರಾದ ಕಾಳಪ್ಪ ಬಡಿಗೇರವರು ಸಗರನಾಡಿನ ಅತ್ಯುತ್ತಮ ಜನಪದ ಶಿಲ್ಪಿಯೆಂದೆ ಪ್ರಸಿದ್ಧಿ ಪಡೆದವರು. ಮರ ಮಾಧ್ಯಮದ ನೆಲೆಯಲ್ಲಿ ಹಲವಾರು ಶಿಲ್ಪಕಲಾಕೃತಿಗಳನ್ನು ನಿರ್ಮಿಸುವುದರೊಂದಿಗೆ, ಜನ ಸಾಮಾನ್ಯರದ ಮನದಲ್ಲಿ ಅಚ್ಚಳಿಯದ ಹಾಗೆ ಮೂಡಿದ್ದಾರೆ. ಕಾಳಪ್ಪನವರಿಗೆ ತಂದೆಯವರ ಕಲಾಕಾಯಕ ಅಷ್ಟೇನೂ ಪರಿಣಾಮಕಾರಿಯಾಗಿ ಬರದಿದ್ದರೂ ಸಹ ವಂಶಪರಂಪರೆಯ ಕಲೆಯ ಹೊಳಹುಗಳು ತಾನಾಗಿಯೇ ಸಹಜ ಕ್ರಿಯೆಯಲ್ಲಿ ಬರುವುದೆಂಬ ನೀರಿಕ್ಷೆಯಂತೆ ತಂದೆಯ ಬಡಿಗೇತನ ಕೆಲಸವು ಅಲ್ಪ ಪ್ರಮಾಣದಲ್ಲಿ ಪ್ರಭಾವ ಬೀರುವುದರೊಂದಿಗೆ ಇವರ ಕಲಾ ಬದುಕು ಸಾಗಿರುವುದು ಕಂಡು ಬರುತ್ತದೆ.

ತಂದೆಯ ಕಲಾಪ್ರೀತಿಯ ಹಾರೈಕೆಯನ್ನು ಪ್ರೀತಿಯಿಂದ ಸ್ಮರಿಸುತ್ತ ಅವರ ಕಲಾಬದುಕಿನ ಹಲವು ಪ್ರಸಂಗಗಳನ್ನು ತನ್ನ ಕಲಾ ಸಂವಹನ ಕ್ರಿಯೆಯಲ್ಲಿ ಹೇಗೆ ಅಡಕವಾಗಿಸಿಕೊಂಡಿರುವೆ ಎಂಬುದನ್ನು ತಿಳಿಸುತ್ತಾರೆ. ಶಿಲ್ಪಿ ಕಾಳಪ್ಪ ಬಡಿಗೇರ ಅವರಿಗೆ ಮಹೇಶ, ವಿಶ್ವನಾಥ, ಗೌರಮ್ಮ ಎಂಬ ಮೂರು ಜನ ಮಕ್ಕಳಿದ್ದಾರೆ. ಮಕ್ಕಳಾದ ವಿಶ್ವನಾಥ, ಮಹೇಶ ಎಂಬುವರು ಕಾಳಪ್ಪನವರ

ಬಡಿಗೇತನ ಕೆಲಸವನ್ನು ಮುಂದುವರೆಸಿದ್ದಾರೆ. ಶಹಾಪುರ ತಾಲೂಕ ಕೇಂದ್ರದಲ್ಲಿ ಮನೆಯ ಬಾಗಿಲು, ಕಿಟಕಿ, ಮಂಚ, ಕುರ್ಚಿ ಸೇರಿದಂತೆ ಹಲವಾರು ಗೃಹ ಮತ್ತು ದೇವಸ್ಥಾನ ಸಲಕರಣೆ ಶಿಲ್ಪಗಳನ್ನು ಮಾಡುವುದರೊಂದಿಗೆ ಕಲಾ ಬದುಕು ಪ್ರಾರಂಭಿಸಿದ್ದಾರೆ.

ಸಗರನಾಡಿನ ಜನಪದ ಪ್ರಕಾರದ ಶಿಲ್ಪಿಯೆಂದೆ ಕಾಣಿಸಿಕೊಂಡಿರುವ ಕಾಳಪ್ಪನವರನ್ನು ಗಮನಿಸಿದಾಗ ಅವರ ಕಲಾಕೃತಿಗಳ ವಿವಿಧತೆ ಈ ಕೆಳಗಿನಂತೆ ಅಭಿವ್ಯಕ್ತಿಯಾಗಿರುವುದನ್ನು ಕಾಣುತ್ತೇವೆ.

1) ಗ್ರಾಮದೇವತೆ ಶಿಲ್ಪಗಳು – 25

2) ಪಡಸಾಲೆ ಜೋಡಣೆ ಕಲಾಕಾರ್ಯ – 28

3) ಪಲ್ಲಕ್ಕಿ ಶಿಲ್ಪಗಳು – 05

4) ಕುದುರೆ ಶಿಲ್ಪಗಳು – 600

5) ಗೌರಿಮಾಡದ ಕಲಾ ಕುಸರಿ – 150

6) ನವಿಲು, ಗಿಳಿ, ಗಂಗೆ, ಗೌರಿ ಶಿಲ್ಪಗಳು – 100

7) ರಥಶಿಲ್ಪ – 01 (ನಗನೂರು– ಶಹಾಪುರ ತಾ)

ಹಾಗೆಯೇ ರೈತರ ವ್ಯವಸಾಯಕ್ಕೆ ಸಂಬಂಧಿಸಿದಂತೆ ಹಲವಾರು ಶಿಲ್ಪಕಲಾಕೃತಿಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ವಿಶೇಷವಾಗಿ ಈ ಶಿಲ್ಪಿಯು ಗ್ರಾಮದೇವತೆಗಳ ಶಿಲ್ಪಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಿಸಿರುವುದನ್ನು ಕಾಣುತ್ತೇವೆ. ಅಂದಾಜಿಸಿದಂತೆ ಸುಮಾರು 25 ಶಿಲ್ಪಗಳನ್ನು ಮಾಡಿರುವ ಸಂಗತಿಯನ್ನು ಶಿಲ್ಪಿ ಕಾಳಪ್ಪನವರ ತಿಳಿಸುತ್ತಾರೆ. ಕೆಲವೊಂದು ಗಮನಿಸುವುದಾದರೆ ಈ ಕೆಳಗಿನಂತೆ ನೋಡಿ.

1) ದ್ಯಾವಮ್ಮ ದೇವಿಯ ಶಿಲ್ಪ – ಮಂಡಗಳ್ಳಿ, ತಾಲೂಕ ಸುರಪುರ

2) ಕೆಂಚಮ್ಮ ದೇವಿಯ ಶಿಲ್ಪ – ಮಂಡಗಳ್ಳಿ, ತಾಲೂಕ ಸುರಪುರ

3) ದ್ಯಾವಮ್ಮ ದೇವಿಯ ಶಿಲ್ಪ – ರತ್ತಳ್ಳ ತಾಲೂಕ ಸುರಪುರ

4) ದ್ಯಾವಮ್ಮ ದೇವಿಯ ಶಿಲ್ಪ & ಪಲ್ಲಕ್ಕಿ – ದೇವರಗೋನಾಲ, ತಾಲೂಕಾ ಸುರಪುರ

5) ದ್ಯಾವಮ್ಮ ದೇವಿಯ ಶಿಲ್ಪ – ಹಯ್ಯಾಳ(ಬಿ) ತಾಲೂಕ ಶಹಾಪುರ

6) ಕೆಂಚಮ್ಮ ದೇವಿಯ ಶಿಲ್ಪ – ಹಿರೇ ವಡಗೇರ, ತಾಲೂಕಾ ಶಹಾಪುರ

7) ಕೆಂಚಮ್ಮ ದೇವಿಯ ಶಿಲ್ಪ – ದೊಡ್ಡ ಸಗರ ತಾಲೂಕಾ ಶಹಾಪುರ,

8) ದ್ಯಾವಮ್ಮ ದೇವಿಯ ಶಿಲ್ಪ – ಕೊಪ್ಪರ ತಾಲೂಕಾ ದೇವದುರ್ಗ, ಜಿ. ರಾಯಚೂರು

9) ದ್ಯಾವಮ್ಮ ದೇವಿಯ ಶಿಲ್ಪ – ಗಂವ್ಹಾರ ತಾಲೂಕಾ ಶಹಾಪುರ ಜಿ. ಯಾದಗಿರಿ

10) ದ್ಯಾವಮ್ಮ ದೇವಿಯ ಶಿಲ್ಪ – ಹೊಳಿ ಮದ್ರಿಕಿ, ತಾ.ಜೇವರ್ಗಿ, ಜಿ. ಕಲಬುರಗಿ

11) ಪಲ್ಲಕಿಯ ಶಿಲ್ಪ – ಸೂಗೂರು, ತಾ.ಸುರಪುರ, ಜಿ.ಯಾದಗಿರಿ

12) ಮರಗಮ್ಮ ದೇವಿಯ ಶಿಲ್ಪ – ಗುತ್ತಿಪೇಟೆ, ತಾ.ಸುರಪುರ ಜಿ. ಯಾದಗಿರಿ

ಹೀಗೆ ಹಲವಾರು ಗ್ರಾಮಗಳಲ್ಲಿ ಗ್ರಾಮದೇವತೆ ಮತ್ತು ದೇವರ ಪಲ್ಲಕ್ಕಿಗಳನ್ನು ಮಾಡಿಕೊಟ್ಟಿದ್ದಾರೆ. ಗ್ರಾಮದೇವತೆಯ ಪೂರ್ಣ ಪ್ರಮಾಣದ ನೈಜಭಾವ, ಆಯಾ ಅವತಾರ ರೂಪ ಶಿಲ್ಪವಾಗಿ ಜನರ ಭಕ್ತಿ, ಭಾವಕ್ಕೆ ಸ್ಪಂದಿಸುವಂತೆ ಗ್ರಾಮದೇವತೆ ಮತ್ತು ಪಲ್ಲಕ್ಕಿಗಳನ್ನು ರಚಿಸಿದ್ದಾರೆ.

ಹಾಗೇಯೇ ಅನೇಕ ಮನೆಗಳಿಗೆ ತಲಬಾಗಿಲುಗಳ ಕೆತ್ತನೆ ಬಾಗಿಲುಗಳಿಗೆ ತಕ್ಕಂತೆ ಕುದುರೆ ಶಿಲ್ಪಗಳು, ಪಡಸಾಲಿ ಜೋಡಣೆಯ ಕೆಲಸ, ಕಂಬ, ಬೋದು, ದಿಂಡು, ಸೇರಿದಂತೆ ನಾನಾ ಬಗೆಯ ಶಿಲ್ಪಗಳನ್ನು ರಚಿಸುವ ಕಾರ್ಯದಲ್ಲಿಯೇ ತಮ್ಮ ಬದುಕನ್ನು ಸವೆಸಿದ್ದಾರೆ. ಏಪ್ಪತ್ತೈದರ ಇಳಿವಯಸ್ಸಿನಲ್ಲಿರುವ ಶಿಲ್ಪಿ ಕಾಳಪ್ಪನವರಿಗೆ ಸರಕಾರದಿಂದ ಮಾಶಾಸನ ದೊರೆತಿಲ್ಲ, ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಕಲಾಶಿಬಿರ, ಪ್ರದರ್ಶನ, ಗೌರವ ಪ್ರಶಸ್ತಿ, ಪುರಸ್ಕಾರಗಳು ಲಭಿಸಿಲ್ಲ, ಜನಪದ ಕಲಾಕೃತಿಗಳನ್ನು ರಚಿಸುವುದರೊಂದಿಗೆ ಬದುಕು ಸವೆಸಿದ ಈ ಶಿಲ್ಪಿಗೆ ಪ್ರಸ್ತುತ ಪ್ಯಾರಲೀಸಸ್ ರೋಗಕ್ಕೆ ತುತ್ತಾಗಿದ್ದಾರೆ. ಕೆಲಸವು ಮಾಡಲಿಕ್ಕೆ ಆಗದೇ ಕುಳಿತಿರುವ ಕಾಳಪ್ಪನವರ ಬದುಕಿಗೆ ಸರಕಾರ ಇವರ ಕಲಾ ಸೇವೆಯನ್ನು ಗಮನಿಸಿ ಮಾಸಿಕ (ಮಾಶಾಸನ) ಧನ ಸಹಾಯ ಮತ್ತು ಪ್ರಶಸ್ತಿ ಪುರಸ್ಕಾರಗಳು ಲಭಿಸಿದರೆ ಹರ್ಷದ ಸಂಗತಿಯಾಗುತ್ತದೆ.

ದಿವಂಗತ ಭಗವಂತಪ್ಪ ಆಚಾರ್ಯ

ಯಾದಗಿರಿ ಜಿಲ್ಲೆ ಶಹಾಪುರ ತಾಲೂಕಿನ ಸಗರ ಗ್ರಾಮದವರಾದ ಭಗವಂತಪ್ಪನವರು

ತಾವು ಬದುಕಿರುವವರೆಗೂ ಮರಗೆತ್ತನೆಯ ಕಲಾ ಕಾಯಕದಲ್ಲೇ ಸಂತೃಪ್ತಿ ಬದುಕನ್ನು ಕಂಡವರು. ಅಂದಿನ ಆರ್ಥಿಕ ಸಮಸ್ಯೆ. ಸಾಮಾಜಿಕ ಹೊಣೆಗಾರಿಕೆಯ ಪ್ರತಿಫಲವೆಂಬಂತೆ ಬಡಿಗೇತನದ ಕಾಯಕದಲ್ಲಿ ಬದುಕನ್ನು ಸವೆಸಿ ಜನಪದರ ನಂಬಿಕೆಗಳಿಗೆ ಸ್ಪಂದಿಸುವಂತಹ ಹಲವಾರು ಶಿಲ್ಪಕಲಾಕೃತಿಗಳನ್ನು ರಚಿಸಿಕೊಟ್ಟು ನಮ್ಮನ್ನಗಲಿದ್ದಾರೆ. ಅಂದು ಹನ್ನೆರಡನೇ ತರಗತಿಯ ಶಿಕ್ಷಣವನ್ನು ಪಡೆದಿದ್ದು ನನ್ನ ತಂದೆಯವರು ಅತ್ಯುತ್ತಮ ಕಲಾಕೃತಿಗಳನ್ನು ರಚಿಸುವಲ್ಲಿ ಸಿದ್ಧ ಹಸ್ತರಿದ್ದರು.* ಅಂತೇಯೇ ಹಲವು ಕಲಾಕೃತಿಗಳನ್ನು ಗಮನಿಸುವದಾದರೆ ಈ ಕೆಳಗೆ ಗಮನಿಸಿರಿ.

1) ಕುದುರೆ ಶಿಲ್ಪ – 100

2) ಪಡಸಾಲಿ ಜೋಡಣೆ – 50

3) ಗೌರಿ ಮಾಡ – 50

4) ತಿಂಥಣಿ ಮೌನೇಶ್ವರ ಪೂರ್ಣಶಿಲ್ಪ – 01

5) ಗಂಗೆ, ಗೌರಿ, ಶಿಗಮ್ಮನ ಮೂರ್ತಿ ಶಿಲ್ಪ – 50

6) ಗ್ರಾಮದೇವತೆ ಶಿಲ್ಪ – 01 (ರತ್ತಳ, ತಾ.ಸುರಪುರ, ಜಿ.ಯಾದಗಿರಿ)

ಹೀಗೆ ಹಲವು ವೈವಿಧ್ಯಮಯವಾದ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಪ್ರತಿಯೊಂದು ಶಿಲ್ಪಕಲಾಕೃತಿಗಳ ನೈಜತೆ ಕಣ್ಣಮುಂದೆ ಕಟ್ಟುವಂತೆ ಕೆತ್ತನೆ ಮಾಡುತ್ತಿದ್ದರು. ಕುದುರೆ ಶಿಲ್ಪ, ತಲಬಾಗಿಲು, ಪಡಸಾಲಿ ಜೋಡಣೆಯ ಕೆತ್ತನೆಯ ಕಲಾಕಾರ್ಯದಲ್ಲಿ ಹೂ, ಎಲೆ, ಬಳ್ಳಿ, ನಿಸರ್ಗ ಪ್ರೇರಿತ ಸೂಕ್ಷ್ಮ ಕಲಾ ಕುಸುರಿ ಕೆತ್ತನೆ, ಗಿಳಿ, ನವಿಲು, ಪ್ರಾಣಿ ಪಕ್ಷಿಗಳ ಸಂಕುಲವೇ ಇವರ ಶಿಲ್ಪ ಕಲಾಕೃತಿಗಳ ಅಂತರಂಗದ ಎದೆಯಲ್ಲಿ ಸಂಯೋಜನೆಗೊಂಡಿರುತ್ತಿದ್ದವು. ಇವರ ಕಲಾ ವೈಶಿಷ್ಟ್ಯತೆಯ ಲಕ್ಷಣಗಳು ಮಗನಾದ ಶಶಿಕುಮಾರ ಆಚಾರ್ಯರವರ ಕಲಾ ಪಯಣದಲ್ಲಿ ಅಡಕಗೊಂಡಿರುವ ವಿಶೇಷ ಸಂಗತಿಗಳನ್ನು ಗಮನಿಸಬಹುದಾಗಿದೆ.

ಜನಪದ ಸಂಸ್ಕೃತಿಯ ಕಲಾವಲಯದಲ್ಲಿ ತಮ್ಮ ಜೀವನವನ್ನು ಸಾಗಿಸಿದ ದಿವಂಗತ

---

* ಸಂದರ್ಶನ: ಶಶಿಕುಮಾರ ಭಗವಂತಪ್ಪ ಆಚಾರ್ಯ ಅವರೊಂದಿಗೆ, ದಿನಾಂಕ. 03.03.2017

ಭಗವಂತಪ್ಪ ಆಚಾರ್ಯ ಅವರು ಸಗರನಾಡಿನ ಪ್ರಮುಖ ಜನಪದ ಶಿಲ್ಪಿ ಎಂಬುದನ್ನು ಮರೆಯುವಂತಿಲ್ಲ. ಭಗವಂತಪ್ಪನವರು ಇಂದು ನಮ್ಮೊಂದಿಗಿಲ್ಲದಿದ್ದರೂ ಸಹ ಅವರ ಜನಪದ ಕಲಾಕೃತಿಗಳು ನಮ್ಮ ಕಣ್ಮುಂದೆ ಇರುವುದನ್ನು ಕಾಣುತ್ತೇವೆ.

ಶಶಿಕುಮಾರ ತಂದೆ ಭಗವಂತಪ್ಪ ಆಚಾರ್ಯ

ಶಿಲ್ಪಿ ಶಶಿಕುಮಾರ ಅವರು ಭಗವಂತಪ್ಪ ಆಚಾರ್ಯರವರ ಮಗನಾಗಿ ಜನಿಸಿದ್ದಾರೆ. ತಂದೆಯ ಕಾಯಕದಂತೆ ಮಗನು ಸಹ ಬಡಿಗೇತನ ಕೆಲಸದಲ್ಲಿ ಮುಂದುವರೆದಿದ್ದು, ಹತ್ತನೇ ತರಗತಿ ಶಿಕ್ಷಣವನ್ನು ಪಡೆದ ಶಿಲ್ಪಿ ಶಶಿಕುಮಾರ ಅವರು ಯುವ ಶಿಲ್ಪಿಯಾಗಿದ್ದು, ಚಿಕ್ಕವಯಸ್ಸಿನಲ್ಲಿಯೇ ಕಲೆಯ ಆಸಕ್ತಿಯನ್ನು ಬೆಳೆಸಿಕೊಂಡು ಕಲಾ ಪ್ರಗತಿಯ ಹಾದಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ರಚಿಸುವ ಶಿಲ್ಪಕಲಾಕೃತಿಗಳು ಸಗರನಾನಡಿನ ವಿವಿಧೆಡೆ ಸಂಗ್ರಹಗೊಂಡು ಮಹತ್ವದ ಚರ್ಚೆಗೆ ಪಾತ್ರವಾಗಿವೆ.

ತನ್ನ ಮನೆಯನ್ನು ಸಹ ಗ್ರಾಮೀಣ ಸಂಸ್ಕೃತಿಯ ಶ್ರೀಮಂತಿಕೆಯ ಹಾಗೆ ಬೃಹತ್ತಾದ ಪಡಸಾಲೆ, ತಲಬಾಗಿಲು, ಕುದುರೆ, ಸೇರಿದಂತೆ, ಅಲಂಕಾರಿಕವಾದ ಕಲಾತ್ಮಕ ಮನೆಯಾಗಿದೆ. ತಂದೆಯ ಕಾಯಕದಂತೆ ಮರಗೆತ್ತನೆಯ ಕಲಾಕಾರ್ಯದಲ್ಲಿ ಮುಂದುರೆದಿದ್ದು, ಅದುವೆ ಬದುಕಿನ ಉಸಿರಾಟವನ್ನಾಗಿಸಿಕೊಂಡಿರುವುದು ಮಹತ್ವದ ಸಂಗತಿ. ಶಶಿಕುಮಾರ ಅವರು ಸಗರನಾಡಿನ ಕೆಲವು ಗ್ರಾಮಗಳಾದ ತಿಮ್ಮಾಪುರ, ವಿರುಪಾಪುರ, ಕಾಟಮನಹಳ್ಳಿ, ಸಾವೂರು, ಮಾರಡಗಿ, ಹೊತಪೇಠ, ದೊಡ್ಡ ಸಗರ, ಸೇರಿದಂತೆ ಹಲವಡೆ ಅತ್ಯುತ್ತಮ ಶಿಲ್ಪ ಕಲಾಕೃತಿಗಳನ್ನು ರಚಿಸಿದ್ದಾರೆ. ಶಿಲ್ಪಿ ಶಶಿಕುಮಾರ ಅವರು ಮಾಡುವ ಶಿಲ್ಪಕಲಾಕೃತಿಗಳ ವೈವಿಧ್ಯತೆ ಈ ಕೆಳಗಿನಂತೆ ಕಂಡುಬರುತ್ತದೆ.

1) ಕುದುರೆ ಶಿಲ್ಪಗಳು – 30

2) ಗ್ರಾಮದೇವತೆ ಶಿಲ್ಪಗಳು – 11

3) ತಲಬಾಗಿಲು – 32

---

* ಸಂದರ್ಶನ : ಶಶಿಕುಮಾರ ಭಗವಂತಪ್ಪ ಆಚಾರ್ಯ, ಸಗರ.

* ಗ್ರಾಮ ದೇವತೆ ಶಿಲ್ಪಗಳನ್ನು ರಚಿಸುವುದರಲ್ಲಿ ಈ ಶಿಲ್ಪಿ ಪ್ರಮುಖರು.

* ಸಗರ ಗ್ರಾಮದ ಭಾಗ್ಯವಂತಿ ದೇವಿಯ ಶಿಲ್ಪವು ಸೃಜನಶೀಲ ಕೆತ್ತನೆಯಲ್ಲಿ ರೂಪಗೊಂಡಿವೆ. ಬಣ್ಣಗಳ ಲೇಪನಾ ಕಾರ್ಯ ಆಕರ್ಷವಾಗಿ ಈ ಶಿಲ್ಪಿ ಲೇಪನ ಮಾಡುತ್ತಾರೆ.

4) ಗೌರಿಮಾಡ – 20

5) ಪಡಸಾಲೆ ಜೋಡಣೆ – 10

ಅಲ್ಲದೇ ರೈತರ ವ್ಯವಸಾಯಕ್ಕೆ ಸಂಬಂಧಿಸಿದಂತೆ ಹಲವಾರು ಶಿಲ್ಪ ಕಲಾಕೃತಿಗಳನ್ನು ಮಾಡಿಕೊಟ್ಟಿದ್ದಾರೆ. ಯುವ ಶಿಲ್ಪಿಯಾದ ಶಿಲ್ಪಿ ಶಶಿಕುಮಾರ ಅವರು ಗ್ರಾಮದೇವತೆ ಶಿಲ್ಪಗಳ ಕೆತ್ತನೆಕಾರ್ಯದಲ್ಲಿ ಅತೀ ಹೆಚ್ಚು ಕೆಲಸ ಮಾಡಿರುವ ಹೆಗ್ಗಳಿಕೆಯಿದೆ. ಹಾಗೇಯೇ ದೇವತೆಗಳಿಗೆ ವರ್ಣಲೇಪನ, ಬಟ್ಟೆ ಧರಿಸುವಿಕೆ, ಅಲಂಕಾರಿಕಗೊಳಿಸುವಿಕೆಯಲ್ಲಿ ಸೃಜನಶೀಲರು, ಗ್ರಾಮದೇವತೆ ಶಿಲ್ಪಗಳನ್ನು ಈ ಕೆಳಗಿನಂತೆ ಗಮನಿಸುಬಹುದಾಗಿದೆ.

1) ದ್ಯಾವಮ್ಮನ ದೇವತೆ ಶಿಲ್ಪ – ತಿಮ್ಮಾಪುರ, ತಾ.ಶಹಾಪುರ ಜಿ. ಯಾದಗಿರಿ

2) ದ್ಯಾವಮ್ಮನ ದೇವತೆ ಶಿಲ್ಪ – ಹೊಸಳ್ಳಿ, ತಾ.ಶಹಾಪುರ ಜಿ. ಯಾದಗಿರಿ

3) ದ್ಯಾವಮ್ಮನ ದೇವತೆ ಶಿಲ್ಪ – ವಿರುಪಾಪುರ, ತಾ.ಶಹಾಪುರ ಜಿ. ಯಾದಗಿರಿ

4) ಮರಗಮ್ಮ ದೇವಿ ಶಿಲ್ಪ – ಕಾಟಮನಹಳ್ಳಿ ಸಾವೂರು, ತಾ.ಶಹಾಪುರ

5) ಮಗರಮ್ಮದೇವಿ ಶಿಲ್ಪ – ದೇವಿಕೇರಿ, ಸುರಪುರ ಜಿ.ಯಾದಗಿರಿ

6) ಮಗರಮ್ಮದೇವಿ ಶಿಲ್ಪ – ರಸ್ತಾಪುರ, ತಾ.ಶಹಾಪುರ ಜಿ.ಯಾದಗಿರಿ

7) ಮಗರಮ್ಮದೇವಿ ಶಿಲ್ಪ – ಅಮ್ಮಾಪುರ, ತಾ.ಸುರಪುರ ಜಿ.ಯಾದಗಿರಿ

8) ಮಗರಮ್ಮದೇವಿ ಶಿಲ್ಪ – ಮಾರಡಗಿ, ತಾ.ಜೇವರ್ಗಿ, ಜಿ. ಕಲಬುರಗಿ

9) ಚೌಡಮ್ಮ ಶಿಲ್ಪ – ಮುಡಬೂಳ, ತಾ.ಶಹಾಪುರ, ಜಿ. ಯಾದಗಿರಿ

10) ಮಗರಮ್ಮದೇವಿ ಶಿಲ್ಪ – ಹೋತಪೇಠ, ತಾ.ಶಹಾಪುರ ಜಿ.ಯಾದಗಿರಿ

11) ಭಾಗ್ಯವಂತಿದೇವಿ ಮತ್ತು ಲಕ್ಷ್ಮೀ – ದೊಡ್ಡ ಸಗರ, ತಾ.ಶಹಾಪುರ ಜಿ.ಯಾದಗಿರಿ

ಚಿಕ್ಕ ವಯಸ್ಸಿನಲ್ಲಿಯೇ ಸುಮಾರು ಹನ್ನೊಂದು ಗ್ರಾಮದೇವತೆ ಶಿಲ್ಪಗಳನ್ನು ಮಾಡುವ ಮೂಲಕ ಜನ ಸಾಮಾನ್ಯರ ಗಮನ ಸೆಳೆದಿದ್ದಾರೆ. ಜನಪದ ಕಲಾ ವೈಶಿಷ್ಟ್ಯತೆಗಳಿಂದ ಕಲಾಕೃತಿಗಳನ್ನು ರಚಿಸುತ್ತಿರುವ ಶಿಲ್ಪಿ ಶಶಿಕುಮಾರ ಅವರು ತಮ್ಮ ಬದುಕಿನ ಭರವಸೆಯ ಕಾಯಕವಾಗಿ ಶಿಲ್ಪ ಕೆತ್ತನೆ ಮುಂದುವರೆಸಿದ್ದಾರೆ. ಇವರಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಕಲಾಶಿಬಿರಗಳು,

ಕಾರ್ಯಗಾರ, ತರಬೇತಿ, ಸಹಾಯಧನ, ಪ್ರಶಸ್ತಿ ಪುರಸ್ಕಾರಗಳು ಲಭಿಸಿರುವುದಿಲ್ಲ. ಆದರೆ ಜನಸಾಮಾನ್ಯರ ಸಾಂಸ್ಕೃತಿಕ ಬದುಕಿನಲ್ಲಿ ವಿಶಿಷ್ಟ ಪ್ರತಿಭೆಯ ಜನಪದ ಶಿಲ್ಪಿಯಾಗಿ ಗುರುತಿಸಿಕೊಂಡು ಸನ್ಮಾನಕ್ಕೆ ಭಾಜನರಾಗಿದ್ದಾರೆ. ಗ್ರಾಮದೇವತೆ ಶಿಲ್ಪಗಳ ಕೆತ್ತನೆಯ ಹಾಗೆ ಹಲವಾರು ಮನೆಗಳ ತಲಬಾಗಿಲುಗಳು ಕೆತ್ತನೆ. ಮತ್ತು ಕುದುರೆ, ಪಡಸಾಲಿ ಜೋಡಣೆ ಕೆಲಸದಲ್ಲಿಯೂ ಸಹ ಮುಂದುವರೆದಿದ್ದಾರೆ. ಪ್ರತಿಭಾವಂತ ಯುವ ಶಿಲ್ಪಿಯಾದ ಶಶಿಕುಮಾರ ಅವರಿಗೆ ಸರಕಾರದ ಎಲ್ಲ ಸವಲತ್ತುಗಳು ದೊರೆಯುವುದಾದರೆ ಮುಂದಿನ ದಿನಗಳಲ್ಲಿ ಜನಪದ ಕಲಾ ಪರಂಪರೆ ಮತ್ತಷ್ಟು ಶ್ರೀಮಂತಗೊಳ್ಳುವುದರಲ್ಲಿ ಎರಡು ಮಾತಿಲ್ಲ.

ದಿವಂಗತ ದೇವಿಂದ್ರಪ್ಪ ಕಂಬಾರ

ಶಹಾಪುರ ತಾಲೂಕಿನ ಶಿರವಾಳ ಗ್ರಾಮದ ದಿವಂಗತ ದೇವಿಂದ್ರಪ್ಪ ಕುಂಬಾರ ಅವರು ಮರಗೆತ್ತನೆಯ ಕೆಲಸದಲ್ಲಿ ದುಡಿದವರು. ಐದಾರು ದಶಕಗಳ ಅವಧಿಯವರೆಗೂ ರೈತರ ವ್ಯವಸಾಯಕ್ಕೆ ಸಂಬಂಧಿಸಿದಂತೆ ಕುರಿಗೆ, ಕುಂಟಿ, ಮೇಳಿ, ಕೊಡಲಿ ಕಾವು, ಉದ್ದಿಗೆ, ಕುಂಟೆದಿಂಡು, ಕೊರಪು, ಸೇರಿದಂತೆ ಹಲವು ಬಗೆಯ ಶಿಲ್ಪಗಳನ್ನು ಮಾಡುತ್ತಲೆ ಬದುಕು ಸವೆಸಿದವರು. ಮರಗೆತ್ತನೆಯ ಕೆಲಸ ಆರಂಭಿಸುವುದಕ್ಕಿಂತ ಮುಂಚೆ ಕಬ್ಬಿಣದ ಮಾಧ್ಯಮದಿಂದ ಕುಡಗೋಲು, ಕುರ್ಪಿ, ಕುಂಟಿ ತಾಳ, ನೆಗಿಲು, ಪಟ್ಟಿಗಳು, ಕೊಡಲಿ ಸೇರಿದಂತೆ ಹಲವಾರು ಸಲಕರಣೆಗಳನ್ನು ಮಾಡಿಕೊಡುವುದರಿಂದ ಇವರಿಗೆ ಕಂಬಾರರು ಎಂದು ಕರೆಯುವ ವಾಡಿಕೆಯಿದೆ.

ಮುಂದುವರೆದಂತೆ ಕಬ್ಬಿಣ ಮಾಧ್ಯಮದಿಂದ ದೂರಸರಿದು ಮರಗೆತ್ತನೆಯ ಕಲಾ ಕಾರ್ಯದಲ್ಲಿ ಮುಂದುವರೆಯುತ್ತಾರೆ ಆ ಶಿಲ್ಪಗಳ ಅವುಗಳ ವಿವಿಧತೆ ಹೀಗೆ ಕಂಡುಕೊಳ್ಳುತ್ತೇವೆ.

1) ಕುದುರೆ ಕೆತ್ತನೆ – 100

2) ತಲಬಾಗಿಲುಗಳ ಕೆತ್ತನೆ – 50

3) ಪಡಸಾಲೆ ಜೋಡಣೆ – 50

4) ಗೌರಿಮಾಡದ ಕೆತ್ತನೆ – 100

ಈ ಪ್ರಕಾರದಲ್ಲಿ ಕೆಲಸವನ್ನು ಮಾಡಿದ ದೇವಿಂದ್ರಪ್ಪ ಕಂಬಾರರು 2012–13ನೇ ಸಾಲಿನಲ್ಲಿ

ಅನಾರೋಗಕ್ಕೆ ತುತ್ತಾಗಿ ನಿಧನ ಹೊಂದಿದ್ದಾರೆ. ಇವರ ಪ್ರತಿಯೊಂದು ಕಲಾಕೃತಿಯ ರಚನೆ ಆಸಕ್ತಿ. ಎಲ್ಲವೂ ಸೌಂದರ್ಯ ಮತ್ತು ಶಾಸ್ತ್ರೀಯ ನೆಲೆಯ ಚೌಕಟ್ಟನ್ನು ಪ್ರತಿಬಿಂಬಿಸುತ್ತವೆ ಎಂಬಂತೆ ನೈಜವಾಗಿ ರಚಿಸಿದ್ದಾರೆ, ಶಿರವಾಳ, ಕೊಂಕಲ್, ಬಲಕಲ್, ಚಟ್ನಳ್ಳಿ, ಟಿ.ವಡಗೇರಾ, ಐಕೂರು, ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಇವರ ಕಲಾ ಕೆಲಸಗಳನ್ನು ಕಾಣುತ್ತೇವೆ.

ನಿರಂತರ ಬಡಿಗೇತನ ಮತ್ತು ಕಂಬಾರಿಕೆಯಲ್ಲಿ ಶ್ರಮಿಸಿದ ಈ ಶಿಲ್ಪಿಗೆ ಸರಕಾರದಿಂದಾಗಲೀ ಸಂಘ ಸಂಸ್ಥೆಗಳಿಂದಾಗಲಿ ಯಾವುದೇ ಪ್ರಶಸ್ತಿ ಪುರಸ್ಕಾರಗಳು ಲಭಿಸಿರುವುದಿಲ್ಲ. ತಂದೆಯ ಕಾಯಕವಾದ ಈ ವೃತ್ತಿ ಕೆಲಸವನ್ನು ಪ್ರಸ್ತುತ ಮಗನಾದ ಸಿದ್ದಲಿಂಗಪ್ಪನವರು ಮುಂದುವರೆಸಿಕೊಂಡು ನಡೆದಿದ್ದಾರೆ.

ಸಗರನಾಡಿನ ಜನಪದ ಶಿಲ್ಪಗಳ ರಚನಾ ಕಾರ್ಯದಲ್ಲಿ ಶಿರವಾಳ ಗ್ರಾಮದ ದಿವಂಗತ ದೇವಿಂದ್ರಪ್ಪ ಕಂಬಾರರ ಕಲಾ ವೈಶಿಷ್ಟ್ಯತೆಗಳು ಅತ್ಯಂತ ಪ್ರಮುಖವಾದವುಗಳಾಗಿವೆ. ತಲಬಾಗಿಲ ಕೆತ್ತನೆ, ಕುದುರೆ, ಪಡಸಾಲಿ ಜೋಡಣೆ ಕೆಲಸ ಸೇರಿದಂತೆ ಹಲವು ಬಗೆಯ ಶಿಲ್ಪಕಲಾಕೃತಿ ರಚಿಸುವಲ್ಲಿ ದಿವಂಗತ ದೇವಿಂದ್ರಪ್ಪ ಕಂಬಾರರು ಅತ್ಯಂತ ಕ್ರಿಯಾಶೀಲರಾಗಿದ್ದರು.*

ಸಿದ್ದಲಿಂಗಪ್ಪ ತಂದೆ ದೇವಿಂದ್ರಪ್ಪ ಕಂಬಾರ

ಶಹಾಪುರ ತಾಲೂಕಿನ ಶಿರವಾಳ ಗ್ರಾಮದ ದೇವಿಂದ್ರಪ್ಪನವರ ಮಗನಾಗಿ 10 ಜೂನ್ 1969ರಲ್ಲಿ ಜನಿಸಿದರು. ತಂದೆ ದೇವಿಂದ್ರಪ್ಪನವರ ಕಲಾ ಸೂಕ್ಷ್ಮತೆಗಳು ವಂಶಪರಂಪರೆಯಾಗಿ ಬಂದಿರುವುದನ್ನು ಕಾಣುತ್ತೇವೆ. ಅಪ್ಪನ ಹಾಗೆ ಸಿದ್ದಲಿಂಗಪ್ಪನವರು ಸಹ ಮರಗೆತ್ತನೆಯ ಶಿಲ್ಪಗಳನ್ನು ಕೆತ್ತನೆ ಮಾಡುವುದರಲ್ಲಿ ಹೆಸರು ವಾಸಿಯಾಗಿದ್ದಾರೆ. ಜನಪದ ಶಿಲ್ಪಗಳನ್ನು ಮಾಡುವ ಮೂಲಕ ಸಗರನಾಡಿನ ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಕುದುರೆ, ತಲಬಾಗಿಲು, ಪಡಸಾಲೆ ಜೋಡಣೆ, ಗೌರಿಮಾಡ, ಸೇರಿದಂತೆ ರೈತರಿಗೆ ಬೇಕಾಗುವ ಸಲಕರಣೆ ಶಿಲ್ಪಗಳನ್ನು ಮಾಡಿಕೊಟ್ಟಿದ್ದಾರೆ. ನಲವತ್ತೈದರ ವಯಸ್ಸಿನಲ್ಲಿರುವ ಶಿಲ್ಪಿ ಸಿದ್ದಲಿಂಗಪ್ಪನವರಿಗೆ ಹೆಂಡತಿ ಆಶ್ವಿನಿಯವರ ಸಹಕಾರ, ಪ್ರೋತ್ಸಾಹವಿರುವುದನ್ನು ಕಾಣಬಹುದಾಗಿದೆ. ಇವರಿಗೆ ಪೂಜಾ (10ನೇ ತರಗತಿ ಓದುತ್ತಿದ್ದಳು).

---

*ಸಂದರ್ಶನ: ಸಿದ್ದಲಿಂಗಪ್ಪ ಕಂಬಾರ ಅವರೊಂದಿಗೆ, ದಿನಾಂಕ: 02.03.2017

ಶಾಂಭವಿ (8ನೇ), ವೈಷ್ಣವಿ (6ನೇ) ತರಗತಿ ಓದುತ್ತಿರುವ ಮೂರು ಜನ ಮಕ್ಕಳಿದ್ದಾರೆ. ಸಂಸಾರಿಕವಾಗಿ ಚಿಕ್ಕ ಕುಟುಂಬವಿರುವ ಇವರಿಗೆ ಆರ್ಥಿಕ ಸಮಸ್ಯೆಯನ್ನು ಬಡಿಗೇತನ ಕೆಲಸದಿಂದ ಬಗೆಹರಿಸುವ ಮಾಡುವುದರೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ತಂದೆಯ ಕಾಯಕ ಕೃಷಿಯಂತೆ ಮಗನು ಸಹ ಮರಗೆತ್ತನೆಯ ಶಿಲ್ಪಕಲಾಕೃತಿಗಳನ್ನು ಮಾಡುವುದರೊಂದಿಗೆ, ಜನಪದ ಶಿಲ್ಪ ಪರಂಪರೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ಪ್ರಕ್ರಿಯೆಯಾಗಿ ಶ್ರಮಿಸುತ್ತಿದ್ದಾರೆ. ಅಂದಾಜು ಲೆಕ್ಕಚಾರದಲ್ಲಿ ಇವರ ಕಲಾ ಕಾರ್ಯವನ್ನು ಈ ಕೆಳಗಿನಂತೆ ಕಾಣುತ್ತೇವೆ.

1) ಕುದುರೆ ಶಿಲ್ಪಗಳು – 20

2) ತಲಬಾಗಿಲು – 40

3) ಗ್ರಾಮದೇವತೆ – 03

4) ಪಡಸಾಲೆ ಜೋಡಣೆ – 12

ಶಿರವಾಳದ ಸುತ್ತಮುತ್ತಲಿನ ಗ್ರಾಮಗಳು ಮತ್ತು ಸಗರನಾಡಿನ ಹಲವಡೆ ಕುದುರೆ ಶಿಲ್ಪ, ತಲಬಾಗಿಲು, ಗ್ರಾಮದೇವತೆ, ಪಡಸಾಲೆ ಜೋಡಣೆ ಕೆಲಸವನ್ನು ಮಾಡಿದ್ದಾರೆ ಉದಾಃ ಪಡಸಾಲೆ ಜೋಡಣೆ ಮತ್ತು ಕುದುರೆ ಶಿಲ್ಪಿಗಳು ಶಿರವಾಳ, ಬಲಕಲ್, ಚಟ್ನಳ್ಳಿ (ಶಹಾಪುರ ತಾ.) ಹಳ್ಳಿಗಳನ್ನು ಕಾಣಬಹುದು. ಹಾಗೆಯೇ ಗ್ರಾಮದೇವತೆಗಳನ್ನು ಗಮಿಸುವುದಾದರೆ ದೇವದುರ್ಗ ತಾಲೂಕಿನ ಚಿಕ್ಕಬೂದುರು ಗ್ರಾಮದ ಮರೆಮ್ಮದೇವಿಯ ಶಿಲ್ಪ, ಶಹಾಪುರ ತಾಲೂಕಿನ ಹೂಸೂರ ಗ್ರಾಮದ ಮರೆಮ್ಮದೇವಿಯ ಶಿಲ್ಪ, ಹಾಗೂ ಖಾನಾಪುರ ಗ್ರಾಮದ ಪಾರ್ವತಿ (ಗೌರಿ) ಶಿಲ್ಪವನ್ನು ನೊಡಬಹುದಾಗಿದೆ. ಶೈಕ್ಷಣಿಕವಾಗಿ ಡಿಪ್ಲೋಮಾ ಇನ್ ಸಿವಿಲ್ ಪದವಿಯನ್ನು (ಶಿಕ್ಷಣ) ಪಡೆದ ಶಿಲ್ಪಿ ಸಿದ್ದಲಿಂಗಪ್ಪನವರು ತಮ್ಮ ಬದುಕನ್ನು ಜನಪದ ಶಿಲ್ಪಗಳನ್ನು ಸೃಷ್ಟಿಸುವುದರೊಂದಿಗೆ ಸಗರನಾಡಿನ ಉತ್ತಮ ಜನಪದ ಶಿಲ್ಪಿಯಾಗಿ ನಮ್ಮೊಂದಿಗೆ ಇರುತ್ತಾರೆ. ಇವರಿಗೆ ಸರಕಾರದ ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಶಿಬಿರ ಪ್ರಶಸ್ತಿಗಳು ಲಭಿಸಿರುವುದಿಲ್ಲ.

ಕರ್ಣಪ್ಪ ತಂದೆ ಗುರಪ್ಪ ಕಂಚಗಾರ

ಸಗರನಾಡಿನ ಖ್ಯಾತ ರಥ ಮತ್ತು ಕಾಷ್ಠ ಶಿಲ್ಪಿಯೆಂದೆ ಪ್ರಖ್ಯಾತಿ ಪಡೆದಂತಹ ಕರ್ಣಪ್ಪನವರು

ತಂದೆ ಗುರಪ್ಪ ತಾಯಿ ಸಿರಸಮ್ಮನವರ ಮಗನಾಗಿ 01 ಜನವರಿ 1949ರಲ್ಲಿ ದೋರನಹಳ್ಳಿ ಗ್ರಾಮದಲ್ಲಿ ಜನಿಸಿದರು. ಚಿಕ್ಕಂದಿನಿಂದಲೇ ಶಿಲ್ಪಕಲೆಯಲ್ಲಿ ಆಸಕ್ತಿಯಿರುವುದರಿಂದ ಕೇವಲ ಕಲೆಯ ಮತ್ತು ಕಲಾಕೃತಿ ಚಿಂತನೆಯ ಹಾದಿಯಲ್ಲಿಯೇ ಮುಂದುವರೆಯುವ ಬಯಕೆ ಇವರದಾಗಿರುತ್ತದೆ. ಆರನೇ ತರಗತಿ ಮಾತ್ರ ಶಿಕ್ಷಣ ಕಲಿತು ಅಲ್ಲಿಗೆ ಓದುವುದನ್ನು ನಿಲ್ಲಿಸುತ್ತಾರೆ. ಸಣ್ಣವರಿರುವಾಗಲೇ ಕಲೆಯ ನೆಲೆಗಳ ಹುಡುಕಾಟ ಮತ್ತು ಶಿಲ್ಪಗಳನ್ನು ತಯಾರಿಸುವ ತವಕದಲ್ಲಿರುತ್ತಾರೆ. ಮುಂದೆ ಬೆಳೆದಂತೆಲ್ಲ ಶ್ರೀ ಸಂಗಪ್ಪ ವಿಶ್ವಕರ್ಮ ಎಂಬ ಶಿಲ್ಪಕಲಾ ಗುರುಗಳ ಹತ್ತಿರ ಶಿಲ್ಪಕಲೆಯ ಶಿಕ್ಷಣವನ್ನು ಪಡೆದುಕೊಳ್ಳುತ್ತಾರೆ. ಅಂತೆಯೇ ಗುರುಗಳೊಂದಿಗೆ ಮರಗೆತ್ತನೆಯ ಕಾರ್ಯ ಚಟುವಟಿಕೆಗಳಲ್ಲಿ ಅಲೆದಾಡುತ್ತ, ಗುರುಗಳು ಹೇಳಿದ ಕೆಲಸವನ್ನು ತಪ್ಪದೇ ಮಾಡುತ್ತ ಕಲೆಯ ಹೊಳಹುಗಳನ್ನು ಗಮನಿಸುತ್ತ ಮುಂದುವರೆಯುತ್ತಾರೆ. ಗುರುಗಳ ಹತ್ತಿರ ಕಲೆಯ ಸಂಗತಿಗಳನ್ನು ತಿಳಿದ ನಂತರ ಸ್ವತಃ ತಾವೇ ಶಿಲ್ಪಕಲಾ ಕೃತಿಗಳನ್ನು ರಚಿಸುವುದರೊಂದಿಗೆ ಸಾಗುತ್ತಾರೆ. 1960ರಲ್ಲಿ ರಥಶಿಲ್ಪ ಅಭ್ಯಾಸವನ್ನು ಆರಂಭಿಸುತ್ತಾರೆ, ಮುಂದೆ 1970–71ರಲ್ಲಿ ಸ್ವಗ್ರಾಮವಾದ ದೋರನಹಳ್ಳಿಯಲ್ಲಿ ಸ್ವತಂತ್ರ ಶಿಲ್ಪಿಯಾಗಿ ಕಾರ್ಯನಿರ್ವಹಿಸುತ್ತಾರೆ. 1990ರಲ್ಲಿ ದೋರನಹಳ್ಳಿ ಬಸವಣ್ಣನ ರಥ, 2005ರಲ್ಲಿ ದೇವದುರ್ಗ ತಾಲೂಕಿನ ಮಾನಸಗಲ್ ರಂಗನಾಥ ದೇವರ ರಥ ನಿರ್ಮಾಣ ಮಾಡುತ್ತಾರೆ, ಹಾಗೆಯೇ ದೋರನಹಳ್ಳಿಯ ಮರಗಮ್ಮ ದೇವಿಯ ರಥವನ್ನು ಸಹ ಅದೇ ಸಂದರ್ಭದಲ್ಲಿ ಮಾಡಿದ್ದಾರೆ.

ಅಲ್ಲದೇ 1970ರ ಸಾಲಿನಲ್ಲಿ ದೇವದುರ್ಗ ತಾಲೂಕಿನ ಕೋಣ ಚಪ್ಪಳಿ ಗ್ರಾಮದಲ್ಲಿ ದ್ಯಾವಮ್ಮ ದೇವಿಯ ಶಿಲ್ಪವನ್ನು ಮಾಡುತ್ತಾರೆ. 2000ನೇ ಸಾಲಿನಲ್ಲಿ ಶಹಾಪೂರ ತಾಲೂಕಿನ ದಿಗ್ಗಿ ಗ್ರಾಮದಲ್ಲಿ ದ್ಯಾವಮ್ಮ, ಮೂರ್ತಿ ಶಿಲ್ಪ ಮಾಡಿದ್ದಾರೆ. ಹಾಗೇಯೇ ದೋರನಹಳ್ಳಿ, ಮುಡಬೂಳ, ಕೋಣಚಪ್ಪಳಿ ಗ್ರಾಮಗಳಲ್ಲಿ ಮರಗಮ್ಮ ದೇವತೆಯ ಶಿಲ್ಪಗಳನ್ನು ಮಾಡಿಕೊಟ್ಟಿದ್ದಾರೆ. ಗ್ರಾಮದೇವತೆಯ ಶಿಲ್ಪಗಳಲ್ಲದೇ ದೇವರ ಪಲ್ಲಕ್ಕಿಗಳನ್ನು ಸಹ ಮಡಿದ್ದಾರೆ ಅವುಗಳನ್ನು ಈ ಕೆಳಗಿನಂತೆ ಗಮನಿಸಬಹುದು.

- ಹುರಸಗುಂಡಗಿ ಗ್ರಾಮಕ್ಕೆ ಪಲ್ಲಕ್ಕಿ ಮಾಡಿಕೊಟ್ಟಿದ್ದಾರೆ. ತಾ.ಶಹಾಪುರ

- ಚಟ್ನಳ್ಳಿ ಗ್ರಾಮಕ್ಕೆ ಪಲ್ಲಕ್ಕಿ, ತಾ. ಶಹಾಪುರ, ಜಿ.ಯಾದಗಿರಿ
- ದೇವದುರ್ಗ ನಗರದ ದೇವಸ್ಥಾನವೊಂದಕ್ಕೆ ಪಲ್ಲಕ್ಕಿ
- ಕುರುಕುಂದಿ ಗ್ರಾಮಕ್ಕೆ ಪಲ್ಲಕ್ಕಿ, ತಾ.ಶಹಾಪುರ, ಜಿ.ಯಾದಗಿರಿ
- ಹೊನಗುಂಟಿ ಗ್ರಾಮಕ್ಕೆ ಪಲ್ಲಕ್ಕಿ ಮಾಡಿದ್ದಾರೆ. ಜೇವರ್ಗಿ, ಜಿ.ಕಲಬುರಗಿ

ದೇವರ ಪಲ್ಲಕ್ಕಿಗಳಲ್ಲದೇ ಹಲವಾರು ಮನೆಗಳಿಗೆ ಕುದುರೆ, ತಲಬಾಗಿಲು, ಪಡಸಾಲೆ ಜೋಡಣೆ, ಗೌರಿಮಾಡ, ಕಂಬ, ಬೋಧಿಗೆ, ನವಿಲು ಹೀಗೆ ಮನೆಯ ಅಲಂಕಾರಿಕ ಶಿಲ್ಪಗಳನ್ನು ಮಾಡಿದ್ದಾರೆ.

- ಕುದುರೆ ಶಿಲ್ಪಗಳು – 200
- ಮನೆಯ ತಲಬಾಗಿಲು – 6
- ದೇವರ ಪಲ್ಲಕ್ಕಿ – 15
- ಪಡಸಾಲೆ ಜೋಡಣೆ – 40

ಗೌರಿ ಮಾಡ ಮತ್ತು ಕುದುರೆ, ನವಿಲು, ಗಿಳಿಯ ಶಿಲ್ಪಗಳು –200

ಹಲವಾರು ವೈವಿಧ್ಯಮಯ ಶಿಲ್ಪಗಳನ್ನು ಕೆತ್ತನೆ ಮಾಡಿದ ಶ್ರಿ ಕರ್ಣಪ್ಪ ಶಿಲ್ಪಗಳು ಪ್ರತಿಯೊಂದು ಶಿಲ್ಪ ಕೆತ್ತನೆಯಲ್ಲಿ ಶ್ರಮ, ಧ್ಯಾನ, ಏಕಾಗ್ರತೆಯಿಂದ ಶಿಲ್ಪಗಳನ್ನು ರೂಪಿಸುತ್ತಾರೆ. ಮನೆಯ ತಲಬಾಗಿಲು, ಕುದುರೆ, ಗ್ರಾಮದೇವತೆ ಶಿಲ್ಪಗಳ ಕೆತ್ತನೆಯಂತೂ ಅಲಂಕಾರಿಕ ಮತ್ತು ಆಕರ್ಷಕ ನೆಲೆಯಲ್ಲಿ ರಚಿಸುತ್ತಾ ಅಷ್ಟೇ ವೈಭವದ ರೀತಿಯಲ್ಲಿ ಕಾಣುವಂತೆ ವರ್ಣಲೇಪನವನ್ನು ಮಾಡುತ್ತಾರೆ. ಸಾಮಾನ್ಯವಾಗಿ ಗ್ರಾಮದೇವತೆ ಮತ್ತು ದೇವರ ಪಲ್ಲಕ್ಕಿಗಳಿಗೆ ಕೆಂಪು, ನೀಲಿ, ಹಳದಿ, ಹಸಿರು, ಬಿಳಿ ವರ್ಣಗಳ ಸಂಯೋಜನೆ ಪ್ರಮುಖವಾಗಿರುತ್ತವೆ. ಮರಗೆತ್ತನೆಯ ಕಾರ್ಯದಲ್ಲಿ ಪುನಃ ತೊಡಗಿಸಿಕೊಂಡು ಶಿಲ್ಪಗಳನ್ನು ರಚಿಸುವುದರೊಂದಿಗೆ, ತನ್ನ ಕುಟುಂಬವನ್ನು ಸುದಾರಿಸುವುದರಲ್ಲಿಯೇ ಕಾಲ ಕಳೆದಿದ್ದಾರೆ. ಕರ್ಣಪ್ಪನವರಿಗೆ ಗುರುನಾಥ, ವೀರಣ್ಣ, ರಾಚಣ್ಣ, ಇಂದ್ರಮ್ಮ, ಭಾಗಿರಥಿ, ರಾಚಮ್ಮ, ರೇಣುಕಾ ಎಂಬ ಏಳು ಜನ ಮಕ್ಕಳಿದ್ದಾರೆ. ಗುರುನಾಥ ಮತ್ತು ರಾಚಣ್ಣ ಎಂಬ ಮಕ್ಕಳು ತಂದೆಯ ಹಾಗೆ ಶಿಲ್ಪ ಕೆತ್ತನೆಯ ಕಾಯಕದಲ್ಲಿ ಮುಂದುವರೆದಿದ್ದಾರೆ. ಬಡತನದ

ಬೇಗೆಯಲ್ಲಿ ಸಂಸಾರವನ್ನು ಸಾಗಿಸುವುದರೊಂದಿಗೆ, ಜನಪದರ ಆಚರಣೆಗೆ ಬೇಕಾಗುವ ಮೂಲ ಶಿಲ್ಪಕಲಾಕೃತಿಗಳನ್ನು ಮಾಡಿಕೊಡುವ ಮೂಲಕ ಜನರ ಮನ ಸೆಳೆದಿದ್ದಾರೆ.

ಗ್ರಾಮದೇವತೆ ಶಿಲ್ಪಗಳು, ಪಲ್ಲಕ್ಕಿಗಳು, ಪಡಸಾಲಿ ಜೋಡಣೆ, ಕುದುರೆ ಶಿಲ್ಪಗಳನ್ನು ಮಾಡುವುದರೊಂದಿಗೆ ರೈತರ ವ್ಯವಸಾಯಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಕೂಡ ಮಾಡಿದ್ದಾರೆ. ಸಗರನಾಡಿನ ಪ್ರಮುಖ ಜನಪದ ಶಿಲ್ಪಿಯಾದ ಕರ್ಣಪ್ಪನವರರಿಗೆ ಸರಕಾರದಿಂದ ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಮಾಶಾಸನವಾಗಲಿ, ಶಿಬಿರಗಳಾಗಲಿ ಗೌರವ ಪ್ರಶಸ್ತಿಗಳಾಗಲಿ, ಲಭಿಸಿರುವುದಿಲ್ಲ. ಪ್ರಸ್ತುತ ಈ ಶಿಲ್ಪಿಗೆ ಅರವತ್ತು ವಯಸ್ಸು ಪೂರೈಸಿವೆ.

ಮಲ್ಲೇಶಪ್ಪ ತಂದೆ ಸಂಗಪ್ಪ ಕಂಬಾರ

ದೋರನಹಳ್ಳಿ ಗ್ರಾಮದ ಶಿಲ್ಪಿ ಮಲ್ಲೇಶಪ್ಪನವರು ಸಗರನಾಡಿನ ಭಾಗದಲ್ಲಿ ಹಲವಾರು ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ ಅವುಗಳನ್ನು ಈ ಕೆಳಗಿನಂತೆ ಗಮನಿಸುಬಹುದು–

- ಕುದುರೆ ಶಿಲ್ಪಗಳು – 50
- ಮನೆಯ ತಲಬಾಗಿಲು – 20
- ಗೌರಿಮಾಡ – 50
- ಪಡಸಾಲಿ ಜೋಡಣೆ – 50

ಹಾಗೆಯೇ ರೈತರ ವ್ಯವಸಾಯಕ್ಕೆ ಸಂಬಂಧಿಸಿದ ಬಂಡಿ, ಕುರಿಗೆ, ಕುರಿಗೆಯ ಮಂಡಿ, ಚಕ್ಕಡಿ ಬಂಡಿಗಳು, ಕೊಡಲಿ ಕಾವು, ರಾವುಗಲ್ ಕುಂಟಿ, ಹೀಗೆ ಹಲವು ಬಗೆಯ ಜನಪದ ಶಿಲ್ಪಗಳನ್ನು ರಚಿಸಿದ್ದಾರೆ. ಬಡತನದ ಪರಿಸ್ಥಿತಿಯಲ್ಲಿಯೂ ಸಹ ತನ್ನ ವೃತ್ತಿ ಕಾಯಕ ಮಾತ್ರ ಬಿಟ್ಟಿಲ್ಲ, ಸಂಸಾರಿಕ ಜಂಜಾಟದೊಂದಿಗೆ, ಜೀವನ ಸಾಗಿಸುವುದರೊಂದಿಗೆ ಹಲವಾರು ಹಳ್ಳಿಗಳಲ್ಲಿ ಶಿಲ್ಪಕಲಾಕೃತಿಗಳನ್ನು ಮಾಡಿಕೊಟ್ಟಿದ್ದಾರೆ. ಜನಪದ ಜೀವನದ ಪ್ರಮುಖ ಕಲಾಕೃತಿಗಳನ್ನು ರಚಿಸುವುದರೊಂದಿಗೆ ಸಾಗಿದ ಶಿಲ್ಪಿ ಮಲ್ಲೇಶಪ್ಪನವರಿಗೆ ಸರಕಾರದಿಂದ ಹಾಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಪ್ರಶಸ್ತಿ, ಧನಸಹಾಯ, ಪುರಸ್ಕಾರಗಳು ಲಭಿಸಿಲ್ಲ. ಆದರೂ ಸಹ ಪ್ರಚಾರದ ಹಿಂದೆ ಬೀಳದೆ ಎಲೆಮರೆಯ ಕಾಯಿಯಂತೆ ತನ್ನ ಹೊಟ್ಟೆಪಾಡು

ಎನ್ನುವ ರೀತಿಯಲ್ಲಿ ಕಲೆಯ ವಲಯದಲ್ಲಿ ಜೀವಿಸಿದ್ದಾರೆ.

ಕುದುರೆ, ತಲಬಾಗಿಲುಗಳ ಕೆತ್ತನೆ ಸೃಜನಶೀಲ ಕಾರ್ಯದ ಸಂಕೇತವಾಗಿ ಮೂಡಿಬಂದಿವೆ. ಅವುಗಳನ್ನು ನೋಡುವುದಾದರೆ, ದೋರನಹಳ್ಳಿ, ಖಾನಾಪುರ, ಕುರುಕುಂದಿ, ಶಿರವಾಳ, ಮದ್ದರಕಿ, ಶಹಾಪುರ ಸೇರಿದಂತೆ ಹಲವಾರು ಗ್ರಾಮ ನಗರಗಳನ್ನನು ಗಮನಿಸಬಹುದಾಗಿದೆ. ಸಗರನಾಡಿನ ಜನಪದ ಶಿಲ್ಪಿಗಳ ಸಾಲಿನಲ್ಲಿ ಇವರು ಪ್ರಮುಖರೆಂಬುದು ಮರೆಯದ ಸಂಗತಿ.

ಗಂಗಾಧರ ತಂದೆ ಚನ್ನಬಸಪ್ಪ ವಿಶ್ವಕರ್ಮ

ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ತುಮಕೂರು ಗ್ರಾಮದ ಜನಪದ ಶಿಲ್ಪಿ ಗಂಗಾಧರವರು ಸಗರನಾಡಿನ ಶ್ರೇಷ್ಠ ಜನಪದ ಶಿಲ್ಪಿಗಳು ತನ್ನ ಬದುಕಿನೂದ್ದಕ್ಕೂ ಮರಗೆತ್ತನೆಯ ಹಾದಿಯಲ್ಲಿ ಶ್ರಮಿಸಿದವರು. ಯಾವುದೇ ಸರಕಾರದ ಸಂಘ ಸಂಸ್ಥೆಗಳ, ಪುರಸ್ಕಾರಗಳನ್ನು ಬಯಸದೇ ತನ್ನಷ್ಟಕ್ಕೆ ತಾನು ನಿರಂತರವಾಗಿ ಶಿಲ್ಪಕಲಾಕೃತಿಗಳನ್ನು ಸೃಷ್ಟಿಸುವುದರೊಂದಿಗೆ ಸಾಗಿದ್ದಾರೆ. ಮರ ಮಾಧ್ಯಮವೇ ಇವರ ಕಲಾಕೃತಿಗಳ ಜೀವ ಪಡೆಯುವಿಕೆ.ಕಲಾಕೃತಿಗಳ ಹುಟ್ಟಿಕೊಂಡಿರುವ ಹಲವು ಬಗೆಗಳು ಈ ಕೆಳಗಿನಂತೆ ಕಾಣುತ್ತೇವೆ.

- ಕುದುರೆ ಮುಖ ಶಿಲ್ಪಗಳು – 300
- ಗ್ರಾಮದೇತೆಗಳ ಶಿಲ್ಪಗಳು – 09
- ರಥಶಿಲ್ಪಗಳು – 01 ದ್ಯಾವಮ್ಮನ ರಥಶಿಲ್ಪ ತುಮಕೂರು, ಶಹಾಪುರ
- ಬಂಡಿಗಳು – 50
- ಪಲ್ಲಕ್ಕಿ ಶಿಲ್ಪಗಳು – 01 ತಿಮ್ಮಪ್ಪ ದೇವರ ಪಲ್ಲಕ್ಕಿ ತುಮಕೂರು, ಶಹಾಪುರ
- ಪಡಸಾಲಿ ಜೋಡಣೆ – 20

ತುಮಕೂರ, ಕದರಾಪೂರ, ಮಾಚನೂರು, ಕೋನಳ್ಳಿ, ಬಿಳ್ಹಾರ, ಬೆನಕನಹಳ್ಳಿ, ಸೇರಿದಂತೆ ಹಲವಾರು ಕಡೆಗಳಲ್ಲಿ ಕುದುರೆ, ಪಡಸಾಲಿ, ಗ್ರಾಮದೇವತೆ, ರಥಶಿಲ್ಪಿ ತಲಬಾಗಿಲು, ಬಂಡಿ, ಪಲ್ಲಕ್ಕಿ ಶಿಲ್ಪಗಳನ್ನು ಮಾಡಿಕೊಟ್ಟಿದ್ದಾರೆ.

ಗ್ರಾಮದೇವತೆ ಶಿಲ್ಪಕಲಾಕೃತಿಗಳನ್ನು ಈ ಕೆಳಗಿನಂತೆ ಕಾಣುತ್ತೇವೆ.

ಮರಗಮ್ಮ ದೇವಿಯ ಶಿಲ್ಪ	–	ಮಾಚನೂರು, ತಾ॥ ಶಹಾಪುರ ಜಿ॥ ಯಾದಗಿರಿ
ಮರಗಮ್ಮ ದೇವಿಯ ಶಿಲ್ಪ	–	ಬೆಂಡೆಬೆಂಬಳಿ ತಾ॥ ಶಹಾಪುರ ಜಿ॥ ಯಾದಗಿರಿ
ದ್ಯಾವಮ್ಮನ ಶಿಲ್ಪ	–	ಮಾಚನೂರು, ತಾ॥ ಶಹಾಪುರ ಜಿ॥ ಯಾದಗಿರಿ
ಮರೆಮ್ಮನ ದೇವಿಯ ಶಿಲ್ಪ	–	ಬೆನಕನಹಳ್ಳಿ ತಾ॥ ಶಹಾಪುರ ಜಿ॥ ಯಾದಗಿರಿ
ದ್ಯಾವಮ್ಮ ದೇವಿಯ ಶಿಲ್ಪ	–	ತುಮಕೂರು, ತಾ॥ ಶಹಾಪುರ ಜಿ॥ ಯಾದಗಿರಿ
ಮರಗಮ್ಮ ದೇವಿಯ ಶಿಲ್ಪ	–	ಕದರಾಪುರ ತಾ॥ ಶಹಾಪುರ ಜಿ॥ ಯಾದಗಿರಿ
ಮರಗಮ್ಮ ದೇವಿಯ ಶಿಲ್ಪ	–	ರೊಟ್ನಡಗಿ, ತಾ॥ ಶಹಾಪುರ ಜಿ॥ ಯಾದಗಿರಿ
ದ್ಯಾವಮ್ಮನ ದೇವಿಯ ಶಿಲ್ಪ	–	ಇಟಗಿ, ತಾ॥ ಶಹಾಪುರ ಜಿ॥ ಯಾದಗಿರಿ
ಮರೆಮ್ಮನ ದೇವಿಯ ಶಿಲ್ಪ	–	ಗೋನಾಲ, ತಾ॥ ಶಹಾಪುರ ಜಿ॥ ಯಾದಗಿರಿ

ಸಗರನಾಡಿನ ಭಾಗದಲ್ಲಿ ಗ್ರಾಮದೇವತೆ ಶಿಲ್ಪಗಳನ್ನು ಮಾಡುವುದರಲ್ಲಿ ಕೆಲವೇ ಶಿಲ್ಪಿಗಳಲ್ಲಿ ಗಂಗಾಧರ ಶಿಲ್ಪಿಯು ಪ್ರಮುಖವಾದವರು. ದೇವಿಯ ಶಿಲ್ಪ ಕೆತ್ತನೆಯಲ್ಲಿ ತಾಳ್ಮೆ, ಶ್ರದ್ಧೆ, ಭಕ್ತಿ, ಭಾವ ಎಲ್ಲವೂ ಸಮಾಧಾನದ ಪ್ರತೀಕವಾಗಿ ಶಿಲ್ಪಗಳನ್ನು ರಚಿಸುತ್ತಾರೆ. ಎಂಟು ಮತ್ತು ಹತ್ತು ಕೈಗಳನ್ನು ಹೊಂದಿದ ದೇವಿಯು ಅವತಾರ ರೂಪಿತ ಶಿಲ್ಪವಾಗಿ ಸಿಂಹ, ಆನೆ, ಹುಲಿ, ತಲಿಪಟರಾಯರೊಂದಿಗೆ ರೂಪಗೊಂಡಿದ್ದಾಳೆ. ಖಡ್ಗ, ಶಂಖ, ತ್ರಿಶೂಲ, ಗಧೆ, ಚಕ್ರ, ಹಾವು, ಡಮರು, ಕೊಡಲಿ ಸೇರಿದಂತೆ ಹಲವು ಆಯುಧ ಪರಿಕರಗಳನ್ನು ಹಿಡಿದುಕೊಂಡಿರುವ ಭಂಗಿಯಾಗಿ ದೇವಿಯ ಶಿಲ್ಪಗಳು ರಚನೆಯಾಗಿವೆ. ಕೆಂಪು, ಹಸಿರು, ಹಳದಿ, ಕಪ್ಪು, ವರ್ಣ ಲೇಪನ ಕಾರ್ಯ ಪ್ರಮುಖವಾಗಿ ಕಾಣಿಸುತ್ತದೆ. ಹಾಗೆಯೇ ಕುದುರೆ, ತಲಬಾಗಿಲುಗಳ ಕೆತ್ತನೆಯು ಸಹ ವಿವಿಧ ವಿನಾಸಗಳೊಂದಿಗೆ, ಅಂದವಾಗಿ ಕೆತ್ತನೆ ಮಾಡುತ್ತಾರೆ. ತನ್ನಷ್ಟಕ್ಕೆ ತಾನು ಶಿಲ್ಪಕಲಾಕೃತಿಗಳನ್ನು ರಚಿಸುತ್ತಿರುವ ಶಿಲ್ಪಿ ಗಂಗಾಧರ ಅವರಿಗೆ 85 ವರ್ಷ ಪೂರೈಸಿವೆ. ಆದರೂ ಸರಕಾರದಿಂದ ಮಾಶಾಸಾನ, ಪ್ರಶಸ್ತಿ, ಪುರಸ್ಕಾರಗಳು ಮಾತ್ರ ಲಭಿಸಿಲ್ಲ.

ದಿವಂಗತ ಶ್ರೀಧರ ತಂದೆ ಚನ್ನಬಸಪ್ಪ ವಿಶ್ವಕರ್ಮ

ಶಹಾಪುರ ತಾಲೂಕಿನ ತುಮಕೂರು ಗ್ರಾಮದ ಶಿಲ್ಪಿ ಗಂಗಾಧರ ಅವರ ಸಹೋದರನಾದ ಶ್ರೀಧರ ಅವರು ಅತ್ಯುತ್ತಮ ಜನಪದ ಶಿಲ್ಪಿಗಳಾಗಿದ್ದರು. ಅವರು ಬದುಕಿರುವಾಗ ಅನೇಕ ಜನಪದ ಪ್ರಕಾರದ ಶಿಲ್ಪಕಲಾಕೃತಿಗಳನ್ನು ರಚಿಸಿರುತ್ತಾರೆ. ಹಿರಿಯ ಶಿಲ್ಪಿ ಅಣ್ಣನಾದ ಗಂಗಾಧರವರು ತಿಳಿಸಿರುವಂತೆ ನನ್ನ ತಮ್ಮನಾದ ಶ್ರೀಧರನು ನನಗಿಂತಲೂ ಪ್ರತಿಭಾವಂತ ಶಿಲ್ಪಿಯಾಗಿದ್ದನು. ಸಗರನಾಡಿನ ಭಾಗದ ಹಲವಾರು ಗ್ರಾಮಗಳಲ್ಲಿ ಅನೇಕ ಮನೆಯ ತಲಬಾಗಿಲು ಕೆತ್ತನೆ, ಕುದುರೆ ಶಿಲ್ಪಗಳು, ಪಡಸಾಲಿ ಜೋಡಣೆ ಕೆಲಸ, ಗ್ರಾಮದೇವತೆ ಶಿಲ್ಪಗಳನ್ನು ಸಹ ಮಾಡಿಕೊಟ್ಟಿದ್ದಾರೆ. ಉದಾಃ ದೇವಿಯ ಶಿಲ್ಪ, ಕಾಕರಗಲ್ಲು ಗ್ರಾಮ, ತಾ.ದೇವದರ್ಗ ಜಿಲ್ಲೆ. ರಾಯಚೂರು, ಅಲ್ಲದೇ ತೆಲಂಗಾಣ ರಾಜ್ಯದ ಹಲವಡೆ ಗ್ರಾಮದೇವತೆ ಶಿಲ್ಪಗಳನ್ನು ವೈಭವದ ರೀತಿಯಲ್ಲಿ ಮಾಡಿಕೊಟ್ಟಿದ್ದಾರೆ.*

ಮನೆತನದ ವೃತ್ತಿಯಾದ ಬಡಿಗೇತನ ಕಾಯಕವನ್ನು ಅಣ್ಣ ಗಂಗಾಧರ ಅವರ ಜೊತೆಯಲ್ಲಿ ಮಾಡುತ್ತ ತನ್ನ ಪ್ರತಿಭೆಯನ್ನು ಅನಾವರಣಗೊಳಿಸಿದ್ದಾನೆ. ನಿರಂತರ ಶಿಲ್ಪಕಲಾಕೃತಿಗಳ ರಚನಾಕಾರ್ಯದಲ್ಲಿ ತೊಡಗಿದ ಶ್ರೀಧರರವರು ಆಕಸ್ಮಿಕವಾಗಿ ನಲವತ್ತೈದನೇ ವಯಸ್ಸಿನಲ್ಲಿ ನಿಧನರಾದರು. ಶಿಲ್ಪಿ ಶ್ರೀಧರವರು ನಮ್ಮೊಂದಿಗಿಲ್ಲದ್ದಿದ್ದರೂ ಅವರ ರಚಿಸಿದ ಹಲವಾರು ಕುದುರೆ, ತಲಬಾಗಿಲು, ಪಡಸಾಲಿ ಜೋಡಣೆ, ಗ್ರಾಮದೇವತೆ ಶಿಲ್ಪಗಳು ನಮ್ಮ ಜೊತೆಯಲ್ಲಿರುವದನ್ನು ಕಾಣುತ್ತೇವೆ. ಜನಪದರ ಆಚರಣೆ, ನಂಬಿಕೆ, ಬದುಕಿನ ಭಾಗವಾದ ಜನಪದ ಶಿಲ್ಪಗಳನ್ನು ರಚಿಸುತ್ತಲೇ ಬದುಕನ್ನು ಸವೆಸಿದ ದಿವಂಗತ ಶ್ರೀಧರ ಶಿಲ್ಪಿಯವರು ನಮ್ಮ ಸಗರನಾಡಿನ ಪ್ರತಿಭಾವಂತ ಶಿಲ್ಪಿ ಎಂಬುದನ್ನು ಎಂದೂ ಮರೆಯದ ಸಂಗತಿಯಾಗಿದೆ.

ಶಿಲ್ಪಿ ಶ್ರೀಧರ ಅವರ ಶಿಲ್ಪಕಲಾಕೃತಿಗಳ ವಿವಿಧತೆ ಈ ರೀತಿ ಗಮನಿಸಿರಿ.

- ಕುದುರೆ ಶಿಲ್ಪಗಳು – 50
- ಮನೆಯ ತಲಬಾಗಿಲು – 10
- ಪಡಸಾಲಿ ಜೋಡಣೆ – 05

ಸಂದರ್ಶನ – ಗಂಗಾಧರ ತಂದೆ ಚನ್ನಬಸಪ್ಪ ವಿಶ್ವಕರ್ಮ, ತುಮಕೂರು, ದಿನಾಂಕ: 02.03.2017

- ಗ್ರಾಮದೇವತೆ – 05
- ಗೌರಿಮಾಡ ಹಾಗೂ ರೈತರ ವ್ಯವಸಾಯ ಕೇಂದ್ರಿತ ಶಿಲ್ಪಗಳು ಪ್ರತಿಯೊಂದು ಶಿಲ್ಪಗಳ ರಚನೆ ವಸ್ತು ವಿಷಯದ ವೈವಿಧತೆಯಲ್ಲಿ ನೈಜ ಸ್ಥಿತಿಯ ಸಂಗತಿಗಳನ್ನು ಅಳವಡಿಸುತ್ತಾ, ಎಲೆ, ಹೂ, ಕಾಯಿ, ಬಳ್ಳಿಗಳು, ಪ್ರಾಣಿ, ಪಕ್ಷಿಗಳ ಸಮೂಹ ಇವರ ಶಿಲ್ಪ ಕಲಾಕೃತಿಗಳಲ್ಲಿ ಮೂಡಿ ಬಂದಿವೆ. ಅಷ್ಟೇ ಸಗರನಾಡಿನ ಜನಪದರ ಮನಸ್ಸನ್ನು ಅರಳಿಸಿ ಸದಾ ಶ್ರೇಷ್ಠತೆಗೆ ದಾರಿಮಾಡಿಕೊಂಡಿವೆ. ಅಣ್ಣ ಗಂಗಾಧರ ಅವರ ಶಿಲ್ಪಕಲಾ ವೈಶಿಷ್ಠತೆಯ ಹಾಗೇ ತಮ್ಮನಾದ ಶ್ರೀಧರ ಅವರ ಜನಪದ ಶಿಲ್ಪಕಲಾಕೃತಿಗಳ ಹರವು ಅಷ್ಟೇ ಪ್ರಮುಖ ಸ್ಥಾನವನ್ನು ಪಡೆದಿವೆ.

ದಿವಂಗತ ಕಾಡಪ್ಪ ಕದರಾಪುರ

ಯಾದಗಿರಿ ಜಿಲ್ಲೆ ಶಹಾಪುರ ತಾಲೂಕಿನ ಕದರಾಪುರ ಗ್ರಾಮದ ದಿವಂಗತ ಕಾಡಪ್ಪನವರು ಬದುಕಿರುವವರೆಗೂ ಜನಪದ ಶಿಲ್ಪಕಲಾಕೃತಿಗಳನ್ನು ರಚಿಸುತ್ತಲೇ ಜೀವನ ಮಾಡಿದವರು. ಬಡತನದ ಸಂಸಾರಿಕ ಜಂಜಾಟದೊಂದಿಗೆ ಬದುಕುತ್ತಾ ಹಲವು ಬಗೆಯ ಮರಗೆತ್ತನೆಯ ಶಿಲ್ಪಗಳನ್ನು ಮಾಡಿದ್ದಾರೆ ಸುತ್ತಮುತ್ತಲಿನ ಗ್ರಾಮಗಳಾದ ಬೆಂಡೆಬೆಂಬಳ್ಳಿ, ಕೋಡಾಲ, ಕೋನಾಳ, ತುಮಕೂರು, ಇಟಗಿ, ಅಬಿಶಾಳ, ರೊಟ್ನಡಗಿ, ಕದರಾಪುರ ಸೇರಿದಂತೆ ಹಲವಾರು ಹಳ್ಳಿಗಳಲ್ಲಿ ಶಿಲ್ಪಕಲಾ ಕೆಲಸ ಮಾಡುವುದರೊಂದಿಗೆ ಹೆಸರುವಾಸಿಯಾಗಿದ್ದಾರೆ. ಬೇವಿನ ಮರ, ಜಾಲಿಮರ, ಸಾಗವಾನಿ, ಮಡ್ಡಿ ಕಟ್ಟಿಗೆಗಳಿಂದ ಕುದುರೆ, ತಲಬಾಗಿಲು, ಪಡಸಾಲಿ ಜೋಡಣೆ ಕೆಲಸ, ಗೌರಿಮಾಡ, ಗ್ರಾಮದೇವತೆ ಶಿಲ್ಪಗಳನ್ನು ರಚಿಸುತ್ತಲೇ ಬದುಕು ಸವೆಸಿದವರು. ಜನಪದರ ಆಚರಣೆ ಮತ್ತು ಸಾಂಸ್ಕೃತಿಕ ಸೊಬಗಿನ ಶಿಲ್ಪಕಲಾಕೃತಿಗಳನ್ನು ಮಾಡುತ್ತಲೇ ಜೀವನ ಮಾಡಿದ ಕಾಡಪ್ಪನವರಿಗೆ ಸರಕಾರ, ಸಂಘ ಸಂಸ್ಥೆಗಳಿಂದ ಯಾವುದೇ ಗೌರವ, ಸಂಭಾವನೆ ಮತ್ತು ಪ್ರಶಸ್ತಿಗಳು ಲಭಿಸಲೆಯಿಲ್ಲ.

ಶಿಲ್ಪಿ ಕಾಡಪ್ಪನವರ ವಿಶೇಷತೆಯೆಂದರೆ ಗ್ರಾಮದೇವತೆ ಶಿಲ್ಪಗಳನ್ನು ಮಾಡುವುದರಲ್ಲಿ ಗ್ರಾಮದೇವತೆಯ ರೂಪ, ಅಲಂಕಾರ, ವೈಭವ, ಅವತಾರ ಎಲ್ಲವು ಜನಪದರ ನಂಬಿಕೆ ಮತ್ತು ಭಕ್ತಿಗೆ ಪೂರಕವಾಗುವಂತೆ ದೇವಿಯ ಮೂರ್ತಿಗಳನ್ನು ಕೆತ್ತನೆ ಮಾಡುತ್ತಿದ್ದರು. ಅಕಾಡೆಮಿಕ್ ವಲಯದ ಜ್ಞಾನ ಶಿಸ್ತನ್ನು ಅರಿಯದೇ ತನಗೆ ಹೇಗೆ ತಿಳಿಯುತ್ತದೆ ಮತ್ತು ಜನರ ನಂಬಿಕೆಗೆ

ಬರುವಂತೆ, ಧಾರ್ಮಿಕ ಪರಂಪರೆಯ ವಿದಾನದಂತೆ ದೇವಿಯ ಶಿಲ್ಪವನ್ನು ರೂಪಿಸಿದ್ದಾರೆ. ಎಂಟು ಮತ್ತು ಹತ್ತು ಕೈಗಳನ್ನು ಹೊಂದಿದ ದೇವತೆಯ ಕೈಗಳಲ್ಲಿ ಯುದ್ಧದ ಅವತಾರ ರೂಪದ ಸಾಮಗ್ರಿಗಳನ್ನು ಕೈಯಲಿ ಕೊಟ್ಟು ಆನೆ, ಸಿಂಹ, ಹುಲಿ, ರಾಕ್ಷಸರ ಮೇಲೆ ಆರ್ಭಟಿಸುವಂತೆ ಕಂಡುಬರುವ ಹಾಗೆ ರೂಪಿಸಿದ್ದಾರೆ. ಉದಾ: ಕದರಾಪುರ ಮರಗಮ್ಮನ ಶಿಲ್ಪ, ಕೋನಳ್ಳಿ ಮರಗಮ್ಮದೇವಿಯ ಶಿಲ್ಪ, ಬೆಂಡೆಬೆಂಬಳಿ ಗ್ರಾಮದ ದ್ಯಾವಮ್ಮನ ಶಿಲ್ಪಗಳನ್ನು ಗಮನಿಸಬಹುದು.

ಗ್ರಾಮದೇವತೆಗಳ ಶಿಲ್ಪಗಳಂತೆ ಮನೆಯ ತಲಬಾಗಿಲು, ಕುದುರೆಶಿಲ್ಪ, ಪಡಸಾಲಿ ಜೋಡಣೆ ಕೆಲಸವು ಸಹ ಅನೇಕ ಎಲೆ ಹೂ, ಬಳ್ಳಿ, ಪ್ರಾಣಿ, ಪಕ್ಷಿಗಳ ಸಮೂಹ ವಿನ್ಯಾಸದೊಂದಿಗೆ ಅಲಂಕಾರಿಕವಾಗಿ ಕೆತ್ತನೆ ಮಾಡಿದ್ದಾರೆ. ಬೃಹತ್ ಮನೆಯ ಪಡಸಾಲಿ ಜೋಡಣೆ ಕೆಲಸದೊಂದಿಗೆ ಕಂಬ ಬೋದು, ವಿವಿಧ ಪಟ್ಟಿಕೆಗಳು ಗೌರಿಮಾಡ ಸೇರಿದಂತೆ ಅನೇಕ ವಿನ್ಯಾಸಗಳ ಕೆತ್ತನೆಯೊಂದಿಗೆ, ದಿನನಿತ್ಯ ರೈತರಿಗೆ ಬೇಕಾಗುವ ಕುಂಟಿ, ತಾಳ, ಮಂಡಿ, ಮೇಳಿ, ಕೊರಪು, ಉದ್ದಿಗೆಗಳು, ಕುಂಟಿಯ ದಿಂಡು, ಕುರಿಗೆಯ ತಾಳಗಳು, ಹೀಗೆ ಹಲವಾರು ವೈವಿಧ್ಯಮಯ ರೈತರ ಬದುಕಿಗೆ ಬೇಕಾಗುವ ಶಿಲ್ಪಕಲಾಕೃತಿಗಳನ್ನು ಮಾಡಿಕೊಟ್ಟಿದ್ದಾರೆ. ಸಗರನಾಡಿನ ಜನಪದ ಕಲಾ ಪ್ರಕಾರದ ಶಿಲ್ಪಕಲಾಕೃತಿಗಳನ್ನು ರಚಿಸುವುದರಲ್ಲಿ ಕದರಾಪುರ ಗ್ರಾಮದ ದಿವಂಗತ ಕಾಡಪ್ಪನವರು ಅತ್ಯಂತ ಕ್ರಿಯಾಶೀಲ ಶಿಲ್ಪಿಗಳಾಗಿದ್ದರು.

ಮರೆಪ್ಪ ತಂದೆ ದೇವಿಂದ್ರಪ್ಪ ಕಂಬಾರ

ಯಾದಗಿರಿ ಜಿಲ್ಲೆ ಶಹಾಪುರ ತಾಲೂಕಿನ ಶಿರವಾಳ ಗ್ರಾಮದ ದೇವಿಂದ್ರಪ್ಪ ಶಿಲ್ಪಿಯವರ ಮಗನಾದ ಮರೆಪ್ಪನವರು ಸಗರನಾಡಿನ ಜನಪದ ಶಿಲ್ಪಿಗಳು, ಇವರು 06 ಜೂನ್ 1973ರಲ್ಲಿ ಜನಿಸಿದ್ದಾರೆ. ಮರಗೆತ್ತನೆಯ ಮಧ್ಯಮದಿಂದ ಅನೇಕ ಮನೆಯ ತಲಬಾಗಿಲುಗಳು, ಕುದುರೆ ಶಿಲ್ಪಗಳು, ಗೌರಿಮಾಡಗಳು, ಪಡಸಾಲಿ ಜೋಡಣೆ ಕೆಲಸವನ್ನು ಅತ್ಯಂತ ಕಲಾತ್ಮಕವಾಗಿ ಕೆತ್ತನೆ ಮಾಡಿದ್ದಾರೆ. ರಾಮಪೂರ, ಶಿರವಾಳ, ಅಚೇಲಿ, ಶಹಾಪೂರ, ಗೋಗಿ, ಹುರಸಗುಂಡಗಿ, ಸೇರಿದಂತೆ ಸಗರನಾಡಿನ ಹಲವು ಗ್ರಾಮಗಳಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಎಲೆ, ಹೂ, ಬಳ್ಳಿ, ಪಕ್ಷಿಗಳ ಸಮೂಹದ ಸಂಯೋಜನಾ ವಿನ್ಯಾಸಗಳು ನೋಡುಗರ ಮನ ಅರಳುವಂತೆ ಕೆತ್ತನೆ

ಮಾಡಿದ್ದಾರೆ. ಕಲೆಯಿಂದ ಸುಗಮವಾಗಿ ನಡೆದಿದೆ. ಇವರ ಶಿಲ್ಪಕಲೆಯ ಅಧ್ಯಯನಕ್ಕೆ ಗುರುಗಳಾಗಿ ನನ್ನ ತಂದೆ ದೇವಿಂದ್ರಪ್ಪನವರು ಎಂದು ತಿಳಿಸುತ್ತಾರೆ ಇವರ ಕಲೆಯ ಪ್ರಗತಿಗೆ ಕಾರಣ ಜನಪದರ ಆಸಕ್ತಿ ಮತ್ತು ಪರೋತ್ಸಾಇದ ಸಂದರ್ಭವನ್ನು ನೆನೆಯುತ್ತಾರೆ. ಕೇವಲ ಏಳನೇ ತರಗತಿ ಮಾತ್ರ ಓದಿದ ಶಿಲ್ಪಿ ಮರೆಪ್ಪನವರು ಜನಪದ ಶಿಲ್ಪಕಲಾಕೃತಿಗಳನ್ನು ರಚಿಸುವುದರಲ್ಲಿ ತುಂಬಾ ಕ್ರಿಯಾಶೀಲ ಮನಸ್ಸಿನವರಾಗಿದ್ದಾರೆ.

ಮಾನಪ್ಪ ತಂದೆ ಕಾಳಪ್ಪ ವಿಶ್ವಕರ್ಮ

ಈ ಶಿಲ್ಪಿಯು ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ದೊಡ್ಡ ಸಗರ ಗ್ರಾಮದವರು. 25 ಜೂನ್ 1944ರಲ್ಲಿ ಜನಿಸಿದ್ದಾರೆ. ಕೇವಲ ಆರನೇ ತರಗತಿ ಮಾತ್ರ ಓದಿದ ಈ ಶಿಲ್ಪಿ ಸಿಮೆಂಟ್ ಮಾಧ್ಯಮದಿಂದ ಜನಪದ ಕಲಾಕೃತಿಗಳನ್ನು ರಚಿಸುವಲ್ಲಿ ಪ್ರಮುಖರು, ಸಗರ, ಮಹಲ್ ರೋಜಾ, ಶಿರವಾಳ, ಸೇರಿದಂತೆ ಅನೇಕ ಗ್ರಾಮಗಳಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಸಿಂಹ, ಹುಲಿ, ದೇವರ ವಿಗ್ರಹಗಳು, ನಂದಿ, ಹಾವು, ನವಿಲು, ಹೀಗೆ ಹಲವಾರು ಪ್ರಾಣಿಗಳನ್ನು ಸಿಮೆಂಟ್‌ನಲ್ಲಿ ಮಾಡಿದ್ದಾರೆ. ಯಾವುದೇ ಅಕಾಡೆಮಿಕ ವಲಯದ ಅಧ್ಯಯನವಿಲ್ಲದೆ ತನಗೆ ಹೇಗೆ ತಿಳಿಯುತ್ತದೆಯೋ ಹಾಗೆ ಶಿಲ್ಪಗಳನ್ನು ರಚಿಸುವ ಕಾರ್ಯದಲ್ಲಿ ಸದಾ ನಿರತರಾಗಿರುತ್ತಾರೆ. ಸಿಮೆಂಟ್ ಮಾಧ್ಯಮದಿಂದ ಶಿಲ್ಪಗಳನ್ನು ರೂಪಿಸುವುದರೊಂದಿಗೆ, ಅವುಗಳಿಗೆ ವರ್ಣಮಯವಾದ ಬಣ್ಣ ಲೇಪನವನ್ನು ಸಹ ಪರಿಣಾಮಕಾರಿಯಾಗಿ ಮಾಡುತ್ತಾರೆ. ದೇವಸ್ಥಾನ ದೇವರ ವಿಗ್ರಹಗಳನ್ನು ಮಾಡುತ್ತಲೇ ಬದುಕನ್ನು ಸಾಗಿಸುತ್ತಿರುವ ಶಿಲ್ಪಿ ಮಾನಪ್ಪನವರ ಸಂಸಾರಿಕ ಜೀವನ ಹರ್ಷಮಯವಾಗಿ ಮುಂದುವರೆದಿದೆ. ಜನಪದ ಕಲಾ ಪ್ರಕಾರದ ಶಿಲ್ಪಗಳನ್ನು ಮಾಡುತ್ತಿರುವ ಈ ಶಿಲ್ಪಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಪ್ರಶಸ್ತಿ ಪುರಸ್ಕಾರಗಳು ಲಭಿಸಿರುವುದಿಲ್ಲ.

ಸುರೇಂದ್ರ ಕೆ. ವಿಶ್ವಕರ್ಮ

ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಕೊಳ್ಳೂರು ಎಂ. ಗ್ರಾಮದವರಾದ ಇವರು 28 ಜೂನ್, 1969ರಂದು ಜನಿಸಿದರು. ಶಿಲ್ಪಕಲೆಯಲ್ಲಿ ಡಿಪ್ಲೋಮಾ ಬಿಎಸ್.ಸಿ, ಮತ್ತು ಎಂ.ವಿ.ಎ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಜನಪದರು ದೇವರೆಂದು ಪೂಜಿಸುವ

ಹಲವಾರು ಮೂರ್ತಿ ಶಿಲ್ಪಗಳನ್ನು ಕೆತ್ತನೆ ಮಾಡುವುದರೊಂದಿಗೆ ಸಗರನಾಡಿನ ಜನತೆಯಲ್ಲಿ ಅತ್ಯುತ್ತಮ ಶಿಲ್ಪಿಯಾಗಿ ಹೊರ ಹೊಮ್ಮಿದ್ದಾರೆ. ನಾಡಿನ ವಿವಿಧೆಡೆ ಕಲಾಶಿಬಿರಗಳು ಕಾರ್ಯಗಾರಗಳಲ್ಲಿ ಭಾಗವಹಿಸಿ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ. ಹಂಪಿ ಉತ್ಸವ, ನುಡಿಹಬ್ಬ (ಕ.ವಿ.ವಿ. ಹಂಪಿ) ಅಲ್ಲದೇ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಂದ 2007ರಲ್ಲಿ ಕಲಾಕೃತಿಗೆ ಬಹುಮಾನವನ್ನು ಪಡೆದಿದ್ದಾರೆ. ಪ್ರಸ್ತುತ ಅದೇ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿಯೂ ಉತ್ತಮ ಸೇವೆ ಸಲಿಸಿದ ಕೀರ್ತಿ ಇವರಿಗಿದೆ. ಕಾಳಿಕಾದೇವಿ, ಗಣೇಶ, ದೇವರ ಗರ್ಭಗುಡಿಯ ಬಾಗಿಲು ಕೆತ್ತನೆ ಹೀಗೆ ನೂರಾರು ಶಿಲ್ಪಗಳನ್ನು ಕಲ್ಲು ಮಾಧ್ಯಮದಿಂದ ಅರಳಿಸಿದ್ದಾರೆ. ಇವರ ಕಲೆ ಮತ್ತು ಬದುಕು ಸಗರನಾಡಿನ ವಲಯಕ್ಕೆ ಮಾದರಿಯ ರೀತಿಯಲ್ಲಿ ಹೆಚ್ಚಿಸಿಕೊಂಡಿದ್ದಾರೆ. ಮುಂದೆ ಸುರೇಂದ್ರ ಶಿಲ್ಪಿಯವರ ಕಲಾ ಸೇವೆ ಸರಕಾರ ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ನಡೆಯಬೇಕಾಗಿದೆ.

ಗಾಯತ್ರಿ ಎಸ್. ವಿಶ್ವಕರ್ಮ

ಶಹಾಪೂರ ತಾಲೂಕಿನ ಕೊಳ್ಳೂರು (ಎಂ) ಗ್ರಾಮದ ಸುರೇಂದ್ರ ಶಿಲ್ಪಿಯವರ ಪತ್ನಿಯಾದ ಗಾಯತ್ರಿಯವರು ಜನಪದ ಕಲಾ ಪರಂಪರೆಯ ಶಿಲ್ಪಗಳನ್ನು ರಚಿಸುವುದರಲ್ಲಿ ಪ್ರಮುಖ ಮಹಿಳಾ ಶಿಲ್ಪಿಗಳಾಗಿದ್ದಾರೆ. ಗಾಯತ್ರಿಯವರು ತಂದೆ ದೇವಿಂದ್ರಪ್ಪ ತಾಯಿ ಸರಸ್ವತಿ (ಶಿರವಾಳ ತಾ. ಶಹಾಪುರ) ಯವರ ಮಗಳಾಗಿ ಜನಿಸಿದರು. ಮುಂದೆ ಮದುವೆಯಾದ ನಂತರ ಪತಿ ಸುರೇಂದ್ರ ಶಿಲ್ಪಿಗಳು ಹಾಗೂ ಶಕುಂತಲಾ ಎಂ. ಬಡಿಗೇರವರು ಉತ್ತಮ ಮಾರ್ಗದರ್ಶನ ಮಾಡುವುದರೊಂದಿಗೆ ಪ್ರೋತ್ಸಾಹಿಸಿದ್ದಾರೆ. ಅಂತೆಯೇ ಶಿಲ್ಪಿ ಗಾಯತ್ರಿಯವರು 2005ರಿಂದ ನಿರಂತರವಾಗಿ ಜನಪದ ಕಲಾ ಪ್ರಕಾರದ ಅನೇಕ ಶಿಲ್ಪಗಳನ್ನು ರಚಿಸಿದ್ದಾರೆ. ಉದಾಃ ಮಾಯೆ ಮರ್ತೆಪ್ಪ ಗೌರಿ ಮುಖ, ಗಣಪತಿ, ಶಿವ, ಪಾರ್ವತಿ, ಸೇರಿದಂತೆ ಅನೇಕ ಶಿಲ್ಪಗಳು ಜನಪದ ಕಲಾಶೈಲಿಯಲ್ಲಿ ರಚಿಸಿದ್ದಾರೆ. ಹಲವು ಶಿಲ್ಪಗಳು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಗಳಲ್ಲಿ ಪ್ರದರ್ಶನಗೊಂಡಿವೆ. ಇವರ ಶಿಲ್ಪಕಲೆಯ ಅರ್ಥ ಮತ್ತು ಹೊಳಪುಗಳೆಲ್ಲವು ಜನಪದ ಕಲಾ ಪರಂಪರೆಯ ನೆನಪುಗಳನ್ನು ಪ್ರತಿಬಿಂಬಿಸುತ್ತವೆ. ಇವರ ಪತಿಯಾದ ಶ್ರೀ ಸುರೇಂದ್ರ ವಿಶ್ವಕರ್ಮ ಅವರು ಸಾಂಪ್ರದಾಯಿಕ ಶಿಲಾ ಮಾಧ್ಯಮದ ಶಿಲ್ಪಗಳನ್ನು ಕೆತ್ತನೆ ಮಾಡುವುದರಲ್ಲಿ ಪ್ರಮುಖವಾಗಿ

ಚನ್ನೂರ (ಜೆ) ಗ್ರಾಮದ ಶಿಲ್ಪಿ ಬನ್ನಪ್ಪ ಬಡಿಗೇರ ಮತ್ತು ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಬನ್ನಪ್ಪ ಬಡಿಗೇರ ಅವರು ಕುದುರೆ ಕೆತ್ತನೆಯಲ್ಲಿ



ಚನ್ನೂರ (ಜೆ) ಗ್ರಾಮದ ದ್ಯಾವಮ್ಮ ದೇವಿಯ ಶಿಲ್ಪ



ಚನ್ನೂರ (ಜೆ) ಗ್ರಾಮದ ಮರಗಮ್ಮ ದೇವಿಯ ಶಿಲ್ಪ

ಅನವಾರ ಗ್ರಾಮದ ಕಾಶೀಪತಿ ಬಡಿಗೇರ ಮತ್ತು ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಕಾಶೀಪತಿ ಬಡಿಗೇರ ಅವರು ಕುದುರೆ ಕೆತ್ತನೆಯಲ್ಲಿ



ಗಂಗೆ ಗೌರಿ ಮತ್ತುಶೀಗಮ್ಮನ ಶಿಲ್ಪ



ಹತ್ತಿಕುಣಿ ಗ್ರಾಮದ ದೇವಿಯ ಶಿಲ್ಪ

ಸಗರ ಗ್ರಾಮದ ಶಿಲ್ಪಿ ಮಲ್ಲಯ್ಯ ತಂದೆ ಕಾಳಪ್ಪ ವಿಶ್ವಕರ್ಮ ಅವರ ಕಲಾಕೃತಿಗಳು



ಶಿಲ್ಪಿ ಮಲ್ಲಯ್ಯ ತಂದೆ ಕಾಳಪ್ಪ ವಿಶ್ವಕರ್ಮ ಅವರು ಕುದುರೆ ಕೆತ್ತನೆಯಲ್ಲಿ



ಕುದುರೆ ಶಿಲ್ಪ

ಸಗರ ಗ್ರಾಮದ ಶಿಲ್ಪಿ ದಿ॥ ಭಗವಂತಪ್ಪ ಆಚಾರ್ಯ ಅವರ ಭಾವಚಿತ್ರ



ಸಗರ ಗ್ರಾಮದ ಶಿಲ್ಪಿ ದಿ॥ ಭಗವಂತಪ್ಪ ಆಚಾರ್ಯ ಅವರ ಶಿಲ್ಪಕಲಾಕೃತಿಗಳು



ತಿಂಥಣಿ ಮೌನೇಶ್ವರರ ಶಿಲ್ಪ



ಗೌರಿ ಶಿಲ್ಪ

ಸಗರ ಗ್ರಾಮದ ಶಿಲ್ಪಿ ಕಾಳಪ್ಪ ತಂದೆ ತಿಪ್ಪಣ್ಣ ಬಡಿಗೇರ ಮತ್ತು ಅವರ ಶಿಲ್ಪಕಲಾಕೃತಿಗಳು




ಶಿಲ್ಪಿ ಕಾಳಪ್ಪನವರ ಭಾವಚಿತ್ರ



ಸಗರ ಗ್ರಾಮದ ಶಿಲ್ಪಿ ಕಾಳಪ್ಪ ತಂದೆ ತಿಪ್ಪಣ್ಣ ಬಡಿಗೇರ ಅವರ ಶಿಲ್ಪ ಕಲಾಕೃತಿ

ಸಗರ ಗ್ರಾಮದ ಶಿಲ್ಪಿ ಶಶಿಕುಮಾರ ತಂದೆ ಭಗವಂತಪ್ಪ ಆಚಾರ್ಯ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಶಶಿಕುಮಾರ ಅವರ ಸಿಂಹಾಸನ ಕಲಾಕೃತಿ



ಮರಗಮ್ಮ ಮತ್ತು ಕೊಡತೆಪ್ಪ ದೇವರ ಶಿಲ್ಪ



ಸೃಜನಾತ್ಮಕ ಬಾಗಿಲ ಕದ ಶಿಲ್ಪ

ಶಿರವಾಳ ಗ್ರಾಮದ ಶಿಲ್ಪಿ ದಿ॥ ದೇವಿಂದ್ರಪ್ಪ ವಿಶ್ವಕರ್ಮ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ದಿ॥ ದೇವಿಂದ್ರಪ್ಪ ವಿಶ್ವಕರ್ಮ



ತಲಬಾಗಿಲ ಶಿಲ್ಪ



ಸೃಜನಾತ್ಮಕ ಬಾಗಿಲ ಬೋದಿಗೆ ಶಿಲ್ಪ

ಶಿರವಾಳ ಗ್ರಾಮದ ಶಿಲ್ಪಿ ಸಿದ್ದಲಿಂಗಪ್ಪ ತಂದೆ ದೇವಿಂದ್ರಪ್ಪ ಕಂಬಾರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಶಿಲ್ಪಿ ಸಿದ್ದಲಿಂಗಪ್ಪ ತಂದೆ ದೇವಿಂದ್ರಪ್ಪ ಅವರು ಕುದುರೆ ಕೆತ್ತನೆಯಲ್ಲಿ



ಪಡಸಾಲಿ ಜೋಡಣೆಯ ಶಿಲ್ಪ



ಪಡಸಾಲಿ ಜೋಡಣೆಯ ಶಿಲ್ಪ

ಶಹಾಪುರ ತಾಲೂಕಿನ ಶಿರವಾಳ ಗ್ರಾಮದ
ಶಿಲ್ಪಿ ಮರೆಪ್ಪ ತಂದೆ ದೇವಿಂದ್ರಪ್ಪ ಕಂಬಾರ ಅವರ ಕಲಾಕೃತಿಗಳು



ಶಿಲ್ಪಿ ಮರೆಪ್ಪ ಕಂಬಾರ ಅವರ ಭಾವಚಿತ್ರ



ಪಡಸಾಲೆ ಜೋಡಣೆಯ ಶಿಲ್ಪ

ದೋರನಹಳ್ಳಿ ಗ್ರಾಮದ ಶಿಲ್ಪಿ ಕರ್ಣಪ್ಪ ತಂದೆ ಗುರಪ್ಪ ಕಂಚಗಾರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಕರ್ಣಪ್ಪ ತಂದೆ ಗುರಪ್ಪ ಕಂಚಗಾರ



ಪಲ್ಲಕ್ಕಿ ಶಿಲ್ಪ



ಸೃಜನಾತ್ಮಕ ಗ್ರಾಮದೇವತೆ ಶಿಲ್ಪ

ಶಹಾಪೂರ ತಾಲೂಕಿನ ದೋರನಹಳ್ಳಿ ಗ್ರಾಮದ
ಶಿಲ್ಪಿ ಮಲ್ಲೇಶಪ್ಪ ತಂದೆ ಸಂಗಪ್ಪ ಕಂಬಾರ ಅವರ ಕಲಾಕೃತಿಗಳು



ಶಿಲ್ಪಿ ಮಲ್ಲೇಶಪ್ಪ ಅವರ ಭಾವಚಿತ್ರ



ತಲ ಬಾಗಿಲ ಶಿಲ್ಪ

ತುಮಕೂರ ಗ್ರಾಮದ ಶಿಲ್ಪಿ ಗಂಗಾಧರ ತಂದೆ ಚನ್ನಬಸಪ್ಪ ಬಡಿಗೇರ ಅವರ ಭಾವಚಿತ್ರ



ಶಿಲ್ಪಿ ಗಂಗಾಧರ ಬಡಿಗೇರ ಅವರ ಶಿಲ್ಪಕಲಾಕೃತಿಗಳು




ಗ್ರಾಮ ದೇವತೆ ಮರಗಮ್ಮ ದೇವಿಯ ಶಿಲ್ಪ
ಬೆನಕನಹಳ್ಳಿ ಶಹಾಪುರ ತಾ॥



ದ್ಯಾವಮ್ಮನ ಶಿಲ್ಪ ಮಾಚನೂರ ಗ್ರಾಮ ಶಹಾಪುರ ತಾ॥

ಕದರಾಪೂರ ಗ್ರಾಮದ ಶಿಲ್ಪಿ ದಿ॥ ಕಾಡಪ್ಪ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಕಾಡಪ್ಪ ಕದರಾಪೂರ ಅವರ ಭಾವಚಿತ್ರ



ಮರಗಮ್ಮ ದೇವಿಯ ಶಿಲ್ಪ



ಮರಗಮ್ಮದೇವಿ ಶಿಲ್ಪ

ಶಹಾಪುರ ತಾಲೂಕಿನ ದೊಡ್ಡಸಗರ ಗ್ರಾಮದ
ಶಿಲ್ಪಿ ಮಾನಪ್ಪ ತಂದೆ ಕಾಳಪ್ಪ ವಿಶ್ವಕರ್ಮ ಅವರ ಕಲಾಕೃತಿಗಳು



ಶಿಲ್ಪಿ ಮಾನಪ್ಪ ಅವರ ಭಾವಚಿತ್ರ



ಸಿಮೆಂಟ್ ಶಿಲ್ಪ

ಶಹಾಪುರ ತಾಲೂಕಿನ ಕೊಳ್ಳೂರು ಎಂ. ಗ್ರಾಮದ
ಶಿಲ್ಪಿ ಸುರೇಂದ್ರ ಕೆ. ವಿಶ್ವಕರ್ಮ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಸುರೇಂದ್ರ ಕೆ. ವಿಶ್ವಕರ್ಮ ಅವರ ಭಾವಚಿತ್ರ



ಶಿಲಾ ಮಾಧ್ಯಮದ ದೇವತಾ ಶಿಲ್ಪ

ಕಂಡು ಬರುತ್ತಾರೆ. ಅಂತಹ ಶಿಲ್ಪಿಯ ಮಡದಿಯಾಗಿ ಶ್ರೀಮತಿ ಗಾಯತ್ರಿ ಶಿಲ್ಪಿಗಳು ಕಲೆಯಲ್ಲಿ ಮುಂದುವರೆದಿದ್ದಾರೆ.

ಸುರಪುರ ತಾಲೂಕಿನ ಜನಪದ ಶಿಲ್ಪಗಳು

ಶಹಾಪುರ ತಾಲೂಕಿನ ಜನಪದ ಶಿಲ್ಪಿಗಳನ್ನು ಗಮನಿಸಿದ ಹಾಗೆ ಸುರಪುರ ತಾಲೂಕಿನ ಹಲವು ಶಿಲ್ಪಿಗಳ ಕಲೆ, ಮತ್ತು ಬದುಕನ್ನು ಈ ರೀತಿಯಲ್ಲಿ ಕಾಣುತ್ತೇವೆ. ಸುರಪುರ ಎಂದರೆ ಶೂರರ ಪುರವೆಂದು ಪ್ರಸಿದ್ಧಿ ಪಡೆದಿದೆ. ಸ್ವಾತಂತ್ರ್ಯವು ಸಂಗ್ರಾಮದ ಸಂದರ್ಭದಲ್ಲಿ ಹೋರಾಡಿದ ಸುರಪುರ ದೊರೆಗಳ ಆಳ್ವಿಕೆಯ ನಡು, ಹಾಗೆಯೇ ಕಲೆ, ಸಾಹಿತ್ಯ, ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಕಂಗೊಳಿಸುವ ಸರಪುರ ತಾಲೂಕಿನಲ್ಲಿ ಅನೇಕ ಜನಪದ ಪ್ರಕಾರದ ಶಿಲ್ಪಿಗಳು ತಮ್ಮ ಕಲಾಸೇವೆಯನ್ನು ಗೈದಿದ್ದಾರೆ. ಅಂತಹವರ ಕಲಾ ಸಾಧಕರ ವಿವರಣಾತ್ಮಕತೆಯನ್ನು ಇಲ್ಲಿ ಕಾಣಬಹುದಾಗಿದೆ.

1) ಮಾನಪ್ಪ ತಂದೆ ಗಣಪತಿ ಬಡಿಗೇರ – ದೇವಾಪುರ

2) ಗಂಗಪ್ಪ ತಂದೆ ಕಾಳಪ್ಪ ಬಡಿಗೇರ – ದೇವಾಪುರ ತಾ. ಸುರಪುರ

3) ಶಂಭುಲಿಂಗಪ್ಪ ತಂದೆ ಕಾಳಪ್ಪ ಬಡಿಗೇರ – ಪ್ರತಿಹಸ್ತ ದೇವಾಪುರ, ತಾ. ಸುರಪುರ

4) ಶಾಂತಮೂರ್ತಿ ತಂದೆ ಕಾಳಪ್ಪ – ಕೋನಾಳ ತಾ. ಸುರಪುರ

5) ಮಲ್ಲಿಕಾರ್ಜುನ ತಂದೆ ಕಾಳಪ್ಪ – ಕೋನಾಳ ತಾ. ಸುರಪುರ

6) ಗುರುಬಸಪ್ಪ ತಂದೆ ದೇವಿಂದ್ರಪ್ಪ – ಕೋನಾಳ ತಾ. ಸುರಪುರ

7) ಮಲ್ಲಿಕಾರ್ಜುನ ತಂದೆ ಗುರುಬಸಪ್ಪ – ಕೋನಾಳ ತಾ. ಸುರಪುರ

8) ಈರಣ್ಣ ತಂದೆ ಗುರುಬಸಪ್ಪ – ಕೋನಾಳ ತಾ. ಸುರಪುರ

9) ಅವಣೆಪ್ಪ ತಂದೆ ಭದ್ರಪ್ಪ ಪತ್ತಾರ – ಕೊಡೆಕಲ್ ತಾ. ಸುರಪುರ

10) ಭದ್ರಪ್ಪ ತಂದೆ ಅವಣೆಪ್ಪ ಪತ್ತಾರ – ಕೊಡೆಕಲ್ ತಾ. ಸುರಪುರ

11) ಬಸಣ್ಣ ಕಂಚಗಾರ, – ಕೊಡೆಕಲ್ ತಾ. ಸುರಪುರ

---

* ಸಂದರ್ಶನ: ಮಾನಪ್ಪ ತಂದೆ ಗಣಪತಿ ಬಡಿಗೇರ – ದೇವಾಪುರ ದಿನಾಂಕ: 03.03.2017

* ಬಾಗಿಲು ಕೆತ್ತನೆಯಲ್ಲಿ ವಿಶೇಷ ಆಸಕ್ತಿ ಇದೆ. ಹೂ, ಎಲೆ, ಬಳ್ಳಿ ವಿನ್ಯಾಸದೊಂದಿಗೆ, ಹಲವು ಸಗರನಾಡಿನ ದೇವತೆ ಚಿತ್ರಗಳನ್ನು ಬಾಗಿಲ ಮಣೆಯ ಮೇಲೆ ಕೆತ್ತನೆ ಮಾಡಿದ್ದಾರೆ.

12) ಕರಣಪ್ಪ ತಂದೆ ಬಸಣ್ಣ ಕಂಚಗಾರ – ಕೊಡೆಕಲ್ ತಾ. ಸುರಪುರ

13) ಮೇಘರಾಜ ತಂದೆ ಕಾಳಪ್ಪ ಪತ್ತಾರ – ನಾರಾಯಣಪುರ ತಾ. ಸುರಪುರ

14) ಪ್ರಭುಲಿಂಗ ತಂದೆ ಗಂಗಪ್ಪ ವಿಶ್ವಕರ್ಮ – ಮಾಳನೂರು ತಾ. ಸುರಪುರ

15) ಕಾಳಪ್ಪ ತಂದೆ ದೇವಿಂದ್ರಪ್ಪ ಬಡಿಗೇರ – ಹುಣಸಗಿ ತಾ. ಸುರಪುರ

16) ಗೋವಿಂದಪ್ಪ ಭೀಮಣ್ಣ ಕುದುರಿಮನೆ – ಸುರಪುರ ತಾ. ಸುರಪುರ

17) ಮರೆಪ್ಪ ತಂದೆ ಭೀಮಣ್ಣ ಕುದರಿಮನೆ – ಸುರಪುರ ತಾ. ಸುರಪುರ

18) ನಿಂಗಯ್ಯ ಎಂ ಗಣಾಚಾರಿ – ಕಲ್ಲದೇವನಹಳ್ಳಿ ತಾ. ಸುರಪುರ

19) ನಾಡೋಜ ನಾಗಣ್ಣ ಮೋನಪ್ಪ ಬಡಿಗೇರ – ಗೋನಾಲ (ಎಸ್.ಡಿ) ತಾ. ಸುರಪುರ

20) ಬಸಣ್ಣ ತಂದೆ ಮೋನಪ್ಪ ಬಡಿಗೇರ – ಗೋನಾಲ (ಎಸ್.ಡಿ) ತಾ. ಸುರಪುರ

21) ಮಾನಯ್ಯ ತಂದೆ ನಾಗಣ್ಣ ಬಡಿಗೇರ – ಗೋನಾಲ (ಎಸ್.ಡಿ) ತಾ. ಸುರಪುರ

22) ಶಕುಂತಲಾ ಎಂ. ಬಡಿಗೇರ – ಗೋನಾಲ (ಎಸ್.ಡಿ) ತಾ. ಸುರಪುರ

23) ಮಲ್ಲಿಕಾರ್ಜುನ ಬಸಣ್ಣ ಚಿಕನಳ್ಳಿ – ಹಂದ್ರಾಳ ಗೋನಾಲ ತಾ. ಸುರಪುರ

24) ನಿರ್ಮಲಾ ಎಂ ಚಿಕನಳ್ಳಿ – ಹಂದ್ರಾಳ ಗೋನಾಲ ತಾ. ಸುರಪುರ

25) ಶ್ರೀಶೈಲ ತಂದೆ ಬಸಣ್ಣ ಬಡಿಗೇರ – ಹಂದ್ರಾಳ ಗೋನಾಲ ತಾ. ಸುರಪುರ

26) ಪವಿತ್ರಾ ಎಸ್.ಬಡಿಗೇರ – ಹಂದ್ರಾಳ ಗೋನಾಲ ತಾ. ಸುರಪುರ

27) ಮಾಧುರಿ ಮಾನಯ್ಯ ಬಡಿಗೇರ – ಗೋನಾಲ (ಎಸ್.ಡಿ) ತಾ. ಸುರಪುರ

28) ವರದರಾಜ ಮಾನಯ್ಯ ಬಡಿಗೇರ – ಗೋನಾಲ (ಎಸ್.ಡಿ) ತಾ. ಸುರಪುರ

29) ಪೃಥ್ವಿರಾಜ ಮಾನಯ್ಯ ಬಡಿಗೇರ – ಗೋನಾಲ (ಎಸ್.ಡಿ) ತಾ. ಸುರಪುರ

30) ಮೌನೇಶ ಬಸಣ್ಣ ಬಡಿಗೇರ – ಹಂದ್ರಾಳ ಗೋನಾಲ ತಾ. ಸುರಪುರ

31) ಚಂದ್ರಶೇಖರ ವೈ – ಕಕ್ಕೇರಾ ತಾ. ಸುರಪುರ ಜಿ. ಯಾದಗಿರಿ

32) ಗಾಯತ್ರಿ ಚಂದ್ರಶೇಖರ – ಕಕ್ಕೇರಾ ತಾ. ಸುರಪುರ ಜಿ. ಯಾದಗಿರಿ

33) ಮೌನೇಶ ಕಾಳಪ್ಪ – ಕಕ್ಕೇರಾ ತಾ. ಸುರಪುರ ಜಿ. ಯಾದಗಿರಿ

34) ಕಾಳಪ್ಪ ತಂದೆ ಶರಬಣ್ಣ – ನಾರಾಯಣಪುರ ತಾ. ಸುರಪುರ

35) ಶರಣಪ್ಪ ತಂದೆ ಈರಣ್ಣ ಪತ್ತಾರ – ಕೊಡೆಕಲ್ ತಾ. ಸುರಪುರ

36) ಮಾನಪ್ಪ ವೀರಸಂಗಪ್ಪ ಪತ್ತಾರ – ಕೊಡೆಕಲ್ ತಾ. ಸುರಪುರ

ಎಲೆ ಮರೆಯ ಕಾಯಿಯಂತೆ ತೆರೆಮರೆಯ ಶಿಲ್ಪಿಗಳಾಗಿ ತಮ್ಮ ಜೀವನದ ಕಾಯಕವನ್ನಾಗಿಸಿಕೊಂಡು ಜನಪದ ಶಿಲ್ಪಕಲಾಕೃತಿಗಳನ್ನು ಮಾಡುವುದರಲ್ಲಿಯೇ ಕಾಲ ಕಳೆದ ಅನೇಕ ಶಿಲ್ಪಿಗಳು ಹೇಳಿದ ಶಿಲ್ಪಿಗಳ ಹೆಸರಿನ ಪಟ್ಟಿಯಂತೆ ಅವರ ಕಲಾಕೃತಿಯ ವಿವರಿಸಲಾಗಿದೆ. ಪ್ರತಿಯೊಬ್ಬರು ರಚಿಸಿದ ಶಿಲ್ಪಕಲಾಕೃತಿಗಳ ವರ್ಗೀಕರಣ, ಅವುಗಳು ಯಾವ–ಯಾವ ನೆಲೆಗಳಲ್ಲಿ ಹೇಗೆ ಪಸರಿಸಿಕೊಂಡಿವೆ ಎಂಬುದನ್ನು ನೋಡಬಹುದಾಗಿದೆ. ಅಲ್ಲದೇ ಅವರ ಸಾಧನೆಗೆ ಸಂದಿರುವ ಗೌರವ, ಸಂಘ ಸಂಸ್ಥೆಗಳ ಸಹಕಾರ ಹೀಗೆ ಪ್ರತಿಹಂತದ ಕಲಾ ಮಹತ್ವಗಳನ್ನು ಅರಿಯಬಹುದಾಗಿದೆ. ಆಯಾ ಶಿಲ್ಪಿಯ ಕಲಾ ಕಾರ್ಯ ಚಟುವಟಿಕೆಗಳಂತೆ, ಅವರವ ವ್ಯಕ್ತಿತ್ವದ ವಿಕಾಸವನ್ನು ಇಲ್ಲಿ ಕಾಣುತ್ತೇವೆ.

ಮಾನಪ್ಪ ತಂದೆ ಗಣಪತಿ ಬಡಿಗೇರ

ಸುರಪುರ ತಾಲೂಕಿನ ದೇವಾಪುರ ಗ್ರಾಮದ ಶಿಲ್ಪಿ ಮಾನಪ್ಪನವರು ಜನಪದ ಕಲಾ ಪ್ರಕಾರದ ಮರಗೆತ್ತನೆಯ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಬೇವಿನ ಮರದಿಂದ ಮತ್ತು ಇತರೆ ಕಟ್ಟಿಗೆಗಳಿಂದ ಕುದುರೆಶಿಲ್ಪಿ, ಪಡಸಾಲಿ ಜೋಡಣೆ ಕೆಲಸ, ಗೌರಿಮಾಡ, ತಲಬಾಗಿಲು, ಹಾಗೂ ಸಾಮಾನ್ಯವಾದ ಬಾಗಿಲು, ಕಿಟಕಿಗಳಿಗೆ ಹೂ, ಎಲೆ, ಮರ, ಬಳ್ಳಿ ವಿವಿಧ ವಿನ್ಯಾಸಗಳಿಂದ ಕಲಾತ್ಮಕವಾಗಿ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ. ಈ ಶಿಲ್ಪಿಯು ಬಡಿಗೇತನ ವೃತ್ತಿಯನ್ನು ತನ್ನ ಮಗನಾದ ಗಂಗಪ್ಪ ಬಡಿಗೇರವರ ಹತ್ತಿರ ಕಲಿತಿದ್ದಾರೆ. ಹಾಗೂ ಗಣಪತಿಯವರ ತಂದೆಯೂ ಸಹ ಬೆಳ್ಳಿ, ಬಂಗಾರ, ಹಿತ್ತಾಳೆ, ತಾಮ್ರ ಸೇರಿದಂತೆ ಲೋಹ ಮಾಧ್ಯಮದಿಂದ ಕಲಾಕೃತಿಗಳನ್ನು ರಚಿಸುತ್ತಿದ್ದರು. ತಂದೆಯ ಮತ್ತು ಮಾವನ ಕಲಾ ಸೂಕ್ಷ್ಮತೆಗಳು ಮಾನಪ್ಪನವರ ಕಲೆಯಲ್ಲಿ ಸಹಜವಾಗಿ ಪ್ರಭಾವ ಬೀರಿದೆ. ಮೂವತ್ತೆಂಟು ವಯಸ್ಸಿನ ಈ ಶಿಲ್ಪಿಯು ಜನಪದ ಜೀವನದ ಸಾಂಸ್ಕೃತಿಕ ತಳಪಾಯದಂತೆ ಹಲವಾರು ಶಿಲ್ಪಗಳನ್ನು ರಚಿಸಿದ್ದಾರೆ. ರುಕ್ಮಾಪುರ ಆವಿನಾಳ,

ಅಹೊಳ್ಳಿ, ತಿಂಥಣಿ, ದೇವರಗೋನಾಲ, ಸುರಪುರ, ಶೆಳ್ಳಗಿ, ಮುಷ್ಟಳ್ಳಿ ಸೇರಿದಂತೆ ಅನೇಕ ಕಡೆಗಳಲ್ಲಿ ಇವರ ಕಲಾ ಕೆತ್ತನೆಯನ್ನು ಕಾಣುತ್ತೇವೆ. ಶಿಲ್ಪಿ ಮಾನಪ್ಪನವರಿಗೆ ಹೆಂಡತಿ ದೇವಮ್ಮಳ ಸಹಕಾರವು ಮರೆಯದಂತಿದೆ. ಇವರಿಗೆ ವಿರೇಶ, ಸೌಮ್ಯ, ಮಹೇಶ ಎಂಬ ಮೂರು ಜನ ಮಕ್ಕಳಿದ್ದಾರೆ.

ಕುಟುಂಬದ ಜವಾಬ್ದಾರಿಯನ್ನು ಬಡಿಗೇತನ ಕಾಯಕದಿಂದಲೇ ಬದುಕಿಸುತ್ತಾ ನಡೆದಿರುವುದು ಕಂಡುಬರುತ್ತದೆ. ತನ್ನ ಇಲ್ಲಿಯವರೆಗೆ ಶಿಲ್ಪಗಳನ್ನು ರಚಿಸಿದ ರೀತಿಯನ್ನು ಹೀಗೆ ವಿವರಿಸುತ್ತಾರೆ.

- ಮನೆಯ ತಲಬಾಗಿಲಿಗೆ ಕುದುರೆ ಶಿಲ್ಪ ಕೆತ್ತನೆ – 50 ಜೊತೆ
- ಪಡಸಾಲಿ ಜೋಡಣೆ ಕೆಲಸ – 10
- ಗೌರಿಮಾಡ – 20
- ಗ್ರಾಮದೇವತೆ ಶಿಲ್ಪ, ಶೀಗಮ್ಮ ಮತ್ತು ಗೌರಮ್ಮನ ಶಿಲ್ಪಗಳು – 10

ಈಗಾಗಲೇ ಇಷ್ಟು ಶಿಲ್ಪಕಲಾಕೃತಿಗಳನ್ನು ಮಾಡಿದ ಬಗೆ ತಿಳಿಸುತ್ತಾರೆ. ಬೃಹತ್ತಾದ ಮನೆಯ ತಲಬಾಗಿಲ ಕೆತ್ತನೆ, ಕುದುರೆ ಪಡಸಾಲೆಯ ಕಲಾ ಕುಸುರಿ ಕೆತ್ತನೆ, ಆಕರ್ಷಕ, ಮತ್ತು ಕಲಾ ನೈಪುಣ್ಯತೆಯಿಂದ ಕೂಡಿರುತ್ತದೆ. ಗ್ರಾಮದೇವತೆ ಶಿಲ್ಪಗಳನು ಮಾತ್ರ ಚಿಕ್ಕ ಗಾತ್ರದಲ್ಲಿ ಶೀಗಮ್ಮ, ಗಂಗೆ, ಗೌರಿ ಶಿಲ್ಪಗಳನ್ನು ಕೆತ್ತನೆ ಅಲಂಕಾರಿಕವಾಗಿ ಮಾಡಿದ್ದಾರೆ.

ದೇವಾಪುರ ಗ್ರಾಮದಲ್ಲಿ ತನ್ನಿಷ್ಟಕ್ಕೆ ತಾನು ಬಡಿಗೇತನವನ್ನು ಮಾಡುವುದರೊಂದಿಗೆ ಅನೇಕ ಜನಪದ ಪ್ರಕಾರದ ಶಿಲ್ಪಕೆತ್ತನೆ ಮಾಡುವ ಮೂಲಕ ಸಗರನಾಡಿನ ಪ್ರತಿಭಾವಂತ ಜನಪದ ಶಿಲ್ಪಿಯಾಗಿ ಕಂಡುಬರುತ್ತಾರೆ. ಇವರಿಗೆ, ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಯಾವುದೇ ಶಿಬಿರ, ಕಾರ್ಯಾಗಾರ, ಕಮ್ಮಟ ಪ್ರಶಸ್ತಿ ಪುರಸ್ಕಾರ, ಸಹಾಯಧನ ಲಭಿಸಿರುವುದಿಲ್ಲ.

ಗಂಗಪ್ಪ ತಂದೆ ಕಾಳಪ್ಪ ಬಡಿಗೇರ

ಯಾದಗಿರ ಜಿಲ್ಲೆಯ ಸುರಪುರ ತಾಲೂಕಿನ ದೇವಾಪುರ ಗ್ರಾಮದ ಶಿಲ್ಪಿ ಗಂಗಪ್ಪನವರಿಗೆ ಪ್ರಸ್ತುತ ಎಪ್ಪತ್ತೈದು ಇಳಿವಯಸ್ಸಿನಲ್ಲಿಯೂ ಸಹ ಮರಗೆತ್ತನೆಯ ಶಿಲ್ಪಗಳನ್ನು ಮಾಡುವುದರಲ್ಲಿ

ನಿರತರಾಗಿದ್ದಾರೆ. ಚಿಕ್ಕಂದಿನಿಂದಲೂ ಬಡಿಗೇತನ ವೃತ್ತಿಯಲ್ಲಿ ಮುಂದುವರೆದಿರುವ ಇವರು ಅತ್ಯಂತ ಆಕರ್ಷಕವಾದ ಶಿಲ್ಪಗಳನ್ನು ಕೆತ್ತನೆ ಮಾಡುವುದರಲ್ಲಿ ಹೆಸರುವಾಸಿ. ಸ್ವಗ್ರಾಮ ದೇವಾಪುರದ ಸುತ್ತಮುತ್ತಲಿನ ಹಲವಾರು ಗ್ರಾಮಗಳಲ್ಲಿ ಕುದುರೆ ಶಿಲ್ಪ, ತಲಬಾಗಿಲು ಕೆತ್ತನೆ ಗೌರಿಮಾಡ, ಸೇರಿದಂತೆ ಜನಪದರ ಆಸಕ್ತಿಗನುಗುಣವಾಗಿ ಕೆಲಸವನ್ನು ಮಾಡಿದ್ದಾರೆ. ಅಂದಾಜು ಅಂಕಿ ಅಂಶಗಳ ಪ್ರಕಾರದಂತೆ ಗಮನಿಸುವುದಾದರೆ

- ಕುದುರೆ ಶಿಲ್ಪಗಳು – 50 ಜೊತೆ
- ಪಡಸಾಲಿ ಜೋಡಣೆ – 20
- ಗೌರಿಮಾಡದ ಕಲಾ ಕುಸುರಿ ಕೆತ್ತನೆ – 250
- ವ್ಯವಸಾಯಕ್ಕೆ ಸಂಬಂಧಿಸಿದ ಚಕ್ಕಡಿ ಬಂಡಿಗಳು – 280

ಇವುಗಳಲ್ಲದೇ ಸಾಮಾನ್ಯ ಶಿಲ್ಪಗಳಾದ ಮಣ್ಣಿನ ಗಣಪ, ಗಂಗೆ, ಗೌರಿ, ಕೂರಿಗೆಯ ಮಂಡಿ, ಕುಂಟಿ, ತಾಳ, ಕೊರಪು, ನೊಗ ಮುಂತಾದ ರೈತರ ಸಲಕರಣೆಗಳನ್ನು ಮಾಡಿಕೊಟ್ಟಿದ್ದಾರೆ.

ಕುದುರೆ ಶಿಲ್ಪವನ್ನು ನೋಡುವುದಾದರೆ ಕುದುರೆಯ ಮುಖ, ಕಣ್ಣು, ನಾಲಿಗೆ, ಮೂಗಿನ ಸೆಳೆತ, ಕಣ್ಣಿನ ನೋಟ, ನೆಟ್ಟಗೆ ಸೆಟೆದ ಕಿವಿಗಳು, ಕೊರಳ, ಎದೆಯ ಹಗ್ಗಗಳು, ವಿನ್ಯಾಸದ ಕೊರಳ ಹಣೆಯ ಪಟ್ಟಿಕೆಗಳು, ಸರಪಳಿ, ಹೀಗೆ ಕುದುರೆಯ ನೈಜನತೆ ಸಂಕೇತದ ಹಲವು ಮಾದರಿಗಳನ್ನು ನೈಜತೆಯ ಸ್ಥಿತಿಯಲ್ಲಿರುವಂತೆ ಕೆತ್ತನೆ ಮಾಡುತ್ತಾರೆ.

ಹಾಗೆಯೇ ಪಡಸಾಲಿ ಜೋಡಣೆ ಕೆಲಸವು ಸಹ ಆಕರ್ಷಕ ಮತ್ತು ಕಲಾತ್ಮಕ ದೃಷ್ಟಿಯಿಂದ ಅಚ್ಚರಿ ಮೂಡಿಸುವಂತೆ ರಚಿಸಿದ್ದಾರೆ. ಮನೆಯ ಪಡಸಾಲಿ ಅಂಕಣದ ಮೂರು, ನಾಲ್ಕು, ಐದು ಅಂಕಣದ ಕಂಬ, ತುಂಡು, ಚೌಪಟ್ಟಿಗಳು, ಕಮಾನು ಆಕರದ ವಿನ್ಯಾಸಗಳು, ಕಂಬದ ತಲೆ ಬೋದಿಗೆ ತೆಂಗಿನ ಕಾಯಿಯ ಕೆತ್ತುವಿಕೆ, ಎಲೆ, ಹೂ, ಬಳ್ಳಿಗಳ ಜೋಡಣೆ ಕೆಲಸದಲ್ಲಿ ಚಿತ್ರ ವಿನ್ಯಾಸಗೊಂಡಿರುತ್ತವೆ. ಶಿಲ್ಪಿ ಗಂಗಪ್ಪನವರಿಗೆ ಕಾಳಮ್ಮ ಮತ್ತು ಭೀಮಣ್ಣ ಎಂಬ ಇಬ್ಬರು

---

* ಶಂಭುಲಿಂಗಪ್ಪನವರೊಂದಿಗೆ ಸಂದರ್ಶನ: ದೇವಾಪುರ, ದಿನಾಂಕ: 04.03.2017
* ಸಮಕಾಲೀನ ಶಿಲ್ಪಗಳನ್ನು ರಚಿಸಿದ್ದಾರೆ ಮತ್ತು ಪ್ರದರ್ಶನವು ಹಲವಡೆ ಮಾಡಿದ್ದಾರೆ.

ಮಕ್ಕಳಿದ್ದಾರೆ. ಬಡತನದ ಬೇಗೆಯಲ್ಲಿ ನೊಂದು ಬೆಂದಿರುವ ಈ ಶಿಲ್ಪಿಗೆ ಕಲೆಯ ಮಾದರಿಯ ಅಂಶಗಳೇ ಸಂತೋಷವನ್ನು ನೀಡಿವೆ ಎಂದು ವಿವರಿಸುತ್ತಾರೆ. ಜನಸಾಮಾನ್ಯರ ನಿರೀಕ್ಷೆಯ ಹಾಗೆ ಶಿಲ್ಪ ಕಲಾಕೃತಿಗಳನ್ನು ರಚಿಸುವ ಕಾಯಕದಲ್ಲಿ ದುಡಿದು ಹಣ್ಣಾಗಿರುವ ಈ ಶಿಲ್ಪಿಗೆ ಇದುವರೆಗೆ ಯಾವುದೇ ಸರಕಾರದಿಂದಾಗಲೀ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದಾಗಲಿ, ಪ್ರಶಸ್ತಿ ಪುರಸ್ಕಾರ, ಸಹಾಯಧನ, ಮಾಶಾಸನ ಸೇರಿದಂತೆ ಯಾವ ಅವಕಾಶವು ದೊರೆತಿಲ್ಲ. ಜನಪದ ಕಲಾಕೃತಿಯ ರಚನೆಯೇ ಇವರ ಆತ್ಮಾನಂದದ ದೀವಿಗೆಯಾಗಿದೆ.

ಶಂಭುಲಿಂಗಪ್ಪ ತಂದೆ ಕಾಳಪ್ಪ ಪ್ರತಿಹಸ್ತ

ಸುರಪುರ ತಾಲೂಕಿನ ದೇವಾಪುರ ಗ್ರಾಮದ ಯುವಶಿಲ್ಪಿ ಶಂಭುಲಿಂಗಪ್ಪನವರು ಜನಪದ ಶಿಲ್ಪಕಲಾಕೃತಿಗಳು ರಚಿಸುವುದರಲ್ಲಿ ಕ್ರಿಯಾಶೀಲರು. ಕಿರಿಯ ವಯಸ್ಸಿನಲ್ಲಿಯೇ ಕುದುರೆ, ತಲಬಾಗಿಲು, ಗೌರಿಮಾಡ ಸೇರದಂತೆ ಅನೇಕ ಬಗೆಯ ಸೃಜನಶೀಲ ಶಿಲ್ಪಗಳನ್ನು ರಚಿಸಿದ್ದಾರೆ. ಶೈಕ್ಷಣಿಕವಾಗಿ ಹತ್ತನೇ ತರಗತಿ ಮಾತ್ರ ಓದಿದ ಶಂಭುಲಿಂಗಪ್ಪನವರು ಮನೆಯ ಕಾಯಕವಾದ ಈ ಕಲಾ ಪರಂಪರೆಯನ್ನು ಮುಂದುವರೆಸಿಕೊಂಡು ಹೊರಟಿರುವುದು ವಿಶೇಷ ಜನಪದ ಕಾಳಜಿಯ ಕೆಲಸವಾಗಿದೆ.

ಜನಪದರ ಮೂಲ ಸಂವೇದನೆಯ ನೆಲೆಯಲ್ಲಿ ಮರಗೆತ್ತನೆ ಶಿಲ್ಪಗಳನ್ನು ಮಾಡಿಕೊಡುತ್ತಾರೆ. ಅವುಗಳನ್ನು ಅಂಕಿ ಅಂಶಗಳ ಪ್ರಕಾರ ಈ ಕೆಳಗಿನಂತೆ ಕಾಣುತ್ತೇವೆ.

ಕುದುರೆ ಶಿಲ್ಪಗಳು	–	25 ಜೊತೆ ಮಾಡಿದ್ದಾರೆ.
ಗೌರಿಮಾಡ	–	100
ತಲಬಾಗಿಲು	–	25
ಪಡಸಾಲಿ ಜೋಡಣೆ ಕೆಲಸ	–	10
ಸೃಜನಾತ್ಮಕ ಶಿಲ್ಪಗಳು	–	100

ಹಾಗೆಯೇ ರೈತರ ವ್ಯವಸಾಯಕ್ಕೆ ಬೇಕಾಗುವ ಪ್ರಮುಖ ಸಾಮಗ್ರಿಗಳನ್ನು ಲೆಕ್ಕವಿಲ್ಲದಷ್ಟು

*ಶಾಂತಮೂರ್ತಿ ಅವರೊಂದಿಗೆ ಸಂದರ್ಶನ, ಕೋನಾಳ, ದಿನಾಂಕ: 05.03.2017

* ಸಂದರ್ಶನ: ಮಲ್ಲಿಕಾರ್ಜುನ ಕೋನಾಳ, ದಿನಾಂಕ: 05.03.2017

ಮಾಡಿಕೊಟ್ಟಿದ್ದಾರೆ. ಜನಪದ ಕಲಾ ಪ್ರಕಾರದ ಶಿಲ್ಪಗಳಾದ ಕುದುರೆ ಶಿಲ್ಪಗಳಂತೂ ನೋಡುಗನ ಮನ ಅರಳಿಸುವಂತೆ, ಮನೆಯ ಅಂದವನ್ನು ಹೆಚ್ಚಿಸಿಕೊಳ್ಳುವಂತೆ ಅಲಂಕಾರಿಕ ಮತ್ತು ಶೋಭೆ ತರುವ ಹಾಗೆ ಕೆತ್ತನೆ ಮಾಡುತ್ತಾರೆ. ಕುದುರೆಯ ನೈಜ ಭಾವ ಕ್ರಿಯೆ ನೋಡುಗನ ಮನ ಸೆಳೆಯುತ್ತವೆ. ಕುದುರೆಯ ಮೇಲಿನ ನಕ್ಷಾ ವಿನ್ಯಾಸಗಳು ಎಲೆ, ಹೂ, ಮೀನು, ಬಳ್ಳಿಗಳ ಸಮೂಹ ಚಿತ್ರ ಕೆತ್ತನೆ ಆಕರ್ಷಕವಾಗಿರುತ್ತದೆ. ಅಂತೆಯೇ ತಲಬಾಗಿಲು, ಪಡಸಾಲಿ ಜೋಡಣೆ ಕೆಲಸ, ಗೌರಿಮಾಡದ ಕಲಾ ಕುಸುರಿ ಎಲ್ಲವೂ ಗಮನಾರ್ಹವಾಗಿ ಕೆತ್ತನೆಯಾಗಿರುತ್ತದೆ. ತನ್ನ ಮನೆಯ ಆರ್ಥಿಕ ಸಮಸ್ಯೆಯನ್ನು ಬಗೆ ಹರಿಸುತ್ತ ಶಿಲ್ಪಕಲಾಕೃತಿಗಳನ್ನು ರಚಿಸುವುದರೊಂದಿಗೆ ಸಮಕಾಲೀನ ಹೊಳಹುಗಳ ವಿಶೇಷ ಸಂಗತಿಗಳನ್ನು ಅರಿತುಕೊಂಡಿದ್ದಾರೆ. ಹಾಗೆಯೇ ಹಲವು ಪ್ರಕಾರಗಳಲಿ ಸಮಕಾಲೀನ ಶಿಲ್ಪಗಳನ್ನು ಸಹ ಕೆತ್ತನೆ ಮಾಡಅಲ್ಲಲ್ಲಿ ಪ್ರದರ್ಶನ ಮಾಡಿದ್ದಾರೆ.

ನಿರಂತರ ಶಿಲ್ಪಗಳನ್ನು ಸೃಷ್ಟಿಸುವ ಕಾರ್ಯದಲ್ಲಿ ತೊಡಗಿದ ಈ ಯುವ ಶಿಲ್ಪಿಗೆ ಅಕಾಡೆಮಿಯ ಯಾವುದೇ ಕಲಾಶಿಬಿರ, ಪ್ರಶಸ್ತಿ, ಪುರಸ್ಕಾರ ಲಭಿಸಿಲ್ಲ. ಕರ್ನಾಟಕ ಶಿಲ್ಪಕಲಾ ಕ್ಷೇತ್ರದಲ್ಲಿ ಸಮಕಾಲೀನ ಶಿಲ್ಪಕಲೆಯ ಹರವು ಹೆಚ್ಚಾಗಿ ಕಾಣಿಸುವಂತಹ ಸಂದರ್ಭದಲ್ಲಿಯೂ ಸಹ ಶಿಲ್ಪಿ ಶಂಭುಲಿಂಗಪ್ಪ*ನವರು ಜನಪದ ಕಲಾ ಪ್ರಕಾರದ ಶಿಲ್ಪಗಳನ್ನೇ ರಚಿಸುವಲ್ಲಿ ವಿಶೇಷ ಆಸಕ್ತಿಯಿರುವುದು ಅವರಲ್ಲಿನ ಜನಪದ ಶಿಲ್ಪ ಪರಂಪರೆಯ ಮೇಲಿನ ಗೌರವ ಮತ್ತು ಉಳಿಸಿ ಬೆಳೆಸುವ ವಿಶಾಲತೆಯನ್ನು ಕಾಣುತ್ತೇವೆ.

ಶಾಂತಿಮೂರ್ತಿ ತಂದೆ ಕಾಳಪ್ಪ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕೋನಾಳ ಗ್ರಾಮದ ಜನಪದ ಶಿಲ್ಪಿ ಶಾಂತಮೂರ್ತಿಯವರು ಸಗರನಾಡಿನ ಪ್ರತಿಭಾವಂತ ಶಿಲ್ಪಿಯೆಂದೆ ಹೆಸರುವಾಸಿ. ಅವರು ರಚಿಸುವ ಕಲಾಕೃತಿಗಳು ಸಗರನಾಡಿನ ಹಲವಾರು ಹಳ್ಳಿಗಳಲ್ಲಿ ಸಂಗ್ರಹಗೊಂಡಿವೆ. ಪಡಸಾಲಿ ಜೋಡಣೆ, ಕುದುರೆ ಶಿಲ್ಪ ಕೆತ್ತನೆ, ತಲಬಾಗಿಲು, ಗೌರಿಮಾಡಗಳು, ಸೇರಿದಂತೆ ಹಲವು ಬಗೆಯ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಶಾಂತಮೂರ್ತಿಯ ಹೆಂಡತಿ ಕಾಳಮ್ಮನವರಿಗೆ ಶ್ರೀದೇವಿ, ಈರಮ್ಮ, ಬಸವರಾಜ (ಪತ್ತಾರಿಕೆ ಕೆಲಸ ಮಾಡುತ್ತಿದ್ದಾನೆ. ಕೆಂಭಾವಿಯಲ್ಲಿ) ಮೌನೇಶ, ಈರಣ್ಣ,

ಕಾಳಪ್ಪ ಒಟ್ಟು ಆರು ಜನ ಮಕ್ಕಳಿದ್ದಾರೆ ದೊಡ್ಡದಾದ ಕುಟುಂಬವನ್ನು ಸುಧಾರಿಸಲು ಬಡಿಗೇತನ ಕಾಯಕವೇ ಇವರಿಗೆ ಆಸರೆಯಾಗಿದೆ. ಆರ್ಥಿಕ ಸಮಸ್ಯೆಯನ್ನು ಬಗೆಹರಿಸುತ್ತ ಬದುಕಿನೂದ್ದಕ್ಕೂ ಜನಪದ ಶಿಲ್ಪಗಳನ್ನೇ ಸೃಷ್ಟಿಸುವುದರಲ್ಲಿ ಕಾಲ ಕಳೆಯುತ್ತಿದ್ದಾರೆ. ಪ್ರಸ್ತುತ ಈ ಶಿಲ್ಪಿಗೆ 60 ವರ್ಷ ಪೂರೈಸುವ ಹಂತದಲ್ಲಿವೆ. ಆದರೂ ಸಹ ಬಡಿಗೇತನ ಕೆಲಸ ಮಾಡುವುದನ್ನು ಮಾತ್ರ ಬಿಟ್ಟಿಲ್ಲ.

ಇವರ ತಂದೆಯೂ ಸಹ ಕಾಳಪ್ಪನವರು ಮರಗೆತ್ತನೆಯ ಕೆಲಸದಲ್ಲಿ ಪ್ರಸಿದ್ಧಿಯಾದವರು* ರೈತರ ವ್ಯವಸಾಯಕ್ಕೆ ಸಂಬಂಧಿಸಿದಂತೆ ಅಲಂಕಾರಿಕ ಮತ್ತು ಕಲಾತ್ಮಕವಾಗಿ ಸಾಮಗ್ರಿಗಳನ್ನು ರಚಿಸಿಕೊಟ್ಟಿದ್ದಾರೆ. ತಮ್ಮದೆಯಾದ ಮರಗೆತ್ತನೆಯ ಕಲೆಗಾರಿಕೆ ಶಾಂತಮೂರ್ತಿಯವರಿಗೆ ಪ್ರಭಾವ ಬೀರಿರುವುದು ಗಮನಾರ್ಹವಾಗಿ ಕಂಡುಬರುತ್ತದೆ. ಶಿಲ್ಪಿ ಶಾಂತಮೂರ್ತಿಯವರು ಕೆತ್ತನೆ ಮಾಡಿದ ಕಲಾಕೃತಿಗಳ ವಿವಿಧತೆ ಈ ಕೆಳಗಿನಂತೆ ಕಾಣುತ್ತೇವೆ.

- ಕುದುರೆ ಶಿಲ್ಪಗಳು – 20 ಜೊತೆ
- ಗ್ರಾಮದೇವತೆ ಶಿಲ್ಪಗಳು ಮಾಡಿರುವುದಿಲ್ಲ
- ಬೃಹತ್ ಮನೆಯ ಪಡಸಾಲಿ ಜೋಡಣೆ ಕೆಲಸ – 50
- ತಲಬಾಗಿಲು ಕೆತ್ತನೆ – 40
- ಗೌರಿಮಾಡಗಳು – 30

ಹಾಗೆಯೇ ರೈತರ ವ್ಯವಸಾಯ ಸಲಕರಣೆಗಳನ್ನು ಸಹ ಮಾಡಿಕೊಟ್ಟಿದ್ದಾರೆ. ಕುದುರೆ, ತಲಬಾಗಿಲು, ಪಡಸಾಲಿ ಜೋಡಣೆ, ಗೌರಿಮಾಡ ಶಿಲ್ಪಕಲಾಕೃತಿಗಳನ್ನು ಬಾಚಿಮಟ್ಟಿ, ಬೆನಕನಹಳ್ಳಿ, ಹಂದ್ರಾಳ, ಮಂಗ್ಯಾಳ, ಶಿವನನಾಯಕ ತಾಂಡಾ, ಗೌಡೂರು (ಲಿಂಗಸೂರು ತಾ.) (ನಗರಗುಂಡ ದೇವದುರ್ಗ ತಾ.) ಕೋನಾಳ, ತಿಂಥಣಿ ಸೇರಿದಂತೆ ಹಲವಾರು ಹಳ್ಳಿಗಳಲ್ಲಿ ಜನಪದ ಶಿಲ್ಪಗಳನ್ನು ಮಾಡಿಕೊಟ್ಟಿದ್ದಾರೆ. ನಿರಂತರ ಕಲೆಯ ಆಲಯದಲಿ ತಮ್ಮ ಬದುಕನ್ನು ಸವೆಸಿದ ಶಿಲ್ಪಿ ಶಾಂತಮೂರ್ತಿ ಅವರಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಪ್ರಶಸ್ತಿ, ಪುರಸ್ಕಾರ ದೊರೆತಿಲ್ಲ. ಸರಕಾರದ ಸವಲತ್ತುಗಳನ್ನು ಕಾಯದೇ, ಬಯಸದೇ ತನ್ನ ಮೂಲ ಜನಪದ ಕಲಾ ಪರಂಪರೆಯಲ್ಲಿ

* ಸಂದರ್ಶನ ಮಲ್ಲಿಕಾರ್ಜುನ ಶಿಲ್ಪಿ, ಕೋನಾಳ, ದಿನಾಂಕ: 03.03.2017

ಅತ್ಯುತ್ತಮ ಶಿಲ್ಪಗಳನ್ನು ಮಾಡುವ ಕಾಯಕದಲ್ಲಿ ಕೈಲಾಸವನ್ನು ಕಾಣುವ ಹಾದಿ ಇವರದಾಗಿದೆ. ಸಗರನಾಡಿನ ಜನಪದ ಶಿಲ್ಪಿಗಳ ಸಾಲಿನಲ್ಲಿ ಇವರು ಪ್ರಮುಖರು.

ಮಲ್ಲಿಕಾರ್ಜುನ ತಂದೆ ಕಾಳಪ್ಪ:

ಯಾದಗಿರ ಜಿಲ್ಲೆ ಸುರಪುರ ತಾಲೂಕಿನ ಕೋನಾಳ ಗ್ರಾಮದ ಜನಪದ ಶಿಲ್ಪಿ ಮಲ್ಲಿಕಾರ್ಜುನ ಅವರು ಸಗರನಾಡಿನ ಪ್ರತಿಭಾವಂತ ಕಲಾವಿದರಾಗಿದ್ದು, ಮರಗೆತ್ತನೆಯ ಮಾಧ್ಯಮದಿಂದ ಅನೇಕ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ, ಕೌಟುಂಬಿಕ ಪರಿಸರವನ್ನು ಗಮನಿಸಿದಾಗ ಕಲಾವಿದ ಮಲ್ಲಿಕಾರ್ಜುನ ಅವರಿಗೆ ಹೆಂಡತಿ ಪದ್ಮಾವತಿಯವರ ಪ್ರೋತ್ಸಾಹ ದೊರಕುತಿರುವುದು ಅಭಿನಂದನೀಯವಾದದ್ದು. ಮಕ್ಕಳಾದ ಸವಿತಾ, ಕವಿತಾ (ಬಿ.ಇಡಿ) ಕಾಳಪ್ಪ (ಬಿ.ಎ) ಸಂಗಮೇಶ (ಇಂಜಿನಿಯರ್) ಅಭ್ಯಾಸ ಮಾಡುತ್ತಿದ್ದಾರೆ. ಶೈಕ್ಷಣಿಕ ವಿದ್ಯಾರ್ಹತೆಯನ್ನು ಪಡೆಯುತ್ತಿರುವ ಇವರ ಮಕ್ಕಳು ತಂದೆಯ ಕಾಯಕವನ್ನು ಸಹ ಮೂರನೇ ಮಗ ಕಾಳಪ್ಪನವರು ಕುದುರೆ, ತಲಬಾಗಿಲು, ಸೇರಿದಂತೆ ಜನಪದ ಶಿಲ್ಪಗಳನ್ನು ಮಾಡಲು ಸಹಕಾರಿಯಾಗಿದ್ದಾರೆ, ಇನ್ನುಳಿದ ಮಕ್ಕಳು ಓದುವುದರಲ್ಲಿ ಪುನಃ ತೊಡಗಿಸಿಕೊಂಡಿದ್ದಾರೆ.

ಮನೆಯ ಕುಟುಂಬ ಜವಾಬ್ದಾರಿಯನ್ನು ಶಿಲ್ಪಿ ಮಲ್ಲಿಕಾರ್ಜುನರವರು ತನ್ನ ವೃತ್ತಿ ಮರಗೆತ್ತನೆಯ ಕೆಲಸದಿಂದಲೇ ಸರಿಯಾಗಿ ನಡೆಸಿಕೊಂಡು ಹೋಗುತ್ತಿರುವುದು ಕಂಡುಬರುತ್ತದೆ. 1964ನೇ ಇಸ್ವಿಯಲ್ಲಿ ಜನಿಸಿದ ಶಿಲ್ಪಿ ಮಲ್ಲಿಕಾರ್ಜುನವರಿಗೆ ಪ್ರಸ್ತುತ ವಯಸ್ಸು ನಲವತ್ತೆಂಟು ಪೂರೈಸಿವೆ. ನಿರಂತರ ಮರಗೆತ್ತನೆಯ ಕಾರ್ಯದಲ್ಲಿ ತೊಡಿಗಿಸಿಕೊಂಡು ಹಲವಾರು ಗ್ರಾಮ, ಪಟ್ಟಣಗಳಿಗೆ ಶಿಲ್ಪಗಳನ್ನು ಮಾಡಿಕೊಡುತ್ತಿದ್ದಾರೆ. ಅವರು ರಚಿಸಿದ ಶಿಲ್ಪಕಲಾಕೃತಿಗಳ ಅಂಕಿ ಅಂಶಗಳ ವಿವಿಧತೆ ಈ ಕೆಳಗಿನಂತೆ ಕಾಣುತ್ತೇವೆ.

ಕುದುರೆ ಶಿಲ್ಪಗಳು	–	20 ಜೊತೆ
ಪಡಸಾಲಿ ಜೋಡಣೆ ಕೆಲಸ	–	38
ಪಡಸಾಲಿಯ ಮಧ್ಯೆವಿರುವ ಗೌರಿಮಾಡಗಳು	–	70

* ಸಂದರ್ಶನ ಅವಣೆಪ್ಪ ಭದ್ರಪ್ಪ ಪತ್ತಾರ ಅವರೊಂದಿಗೆ ದಿನಾಂಕ: 05.03.2017

ಗ್ರಾಮದೇವತೆ ಶಿಲ್ಪಗಳು ಮಾಡಿರುವುದಿಲ್ಲ

ಹಾಗೆಯೇ ರೈತರಿಗೆ ಉಪಯೋಗವಾಗುವಂತಹ ವ್ಯವಸಾಯ ಕೇಂದ್ರಿತ ಶಿಲ್ಪಗಳನ್ನು ನಿರಂತರವಾಗಿ ರಚಿಸುತ್ತ ಸಾಗಿದ್ದಾರೆ. ಕೋನಾಳ, ಬಾಚಿಮಟ್ಟಿ, ದೇವಾಪುರ, ಸುರಪುರ, ತಿಂಥಣಿ ಸೇರಿದಂತೆ ಹಲವಾರು ಹಳ್ಳಿ ಪಟ್ಟಣಗಳಿಗೆ ಇವರ ಶಿಲ್ಪಕಲಾಕೃತಿಗಳು ಮಾರಾಟಗೊಂಡಿವೆ. ಶಿಲ್ಪಿ ಮಲ್ಲಿಕಾರ್ಜುನ ಅವರ ಶಿಲ್ಪಕಲಾಕೃತಿಗಳನ್ನು ಗಮನಿಸಿದಾಗ ಕುದುರೆಯ ನೈಜಭಾವ, ಚಲನಶೀಲ ಪ್ರಕ್ರಿಯೇ ತಲಬಾಗಿಲ, ಪಟ್ಟಿಕೆಗಳು, ಹೂ, ಎಲೆ, ಬಳ್ಳಿ, ನವಿಲು, ಗಿಳಿ ವಿವಿಧ ಪ್ರಾಣಿಗಳ ಚಿತ್ರ, ಒಂದಕ್ಕೊಂದು ಪೂರಕವೆಂಬಂತೆ ಸಂಯೋಜಿಸಿ ಕೆತ್ತನೆ ಮಾಡುತ್ತಾರೆ. ಪಡಸಾಲಿ ಜೋಡಣೆ ಕೆಲಸವು ಸಹ ವಿವಿಧ ಕಲಾತ್ಮಕ ವಿನ್ಯಾಸಗಳಿಂದ ಮನೆಯ ಅಂದವನ್ನು ಹೆಚ್ಚಿಸುತ್ತದೆ. ಜನಪದ ಕಲಾಶೈಲಿಯ ಶಿಲ್ಪ ಕೆತ್ತನೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ಶಿಲ್ಪಿ ಮಲ್ಲಿಕಾರ್ಜುನ ಅವರಿಗೆ ಸರಕಾರ ಮತ್ತು ಅಕಾಡೆಮಿಗಳಿಂದ ಯಾವುದೇ ಪ್ರಶಸ್ತಿ ಪುರಸ್ಕಾರ, ಸಹಾಯಧನ, ಲಭಿಸಿರುವುದಿಲ್ಲ. ಪ್ರಶಸ್ತಿ ಪುರಸ್ಕಾರ, ಹೀಗೆ ಯಾವುದನ್ನು ಬಯಸದೇ ತನ್ನ ಕಾರ್ಯದಲ್ಲಿ ತಾನು ತೊಡಗಿಸಿಕೊಂಡು ಅತ್ಯುತ್ತಮ ಕುದರೆ, ತಲಬಾಗಿಲುಗಳು, ಪಡಸಾಲಿ ಜೋಡಣೆ, ಗೌರಿಮಾಡ ಶಿಲ್ಪಿಗಳನ್ನು ರೂಪಿಸುತ್ತಿರುವ ಸಗರನಾಡಿನ ಜನಪದ ಶಿಲ್ಪಿಯೆಂಬುದು ಅಭಿಮಾನದ ಸಂಗತಿಯಾಗಿದೆ.

ಗುರುಬಸಪ್ಪ ತಂದೆ ದೇವಿಂದ್ರಪ್ಪ:

ಎಂಬತ್ತು ವರ್ಷ ವಯಸ್ಸು ಪೂರೈಸಿದ ಹಿರಿಯ ಶಿಲ್ಪಿ ಗುರುಬಸಪ್ಪನವರು ಸಗರನಾಡಿನ ಜನಪದ ಶಿಲ್ಪಕಲಾಕೃತಿಗಳನ್ನು ರಚಿಸುವಲ್ಲಿ ಕ್ರಿಯಾಶೀಲರು, ಅವರು ರಚಿಸಿದ ಅನೇಕ ಶಿಲ್ಪಕಲಾಕೃತಿಗಳು, ಕೋನಾಳ, ದೇವಾಪುರ, ಸುರಪುರ, ಹಂದ್ರಾಳ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ನೋಡಬಹುದಾಗಿದೆ. ತನ್ನ ಬದುಕಿನೂದ್ದಕ್ಕೂ ಜನಪದರ ಆಸಕ್ತಿ, ಆಚರಣಾ ವಿಧಾನದ ಶಿಲ್ಪಕಲಾಕೃತಿಗಳನ್ನು ರಚಿಸುವುದರಲ್ಲಿಯೇ ಕಾಲ ಕಳೆದವರು, ಕಲೆಯಲ್ಲಿ ಶ್ರದ್ಧೆ, ನಿಷ್ಠೆ ವಿನಯವಂತಿಕೆ, ಸೃಜನಶೀಲ ಚಿಂತನೆಗಳ ಆಲೋಚನಾ ಕ್ರಮದೊಂದಿಗೆ ಶಿಲ್ಪಗಳನ್ನು ರಚಿಸಿದ್ದಾರೆ. ಅವರು ರಚಿಸಿದ ಕಲಾಕೃತಿಗಳನ್ನು ಈ ರೀತಿ ಕಾಣುತ್ತೇವೆ.

- ಕುದುರೆ ಶಿಲ್ಪಗಳು – 50 ಜೊತೆ ಮಾಡಿದ್ದಾರೆ.

- ಮನೆಯ ತಲಬಾಗಿಲು – 52
- ಗೌರಿಮಾಡ – 100
- ಪಡಸಾಲಿ ಜೋಡಣೆ ಕೆಲಸ – 10

ಅಲ್ಲದೇ ರೈತರಿಗೆ ಸಂಬಂಧಿಸಿದಂತೆ ಸಲಕರಣೆ ಶಿಲ್ಪಗಳನ್ನು ಸಹ ಮಾಡಿಕೊಟ್ಟಿದ್ದಾರೆ. ಪ್ರತಿಯೊಂದು ಕಲಾಕೃತಿಗಳು ನೈಜತೆಗೆ ಸಾಕ್ಷಿ ಎಂಬಂತೆ ಕಂಡುಬರುತ್ತವೆ. ಗುರುಬಸಪ್ಪನವರ ಸಂಸಾರಿಕ ಜೀವನವನ್ನು ಗಮನಿಸಿದಾಗ ತುಂಬು ಕುಟುಂಬ ಆರ್ಥಿಕವಾಗಿ ಸುಧಾರಿಸಿಕೊಂಡಿರುವ ರೀತಿಯಲ್ಲಿ ಕಾಣುತ್ತಾರೆ. ಹೆಂಡತಿ ಮಾನಮ್ಮ, ಮಕ್ಕಳಾದ ಈರಣ್ಣ, ಮಲ್ಲಿಕಾರ್ಜುನ, ನೀಲಮ್ಮ, ದೇವಕೆಮ್ಮ, ಚಂದ್ರಶೇಖರ ದೇವಿಂದ್ರ, ಗುರುಬಸಮ್ಮ ಎಂಬ ಏಳು ಜನ ಮಕ್ಕಳಿದ್ದಾರೆ. ಹಿರಿಯ ಮಗ ಈರಣ್ಣ ಮತ್ತು ಮಲ್ಲಿಕಾರ್ಜುನ* ಎಂಬುವವರು ತಂದೆಯ ಕಾಯಕ ಮರಗೆತ್ತನೆಯ ಶಿಲ್ಪಗಳನ್ನು ಮಾಡುವುದರಲ್ಲಿ ಪುನಃ ತೊಡಗಿಸಿಕೊಂಡಿದ್ದಾರೆ. ಎಂಬತ್ತು ವರ್ಷ ಪೂರೈಸಿದ ಶಿಲ್ಪಿ ಗುರುಬಸಪ್ಪನವರ ಪ್ರಸ್ತುತ ಅನಾರೋಗ್ಯದಿಂದ ಮಲಗಿರುವುದನ್ನು ಕಾಣುತ್ತೇವೆ. ಜನಪದ ಕಲಾ ಪ್ರಕಾರದಲ್ಲಿ ಶಿಲ್ಪಗಳನ್ನು ರಚಿಸುತ್ತಿದ್ದ ಗುರುಬಸಪ್ಪನವರಿಗೆ ಕರ್ನಾಟಕ ಸರಕಾರದಿಂದ ಹಾಗೂ ಶಿಲ್ಪಕಲಾ ಅಕಾಡೆಮಿಯಿಂದಾಗಲಿ ಯಾವುದೇ ಗೌರವ ಪ್ರಶಸ್ತಿ, ಪುರಸ್ಕಾರ ಲಭಿಸಿಲ್ಲ, ಇವರ ಮಕ್ಕಳಾದ ಈರಣ್ಣನವರು ತಂದೆಯ ಕಾಯಕ ಮುಂದುವರೆಸಿದ್ದಾರೆ. ಇವರ ಶಿಲ್ಪಕಲಾಕೃತಿಗಳನ್ನು ಈ ರೀತಿ ಗಮನಿಸಿ ತಲಬಾಗಿಲು, 15, ಗೌರಿಮಡಗಳು 100, ಪಡಸಾಲಿ ಜೋಡಣೆ ಕೆಲಸ 12 ಮಾಡಿರುವುದನ್ನು ತಿಳಿಸುತ್ತಾರೆ. ಅದೇ ರೀತಿ ಎರಡನೇ ಮಗ ಮಲ್ಲಿಕಾರ್ಜುನ ಶಿಲ್ಪಿಯವರು ಕುದುರೆಶಿಲ್ಪ 25, ತಲಬಾಗಿಲು 19 ಗೌರಿಮಾಡ 105, ಪಡಸಾಲಿ ಜೋಡಣೆ ಕೆಲಸ 12 ರಂತೆ ಮಾಡಿದ್ದಾರೆ. ಹಿರಿಯ ಮಗನಾದ ಈರಣ್ಣನಿಗೆ 47 ವಯಸ್ಸಿದ್ದಾರೆ. ಕಿರಿಯ 2ನೇ ಮಗನಾದ ಮಲ್ಲಿಕಾರ್ಜುನ ಅವರಿಗೆ 45 ವಯಸ್ಸು ಪೂರೈಸಿವೆ. ತಂದೆ ಗುರುಬಸಪ್ಪ ಮತ್ತು ಮಕ್ಕಳು ಸೇರಿದಂತೆ ಇಡೀ ಕುಟುಂಬವೇ ಜನಪದ ಶಿಲ್ಪಕಲಾಕೃತಿಗನ್ನು ಮಾಡಿಕೊಡುವುದರಲ್ಲಿ ತೊಡಗಿಸಿಕೊಂಡಿರುವುದು ಹರ್ಷದ ಸಂಗತಿಯಾಗಿದೆ.

ದಿವಂಗತ ಅವಣೆಪ್ಪ ತಂದೆ ಭದ್ರಪ್ಪ ಪತ್ತಾರ

ಸಗರನಾಡಿನ ಜನಪದ ಶಿಲ್ಪಿಗಳಲ್ಲಿ ಅವಣೆಪ್ಪ ಪತ್ತಾರರು ಪ್ರಮುಖರು. ಲೋಹ ಮಾಧ್ಯಮದ ಶಿಲ್ಪಗಳನ್ನು ಮಾಡುವಲ್ಲಿ ಪ್ರಸಿದ್ಧರಾಗಿದ್ದರು. ಮೂಲತಃ ಸುರಪುರ ತಾಲೂಕಿನ ಕೊಡೆಕಲ್ ಗ್ರಾಮದವರು. ನಿರಂತರ ಬದುಕಿರುವವರೆಗೂ ಶಿಲ್ಪಕಲಾಕೃತಿಗಳನ್ನು ಮಾಡುವುದರೊಂದಿಗೆ ಜನಪದರ ಜೀವನದ ಪ್ರಮುಖ ಶಿಲ್ಪಿಯಾಗಿ ಕಾಣಿಸಿಕೊಂಡಿದ್ದರು. ಕಲಾಕೃತಿ ರಚನೆಯ ಸಂದರ್ಭದಲ್ಲಿ ಸಾಮಾಜಿಕ ಪ್ರತಿಕ್ರಿಯೆ ನಮ್ಮ ನೆಲದ ಅತ್ಯುತ್ತಮ ಶಿಲ್ಪಿಯೆಂಬ ಹೆಗ್ಗಳಿಕೆಗೆ ಸಾಕ್ಷಿಯಾದವರು. ಮೊದಲ ಪ್ರಯತ್ನದ ಹಂತದಲ್ಲಿ ನಿಧಾನಗತಿಯಲ್ಲಿ ಸಾಗಿದ ಇವರ ಪ್ರತಿಭೆ ಮುಂದುವರೆದಂತೆ ಸಾಮಾಜಿಕ ಸ್ಪಂದನೆಯ ರೀತಿ ಅತ್ಯಂತ ಅನನ್ಯವಾದ ಸಂಬಂಧಗಳಿಂದ ಅನಾವರಣಗೊಳ್ಳಲು ಮುಂದಾಯಿತು ಪ್ರಾಮಾಣಿಕ ಕರ್ತವ್ಯದಲ್ಲಿ ಸೃಜನಾತ್ಮಕ ಚಿಂತನೆಯ ಶಿಲ್ಪಗಳು ಮೂಡಿ ಬಂದಿರುವುದು ವಿಶೇಷ, ಬೆಳ್ಳಿ, ಬಂಗಾರ, ತಾಮ್ರದಂತಹ ಲೋಹ ಮಾಧ್ಯಮದ ಶಿಲ್ಪಕಲಾಕೃತಿಗಳು ಗಮನಾರ್ಹವಾಗಿ ಮಾಡಿದ್ದಾರೆ.

ಉದಾಹರಣೆಗೆ ಗಮನಿಸುವುದಾದರೆ:

* ತಿಂಥಣಿ ಮೌನೇಶ್ವರ ಶಿಲ್ಪಕಲಾಕೃತಿ
* ಲಿಂಗ,
* ತೊಟ್ಟಿಲು
* ಪಲ್ಲಕ್ಕಿ
* ರಥಶಿಲ್ಪ
* ದೇವರ ಪಾದಗಳು
* ದೇವರ ಕಣ್ಣುಗಳು
* ತಾಯ್ತ
* ಪಂಚಾಂಗ ಪತ್ರ

ಮಹಿಳಾ ಕೇಂದ್ರಿತ ಅಲಂಕಾರ ವಿನ್ಯಾಸದ ಆಭರಣಗಳು ಸೇರಿದಂತೆ ಹಲವು ಬಗೆಯ ಶಿಲ್ಪಕಲಾಕೃತಿಗಳನ್ನು ಮಾಡಿದ್ದಾರೆ. ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆಯಂತಹ ಮಾಧ್ಯಮದ

ಶಿಲ್ಪಗಳು ಅತ್ಯಂತ ಸೂಕ್ಷ್ಮ ಕುಸುರಿ ಕೆಲಸವಾಗಿರುವುದರಿಂದ ನೋಡುಗರಿಗೆ ಆಕರ್ಷಕ, ಜನಪದರ ಆಸಕ್ತಿಗೆ ಅನುಗುಣವಾಗಿ, ಧಾರ್ಮಿಕ ಹಿನ್ನಲೆಯ ಪ್ರಕಾರವಾಗಿ ಶಿಲ್ಪಗಳನ್ನು ಅವಣೆಪ್ಪ ಪತ್ತಾರವರು ಮಾಡುತ್ತಿದ್ದರು. ಲೋಹ ಮಾಧ್ಯಮದ ಮುಖಾಂತರ ಜನರಲ್ಲಿ ತನ್ನನ್ನು ತಾನು ಸೆಳೆದ ಈ ಶಿಲ್ಪಿಯ ಬದುಕು ಎಂಬತ್ತರ ಇಳಿವಯಸ್ಸಿನಲ್ಲಿ ಅನಾರೋಗ್ಯದಿಂದ ನಿಧನರಾದರು. ಕೊಡೆಕಲ್, ನಾರಾಯಣಪುರ, ಹುಣಸಗಿ, ರಾಜನಕೋಳೂರು, ಸೇರಿದಂತೆ ಸಗರನಾಡಿನ ವಿವಿಧ ಗ್ರಾಮಗಳಿಗೆ ಇವರ ಶಿಲ್ಪಕಲಾಕೃತಿಗಳನ್ನು ಮಾಡಿಕೊಟ್ಟಿದ್ದಾರೆ. ಅಂತೆಯೇ ಇವರ ಜನಪದ ಶಿಲ್ಪಕಲಾಕೃತಿಗಳ ಹರವು ಮತ್ತು ಶಿಲ್ಪಿಯ ಕಲಾಸೇವೆಗೆ ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರ ಲಭಿಸಿವೆ. ಹಾಗೆಯೇ ಇವರ ಶಿಲ್ಪಕಲಾ ಸೇವೆಯನ್ನು ಪರಿಗಣಿಸಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ 2001ರಲ್ಲಿ ಗೌರವ ಪ್ರಶಸ್ತಿ ನೀಡಿ ಸತ್ಕರಿಸಿದೆ.

ಭದ್ರಪ್ಪ ತಂದೆ ಅವಣೆಪ್ಪ ಪತ್ತಾರ:

ಶಿಲ್ಪಿ ಭದ್ರಪ್ಪ ಪತ್ತಾರವರು ತಂದೆ ಅವಣೆಪ್ಪ ಅವರ ಕಲಾಕಾಯಕವನ್ನು ಮುಂದುವರೆಸಿಕೊಂಡು ನಡೆದಿರುವುದು ಕಂಡುಬರುತ್ತದೆ. ಭದ್ರಪ್ಪ*ನವರು ಅವಣೆಪ್ಪನವರ ಮಗನಾಗಿ 20 ಜೂನ್ 1971ರಲ್ಲಿ ಕೊಡೆಕಲ್ ಗ್ರಾಮದಲ್ಲಿ ಜನಿಸಿದರು. ಚಿತ್ರಕಲೆಯಲ್ಲಿ ಎ.ಎಂ.ಜಿಡಿ ಪದವಿ ಪಡೆದವರು. ಪ್ರಸ್ತುತ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಬಲಶೆಟ್ಟಿಹಾಳ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲ ವ್ಯಕ್ತಿತ್ವ ಹೊಂದಿದ್ದು, ನಾಡಿನ ವಿವಿಧೆಡೆ ಚಿತ್ರಕಲಾ ಪ್ರದರ್ಶನಗಳು ಕೂಡಾ ಮಾಡಿದ್ದಾರೆ. ವೃತ್ತಿಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಪ್ರವೃತ್ತಿಯಲ್ಲಿ ತನ್ನ ಮನೆಯ ಕಲಾ ಕಾಯಕವಾದ ಪತ್ತಾರಿಕೆ ಕೆಲಸದಲ್ಲಿ ಹೆಚ್ಚು ಸಮಯವನ್ನು ಮೀಸಲಿರಿಸಿಕೊಂಡು ಹಲವಾರು ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಆರ್ಥಿಕವಾಗಿ ಸಬಲವಾಗಿರುವ ಭದ್ರಪ್ಪನವರಿಗೆ ಕಲಾಕೃತಿ ರಚನೆಯ ಕಾಯಕವೇ ಅತ್ಯಂತ ಪ್ರಮುಖವಾದ ಸಂಗತಿಯಾಗಿದೆ. ಜನಸಾಮಾನ್ಯರ ಬೇಡಿಕೆಗಳಂತೆ ಮೂರ್ತಿಶಿಲ್ಪಗಳು ಒಡವೆ, ಪೂಜಾ ಸಾಮಗ್ರಿಗಳು ಸೇರಿದಂತೆ ಹಲವು ನೆಲೆಯ ಕಲಾಕೃತಿಗಳನ್ನು ರಚಿಸುತ್ತಾರೆ. ಕಲಾಕೃತಿ ರಚನೆಯ ಮಾಧ್ಯಮ ಈ ಕೆಳಗಿನಂತೆ ಕಾಣುತ್ತೇವೆ.

ಲೋಹ ಹಾಗೂ ಕಟ್ಟಿಗೆಗಳಿಂದ ಕಲಾಕೃತಿ ರಚಿಸಿದ್ದಾರೆ. ಆದರೆ ಅಧಿಕವಾಗಿ ಲೋಹ ಮಾಧ್ಯಮವೇ ಹೆಚ್ಚು ಬಳಸಿಕೊಂಡು ಕಲಾಕೃತಿ ರಚನೆಗೆ ಮುಂದಾಗಿದ್ದಾರೆ. ದೇವರ ವಿಗ್ರಹ, ಪಲ್ಲಕ್ಕಿ, ಮತ್ತು ಅಲಂಕಾರಿಕ ವಸ್ತುಗಳನ್ನು ರಚಿಸುತ್ತಾರೆ.

ಶಿಲ್ಪಕಲಾಕೃತಿಗಳ ಮಾಧ್ಯಮ

ತಾಮ್ರ

ಬೆಳ್ಳಿ

ಬಂಗಾರ

ಹಿತ್ತಾಳೆ ಸೇರಿದಂತೆ ಹಲವು ಮಾಧ್ಯಮಗಳ ಬಳಕೆಯಿಂದ ಶಿಲ್ಪಗಳನ್ನು ಮಾಡುತ್ತಾರೆ. ಈ ಕಲೆ ಭದ್ರಪ್ಪನವರ ಮುತ್ತಾತನವರ ಕಾಲದಿಂದ ಬಳುವಳಿಯಾಗಿ ಬಂದಿರುವ ಜನಪದ ಪ್ರಕಾರದ ಕಲೆಯಾಗಿದ್ದು, ಅಂದಿನಿಂದ ಬಂದಿರುವ ಪಾರಂಪರಿಕ ಕಲೆಯನ್ನು ಶಿಲ್ಪಿ ಭದ್ರಪ್ಪನವರು ಮುಂದುವರೆಸಿಕೊಂಡು ನಡೆದಿರುವುದು ಅಭಿನಂದನೀಯವಾದದ್ದು. ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ ಮಾಧ್ಯಮದಿಂದ ದೇವರ ವಿಗ್ರಹ, ಮುಖ, ಲಿಂಗ, ತೊಟ್ಟಿಲು, ಪಲ್ಲಕ್ಕಿ, ಕಣ್ಣು, ದೇವರ ಗರ್ಭಗುಡಿಯ ಕಳಶ, ದ್ವಾರ ಬಾಗಿಲ, ಅಲಂಕಾರಿಕ ನಕ್ಷಾ ವಿನ್ಯಾಸಗಳು ಹೀಗೆ ಜನಪದರ ಧಾರ್ಮಿಕ ಆರಾಧನಾ ನೆಲೆಯ ಕಲಾಕೃತಿಗಳನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಕೆಲವೊಂದು ಭದ್ರಪ್ಪನವರು ಮಾಡಿದ ಕಲಾಕೃತಿಗಳ ವಿವರವನ್ನು ಇಲ್ಲಿ ಕಾಣುತ್ತೇವೆ.

1) ವೆಂಕಟರಮಣನ (ಮುಖಭಾವ) ಶಿಲ್ಪ – 500 ಗ್ರಾಂ ಬಂಗಾರದಿಂದ ಅಳತೆ 4x6 ಎತ್ತ ಅಗಲ, ದಪ್ಪವಾಗಿದ್ದು, ಉಬ್ಬು ಶಿಲ್ಪ ಮಾದರಿಯಲ್ಲಿ ರಚಿಸಿದ್ದಾರೆ.

2) ಅಜೀಂ ಪ್ರೇಮಜೀ ಅವರ ಭಾವಶಿಲ್ಪಿ, ತಾಮ್ರದಿಂದ ಮಾಡಿದ್ದಾರೆ, ಅಳತೆ 6x4 ಇರುತ್ತದೆ.

3) ಕೊಡೆ (ಛತ್ರಿ) 1 ಕೆಜಿ. ಬೆಳ್ಳಿಯಿಂದ ಮಾಡಿದ್ದಾರೆ ಅಗಲ 12 ಇಂಚು ಅಗಲ ಮತ್ತು ವೃತ್ತಾಕಾರವಾಗಿದ್ದು, ಈ ಶಿಲ್ಪವನ್ನು ಕಲಬುರಗಿಯ ಹಿರಿಯ ಚಿತ್ರಕಲಾವಿದ ಮೋಹನ ಸೀತನೂರು ಅವರಿಗೆ ಮಾಡಿ ಕೊಟ್ಟಿದ್ದಾರೆ.

4) ಪಲ್ಲಕ್ಕಿ ಶಿಲ್ಪ – ಬೆಳ್ಳಿಯಿಂದ ಮಾಡಿದ್ದು (ಒಂದುವರೆ ಕೆ.ಜಿ. ಬೆಳ್ಳಿ) ಈ ಶಿಲ್ಪವನ್ನು

ಸಗರನಾಡಿನ ಪ್ರದೇಶದಲ್ಲಿ ಬಹುತೇಕ ಮರಗೆತ್ತನೆಯ ಶಿಲ್ಪಿಗಳೇ ಅಧಿಕವಾಗಿ ಕಂಡುಬರುವ ಈ ಸಂದರ್ಭದಲ್ಲಿ ಲೋಹ ಮಾಧ್ಯಮದಿಂದ ಕಲಾಕೃತಿ ರಚಿಸುವ ವಿಶಿಷ್ಠ ಶಿಲ್ಪಿಯಾಗಿ ಭದ್ರಪ್ಪ ಪತ್ತಾರವರು ಕಂಡುಬರುತ್ತಿರುವುದು ಇವರ ವಿಶೇಷತೆಯಾಗಿದೆ. ಪರಂಪರೆಯ ಕಲಾ ಮೆರಗನ್ನು ಮತ್ತಷ್ಟು ಹೆಚ್ಚಿಸುವಲ್ಲಿ ಈ ಶಿಲ್ಪಿಯ ಪಾತ್ರ ಬಹುಮುಖ್ಯವಾದದ್ದು.

ಬಸಣ್ಣ ತಂದೆ ಕಾಳಪ್ಪ ಕಂಚಗಾರ

ಸಗರನಾಡಿನ ಹಿರಿಯ ಶಿಲ್ಪಿಗಳಲ್ಲಿ ಬಸಣ್ಣ ಕಂಚಗಾರವರು ಪ್ರಮುಖರು, ಬಣ್ಣ ಕಂಚಗಾರವರು ಕೇವಲ ಒಬ್ಬ ಶಿಲ್ಪಿಗಳಲ್ಲದೆ ಬಹುಮುಖ ಪ್ರತಿಭೆಯ ವ್ಯಕ್ತಿತ್ವದವರು. ಜನಪದರ ಜೀವಾಳವೆಂಬಂತೆ ಜನಜೀವನದ ಸಂಕಷ್ಟಗಳಿಗೆ ಪರಿಹಾರದ ಮಾರ್ಗಗಳನ್ನು ಹುಡುಕಿಕೊಡುವಂತಹ ಜ್ಯೋತಿಷ್ಯರು ಹೌದು. ಹಾಗೆಯೇ ಜನಪದ ಮರಗೆತ್ತನೆಯ ಶಿಲ್ಪಿ, ಕನ್ನಡ ಸಾಹಿತಿ, ನಾಟಕಕಾರರು, ವಾಸ್ತುಶಿಲ್ಪಿ, ಅಲ್ಲದೇ ಬಸಣ್ಣ ಕಂಚಗಾರವರು ಕವಿ ಹೃದಯಿಗಳು ಹೌದು. ಹತ್ತು ಹಲವು ಸೃಜನಾತ್ಮಕ ಚಿಂತನೆಯಿಂದ ಕಂಡುಬರುವ ಇವರ ಬದುಕು ಸದಾ ಚಲನಶೀಲತೆಯ ಸಂಕೇತವಾಗಿದೆ, ಶಿಲ್ಪಕಲೆಯ ರಚನೆ, ಕಲಾಜಗತ್ತಿನ ಚಟುವಟಿಕೆಗಳಲ್ಲಿ ಭಾಗವಹಿಸುವ ಪ್ರಯತ್ನವಾದಿಗಳು, ಕುದುರೆಶಿಲ್ಪ, ಗ್ರಾಮದೇವತೆ ಶಿಲ್ಪಗಳು, ತಲಬಾಗಿಲು, ಗೌರಿಮಾಡದ ಕೆತ್ತನೆ, ಪಡಸಾಲಿ ಜೋಡಣೆ, ಸೃಜನಶೀಲ ಶಿಲ್ಪಗಳು ಹೀಗೆ ಹಲವಾರು ಬಗೆಯ ವಿಶಿಷ್ಟ ಶಿಲ್ಪಕಲಾಕೃತಿಗಳನ್ನು ರಚಿಸುವಲ್ಲಿ ಗಮನಾರ್ಹ ವ್ಯಕ್ತಿತ್ವದವರು. ಅಂತೆಯೇ ಕಲಾಕೃತಿಯ ಕೆತ್ತನೆ, ತಂತ್ರಗಾರಿಕೆ, ಶೈಲಿ ಎಲ್ಲವೂ ಅಪ್ಪಟ ಗ್ರಾಮೀಣ ಪರಿಸರದ ಜನಪದ ಪ್ರಕಾರದ ಶಿಲ್ಪಗಳೇ ಹೆಚ್ಚು ಕಂಡುಬರುತ್ತವೆ. ಕೊಡೆಕಲ್, ಹುಣಸಗಿ, ಸುರಪುರ, ಶಹಾಪೂರ, ನಾರಾಯಣಪುರ, ರಾಜನಕೊಳೂರು ಸೇರಿದಂತೆ ಹಲವಾರು ಗ್ರಾಮ ಪಟ್ಟಣಗಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಇವರು ರಚಿಸಿದ ಶಿಲ್ಪಕಲಾಕೃತಿಗಳ ವಿವಿಧತೆ ಈ ಕೆಳಗಿನಂತೆ ಕಾಣುತ್ತೇವೆ.

- ಕುದುರೆ ಶಿಲ್ಪಗಳ –100
- ತಲಬಾಗಿಲು –30

---

* ಕರಣಪ್ಪ ಕಂಚಗಾರ ಅವರೊಂದಿಗೆ ಸಂದರ್ಶನ: ದಿನಾಂಕ: 05.03.2017 ಕೊಡೆಕಲ್
* ತಂದೆ ಬಸಣ್ಣ ಕಂಚಗಾರ ಅವರ ಕಲಾ ಕಾರ್ಯವನ್ನು ಮುಂದುವರೆಸಿಕೊಂಡು ನಡೆದಿದ್ದಾರೆ.

- ಪಡಸಾಲಿ ಜೋಡಣೆ –20
- ಗೌರಿಮಾಡ –100
- ಗ್ರಾಮದೇವತೆ –10 ಹುಲಿಕೇರಿ, ಯರಗಲ್, ಜಕ್ಕೆರಾಳ,

ಮಾರನಾಳ, ಸುಣಕಲ್, ಗ್ರಾಮಗಳಲ್ಲಿ ಚಂದ್ರಮ್ಮ ದೇವಿಯ ಶಿಲ್ಪ, ಪಾಲ್ಕಮ್ಮ, ಪಿಟಿಲಮ್ಮ, ತಾಯಮ್ಮ, ದೇವಿಯ ಶಿಲ್ಪಗಳನ್ನು ಮಾಡಿದ್ದಾರೆ.

- ಪುಸ್ತಕಗಳ ಪ್ರಕಟಣೆ –06

ಪಂಚಾಂಗ ಹೇಳುವಿಕೆ ನಿರಂತರವಾಗಿದೆ. ಹೀಗೆ ನಾನಾ ಬಗೆಯ ಶಿಲ್ಪಗಳನ್ನು ರಚಿಸುವುದರೊಂದಿಗೆ ನಾಟಕ ಅಭಿನಯ, ನಾಟಕ ಕಲಿಸುವಿಕೆ ಶಾಸ್ತ್ರಿಯ ಪಂಚಾಂಗ ಹೇಳುವಿಕೆ, ಪ್ರತಿಯೊಂದು ಕಾರ್ಯಚಟುವಟಿಕೆಗಳಲ್ಲಿ ನಿರಂತರ ತೊಡಗಿಸಿಕೊಂಡಿದ್ದಾರೆ. ಪ್ರಕಟಿತ ಪುಸ್ತಕಗಳು ಇಂತಿವೆ.

ಪುರಾತತ್ವ ಲಿಂಗದ ಘನತೆ ಈ ಕೃತಿಯು 1996ರಲ್ಲಿ ಬರೆದಿದ್ದಾರೆ.

ಕೊಡೆಕಲ್ ಬಸವಪೀಠದ ಅಧಿಪತಿಗಳಾದ ಮಹಾಪವಾಡ ಪುರುಷ ಶ್ರೀ ಶ್ರೀ ಶ್ರೀ ಬಸವರಾಜ ಅಪ್ಪ ಅವರ ಚರಿತ್ರೆ ಈ ಕೃತಿಯು 2006ರಲ್ಲಿ ಬರೆದಿದ್ದಾರೆ.

1994ರಲ್ಲಿ ಕೊಡೆಕಲ್ ಬಸವಣ್ಣನವರ ಜೀವನ ಚರಿತ್ರೆ.

ಕಾಲಜ್ಞಾನ ಕಿರಣ ಕೊಡೆಕಲ್ ಬಸವಣ್ಣ ನಾಟಕ ಕೃತಿ.

ಬಸವರಾಜ ಅಪ್ಪ – ನಾಟಕ ಕೃತಿ

ಹನುಮೇಶಪ್ಪ ಜೀವನ ಚರಿತ್ರೆ ಕೃತಿ

ಇವುಗಳಲ್ಲದೆ ಕಾವ್ಯ ಸಂಕಲನಗಳನ್ನು ಸಹ ಬರೆದಿದ್ದಾರೆ, ಬರವಣಿಗೆಯ ಜೊತೆ-ಜೊತೆಗೆ ಶಿಲ್ಪಕಲಾಕೃತಿಗಳನ್ನು ರಚಿಸುತ್ತಾ ಸಾಗಿರುವ ಇವರ ಕಲಾಸಾಧನೆಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 2012ನೇ ಸಾಲಿನಲ್ಲಿ ಗೌರವ ಪ್ರಶಸ್ತಿ ನೀಡಿ ಸತ್ಕರಿಸಿದೆ. ಅಂತೆಯೇ ಹಲವಾರು ಸಂಘ ಸಂಸ್ಥೆಗಳು ಸಹ ನಿರಂತರವಾಗಿ ಗೌರವಿಸಿವೆ.

ಕರಣಪ್ಪ ತಂದೆ ಬಸಣ್ಣ ಕಂಚಗಾರ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕೊಡೆಕಲ್ ಗ್ರಾಮದ ಬಸಣ್ಣ ಕಂಚಗಾರ

ಅವರ ಮಗನಾಗಿ ಕರಣಪ್ಪನವರು ಜನಿಸಿದ್ದು, ಶಿಲ್ಪಿ ಕರಣಪ್ಪನವರ ಕಲೆಗೆ ಹೆಂಡತಿ ಅನ್ನಪೂರ್ಣನವರ ಪ್ರೋತ್ಸಾಹವಿರುದನ್ನು ಕಾಣುತ್ತೇವೆ. ಕರಣಪ್ಪ ಮತ್ತು ಅನ್ನಪೂರ್ಣ ಅವರಿಗೆ ಸುನಿಲಕುಮಾರ, ಜ್ಯೋತಿ ಎಂಬ ಇಬ್ಬರು ಮಕ್ಕಳಿದ್ದಾರೆ. ಚಿಕ್ಕ ಕುಟುಂಬವಿರುವುದರಿಂದ ಅಂದವಾದ ಬದುಕನ್ನು ರೂಪಿಸಿಕೊಳ್ಳುವ, ರೂಪಿಸಿಕೊಂಡಿರುವ ಸಮಧಾನದ ಸಂಗತಿಗಳು ಗಮನಾರ್ಹವಾಗಿವೆ. ಶಿಲ್ಪಿ ಕರಣಪ್ಪ*ನವರು ಹತ್ತನೆ ತರಗತಿವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದು, ನಂತರ ತಂದೆಯ ಕಾಯಕ ಮರಗೆತ್ತನೆಯ ಕೆಲಸದಲ್ಲಿ ಮುಂದುವರೆದಿದ್ದಾರೆ. ಕರಣಪ್ಪನವರು ಸಹ ತಂದೆಯ ಹಾಗೆ ಕುದುರೆ ತಲಬಾಗಿಲು ಪಡಸಾಲಿ ಜೋಡಣೆ, ಗ್ರಾಮದೇವತೆಯ ಶಿಲ್ಪಗಳನ್ನು ಕೆತ್ತನೆ ಮಾಡುತ್ತಾರೆ. ಶಿಲ್ಪಕೆತ್ತನೆಯನ್ನು ಅಂಕಿ ಅಂಶಗಳಿಂದ ಗಮನಿಸಿದಂತೆ

ಕುದುರೆ ಶಿಲ್ಪಗಳು	–	10 ಜೊತೆ ಮಾಡಿಕೊಟ್ಟಿದ್ದಾರೆ.
ತಲಬಾಗಿಲು	–	50
ಪಡಸಾಲಿ ಜೋಡಣೆ	–	50
ಗೌರಿ ಮಾಡ	–	150
ಗಣಪತಿ ಶಿಲ್ಪ	–	05
ಗ್ರಾಮದೇವತೆ ಶಿಲ್ಪ	–	06

ರೈತರ ವ್ಯವಸಾಯ ಕೇಂದ್ರಿತ ಶಿಲ್ಪಗಳು ನಿರಂತರವಾಗಿ ರಚನೆ ಮಾಡುತ್ತಲಿದ್ದಾರೆ. ಕೊಡೆಕಲ್, ಹನುಮಸಾಗರ, ರಾಯನಪಾಳ್ಯ, ದ್ಯಾಮನಾಳ, ಅಮ್ಮಾಪುರ ಎಸ್.ಕೆ. ಹುಲಿಕೇರಿ, ಮಾರನಾಳ (ದೊಡ್ಡ ತಾಂಡಾ) ನಾರಾಯಣಪುರ, ಸೇರಿದಂತೆ ಹಲವಾರು ಗ್ರಾಮಗಳಿಗೆ ಶಿಲ್ಪಗಳನ್ನು ಮಾಡಿಕೊಟ್ಟಿದ್ದಾರೆ.

ಬೇವಿನ ಮರದಿಂದ ಅತಿ ಹೆಚ್ಚು ಶಿಲ್ಪಗಳನ್ನು ಮಾಡಿದ್ದಾರೆ. ಪ್ರತಿಯೊಂದು ಶಿಲ್ಪ ಕೆತ್ತನೆಯ ತಂತ್ರಗಾರಿಕೆ, ವಿಧಾನ, ಎಲ್ಲವೂ ಆಕರ್ಷಕ ನೆಲೆಯಲ್ಲಿ ಕಂಡುಬರುವಂತೆ ಮಾಡುತ್ತಾರೆ. ಅಲ್ಲದೇ ದೇವಿಮೂರ್ತಿ ಕೆತ್ತನೆಯೊಂದಿಗೆ ಶಿಲ್ಪಗಳಿಗೆ ಬಣ್ಣ ಲೇಪಿಸುವ ಕಾರ್ಯವು ಆಕರ್ಷಕವಾಗಿದೆ.

---

* ಮೇಘರಾಜ ಪತ್ತಾರ ಅವರೊಂದಿಗೆ ಸಂದರ್ಶನ ನಾರಾಯಪುರ : ದಿನಾಂಕ: 06.03.2017

ದಟ್ಟವಾದ ಕೆಂಪು, ನೀಲಿ, ಹಸಿರು, ಹಳದಿ, ಬಿಳಿ, ಕಪ್ಪು ವರ್ಣಗಳ ಸಂಯೋಜನೆ, ರೇಖೆ, ಚುಕ್ಕಿ, ಆಯಾತ, ವೃತ್ತ ವಿನ್ಯಾಸದ ಚಿತ್ತಾರ ಅಲಂಕಾರಿವಾಗಿ ಮೂಡಿಬಂದಿರುತ್ತದೆ.

ಕುದುರೆ ತಲಬಾಗಿಲು, ಗೌರಿಮಾಡ, ಪಡಸಾಲಿ ಜೋಡಣೆ, ಕೆಲಸಗಳು ಸಹ ಸೃಜನಾತ್ಮಕ ಚಿಂತನೆಯ ವಿನ್ಯಾಸಗಳಿಂದ ಜನರನ್ನು ಆಕರ್ಷಿಸುವವಂತೆ ಮಾಡುತ್ತಾರೆ. ಜನಪದ ಶಿಲ್ಪಗಳನ್ನೇ ಮಾಡುವುದರೊಂದಿಗೆ, ಬದುಕು ಸವೆಸುತ್ತಿರುವ ಶಿಲ್ಪಿಕರಣಪ್ಪನವರಿಗೆ 2015ರ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸಹಯೋಗದಲ್ಲಿ ಲಭಿಸಿದೆ. ಅಲ್ಲದೆ ಮೈಸೂರಿನ ರಾಮಸನ್, ಕಲಾಪ್ರತಿಷ್ಠಾನದ ವತಿಯಿಂದ ಇವರು ರಚಿಸಿದ ಗ್ರಾಮದೇವತೆ ಶಿಲ್ಪಕ್ಕೆ ಬಹುಮಾನವು ದೊರೆತಿದೆ. ನಿರಂತರ ಶಿಲ್ಪಕಲಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಜನಪದ ಶಿಲ್ಪಿ ಕರಣಪ್ಪನವರಿಗೆ ಸಂಘ ಸಂಸ್ಥೆಗಳಿಂದಲೂ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

ಮೇಘರಾಜ ತಂದೆ ಕಾಳಪ್ಪ ಪತ್ತಾರ

ಸಗರನಾಡಿನ ಜನಪದ ಶಿಲ್ಪಿಗಳಲ್ಲಿ ವಿಶೇಷ ವ್ಯಕ್ತಿಯಾದ ಮೇಘರಾಜ ಪತ್ತಾರವರು ಶಿಲಾ (ಕಲ್ಲು) ಮಾಧ್ಯಮದಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಸುರಪುರ ತಾಲೂಕಿನ ನಾರಾಯಣಪುರದಲ್ಲಿ ವಾಸವಾಗಿದ್ದಾರೆ. ತಂದೆ ಕಾಳಪ್ಪ ತಾಯಿ ಲಕ್ಷ್ಮೀಬಾಯಿ ಅವರ ಮಗನಾಗಿ ಬಾಗಲಕೋಟೆ ಜಿಲ್ಲೆಯ ಹುನಗುಂದಾ ತಾಲೂಕಿನ ಇದ್ದಲಗಿ ಎಂಬ ಗ್ರಾಮದಲ್ಲಿ 01 ಜೂನ್ 1961ರಲ್ಲಿ ಜನಿಸಿದರು. ಇವರ ತಂದೆ ತಾಯಿ ಕೂಲಿ ಕೆಲಸ ಮಾಡುವುದರೊಂದಿಗೆ, ಮಗ ಮೇಘರಾಜನನ್ನು ಶಾಲೆ ಕಲಿಯಲು ಬಿಡುತ್ತಾರೆ. ಬಡತನವಿರುವ ಕಾರಣಕ್ಕಾಗಿ ಮೇಘರಾಜ ಪತ್ತಾರವರು ಕೇವಲ ಏಳನೇ ತರಗತಿ ಮಾತ್ರ ಶಿಕ್ಷಣ ಕಲಿತರು. ಚಿಕ್ಕಂದಿನಿಂದಲೇ ಚಿತ್ರಕಲೆಯಲ್ಲಿ ಆಸಕ್ತಿಯಿರುವುದರಿಂದ ಹಲವಾರು ಚಿತ್ರಗಳನ್ನು ಬರೆದು ಬಹುಮಾನಗಳನ್ನು ಸಹ ಅಂದು ಪಡೆದಿದ್ದರು. ಮುಂದೆ ದೊಡ್ಡವರಾದಂತೆ ಮರಗೆತ್ತನೆಯ ಕೆಲಸದಲ್ಲಿ ತೊಡಗಿದರು. ಈ ವೃತ್ತಿಯನ್ನು ಮಾಡುತ್ತಾ ಆರ್ಥಿಕ ಸ್ಥಿತಿ ಹೆಚ್ಚಾದಂತೆ ಏನು ಮಾಡುವುದು ನಮ್ಮ ಬಡತನ ಅರಿಯಲಿಕ್ಕೆ ಎಂಬ ಚಿಂತನೆಗೆ ಮುಂದಾಗುತ್ತಾರೆ. ಅಂತೆಯೇ ಸಮಯ ಸಿಕ್ಕಾಗ ಮಿಠಾಯಿ, ಕರದಂಟು, (ಸಿಹಿತಿನಿಸು) ಗಳನ್ನು ಮಾರಿ ಬಂದ ಹಣದಲ್ಲಿ ಉಪಜೀವನ ನಡೆಸುತ್ತಾರೆ. ಸಾಂಸ್ಕೃತಿಕ

ವಲಯದಲ್ಲಿ ಆಸಕ್ತಿಯಿಂದ ಅಲೆದಾಡುತ್ತಿದ್ದ ಮೇಘರಾಜ ಪತ್ತಾರರಿಗೆ ಅಮರಶಿಲ್ಪಿ ಜಕ್ಕಣಾಚಾರ್ಯರು ಮತ್ತು ಅವರ ಶಿಲ್ಪಕಲೆ ಪುನಃ ಪ್ರೇರಣೆಗೊಂಡು ಮುಂದೆ ಶಿಲಾ ಮಾಧ್ಯಮದ ಶಿಲ್ಪಕಲಾ ಕೆತ್ತನೆಯ ಅಧ್ಯಯನಕ್ಕೆ ಮುಂದಾಗುತ್ತಾರೆ. ಬಾಗಲಕೋಟೆಯ ಶಿಲ್ಪಿ ಗುಂಡಪ್ಪ ತಂದೆ ದೇವಿಂದ್ರಪ್ಪ ಮಾಯಾಜಾರಿ ಎಂಬ ಹಿರಿಯ ಅನುಭವಿ ಕಲಾ ಗುರುವಿನ ಹತ್ತಿರ ಶಿಲ್ಪಕಲೆ ವಿದ್ಯೆಯನ್ನು ಕಲಿತರು. ಶಿಲ್ಪಕಲೆಯಲ್ಲಿ ಪ್ರಾವಿಣ್ಯತೆಯನ್ನು ಪಡೆಯುತ್ತಾ ಮುಂದೆ ಇಪ್ಪತ್ತನೇ ವಯಸ್ಸಿನಲ್ಲಿ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ನಾರಾಯಣಪುರ ಗ್ರಾಮದ ಪಾರ್ವತಿ ಎಂಬುವರನ್ನು ಮದುವೆಯಾಗಿ ಪುನಃ ಹೆಂಡತಿಯ ಊರನ್ನೇ ನೆಲೆಯಾಗಿ ಪರಿವರ್ತಿಸಿಕೊಂಡು ಜೀವನ ಆರಂಭಿಸುತ್ತಾನೆ. ಮೊದಲಿಗೆ ಲಕ್ಷ್ಮೀ ಮೂರ್ತಿ ಶಿಲ್ಪವನ್ನು ಮಾಡುತ್ತ ಜನರ ಆಕರ್ಷಣೆಗೆ ಮತ್ತು ಗೌರವಕ್ಕೆ ಪಾತ್ರರಾಗುತ್ತಾರೆ. ಮುಂದೆ ಶಿಲ್ಪಕಲೆಯ ಕೆತ್ತನೆ ಜನಮುಖಿಯಾದಂತೆ ಆರ್ಥಿಕ ಸಮಸ್ಯೆಯು ಸಹ ಬಗೆ ಹರಿಯುತ್ತ ಅಂದವಾದ ಬದುಕನ್ನು ರೂಪಿಸಿಕೊಳ್ಳುತ್ತಾರೆ.

ಪ್ರಸ್ತುತ ಈ ಶಿಲ್ಪಿಗೆ ಐವತ್ತಾರರ ವಯಸ್ಸು ಸಿದ್ದಣ್ಣ, ಶ್ರೀದೇವಿ, ಭಾಗ್ಯಲಕ್ಷ್ಮೀ ಎಂಬ ಮೂರು ಜನ ಮಕ್ಕಳಿದ್ದಾರೆ. ಮಗ ಸಿದ್ದಣ್ಣನು ಸಹ ತಂದೆಯ ಹಾಗೆ ಕಲ್ಲಿನ ಮೂರ್ತಿ ಶಿಲ್ಪಗಳನ್ನು ಕೆತ್ತನೆ ಮಾಡುತ್ತಿದ್ದಾರೆ. ಶಿಲಾ ಮಾಧ್ಯಮದ ಶಿಲ್ಪಿಗಳನ್ನು ಕೆತ್ತನೆ ಮಾಡುವುದಕ್ಕೆ ಸುತ್ತಿಗೆ. ಚಿಕ್ಕ ಚಿಕ್ಕ ಗಾತ್ರದ ಉಳಿಗಳು, ಮೊಳೆ ಮುಂತಾದ ಕಬ್ಬಿಣದ ಮತ್ತು ಉಕ್ಕಿನ ಸಾಮಗ್ರಿಗಳು ಬೇಕಾಗುತ್ತವೆ. ಅಂಧಕಾರವಾಗಿ ಬಿದ್ದಿರುವ ಕಾಡುಗಲ್ಲನ್ನು ಸುಂದರ ದೇವರ ಶಿಲ್ಪಗಳನ್ನಾಗಿ ನಿರ್ಮಿಸುವುದೆಂದರೆ ಕಷ್ಟದ ಕೆಲಸವೇ ಸರಿ. ಶೆಲ್ಲಿಕೇರಿ ಮತ್ತು ಚಂದ್ರಶಿಲೆ ಎಂಬ ಕಲ್ಲುಗಳಿಂದ ಮೂರ್ತಿ ಶಿಲ್ಪಗಳನ್ನು ಕೆತ್ತನೆ ಮಾಡುತ್ತಾರೆ. ಹಾಗೆಯೇ ಹನುಮಸಾಗರದಿಂದ ಬರುವ ಮರಳು ಕಲ್ಲಿನಿಂದಲೂ ಸಹ ಶಿಲ್ಪಗಳನ್ನು ಮಾಡುತ್ತಾರೆ. ಹದಿನೈದು, ದಿವಸ, ತಿಂಗಳ, ಎರಡು ತಿಂಗಳ, ಮೂರು ತಿಂಗಳು, ಆರು ತಿಂಗಳು, ಒಂದು ವರ್ಷ ಹೀಗೆ ಹಲವು ದಿನಗಳಲ್ಲಿ ಸಮಯ ತೆಗೆದುಕೊಂಡು ನಿತ್ಯ ಕಾಯಕದ ರೀತಿಯಲ್ಲಿ ಶಿಲ್ಪಗಳನ್ನು ಕೆತ್ತನೆ ಮಾಡುತ್ತಾರೆ. ದೇವರ ವಿಗ್ರಹಗಳನ್ನು ಕೆತ್ತನೆ ಮಾಡುವಾಗ ಭಕ್ತಿ, ನಿಷ್ಠೆ, ಉಪವಾಸ, ವೃತ. ಪೂಜೆ ವಿಧಾನಗಳು, ವಾರ, ತಿಥಿಗಳನ್ನು ಅನುಸರಿಸುತ್ತ ದೇವರ ವಿಗ್ರಹಗಳನ್ನು ಮಾಡುತ್ತಾರೆ. ಶಿಲ್ಪಗಳು ಎಲ್ಲಿಯೂ ಸಹ

ಪುರಸ್ಕಾರಗಳು ಲಭಿಸಿಲ್ಲ. ಪ್ರಶಸ್ತಿ ಪುರಸ್ಕಾರಗಳಿಗೆ ಬೆನ್ನು ಬೀಳದೆ, ತನ್ನ ಕಲಾಕಾಯಕದಲ್ಲಿ ತನ್ನನು ತಾನು ಪುನಃ ತೊಡಗಿಸಿಕೊಂಡು ಸಗರ ನಾಡಿನ ಜನಪದರ ಜೀವನದಲ್ಲಿ ಉತ್ತಮ ಶಿಲ್ಪಿಯಾಗಿರುವುದು ಗಮನಾರ್ಹವಾಗಿದೆ. ಇವರ ಶಿಲ್ಪ ಕಲಾಕೃತಿಗಳು ಕಪ್ಪುವರ್ಣದಲ್ಲಿ ಕಂಗೊಳಿಸುತ್ತವೆ. ಸುರಪುರದ ಶಾಸಕ ರಾಜಾವೆಂಕಟಪ್ಪ ನಾಯಕ ಅವರು ಮೇಘರಾಜ ಪತ್ತಾರರ ಕಲೆಯನ್ನು ಮೆಚ್ಚಿ ನಾರಾಯಣಪುರದಲ್ಲಿ ಈ ಶಿಲ್ಪಿಗಾಗಿ ಒಂದು ನಿವೇಶನವನ್ನು ಸರಕಾರದಿಂದ ಮಂಜೂರು ಮಾಡಿಸಿದ್ದು, ಇವರ ಕಲೆಗೆ ಒಲಿದ ಗೌರವವೆನ್ನಬಹುದು. ಮೇಘರಾಜ ಪತ್ತಾರರಿಗೆ ಸಗರನಾಡಿನ ಅತ್ಯುತ್ತಮ ಶಿಲ್ಪಿಯೆಂದರೆ ತಪ್ಪಾಗಲಾರದು.

ಪ್ರಭುಲಿಂಗಪ್ಪ ತಂದೆ ಗುರಪ್ಪ ವಿಶ್ವಕರ್ಮ:

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮಾಳನೂರು ಗ್ರಾಮದ ಜನಪದ ಶಿಲ್ಪಿ ಪ್ರಭುಲಿಂಗಪ್ಪ* ನವರು ಪ್ರತಿಭಾವಂತ ಶಿಲ್ಪಿಗಳಾಗಿದ್ದು, ಅವರ ಕ್ರಿಯಾಶೀಲ ಕಲಾ ಚಟುವಟಿಕೆಗಳಿಂದ ಮೂಡಿಬಂದಿರುವ ಅನೇಕ ಶಿಲ್ಪಕಲಾಕೃತಿಗಳು ಎಲ್ಲೆಡೆ ಹೆಗ್ಗಳಿಕೆ ಪಡೆದುಕೊಂಡಿವೆ ಮನೆಯ ತಲಬಾಗಿಲು, ಕುದುರೆ ಶಿಲ್ಪಗಳು ಸೌಂದರ್ಯದ ಪ್ರತೀಕವಾಗಿ ಮತ್ತು ನೈಜನತೆಗೆ ಹತ್ತಿರವಾಗಿ ರೂಪ ಪಡೆದಿವೆ. ಸೃಜನಾತ್ಮಕ ಕಲೆಯ ಹೊಳಹುಗಳಿಂದ ಶಿಲ್ಪಗಳ ಚೆಲುವು ಆಕರ್ಷಕ ನೆಲೆಯಲ್ಲಿ ಕಾಣಿಸಿಕೊಳ್ಳುತ್ತವೆ. ಪಡಸಾಲೆಯ ಗೌರಿಮಾಡವು ಸಹ ಗಿಡ ಬಳ್ಳಿಯ ಹೂ, ಎಲೆ, ಬಳ್ಳಿಗಳ ಕೆತ್ತನೆಯಿಂದ ಅಲಂಕಾರಿಕವಾಗಿ ಕಂಡುಬರುತ್ತವೆ. ಪಡಸಾಲಿ ಜೋಡಣೆಯ ಕಂಬಗಳು, ತಲೆಬೋದು, ಗದ್ದಿಗೆ ಕಲ್ಲು, ದಿಂಡು, ತೆಂಗಿನ ಕಾಯಿಯ ಶಿಲ್ಪಗಳು ಅತ್ಯಂತ ಆಕರ್ಷಕ ನೆಲೆಯಲ್ಲಿ ಕೆತ್ತನೆ ಮಾಡುತ್ತಾರೆ.

ಉದಾ: ಗಮನಿಸಿರಿ

ಕುದುರೆ ಶಿಲ್ಪಗಳು	–	50
ಪಡಸಾಲಿ ಜೋಡಣೆ	–	25
ಗೌರಿಮಾಡ ಶಿಲ್ಪಗಳು	–	52

* ಪ್ರಭುಲಿಂಗಪ್ಪ ಅವರೊಂದಿಗೆ ಸಂದರ್ಶನ ದಿನಾಂಕ: 05.03.2017 ಮಾಳನೂರು.

ಸುರಪೂರ ತಾಲೂಕಿನ ಕೋನಾಳ ಗ್ರಾಮದ ಶಿಲ್ಪಿ
ಗುರುಬಸಪ್ಪ ತಂದೆ ದೇವಿಂದ್ರಪ್ಪ ವಿಶ್ವಕರ್ಮಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಗುರುಬಸಪ್ಪ ವಿಶ್ವಕರ್ಮ ಅವರ ಭಾವಚಿತ್ರ



ತಲಬಾಗಿಲ ಶಿಲ್ಪ

ಸುರಪೂರ ತಾಲೂಕಿನ ಕೋನಾಳ ಗ್ರಾಮದ
ಶಿಲ್ಪಿ ಈರಣ್ಣ ತಂದೆ ಗುರುಬಸಪ್ಪ ವಿಶ್ವಕರ್ಮಅವರ ಕಲಾಕೃತಿಗಳು



ಶಿಲ್ಪಿ ಈರಣ್ಣ ವಿಶ್ವಕರ್ಮ ಅವರ ಭಾವಚಿತ್ರ



ಶಿಲ್ಪ ಕೆತ್ತನೆಯಲ್ಲಿ ಈರಣ್ಣ ವಿಶ್ವಕರ್ಮ

ಕೋನಾಳ ಗ್ರಾಮದ ಶಿಲ್ಪಿ ಮಲ್ಲಿಕಾರ್ಜುನ ತಂದೆ ಗುರುಬಸಪ್ಪ ವಿಶ್ವಕರ್ಮ
ಮತ್ತು ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಮಲ್ಲಿಕಾರ್ಜುನ ತಂದೆ ಗುರುಬಸಪ್ಪ ವಿಶ್ವಕರ್ಮ



ಕೋನಾಳ ಗ್ರಾಮದ ಗೌರಿ ಶಿಲ್ಪ



ಕೋನಾಳ ಗ್ರಾಮದ ಗೌರಿ ಶಿಲ್ಪ

ದೇವಾಪುರ

~~ಸೋಕನಹಳ್ಳಿ~~ ಗ್ರಾಮದ ಶಿಲ್ಪಿ ಕರ್ಣಪ್ಪ ತಂದೆ ಗುರಪ್ಪ ಕಂಚಗಾರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಕರ್ಣಪ್ಪ ತಂದೆ ಗುರಪ್ಪ ಕಂಚಗಾರ



ದೇವಾಪೂರ ಗ್ರಾ ಶಿಲ್ಪ

ದೇವಾಪೂರ ಗ್ರಮದ ಶಿಲ್ಪಿ ಮಾನಪ್ಪ ತಂದೆ ಗಣಪತಿ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಮಾನಪ್ಪ ತಂದೆ ಗಣಪತಿ ಬಡಿಗೇರ



ಕಟಕಿಯ ಶಿಲ್ಪ



ತಲಬಾಗಿಲ ಶಿಲ್ಪ


ಕೊಡೆಕಲ್ ಗ್ರಾಮದ ಶಿಲ್ಪಿ ಬಸಣ್ಣ ಕಂಚಗಾರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಬಸಣ್ಣ ಕಂಚಗಾರ ಅವರ ಗ್ರಾಮದೇವತೆ ಶಿಲ್ಪ ಕಲಾಕೃತಿಗಳು



ಗ್ರಾಮದೇವತೆ ಶಿಲ್ಪ



ಸೃಜನಾತ್ಮಕ ಶಿಲ್ಪ ಹಾಗೂ ಗೌರಿ ಶಿಲ್ಪ

ಕೊಡೆಕಲ್ ಗ್ರಾಮದ ಶಿಲ್ಪಿ ಕರಣಪ್ಪ ಬಿ. ಕಂಚಗಾರ ಅವರ ಭಾವಚಿತ್ರ



ಕೊಡೆಕಲ್ ಗ್ರಾಮದ ಶಿಲ್ಪಿ ಕರಣಪ್ಪ ಬಿ. ಕಂಚಗಾರ ಅವರ ಶಿಲ್ಪಕಲಾಕೃತಿಗಳು



ಗ್ರಾಮ ದೇವತೆ ಶಿಲ್ಪ



ಗಣೇಶ ಶಿಲ್ಪದ ಮುಂದೆ ಕರಣಪ್ಪ ಕಂಚಗಾರ

ಕೊಡೇಕಲ್ ಗ್ರಾಮದ ಶಿಲ್ಪಿ ದಿ|| ಅವಣೆಪ್ಪ ಪತ್ತಾರ
ಮತ್ತು ಅವರ ಶಿಲ್ಪಕಲಾಕೃತಿಗಳು



ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಗೌರವ ಪ್ರಶಸ್ತಿ ಸ್ವೀಕರಿಸುತ್ತಿರುವುದು ಶಿಲ್ಪಿ ದಿ|| ಅವಣೆಪ್ಪ ಪತ್ತಾರ



ಬೆಳ್ಳಿಯಿಂದ ಮಾಡಿದ ನಾಗ ಶಿಲ್ಪ



ಶಿಲ್ಪಿ ದಿ|| ಅವಣೆಪ್ಪ ಪತ್ತಾರರವರ ಭಾವಚಿತ್ರ

ಕೋನಾಳ ಗ್ರಾಮದ ಶಿಲ್ಪಿ ಮಲ್ಲಿಕಾರ್ಜುನ ತಂದೆ ಕಾಳಪ್ಪ ಮತ್ತು ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಮಲ್ಲಿಕಾರ್ಜುನ ತಂದೆ ಕಾಳಪ್ಪ ಕುದುರೆ ಕೆತ್ತನೆಯಲ್ಲಿ



ಶ್ರೀ ರಟಕಲ್ಲ ರೇವಣಸಿದ್ದೇಶ್ವರ ದೇವಸ್ಥಾನದ ಬೆಳ್ಳಿಯ ತೊಟ್ಟಿಲು

ಕೋನಾಳ ಗ್ರಮದ ಶಿಲ್ಪಿ ಶಾಂತಮೂರ್ತಿ ತಂದೆ ಕಾಳಪ್ಪ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಶಾಂತಮೂರ್ತಿ ತಂದೆ ಕಾಳಪ್ಪ



ಪಡಸಾಲೆ ಜೋಡಣೆ ಶಿಲ್ಪ



ಪಡಸಾಲೆ ಜೋಡಣೆ ಶಿಲ್ಪಗಳು

ಕೋನಾಳ ಗ್ರಾಮದ ಶಿಲ್ಪಿ ಮಲ್ಲಿಕಾರ್ಜುನ ತಂದೆ ಕಾಳಪ್ಪ ಮತ್ತು ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಮಲ್ಲಿಕಾರ್ಜುನ ತಂದೆ ಕಾಳಪ್ಪ ಕುದುರೆ ಕೆತ್ತನೆಯಲ್ಲಿ



ಕುದುರೆಯ ಮುಂದೆ ಶಿಲ್ಪಿ



ಶಿಲ್ಪಿಯೊಂದಿಗೆ ಕ್ಷೇತ್ರಕಾರ್ಯದಲ್ಲಿ ಸಂಶೋಧಕರು

ಸುರಪುರ ತಾಲೂಕಿನ ಕೊಡೆಕಲ್ ಗ್ರಾಮದ
ಶಿಲ್ಪಿ ಮಾನಪ್ಪ ತಂದೆ ವೀರಸಂಗಪ್ಪ ಪತ್ತಾರ ಅವರ ಕಲಾಕೃತಿಗಳು



ಶಿಲ್ಪಿ ಮಾನಪ್ಪ ಅವರ ಭಾವಚಿತ್ರ



ಬೆಳ್ಳಿ ಮುಖವಾಡ ಶಿಲ್ಪ

ಸುರಪುರ ತಾಲೂಕಿನ ಕಲ್ಲದೇವನಹಳ್ಳಿ ಗ್ರಾಮದ
ಶಿಲ್ಪಿ ನಿಂಗಯ್ಯ ತಂದೆ ಮಹಾದೇವಯ್ಯ ಗಣಾಚಾರಿ ಅವರ ಕಲಾಕೃತಿಗಳು



ಶಿಲ್ಪಿ ನಿಂಗಯ್ಯ ಗಣಾಚಾರಿ ಅವರ ಭಾವಚಿತ್ರ



ದೇವರ ಬಾಗಿಲ ಶಿಲ್ಪ

ನಾರಾಯಣಪೂರ ಗ್ರಾಮದ ಶಿಲ್ಪಿ ಮೇಘರಾಜ ಪತ್ತಾರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಮೇಘರಾಜ ಪತ್ತಾರ ಅವರ ಭಾವಚಿತ್ರ



ಆಂಜನೇಯ ಶಿಲ್ಪ




ದೇವಿ ಶಿಲ್ಪ

ಸುರಪೂರ ತಾಲೂಕಿನ ಹುಣಸಗಿ ಗ್ರಾಮದ
ಶಿಲ್ಪಿ ಕಾಳಪ್ಪ ತಂದೆ ದೇವಿಂದ್ರಪ್ಪ ಬಡಿಗೇರ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಕಾಳಪ್ಪ ಅವರ ಭಾವಚಿತ್ರ



ಹುಣಸಗಿ ಗ್ರಾಮದ ಗ್ರಾಮದೇವತೆ ಶಿಲ್ಪ

ಸುರಪೂರ ನಗರದ ಶಿಲ್ಪಿ ದಿ॥ ಗೋವಿಂದಪ್ಪ ತಂದೆ ಭೀಮಣ್ಣ ಕುದುರಿಮನಿ
ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ದಿ॥ ಗೋವಿಂದಪ್ಪ ಕುದುರಿಮನಿ ಅವರ ಭಾವಚಿತ್ರ



ತಲಬಾಗಿಲ ಶಿಲ್ಪ



ತಲಬಾಗಿಲ ಕುದುರೆ ಶಿಲ್ಪ

ಸುರಪೂರ ತಾಲೂಕಿನ ಮಾಳನೂರು ಗ್ರಾಮದ
ಶಿಲ್ಪಿ ಪ್ರಭುಲಿಂಗಪ್ಪ ತಂದೆ ಗಂಗಪ್ಪ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಪ್ರಭುಲಿಂಗಪ್ಪ ಅವರ ಭಾವಚಿತ್ರ



ಗ್ರಾಮದೇವತೆ ಶಿಲ್ಪ

ಸುರಪೂರ ತಾಲೂಕಿನ ನಾರಾಯಣಪೂರ ಗ್ರಾಮದ
ಶಿಲ್ಪಿ ಕಾಳಪ್ಪ ತಂದೆ ಶರಬಣ್ಣ ಬಡಿಗೇರ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಕಾಳಪ್ಪ ಅವರ ಭಾವಚಿತ್ರ



ಕಾಳಪ್ಪನವರ ರಥ ಶಿಲ್ಪ

ಸುರಪುರ ತಾಲೂಕಿನ ದೇವಾಪುರ ಗ್ರಾಮದ
ಶಿಲ್ಪಿ ಶಂಭುಲಿಂಗಪ್ಪ ತಂದೆ ಕಾಳಪ್ಪ ಪ್ರತಿಹಸ್ತ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಶಂಭುಲಿಂಗಪ್ಪ ಅವರ ಭಾವಚಿತ್ರ



ತಲಬಾಗಿಲ ಶಿಲ್ಪ

ಸುರಪುರ ತಾಲೂಕಿನ ನಗನೂರು ಗ್ರಾಮದ
ಶಿಲ್ಪಿ ಶರಣಪ್ಪ ತಂದೆ ಈರಣ್ಣ ಪತ್ತಾರ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಶರಣಪ್ಪ ಅವರ ಭಾವಚಿತ್ರ



ಕುದುರೆ ಶಿಲ್ಪ

ಸುರಪುರ ತಾಲೂಕಿನ ಕಕ್ಕೇರಿ ಗ್ರಾಮದ
ಶಿಲ್ಪಿ ಮೌನೇಶ ತಂದೆ ಕಾಳಪ್ಪ ಕಂಬಾರ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಮೌನೇಶ ಅವರ ಭಾವಚಿತ್ರ




ನಂದಿ ಶಿಲ್ಪ

ಸುರಪುರ ತಾಲೂಕಿನ ಕಕ್ಕೆರಾ ಗ್ರಾಮದ
ಶಿಲ್ಪಿ ಗಾಯತ್ರಿ ತಂದೆ ಚಂದ್ರಶೇಖರ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಗಾಯತ್ರಿ ಬಡಿಗೇರ ಅವರ ಭಾವಚಿತ್ರ




ಶಿಲಾ ಮಾಧ್ಯಮದ ಬುದ್ಧನ ಶಿಲ್ಪ

ಸುರಪುರ ತಾಲೂಕಿನ ಹಂದ್ರಾಳ ಗೋನಾಲ ಗ್ರಾಮದ
ಶಿಲ್ಪಿ ಮೌನೇಶ ತಂದೆ ಬಸಣ್ಣ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಮೌನೇಶ ಬಡಿಗೇರ ಅವರ ಭಾವಚಿತ್ರ



ಮರ ಮಾಧ್ಯಮದ ಶಿಲ್ಪ


ಸುರಪುರ ತಾಲೂಕಿನ ಗೋನಾಲ(ಎಸ್.ಡಿ) ಗ್ರಾಮದ
ಶಿಲ್ಪಿ ದಿ॥ ನಾಡೋಜ ನಾಗಣ್ಣ ತಂದೆ ಮೋನಪ್ಪ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ದಿ॥ ನಾಡೋಜ ನಾಗಣ್ಣ ಬಡಿಗೇರ ಅವರ ಭಾವಚಿತ್ರ




ಗ್ರಾಮದೇವತೆ ಶಿಲ್ಪ



ಸೀಮೆ ಮರಗಮ್ಮ ಶಿಲ್ಪ

ಸುರಪುರ ತಾಲೂಕಿನ ಹಂದ್ರಾಳ ಗೋನಾಲ ಗ್ರಾಮದ
ಶಿಲ್ಪಿ ಬಸಣ್ಣ ತಂದೆ ಮೋನಪ್ಪ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಜಕಣಾಚಾರ್ಯ ಪ್ರಶಸ್ತಿ ಪುರಸ್ಕೃತ ಶಿಲ್ಪಿ
ಬಸಣ್ಣ ಬಡಿಗೇರ ಅವರ ಭಾವಚಿತ್ರ



ಪಡಸಾಲೆ ಜೋಡಣೆಯ ಶಿಲ್ಪ

ಸುರಪುರ ತಾಲೂಕಿನ ಗೋನಾಲ ಗ್ರಾಮದ
ಶಿಲ್ಪಿ ಮಾನಯ್ಯ ತಂದೆ ನಾಗಣ್ಣ ಬಡಿಗೇರ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಮಾನಯ್ಯ ಬಡಿಗೇರ ಅವರ ಭಾವಚಿತ್ರ



ಲೋಹ ಮಾಧ್ಯಮದಲ್ಲಿ ಗಣೇಶನ ಶಿಲ್ಪ



ಲೋಹ ಮಾಧ್ಯಮದ ಶಿಲ್ಪಗಳು


ಸುರಪುರ ತಾಲೂಕಿನ ಗೋನಾಲ(ಎಸ್.ಡಿ.) ಗ್ರಾಮದ
ಶಿಲ್ಪಿ ಶಕುಂತಲಾ ಎಂ. ಬಡಿಗೇರ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಶಕುಂತಲಾ ಬಡಿಗೇರ ಅವರ ಭಾವಚಿತ್ರ



ಮೇಣ ಮಾಧ್ಯಮದಲ್ಲಿ ಶಿವನ ಶಿಲ್ಪ



ಲೋಹ ಮಾಧ್ಯಮದ ಶಿಲ್ಪ

ಸುರಪುರ ತಾಲೂಕಿನ ಹಂದ್ರಾಳ ಗೋನಾಲ ಗ್ರಾಮದ
ಶಿಲ್ಪಿ ಮಲ್ಲಿಕಾರ್ಜುನ ತಂದೆ ಬಸಣ್ಣ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಮಲ್ಲಿಕಾರ್ಜುನ ಬಡಿಗೇರ ಅವರ ಭಾವಚಿತ್ರ



ದೇವರನ್ನು ಕೂಡಿಸುವ ಕಲಾತ್ಮಕ ಪೀಠ


ಸುರಪುರ ತಾಲೂಕಿನ ಹಂದ್ರಾಳ ಗೋನಾಲ ಗ್ರಾಮದ
ಶಿಲ್ಪಿ ನಿರ್ಮಲಾ ಎಂ. ಬಡಿಗೇರ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ನಿರ್ಮಲಾ ಬಡಿಗೇರ ಅವರ ಭಾವಚಿತ್ರ



ಮೇಣ ಮಾಧ್ಯಮದಲ್ಲಿ ಶಿಲ್ಪಗಳು



ಮೇಣ ಮಾಧ್ಯಮದ ಶಿಲ್ಪಗಳು

ಸುರಪುರ ತಾಲೂಕಿನ ಹಂದ್ರಾಳ ಗೋನಾಲ ಗ್ರಾಮದ
ಶಿಲ್ಪಿ ಶ್ರೀಶೈಲ ತಂದೆ ಬಸಣ್ಣ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಶ್ರೀಶೈಲ ಬಡಿಗೇರ ಅವರ ಭಾವಚಿತ್ರ



ಮೇಣ ಹಾಗೂ ಕಂಚಿನ ಗಣೇಶನ ಶಿಲ್ಪಗಳು

ಸುರಪುರ ತಾಲೂಕಿನ ಗೋನಾಲ (ಎಸ್.ಡಿ.) ಗ್ರಾಮದ
ಶಿಲ್ಪಿ ಮಾಧುರಿ ತಂದೆ ಮಾನಯ್ಯ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಮಾಧುರಿ ಬಡಿಗೇರ ಅವರ ಭಾವಚಿತ್ರ



ಮೇಣದ ಸೃಜನಾತ್ಮಕ ಶಿಲ್ಪಗಳು

ಸುರಪುರ ತಾಲೂಕಿನ ಗೋನಾಲ (ಎಸ್.ಡಿ.) ಗ್ರಾಮದ
ಶಿಲ್ಪಿ ಪೃಥ್ವಿರಾಜ ತಂದೆ ಮಾನಯ್ಯ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಪೃಥ್ವಿರಾಜ ಬಡಿಗೇರ ಅವರ ಭಾವಚಿತ್ರ



ಮರಗೆತ್ತನೆಯ ಶಿಲ್ಪ

ಸುರಪುರ ತಾಲೂಕಿನ ಕಕ್ಕೆರಾ ಗ್ರಾಮದ
ಶಿಲ್ಪಿ ಚಂದ್ರಶೇಖರ ವೈ. ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಚಂದ್ರಶೇಖರ ಬಡಿಗೇರ ಅವರ ಭಾವಚಿತ್ರ




ಮರಗೆತ್ತನೆಯ ತಲಬಾಗಿಲು ಶಿಲ್ಪ


ಸುರಪುರ ತಾಲೂಕಿನ ಹಂದ್ರಾಳ ಗೋನಾಲ ಗ್ರಾಮದ
ಶಿಲ್ಪಿ ಪವಿತ್ರಾ ಎಸ್. ಬಡಿಗೇರ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಪವಿತ್ರಾ ಬಡಿಗೇರ ಅವರ ಭಾವಚಿತ್ರ



ಮೇಣದ ಶಿಲ್ಪ



ಮೇಣ ಮಾಧ್ಯಮದ ಶಿಲ್ಪ

ಸುರಪುರ ತಾಲೂಕಿನ ಗೋನಾಲ (ಎಸ್.ಡಿ.) ಗ್ರಾಮದ
ಶಿಲ್ಪಿ ವರದರಾಜ ತಂದೆ ಮಾನಯ್ಯ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ವರದರಾಜ ಬಡಿಗೇರ ಅವರ ಭಾವಚಿತ್ರ



ಶಿಲಾ ಮಾಧ್ಯಮದ ಆಂಜನೇಯ ಶಿಲ್ಪ



ಮರಗೆತ್ತನೆಯ ಹಂಸ ಶಿಲ್ಪ

ಗ್ರಾಮದೇವತೆ ಶಿಲ್ಪಗಳು – 10

ಹೀಗೆ ಹಲವು ವಿಧಗಳಲ್ಲಿ ಕಂಡುಬರುವ ಶಿಲ್ಪಗಳ ರೂಪ ಪಡೆಯುವಿಕೆ ನೈಜ ಪರಂಪರೆಗೆ ಹತ್ತಿರವಾದವುಗಳಾಗಿವೆ. ಹಾಗೆಯೇ ಗ್ರಾಮದೇವತೆಗಳನ್ನು ಈ ರೀತಿ ಕಾಣುತ್ತೇವೆ.

ದ್ಯಾವಮ್ಮ ದೇವಿಯ ಶಿಲ್ಪ – ಹುಣಸಗಿ ತಾ.ಸುರಪುರ ಜಿ.ಯಾದಗಿರಿ

ಮಾರಲಾಬಾಯಿ ದೇವಿಯ ಶಿಲ್ಪ – ಗುಳಬಾಳ, ತಾ.ಸುರಪುರ ಜಿ.ಯಾದಗಿರಿ

ದ್ಯಾವಮ್ಮ ದೇವಿಯ ಶಿಲ್ಪ – ಕಾಮನಟಗಿ, ತಾ.ಸುರಪುರ ಜಿ.ಯಾದಗಿರಿ

ದ್ಯಾವಮ್ಮ ದೇವಿಯ ಶಿಲ್ಪ – ಪರಸನಹಳ್ಳಿ, ತಾ.ಸುರಪುರ ಜಿ.ಯಾದಗಿರಿ

ದ್ಯಾವಮ್ಮ ದೇವಿಯ ಶಿಲ್ಪ – ಗೌಡಗೇರಿ, ತಾ.ಸುರಪುರ ಜಿ.ಯಾದಗಿರಿ

ದ್ಯಾವಮ್ಮ ದೇವಿಯ ಶಿಲ್ಪ – ಯಾಟಗಲ್, ತಾ.ದೇವದುರ್ಗ, ಜಿ. ರಾಯಚೂರು

ದ್ಯಾವಮ್ಮ ದೇವಿಯ ಶಿಲ್ಪ – ಮಿಣಜಗಿ, ತಾ.ಮುದ್ದೆಬಿಹಾಳ, ಜಿ. ವಿಜಯಪುರ

ಈ ಎಲ್ಲ ಗ್ರಾಮ ದೇವತೆ ಶಿಲ್ಪಗಳು ಆಯಾ ಅವತಾರದ ಹಿನ್ನಲೆಯಲ್ಲಿ ರೂಪ ಪಡೆದಿವೆ. ದೇವಿಯ ಕೈಗಳಲ್ಲಿ ಆಯುಧ, ತ್ರಿಶುಲ, ಶಂಖ, ಚಕ್ರ, ಹೂ, ಗಧೆ ಮುಂತಾದ ಸಾಮಗ್ರಿಗಳಿರುತ್ತವೆ. ದೇವಿಯು ಹುಲಿ, ಸಿಂಹ, ಆನೆಯ ಮೇಲೆ ಕುಳಿತು ರಾಕ್ಷಸನನ್ನು ಸಂಹಾರ ಮಾಡುವ ವಿಶೇಷ ಭಂಗಿಗಳಿಂದ ಕೂಡಿವೆ. ಕೆಂಪು, ಹಳದಿ, ಹಸಿರು, ಬಿಳಿ, ಕಪ್ಪು ವರ್ಣಗಳ ಲೇಪನ ಕಾರ್ಯ ಗಮನಾರ್ಹವಾಗಿ ಕಾಣಿಸುತ್ತದೆ. ಜನಪದ ಶಿಲ್ಪಗಳನ್ನೇ ರಚಿಸುತ್ತಾ ಬದುಕುತ್ತಿರುವ ಪ್ರಭುಲಿಂಗಪ್ಪನವರ ಹೆಂಡತಿ ದೇವಮ್ಮಳಿಗೆ ನೀಲಮ್ಮ, ವಾಸುದೇವ, ಕಾಳಮ್ಮ, ಗೀತಾ, ನಿಂಗಣ್ಣ ಎಂಬ ಐದು ಜನ ಮಕ್ಕಳಿದ್ದಾರೆ. ಮರಗೆತ್ತನೆಯ ಕಾರ್ಯದೊಂದಿಗೆ ಜೋತಿಷ್ಯ ಶಾಸ್ತ್ರವನ್ನು ಕೂಡ ಗಮನಾರ್ಹವಾಗಿ ಹೇಳುತ್ತಾರೆ. ಈ ಶಿಲ್ಪಿಗೆ ಸರಕಾರದಿಂದ ಮತ್ತು ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಪ್ರಶಸ್ತಿ ಪುರಸ್ಕಾರಗಳು ಲಭಿಸಿರುವುದಿಲ್ಲ.

ಕಾಳಪ್ಪ ತಂದೆ ದೇವಿಂದ್ರಪ್ಪ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಹುಣಸಗಿ ನಗರದ ಶಿಲ್ಪಿ ಕಾಳಪ್ಪನವರು ತಂದೆ ದೇವಿಂದ್ರಪ್ಪನವರ ಕಲಾ ಕಾಯಕವನ್ನು ಮುಂದುವರೆಸಿಕೊಂಡು ನಡೆದಿರುವುದು

* ಕಾಳಪ್ಪ ಅವರೊಂದಿಗೆ ಸಂದರ್ಶನ ದಿನಾಂಕ: 05.03.2017 ಹುಣಸಗಿ

ಕಂಡುಬರುತ್ತದೆ. ಮರಗೆತ್ತನೆಯ ಮಾಧ್ಯಮದಿಂದ ಅನೇಕ ಶಿಲ್ಪಕಲಾಕೃತಿಗಳನ್ನು ರಚಿಸುವ ಮೂಲಕ ಜನಪದರ ಕಲಾ ವೈಶಿಷ್ಟ್ಯತೆಯನ್ನು ಹೆಚ್ಚಿಸಿದ್ದಾರೆ. ಶಹಾಪುರ, ಸುರಪುರ, ರಾಯಚೂರು, ಯಾದಗಿರಿ, ಕಕ್ಕೇರಿ, ಮದಲಾಪುರ, ಗಬ್ಬೂರ, ಬನ್ನಟ್ಟಿ, ಹುಣಸಗಿ ತಾಂಡಾ, ಬೈಲಾಪುರ ತಾಂಡ, ಚನ್ನೂರು ತಾಂಡಾ, ಹೊಂಬಳಕಲ್, ಸೇರಿದಂತೆ ಹಲವಾರು ಪಟ್ಟಣ ಮತ್ತು ಗ್ರಾಮಗಳಿಗೆ ಶಿಲ್ಪಕಲಾಕೃತಿಗಳನ್ನು ಮಾಡಿಕೊಟ್ಟಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಶಿಲ್ಪಗಳು ಈ ರೀತಿ ಗಮನಿಸಬೇಕಾಗುತ್ತದೆ.

ಕುದುರೆ ಶಿಲ್ಪಗಳು	–	40
ಮನೆಯ ತಲಬಾಗಿಲು	–	200
ಪಡಸಾಲಿ ಜೋಡಣೆ	–	20
ಗೌರಿಮಾಡ ಕೆತ್ತನೆ	–	100
ರೈತರ ಬಂಡಿಗಳು	–	35
ದೇವರ ಪಲ್ಲಕ್ಕಿ	–	30

ಅಂಕಿ ಸಂಖ್ಯೆಗಳ ಅಂದಾಜು ಪ್ರಕಾರ ಶಿಲ್ಪಗಳನ್ನು ರಚಿಸಿದ ಸಂಗತಿ ತಿಳಿಸುತ್ತಾರೆ. ಕುದುರೆ, ತಲಬಾಗಿಲು, ಪಡಸಾಲಿ ಜೋಡಣೆ ಕೆಲಸ, ಗೌರಿಮಾಡ ಮತ್ತು ಗ್ರಾಮದೇವತೆ ಶಿಲ್ಪ ದ್ಯಾವಮ್ಮನ ಶಿಲ್ಪಗಳು, ರಾಯಚೂರು, ಗಬ್ಬೂರು, ಶಹಾಪುರ, ನಗರ ಮತ್ತು ಹಳ್ಳಿಗಳಲ್ಲಿ ಮಾಡಿದ್ದಾರೆ. ಪ್ರತಿಯೊಂದು ಶಿಲ್ಪಗಳ ವಸ್ತು ವಿಷಯದ ಹಿನ್ನಲೆಯಲ್ಲಿ ಅರ್ಥವತ್ತಾಗಿ, ಸೂಕ್ಷ್ಮ ಸಂವೇದನಾಶೀಲತೆಯಲ್ಲಿ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ.

ಶಿಲ್ಪಿ ಕಾಳಪ್ಪ*ನವರಿಗೆ ಹೆಂಡತಿ ಸುವರ್ಣರವರ ಪ್ರೋತ್ಸಾಹ ದೊರೆಯುತ್ತದೆ. ಹಾಗಾಗೀ ಇವರ ಬದುಕಿನುದ್ದಕ್ಕೂ, ಶಿಲ್ಪಕೆತ್ತನೆಯ ಅವಕಾಶಕ್ಕೆ ಮುಂದಾಗುತ್ತಾರೆ. ಕಾಳಪ್ಪ ಮಡದಿ ಸುವರ್ಣ ಇವರಿಗೆ ಭೀಮಾಶಂಕರ, ವಿಜಯಕುಮಾರ, ಶ್ರೀದೇವಿ, ಎಂಬ ಮುರು ಜನ ಮಕ್ಕಳಿದ್ದಾರೆ. ಮಗ ಭೀಮಾಶಂಕರ ಮತ್ತು ವಿಜಯಕುಮಾರ ಅವರು ತಂದೆಯ ಕಾಯಕದಂತೆ ಮುಂದುವರೆದಿದ್ದಾರೆ. ಹುಣಸಗಿ ನಗರದಲ್ಲಿ ಒಂದು ಕಾರ್ಪೆಂಟರ ಅಂಗಡಿಯೊಂದು ತೆರೆದು

ಮನೆಗೆ ಸಂಬಂಧಿಸಿದ ಬಾಗಿಲು, ಕಿಟಕಿ ವಿನ್ಯಾಸಗಳ ಕೆತ್ತನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ತಂದೆ ಕಾಳಪ್ಪನವರು ಗ್ರಾಮೀಣ ಪರಿಸರದ ಕುದುರೆ, ತಲಬಾಗಿಲುಗಳ ಕೆತ್ತನೆ, ಗ್ರಾಮದೇವತೆ, ದೇವರ ಪಲ್ಲಕ್ಕಿ ಗೌರಿಮಾಡ ಹೀಗೆ ಜನಪದ ಕಲಾಪ್ರಕಾರದ ಕೂಡ ಶಿಲ್ಪಗಳನ್ನು ರೂಪಿಸುವುದರಲ್ಲಿ ಕಾರ್ಯನಿರತರಾಗಿದ್ದಾರೆ. ಪ್ರಸ್ತುತ ಕಾಳಪ್ಪ ಶಿಲ್ಪಿಗೆ ಐವತ್ತೈದು ವಯಸ್ಸು ಮುಗಿದಿವೆ. ಆದರೂ ಇವರ ಜನಪದ ಶಿಲ್ಪಕಲೆ ಸೇವೆಯನ್ನು ಪರಿಗಣಿಸಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಗೌರವ ಪ್ರಶಸ್ತಿ, ನೀಡಿದರು ಸಹ ಉತ್ತಮ ಕಾರ್ಯವಾಗುತ್ತದೆ. ಜನಪದ ಶಿಲ್ಪ ಪ್ರಕಾರವನ್ನು ಅತ್ಯಂತ ಶ್ರದ್ಧೆ ನಿಷ್ಠೆ ಬದ್ಧತೆಯಿಂದ ಮುಂದುವರೆಸಿಕೊಂಡು ನಡೆಯುತ್ತಿರುವ ಶಿಲ್ಪಿ ಕಾಳಪ್ಪ ಬಡಿಗೇರರು ಸಗರನಾಡಿನ ಪ್ರಮುಖ ಶಿಲ್ಪಿಗಳಾಗಿದ್ದಾರೆ.

ದಿವಂಗತ ಗೋವಿಂದಪ್ಪ ತಂದೆ ಭೀಮಣ್ಣ ಕುದುರಿಮನಿ:

ಯಾದಗಿರಿ ಜಿಲ್ಲೆ ಸುರಪುರ ತಾಲೂಕ ಕೇಂದ್ರದಲ್ಲಿರುವಂತಹ ಗೋವಿಂದಪ್ಪ ಕುದುರಿ ಮನಿಯವರು ಇತ್ತಿಚೆಗೆ 2015ರಲ್ಲಿ ನಿಧನರಾದರು. ಇವರು ಮರಗೆತ್ತನೆಯ ಕುದುರೆ ಶಿಲ್ಪಗಳು ಮತ್ತು ತಲಬಾಗಿಲು, ಕೆತ್ತನೆಯಲ್ಲಿ ಹೆಸರು ವಾಸಿಯಾಗಿದ್ದರು. ಮರಗೆತ್ತನೆಯಿಂದ ಕುದರೆಗಳನ್ನು ಆಕರ್ಷಕವಾಗಿ ಕೆತ್ತನೆಯಿಂದ ಸುರಪುರ ಅರಸರ ಮನ ಗೆದ್ದು ಪ್ರಶಂಸೆಗೆ ಪಾತ್ರರಾದವರು, ಅಂದಿನಿಂದ ಈ ಮ್ಯಾದರ ಅನ್ನುವ ಮನೆತನ ಹೆಸರಿಗೆ. 'ಕುದುರಿಮನಿ', ಎಂದು ಪ್ರಸಿದ್ಧಿ ಪಡೆದಿದೆ. ಉದಾ: ಸುರಪುರ ದರ್ಭಾರದ ತಲಬಾಗಿಲು ಮತ್ತು ಕುದುರೆ ಶಿಲ್ಪಗಳನ್ನು ನೋಡಬಹುದು. ನೈಜವಾದ ಕುದುರೆಯ ಹಾಗೆ ಕಟ್ಟಿಗೆಯಲ್ಲಿ ಕೆತ್ತನೆ ಮಾಡಿ ಜನರ ಪ್ರಶಂಸೆಗೆ ಪಾತ್ರವಾದ ಸಗರನಾಡಿನ ಶ್ರೇಷ್ಠ ಕಲಾ ಮನೆತನ ಇದಾಗಿದೆ. ಗೋವಿಂದಪ್ಪನವರು ಬದುಕಿರುವವರೆಗೂ ಯಾವುದೇ ಸರಕಾರದಿಂದ ಪ್ರಶಸ್ತಿ ಪುರಸ್ಕಾರಗಳನ್ನು ಬಯಸದೇ ಹೊಟ್ಟೆ ಪಾಡಿಗಾಗಿ ಕುದುರೆ ಕೆತ್ತನೆ ಮಾಡಿ ಸಂಸಾರ ನಡೆಸಿದವರು. ಸಗರನಾಡಿನ ಅನೇಕ ಗ್ರಾಮಗಳಾದ ಸುರಪುರ, ಕನ್ನಳ್ಳಿ, ಬಾಚಿಮಟ್ಟಿ, ದೇವರಗೋನಾಲ, ಸಿದ್ಧಾಪುರ, ಬೈರಾಮಡಗಿ, ರಸ್ತಾಪುರ, ನವಿಲುಗುಡ್ಡ, ಚಿಂಚೋಡಿ. ಗುಡಗುಂಟಿ, ಹೀಗೆ ಹಲವಾರು ಗ್ರಾಮಗಳಲ್ಲಿ ಕುದುರೆ ಶಿಲ್ಪ ಹಾಗೂ ತಲಬಾಗಿಲುಗಳನ್ನು ಕೆತ್ತನೆ ಮಾಡಿದ್ದಾರೆ. ದಿವಂಗತ ಶಿಲ್ಪಿ ಗೋವಿಂದಪ್ಪನವರಿಗೆ ಹೆಂಡತಿ ಸೂಗಮ್ಮ ಮಕ್ಕಳಾದ ರಾಘವೇಂದ್ರ,

ಮಹೇಶ, ವಿಜಯಲಕ್ಷ್ಮೀ ಎಂಬ ಮೂರು ಜನ ಮಕ್ಕಳಿದ್ದಾರೆ. ಮೊದಲನೆಯ ಮಗ ರಾಘವೇಂದ್ರ ತಂದೆಯ ಹಾಗೆ ಮರಗೆತ್ತನೆಯ ಜನಪದ ಶಿಲ್ಪಗಳನ್ನು ಕೆತ್ತನೆಯಲ್ಲಿ ಮುಂದುವರೆದ್ದಿದ್ದಾರೆ. ಕುದುರೆ ಶಿಲ್ಪ ತಲಬಾಗಿಲುಗಳು, ಗೌರಿಮಾಡ, ಪಡಸಾಲಿ ಜೋಡಣೆ ಕೆಲಸದಲ್ಲಿ ತಂದೆಯಂತೆ ಅತ್ಯುತ್ತಮ ಶಿಲ್ಪಿಯಾಗಿದ್ದಾರೆ. ಈ ಪ್ರತಿಭೆಗೂ ಸಹ ಕರ್ನಾಟಕದ ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಶಿಬಿರ ಕಾರ್ಯಾಗಾರ, ಪ್ರಶಸ್ತಿ, ಪುರಸ್ಕಾರ ಲಭಿಸಿರುವುದಿಲ್ಲ. ದಿವಂಗತ ಶಿಲ್ಪಿ ಗೋವಿಂದಪ್ಪನವರ ಶಿಲ್ಪಕಲೆ ಜನಸಾಮಾನ್ಯರ ಮನ ಗೆದ್ದಿದ್ದಲ್ಲದೇ ಸುರಪುರ ಸಂಸ್ಥಾನದ ರಾಜರ ಪ್ರಶಂಸೆಗೆ ಪಾತ್ರರಾಗಿ ಕುದುರಿಮನಿ ಎಂದೆ ಪ್ರಸಿದ್ಧಿ ಪಡೆದ ಸಗರನಾಡಿನ ವಿಶೇಷ ಕಲಾ ಮನೆತನ ಇವರದಾಗಿದೆ.

ಮರೆಪ್ಪ ತಂದೆ ಭೀಮಣ್ಣ ಕುದುರಿಮನಿ

ದಿವಂಗತ ಗೋವಿಂದಪ್ಪನವರ ತಮ್ಮನಾದ ಮರೆಪ್ಪನವರು ಸಹ ಸಗರನಾಡಿನ ಜನಪದ ಶಿಲ್ಪಿಗಳು ಅಣ್ಣನ ಹಾಗೆ ಕುದುರೆ ಶಿಲ್ಪ, ತಲಬಾಗಿಲು, ಗೌರಿಮಾಡ, ಪಡಸಾಲಿ ಜೋಡಣೆ ಕೆಲಸ ಮಾಡಿದವರಾಗಿದ್ದಾರೆ. ಸುರಪುರ, ದೇವರ ಗೋನಾಲ, ಕನ್ನಳ್ಳಿ, ಸಿದ್ಧಾಪುರ, ಬೈರಾಮಡಗಿ, ಕೂಡ್ಲಿಗಿ, ಬಾಚಿಮಟ್ಟಿ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಅತ್ಯುತ್ತಮ ಶಿಲ್ಪಗಳನ್ನು ಮಾಡಿಕೊಟ್ಟಿದ್ದಾರೆ. ಇತ್ತಿಚೀಗೆ ಕೆಲವೇ ವರ್ಷಗಳಿಂದ 42 ವಯಸ್ಸಿನಲ್ಲಿ ಆಕಸ್ಮಿಕ ತೀರಿಕೊಂಡರು. ಇವರ ಮಗನಾದ ವೆಂಕಟೇಶ ಅವರು ತಂದೆಯ ಕಲಾಕಾಯಕದಂತೆ ಕ್ರಿಯಾಶೀಲರಾಗಿ ಮುಂದುವರೆದಿರುತ್ತಾರೆ.

ಕಾಳಪ್ಪ ತಂದೆ ಶರಬಣ್ಣ ಬಡಿಗೇರ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ 22 ಜುಲೈ 1970 ರಲ್ಲಿ ಜನಿಸಿದ ಶಿಲ್ಪಿ ಕಾಳಪ್ಪನವರು ಜನಪದ ಪರಂಪರೆಯ ಶಿಲ್ಪಗಳನ್ನು ರಚಿಸುತ್ತ ಬದುಕನ್ನು ಸಾಗಿಸುತ್ತಿರುವುದು ಕಂಡುಬರುತ್ತದೆ. ಈ ಶಿಲ್ಪಿಗಳು ಶಿಲೆ (ಕಲ್ಲು) ಮತ್ತು ಮರ ಮಾಧ್ಯಮದ ಮೂಲಕ ಶಿಲ್ಪಕಲಾ ಕೃತಿಗಳನ್ನು ರಚಿಸುತ್ತಾರೆ. ಅವರ ಶಿಲ್ಪಗಳನ್ನು ಗಮನಿಸುವುದಾದರೆ ಈ ಕೆಳಗಿನಂತೆ ನೋಡಿ.

ಮಾಹಾಲಿಂಗರಾಯ ದೇವಸ್ಥಾನದ ಶಿಖರ (ಶಿಲಾ ಮಾಧ್ಯಮ) – ಕೋಟೆಗುಡ್ಡ,

ಬಸವೇಶ್ವರರ ಪಲ್ಲಕಿ, (ಮರಗೆತ್ತನೆ) ಕೊಡೆಕಲ್, ತಾ.ಸುರಪುರ ಜಿ. ಯಾದಗಿರ.

ಸಂಗಮೇಶ್ವರ ದೇವರ ಪಲ್ಲಕ್ಕಿ, (ಮರಗೆತ್ತನೆ) ಬ್ಯಾಡಗಿ ಕಾಗಿನೆಲ.

ಗ್ರಾಮ ದೇವತೆ - (ಮರ ಮಾಧ್ಯಮ) ರಾಯನಗೂಳ

ಅಲ್ಲದೇ ನಾರಾಯಣಪುರ, ಹುಣಸಗಿ, ಸುರಪುರ, ಲಿಂಗಸೂರು ಸೇರಿದಂತೆ ಹಲವಾರು ಗ್ರಾಮಗಳಲಿ ಮರಗೆತ್ತನೆಯ ಮತ್ತು ಶಿಲಾ ಮಾಧ್ಯಮದಿಂದ ಶಿಲ್ಪಕಲಾಕೃತಿಗಳನ್ನು ಕೆತ್ತನೆ ಮಾಡಿದ್ದಾರೆ. ಹಾಗೆಯೇ ರಥಶಿಲ್ಪಗಳನ್ನು ಸಹ ಅಲಂಕಾರಿಕ ಮತ್ತು ಆಕರ್ಷಕ ನೆಲೆಯಲ್ಲಿ ನಿರ್ಮಿಸುತ್ತಾರೆ. ಇವರ ಸಂಸಾರಿಕ ಜೀವನ ಶಿಲ್ಪಕಲೆಯ ಕೆತ್ತನೆಯೊಂದಿಗೆ ಸುಗಮವಾಗಿ ಸಾಗಿದೆ. ಪಲ್ಲಕ್ಕಿ ರಥ, ಗ್ರಾಮದೇವತೆ ಶಿಲ್ಪಗಳಲ್ಲದೆ ಕುದುರೆ, ತಲಬಾಗಿಲು, ಗೌರಿ ಮಾಡ, ಪಡಸಾಲೆ ಜೋಡಣೆ, ಕೆಲಸದಲ್ಲಿಯೂ ಸಹ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದ್ದಾರೆ. ಇಂತಹ ಸೃಜನಶೀಲ ಶಿಲ್ಪಿಗೆ ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಪ್ರಶಸ್ತಿ ಪುರಸ್ಕಾರಗಳು ದೊರೆತಿಲ್ಲ.

ನಿಂಗಯ್ಯ ಎಂ. ಗಣಚಾರಿ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕಲ್ಲದೇವನಹಳ್ಳಿ ಗ್ರಾಮದ ತಂದೆ ಮಹಾಲಿಂಗಪ್ಪ ತಾಯಿ ಬಸಮ್ಮನವರ ಚೊಚ್ಚಲ ಮಗನಾಗಿ 22 ಜನವರಿ 1956ರಂದು ಜನಿಸಿದರು. ಈ ಶಿಲ್ಪಿ ನಿಂಗಯ್ಯನವರು ಜನಪದರ ನಂಬಿಕೆಗೆ ಪೂರಕವಾದ ದೇವರ ವಿಗ್ರಹಗಳನ್ನು ಮಾಡಿಕೊಡುವ ಜನಪದ ಶಿಲ್ಪಿ, ಇವರು ಚಿಕ್ಕವರಿರುವಾಗಲೇ ಚಿತ್ರಕಲೆಯಲ್ಲಿ ಆಸಕ್ತಿಯಿರುವುದರಿಂದ ಅನೇಕ ಚಿತ್ರಗಳನ್ನು ವರ್ಣ ರಚಿಸುತ್ತ ಜೊತೆಗೆ ಶಿಲಾ ಮಾಧ್ಯಮದಿಂದ ದೇವರ ವಿಗ್ರಹಗಳನ್ನು ಕೆತ್ತನೆಯಲ್ಲಿ ಆಸಕ್ತಿಯುಳ್ಳವರು. ತಂದೆ ತಾಯಿಗೆ ಒಟ್ಟು ಏಳು ಜನ ಮಕ್ಕಳಿರುವ ಮತ್ತು ಬಡತನ ಸ್ಥಿತಿ ಗಂಭೀರ ಸಾಗಿರುವುದರಿಂದ ಶಿಲ್ಪಿ ನಿಂಗಯ್ಯನವರಿಗೆ ಸರಿಯಾಗಿ ಓದಲಿಕ್ಕೆ ಅನುಕೂಲಕರ ವಾತಾವರಣವಿಲ್ಲದ ಕಾರಣ ಕೇವಲ ಹತ್ತನೆ ತರಗತಿ ಮಾತ್ರ ಓದಿ ಅಲ್ಲಿಗೆ ನಿಲ್ಲಿಸುತ್ತಾರೆ. ಮುಂದೆ ತಂದೆಯವರಿಂದ ಮಹಾಲಿಂಗಪ್ಪನವರು ಆಕಸ್ಮಿಕವಾಗಿ ಅನಾರೋಗ್ಯದಿಂದ ಬಳಲಿ ನಿಧನರಾಗುತ್ತಾರೆ. ತಾಯಿಯ ಕಷ್ಟದ ದಿನಗಳಲ್ಲಿ ಅವರಿಗೆ ಸಹಾಯವಾಗುತ್ತಾ ಅನೇಕ ಕಷ್ಟ ಕಾರ್ಪಣ್ಯಗಳನ್ನು ಎದುರಿಸುತ್ತ ಜೀವನ ಸಾಗಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿವಯೂ ಸಹ ತನ್ನ ಕಲೆಯ

ಆಸಕ್ತಿಯ ಕಳೆದುಕೊಳ್ಳದೇ ಅದನ್ನು ಮುಂದುವರಿಸುತ್ತ ಬಂದರು. ಚಿಕ್ಕವರಿರುವಾಗಲೇ ಕಲ್ಲಿನಲ್ಲಿ ಒಂದು ಈಶ್ವರ ಲಿಂಗವನ್ನು ಕೆತ್ತನೆ ಮಾಡಿ ತನ್ನ ಪ್ರತಿಭೆಯನ್ನು ತೋರಿಸುತ್ತಾರೆ. ಕಲದೇವನಹಳ್ಳಿಯ ಸಾಹುಕಾರ ಭೀಮಶೆಟ್ಟಿಯವರು ಇವರ ಮರ್ತಿ ಶಿಲ್ಪಕಲೆಯನ್ನು ನೋಡಿ ಹೊಗಳಿ ಮುಂದಿನ ಕಲೆಯ ಅಭ್ಯಾಸಕ್ಕಾಗಿ ಬಾಗಲಕೋಟೆಯ ಶಿಲ್ಪಿ ಶ್ರೀ ಜಿ.ಡಿ. ಮಾಯಾಚಾರ್ಯ ಅವರು ಸ್ಥಾಪಿಸಿದ ಭುವನ ಶಿಲ್ಪಕಲಾ ಕೇಂದ್ರಕ್ಕೆ ಕಳಹುಸಿಕೊಡುತ್ತಾರೆ. ಆ ಕಲಾ ಕೇಂದ್ರದಲ್ಲಿ ನಯ ವಿನಯದೊಂದಿಗೆ ಪ್ರಾಮಾಣಿಕವಾಗಿ ಕಲೆಯ ಕೆತ್ತನೆಯನ್ನು ಕಲಿತುಕೊಂಡು ಮುಂದೆ ಉತ್ತಮ ಜೀವನ ನಡೆಸಲು ಪ್ರಾರಂಭಿಸುತ್ತಾರೆ. ಕಲಾ ಶಿಕ್ಷಣ ಕಲಿತ ನಂತರ 12 ಮಾರ್ಚ 1968ರಲ್ಲಿ ಪಾರ್ವತಿ ಎಂಬುವರರನ್ನುಮದುವೆಯಾಗುತ್ತಾರೆ. ಕಷ್ಟದ ದಿನಗಳನ್ನೇ ಮರೆಯುತ್ತಾ ಅನೇಕ ಉತ್ತಮ ಶಿಲ್ಪಕಲಾ ಕೃತಿಗಳನ್ನು ರಚಿಸುವ ಮೂಲಕ ಸಂಸಾರಿಕ ಜೀವನವನ್ನು ಸುಗಮವಾಗಿ ನಡೆಸುತ್ತಾರೆ.

ಶಿಲ್ಪಿ ನಿಂಗಯ್ಯನವರು ರಚಿಸಿದ ಶಿಲ್ಪಕಲಾಕೃತಿಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

ದುರ್ಗಾ ಮಾತೆ ಶಿಲ್ಪ- ವಜ್ಜಲ ಗ್ರಾಮ, ತಾ.ಸುರಪುರ ಜಿ. ಯಾದಗಿರಿ

ಶ್ರೀ ವೀರಭದ್ರೇಶ್ವರ ಶಿಲ್ಪ –ಕೋನಾಳ ತಾ.ಸುರಪುರ ಜಿ. ಯಾದಗಿರಿ

ಮಲ್ಲಯ್ಯ ತಾತ – ದೇವಪುರ ತಾ.ಸುರಪುರ ಜಿ. ಯಾದಗಿರಿ

ಶ್ರೀ ವೆಂಕಟೇಶ್ವರ ಶಿಲ್ಪ –ಕೋಳುರು ತಾಂಡ ತಾ.ಸುರಪುರ ಜಿ. ಯಾದಗಿರಿ

ಬೀರಲಿಂಗೇಶ್ವರ ದೇವಾಲಯದ ಬಾಗಿಲು – ವಜ್ಜಲ ತಾ.ಸುರಪುರ ಜಿ. ಯಾದಗಿರಿ

ಬಸವೇಶ್ವರ ವಚನ ಶಿಲಾ ಮಂಟಪ (959) ವಚನಗಳು, ಇಂಗಳೇಶ್ವರ ಗ್ರಾಮ ಹೀಗೆ ಹಲವಾರು ಗ್ರಾಮಗಳಲ್ಲಿ ಶಿಲ್ಪಕಲಾ ಕೃತಿಗಳನ್ನು ರಚಿಸಿದ್ದಾರೆ. ಇವರ ಕಲಾಸೇವೆಗೆ ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ, ಪುರಸ್ಕಾರಗಳು ದೊರೆತಿವೆ. ಆದರೆ ಶಿಲ್ಪಕಲಾ ಅಕಾಡೆಮಿಯಿಂದ ಯಾವುದೇ ಪ್ರಶಸ್ತಿ ಪುರಸ್ಕಾರಗಳು ಲಭಿಸಿರುವುದಿಲ್ಲ.

ಮಾನಪ್ಪ ತಂದೆ ವೀರಸಂಗಪ್ಪ ಪತ್ತಾರ

ಈ ಶಿಲ್ಪಿಯು ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕೊಡೆಕಲ್ ಗ್ರಾಮದವರು,

ಸಂದರ್ಶನ : ಕಲ್ಲಣ್ಣ ಕಂಬಾರ ಅವರೊಂದಿಗೆ ದಿನಾಂಕ: 09.03.2017

22 ಜುಲೈ 1963ರಲ್ಲಿ ಜನಿಸಿದ್ದಾರೆ. ಕೇವಲ ಹತ್ತನೇ ತರಗತಿ ಮಾತ್ರ ಓದಿದ್ದು, ಚಿಕ್ಕವರಿರುವಾಗಲೇ, ಕಲೆಯ ಆಸಕ್ತಿಯಿರುವುದರಿಂದ ಮುಂದೆ ಉತ್ತಮ ಶಿಲ್ಪಿಯಾಗಿ ರೂಪಗೊಂಡಿದ್ದಾರೆ. ಜನಪದ ಪ್ರಕಾರದ ಶಿಲ್ಪಕಲಾಕೃತಿಗಳನ್ನು ರಚಿಸುವ ಶಿಲ್ಪಿ ಮಾನಪ್ಪನವರು ಲೋಹ ಮಾಧ್ಯಮದಿಂದ (ಬೆಳ್ಳಿ, ಬಂಗಾರ, ಕಂಚು, ಹಿತ್ತಾಳೆ) ದೇವರ ಮೂರ್ತಿ, ಪ್ರಭಾವಳಿ ಬೀರಲಿಂಗ ದೇವರು, ತೊಟ್ಟಿಲು, ದೇವರ ಮುಖ, ಕಣ್ಣು, ದೇವರ ಪಾದಗಳು ಸೇರಿದಂತೆ ಜನಪದರ ಆಸಕ್ತಿಯಂತೆ ಕಲಾಕೃತಿಗಳನ್ನು ರಚಿಸಿಕೊಟ್ಟಿದ್ದಾರೆ. ಶಿಲ್ಪಗಳು ಉಬ್ಬು ಮಾದರಿಯಲ್ಲಿ ರಚನೆಯಾಗುತ್ತ ಎಲೆ, ಹೂ, ಬಳ್ಳಿ, ವಿನ್ಯಾಸಗಳ ಕಲಾತ್ಮಕತೆ ನೋಡುಗರ ಮನ ಧನ್ಯತಾಭಾವವನ್ನು ಅರ್ಪಿಸುವಂತೆ ಮಾಡುತ್ತಾರೆ. ಇದೇ ಕಾಯಕದಲ್ಲಿ ಮುಂದುವರೆದ ಶಿಲ್ಪಿ ಮಾನಪ್ಪನವರ ಸಂಸಾರಿಕ ಜೀವನವು ಪ್ರಗತಿಯ ಹಾದಿಯಲ್ಲಿ ನಡೆದಿದೆ. ಬೇರೆ, ಬೇರೆ ಜಾತ್ರೆ, ಉತ್ಸವ ಹಬ್ಬ, ಹುಣ್ಣಿಮೆ ದಿನದಂದು ಶಿಲ್ಪಗಳ ಪ್ರದರ್ಶನ ಕಾರ್ಯ ಗಮನಾರ್ಹವಾಗಿ ಕಂಡುಬರುತ್ತದೆ. ಇವರ ಕಲೆ, ಮತ್ತು ಬದುಕಿನ ವೈಶಿಷ್ಟ್ಯತೆಯನ್ನ ಕುರಿತಂತೆ ಹೈದ್ರಾಬಾದ ಕರ್ನಾಟಕ ವಿಶೇಷ ಪುರವಣಿ (ಸಂಯುಕ್ತ ಕರ್ನಾಟಕ) ಯಲ್ಲಿ ಹಲವು ಸಲ ಲೇಖನವು ಮುದ್ರಣಗೊಂಡಿವೆ. ಲೋಹ ಮಾಧ್ಯಮದಿಂದ ರಚನೆಯಾಗುವ ಇವರ ಶಿಲ್ಪಕಲಾಕೃತಿಗಳು ಸೂಕ್ಷ್ಮವಾಗಿ ಕಲಾ ಸಂವೇದನಾ ನೆಲೆಗಳಿಂದ ಪ್ರಮುಖ ಅಭಿವ್ಯಕ್ತಿಯಾಗಿ ಹೊರಹೊಮ್ಮಿದ್ದು ವಿಶೇಷವಾಗಿದೆ.

ಮೌನೇಶ ತಂದೆ ಕಾಳಪ್ಪ ಕಂಬಾರ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕಕ್ಕೇರಾ ಗ್ರಾಮದ ಶಿಲ್ಪಿ ಮೌನೇಶರವರು ಸಗರನಾಡಿನ ಪ್ರತಿಭಾವಂತ ಯುವ ಜನಪದ ಶಿಲ್ಪಿಗಳು, ಶೈಕ್ಷಣಿವಾಗಿ ಬಿ.ಎಸ್.ಸಿ ಪದವೀಧರರಾದ ಇವರು ಶಿಲಾ ಮಾಧ್ಯಮ ಮತ್ತು ಮರಗೆತ್ತನೆಯ ಮಾಧ್ಯಮದಿಂದ ಬಹು ಸುಂದರವಾಗಿ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ ಉದಾಃ ಮರಗೆತ್ತನಯಿಂದ ವಾಸ್ತು ಪ್ರಕಾರವಾಗಿ ಮಹಾದ್ವಾರ ಬಾಗಿಲು (ತಲಬಾಗಿಲು) ಮದನಿಕೆ ನಾಟ್ಯಸುಂದರಿ ಶಿಲ್ಪ, ಬೆಂಗಳೂರಿನಲ್ಲಿದೆ. ಕನಕದಾಸರ ಶಿಲ್ಪವನ್ನು ಸುರಪುರ ತಾಲೂಕಿನ ಕಕ್ಕೆರಾ ಗ್ರಾಮದಲ್ಲಿ ಪ್ರದರ್ಶಿಸಲಾಗಿದೆ. ಇವರ ಕಲಾಗುರುಗಳಾಗಿ ಕಲಬುರಗಿಯ ಹಿರಿಯ ಶಿಲ್ಪಿ ಚಂದ್ರಶೇಖರ ವೈ ಅವರು ಮಾರ್ಗದರ್ಶನ ಮಾಡಿದ್ದಾರೆ.

ಕಲಬುರಗಿ ಕಂಪು ಅನ್ನುವ ವಿಶಿಷ್ಟ ಕಾರ್ಯಕ್ರಮದಲ್ಲಿ ಇವರ ಶಿಲ್ಪ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಶಿಲಾ ಮಾಧ್ಯಮದಿಂದ ನಂದಿ ವಿಗ್ರಹ, ಕನಕದಾಸ, ದೇವಿ ವಿಗ್ರಹ ಸೇರಿದಂತೆ ಹಲವು ಶಿಲ್ಪಗಳನ್ನು ಮಾಡಿದ್ದಾರೆ. ಕಟ್ಟಿಗೆಯಿಂದ ರೂಪಗೊಂಡ ಶಿಲ್ಪಗಳು ಹಲವಾರು ಬಗೆಯಲ್ಲಿ ಕುದುರೆ ಶಿಲ್ಪ, ತಲಬಾಗಿಲು, ಪಡಸಾಲೆ ಜೋಡಣೆ, ಗೌರಿಮಾಡ ಹೀಗೆ ಹಲವು ಶಿಲ್ಪಕಲಾಕೃತಿಗಳನ್ನು ಕೆತ್ತೆನೆ ಮಾಡಿದ್ದಾರೆ. ಯುವ ಶಿಲ್ಪಿ ಮೌನೇಶರವರ ಕಲೆಯನ್ನು ಪ್ರೀತಿಸಿ, ಆರಾಧಿಸಿದ ಅನೇಕರು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿದ್ದಾರೆ. ಶಿಲೆ ಮತ್ತು ಮರ ಮಾಧ್ಯಮದ ಮೂಲಕ ಜನಪದ ಪರಂಪರೆಯ ಶಿಲ್ಪಗಳನ್ನು ರಚಿಸುತ್ತ ಸಗರನಾಡ ಜನರನ್ನು ಆಕರ್ಷಿಸಿದ ವಿಶಿಷ್ಟ ಶಿಲ್ಪಿ ಮೌನೇಶರವರು. ಮುಂದೆ ಈ ಕಲಾವಿದ ಅಕಾಡೆಮಿಕ್ ವಲಯದಲ್ಲಿ ಗುರುತಿಸಿಕೊಂಡು ಉನ್ನತ ಮಟ್ಟಕೇರುವ ಎಲ್ಲಾ ಲಕ್ಷಣಗಳು ಈ ಶಿಲ್ಪಿಯಲ್ಲಿ ಕಂಡು ಬರುತ್ತವೆ.

ಶರಣಪ್ಪ ತಂದೆ ಈರಣ್ಣ ಪತ್ತಾರ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ನಗನೂರು ಗ್ರಾಮದ ಶಿಲ್ಪಿ ಶರಣಪ್ಪನವರು 10 ಡಿಸೆಂಬರ್–1950ರಲ್ಲಿ ಜನಿಸಿದರು. ಏಳನೇ ತರಗತಿ ಮಾತ್ರ ಶಿಕ್ಷಣವನ್ನು ಕಲಿತ ಇವರು ಜನಪದ ಪರಂಪರೆಯ ಶಿಲ್ಪಗಳನ್ನು ರಚಿಸುವಲ್ಲಿ ಪ್ರಮುಖರು, ಮರಗೆತ್ತನೆಯ ಮಾಧ್ಯಮದಿಂದ ಕುದುರೆ ಗ್ರಾಮದೇವತೆ, ತಲಬಾಗಿಲು, ಪಡಸಾಲೆ ಜೋಡಣೆ, ಅಲ್ಲದೇ ಕಲ್ಲು ಮಾಧ್ಯಮದಿಂದ ದೇವರ ವಿಗ್ರಹಗಳನ್ನು ಮಾಡಿ ಕೊಡುವಲ್ಲಿ ಪ್ರಮುಖರು. ಪ್ರತಿಯೊಂದು ಪ್ರಕಾರದ ಶಿಲ್ಪ ಕೆತ್ತನೆ ಬಹು ಆಸಕ್ತಿದಾಯಕ ಹಾಗೂ ಅಕರ್ಷಕ ನೆಲೆಯಲ್ಲಿ ಕೆತ್ತನೆಯಾಗಿರುತ್ತವೆ. ಉದಾ. ಗಮನಿಸುವುದಾದರೆ

ರೇವಣಸಿದ್ದೇಶ್ವರ ಶಿಲ್ಪ – ಕಾಡಮಗೇರ, ಶಹಾಪುರ ತಾಲೂಕು

ಮಾರುತೇಶ್ವರ ಶಿಲ್ಪ – ನಗನೂರು, ಸುರಪುರ ತಾ. ಸುರಪುರ

ಬಲವಂತರ ಶರಣರ ಕಲ್ಲಿನ ಬಾಗಿಲು – ನಗನೂರು ಸುರಪುರ

ಗ್ರಾಮದೇವತೆ ಶಿಲ್ಪ (ಮರ ಮಾಧ್ಯಮ) ಗೋಗಿ, ತಾ.ಶಹಾಪುರ

ಸಂದರ್ಶನ ಶಿಲ್ಪಿ ಈರಣ್ಣ ಕಂಬಾರ ಅವರೊಂದಿಗೆ. ದಿನಾಂಕ: 10.03.2017 ಸಾತಖೇಡ.

ವೀರಭದ್ರೇಶ್ವರ ಶಿಲ್ಪ –ಆಲ್ದಾಳ – ಶಹಾಪುರ ತಾಲೂಕು

ಗೌರಮ್ಮನ ಮೂರ್ತಿ ಶಿಲ್ಪ – ನಗನೂರು ಸುರಪುರ.

ಜೋಡು ಕುದುರೆ ಶಿಲ್ಪ – ನಗನೂರು ಸುರಪುರ

ಈ ಶಿಲ್ಪಗಳು ಇವರ ಕಲಾಬದುಕಿನ ವೈಶಿಷ್ಟ್ಯತೆಯನ್ನು ಪಸರಿಸಿವೆ. ನಿರಂತರ ಕಲಾ ಬದುಕಿನ ಸೇವೆಯನ್ನು ಗಮನಿಸಿದ ಹಲವಾರು ಸಂಘ ಸಂಸ್ಥೆಗಳು ಈ ಶಿಲ್ಪಿಯನ್ನು ಸನ್ಮಾನಿಸಿ ಗೌರವಿಸಿವೆ. ಆದರೆ ಸರಕಾರ ಮತ್ತು ಅಕಾಡೆಮಿಗಳಿಂದ ಯಾವುದೇ ಗೌರವ ಸಂಭಾವನೆ, ಪ್ರಶಸ್ತಿ ಪುರಸ್ಕಾರಗಳು ಬಂದಿರುವುದಿಲ್ಲ.

ನಾಡೋಜ ನಾಗಣ್ಣ ಎಂ. ಬಡಿಗೇರ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಗೋನಾಲ (ಎಸ್.ಡಿ.) ಗ್ರಾಮದ ಶಿಲ್ಪಿ ದಿವಂಗತ ನಾಡೋಜ ನಾಗಣ್ಣ ಬಡಿಗೇರವರು ಸಗರನಾಡಿನ ಜನಪದ ಕಲಾಪಂಪರೆಯನ್ನು ಹುಟ್ಟು ಹಾಕುವುದರಲ್ಲಿ ಪ್ರಮುಖವಾದವರು. ಜನಪದ ಶೈಲಿಯ ಹಲವಾರು ಕಲಾಕೃತಿಗಳನ್ನು ಕೆತ್ತನೆ ಮಾಡುವುದರರೊಂದಿಗೆ ಬದುಕಿನೂದ್ದಕ್ಕೂ ಕಲೆಯ ಆಲಯದಲ್ಲಿ ಶ್ರಮಿಸಿದವರು. ಮುಂದಿನ ಪೀಳಿಗೆಗಾಗಿ ಎಂಬಂತೆ ತನ್ನ ಮನೆತನವನ್ನೇ ಶಿಲ್ಪ ಕೆತ್ತನೆಯ ಕಲಾ ಮನೆತನವನ್ನಾಗಿ ಪರಿವರ್ತಿಸಿದ್ದಾರೆ. ಅಂತಯೇ ಇಂದು ಇಡೀ ಅವರ ಮನೆಯ ಎಲ್ಲಾ ಸದಸ್ಯರು ಸೇರಿದಂತೆ ಎಲ್ಲಾರು ಶಿಲ್ಪ ಕೆತ್ತನೆಯ ಹಾದಿಯಲ್ಲಿ ಮುಂದುವರೆದಿದ್ದಾರೆ. ಶಿಲ್ಪಿ ನಾಡೋಜ ನಾಗಣ್ಣ ಬಡಿಗೇರ 1916ರಲ್ಲಿ ಮೋನಪ್ಪ ತಾಯಿ ಮಲಕಮ್ಮನವರ ಆರನೇಯ ಮಗನಾಗಿ ಗೋನಾಲ (ಎಸ್.ಡಿ) ಗ್ರಾಮದಲ್ಲಿ ಜನಿಸಿದರು. ಮಕ್ಕಳಾದ ನಂದಮ್ಮ, ದೇವಕೆಮ್ಮ, ಮಾನಮ್ಮ ಶಾರದಾ, ಮುಗ್ಗೆಮ್ಮ, ಹಾಗೂ ಮಗನಾದ ಮಾನಯ್ಯ ಹೀಗೆ ಒಟ್ಟು ಆರು ಜನ ಮಕ್ಕಳನ್ನು ಸಾಕಿ ಸಲುಹಿ ದೊಡ್ಡವರನ್ನಾಗಿಸುವುದರೊಂದಿಗೆ ತನ್ನ ಶಿಲ್ಪ ಕೆತ್ತನೆಯ ಕಾಯಕವನ್ನು ನಿರಂತರವಾಗಿ ಮಾಡಿಕೊಂಡು ಬಂದವರು. ಅಪ್ಪಟ ಜನಪದ ಪರಂಪರೆಯ ಶಿಲ್ಪಗಳನ್ನು ವಾಸ್ತು ಪ್ರಕಾರದ ರೀತಿಯಲ್ಲಿ ಕೆತ್ತನೆ ಮಾಡಿದ್ದಾರೆ. ಅವುಗಳನ್ನು ಕೆಳಗಿನಂತೆ ಗಮನಿಸಬಹುದಾಗಿದೆ.

* ಗೃಹ ಅಲಂಕಾರಿಕ ಶಿಲ್ಪಗಳು

* ದೇವರ ಮನೆಯ ಕಲಾತ್ಮಕ ಬಾಗಿಲು,
* ಚದುರಂಗ ಪಡಸಾಲೆ ಜೋಡಣೆ (5 ಮತ್ತು 7 ಅಂಕಣ ಪಡಸಾಲೆ)
* ಪಲ್ಲಕ್ಕಿ
* ರಥ,
* ಮಹಾ ಮಂಟಪ
* ಗ್ರಾಮದೇವತೆ ಶಿಲ್ಪಗಳು
* ಗೌರಿಮಾಡಗಳು
* ಕುದುರೆ ಶಿಲ್ಪಗಳು
* ಕಂಬ, ಬೋದು, ತೊಲೆ, ಗಡಿಗೆ, ತೋರಣ

ಹೀಗೆ ಹಲವಾರು ಪ್ರಕಾರಗಳಲ್ಲಿ ಜನಪದೀಯ ಅಂಶಗಳನ್ನು ಪ್ರತಿಬಿಂಬಿಸುವ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ. ಇವರ ಶಿಲ್ಪಕಲಾಕೃತಿಗಳನ್ನು ಸಗರನಾಡಿನ ಅನೇಕ ಗ್ರಾಮಗಳಲ್ಲಿ ಹಾಗೂ ಕಲಬುರಗಿ, ರಾಯಚೂರು, ಅಲ್ಲದೇ ಆಂಧ್ರ ಪ್ರದೇಶ (ತೆಲಂಗಾಣ) ಕಂಡುಬರುತ್ತವೆ. ಪ್ರತಿಯೊಂದು ಶಿಲ್ಪಕಲಾಕೃತಿಗಳನ್ನು ಗಮನಿಸಿದಾಗ ಅವುಗಳದೇ ಆದಂತಹ ವಸ್ತು ವಿನ್ಯಾಸ ಶೈಲಿ, ತಂತ್ರಗಾರಿಕೆಯಿಂದ ರೂಪಗೊಂಡಿವೆ. ಇವರ ಜನಪದ ಶಿಲ್ಪ ಕಲಾಕೃತಿಗಳ ಮೌಲ್ಯಯುತ ಸಂಗತಿಗಳಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯವು 2005ರಲ್ಲಿ ನಾಡೋಜ ಗೌರವ ಪದವಿಯನ್ನು ನೀಡಿ ಸತ್ಕರಿಸಿದೆ. 1998ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಸಹ ಗೌರವ ಪ್ರಸಸ್ತಿ ನೀಡಿದೆ. ಹಾಗೆಯೇ ಕರ್ನಾಟಕ ಸರಕಾರವು ಇವರ ಕಲಾಸೇವೆಯನ್ನು ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿಯು ನೀಡಿ ಗೌರವಿಸಿದೆ.

ಬಸಣ್ಣ ತಂದೆ ಮೋನಪ್ಪ ಬಡಗೇರ

ಈ ಶಿಲ್ಪಿಯು ದಿವಂಗತ ನಾಡೋಜ ನಾಗಣ್ಣ ಬಡಿಗೇರ ಅವರ ಸಹೋದರನಾದ ಶಿಲ್ಪಿ ಬಸಣ್ಣನವರು ಮರಗೆತ್ತನೆಯ ಶಿಲ್ಪಗಳನ್ನು ರಚಿಸುವುದರಲ್ಲಿ ಇವರು ಸಹ ಪ್ರಮುಖರು, ಜನಪದ ಶೈಲಿಯ ಶಿಲ್ಪಗಳನ್ನೇ ಮಾಡುತ್ತಾ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಶಿಲ್ಪಿ ಬಸಣ್ಣನವರು

ತಂದೆ ಮೋನಪ್ಪ ತಾಯಿ ಮಲಕಮ್ಮನವರ ಮಗನಾಗಿ 1 ಜೂನ್ 1933ರಲ್ಲಿ ಸುರಪುರ ತಾಲೂಕಿನ ಗೋನಾಲ (ಎಸ್.ಡಿ) ಗ್ರಾಮದಲ್ಲಿ ಜನಿಸಿದರು. ಚಿಕ್ಕವಯಸ್ಸಿನಲ್ಲಿಯೇ ಅಣ್ಣ ನಾಗಣ್ಣನವರ ಶಿಲ್ಪಕಲೆಯ ಸೂಕ್ಷ್ಮತೆಗಳು ಇವರಿಗೆ ಪ್ರಭಾವಿಕರಿಸಿಕೊಂಡಂತೆ ಕಂಡುಬರುತ್ತದೆ. ಅಣ್ಣನ ಜೊತೆಗೂಡಿ ಅನೇಕ ಗ್ರಾಮಗಳಲ್ಲಿ ಶಿಲ್ಪ ಕೆತ್ತನೆಯನ್ನು ಸಹ ಮಾಡಿದ್ದಾರೆ ವಿಶೇಷವಾಗಿ ಜನಪದ ಶಿಲ್ಪಗಳಾದಂತಹ ಪಡಸಾಲೆ ಜೋಡಣೆ ಕೆಲಸ (5–7 ಅಂಕಣ)

ತೊಲೆ, ಬೋದು, ತೋರಣ, ಬಿತ್ತಿ ತೊಲೆ, ಪಂಕಬೋದು, ಖಂಡೆ, ಅಡ್ಡ ಬೋದು, ಮೋದಕಾನಿ, ಕಮಾನು, ನಾಗಬಂಧ, ಗಡಿಗೆ, ಕಂಬ,

ಗ್ರಾಮ ದೇವತೆ ಶಿಲ್ಪಗಳು

ಕುದುರೆ ಶಿಲ್ಪಗಳು

ತಲಬಾಗಿಲು

ಗೌರಿಮಾಡಗಳು

ಹೀಗೆ ಹಲವಾರು ಪ್ರಕಾರಗಳಲ್ಲಿ ಶಾಸ್ತ್ರ, ವಾಸ್ತು, ವಿನ್ಯಾಸದ ಕ್ರಮ ಸೇರಿದಂತೆ ಕಲಾತ್ಮಕ ನೆಲೆಯಲ್ಲಿ ರೂಪಗೊಂಡಿರುತ್ತವೆ. ಸಗರನಾಡಿನ ವ್ಯಾಪ್ತಿಯಲ್ಲದೇ ಬೇರೆ ಬೇರೆ ಕಡೆಗಳಲ್ಲಿಯೂ ಸಹ ಇವರ ಶಿಲ್ಪಗಳು ಸಂಗ್ರಹಣೆಗೊಂಡಿವೆ. ಒಂದೇ ಮರದ ತುಂಡಿನಿಂದ ರಚಿಸಿದ ಗುಂಬರಿ ಮತ್ತು ಹಲವು ಮರದ ತುಂಡುಗಳಿಂದ ಹೆಣೆದ ಚಂಡು ಗಾಜಿನ ಬಾಟಲಿಯಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ ಪರಿಕರಗಳನ್ನು ಮರದ ತುಂಡಿನಲ್ಲಿ ಜೋಡಿಸಿಟ್ಟಿರುವುದು, ಅಲ್ಲದೇ ಚಿಕ್ಕ ಗಾತ್ರದ ತೇರು, ಹೊರಸು, ಹಗಲಗತ್ತರಿ, ಮಂಚಗಳು ಎಲ್ಲವೂ ಅಚ್ಚರಿ ಮೂಡಿಸುವ ಸತ್ಯಾಂಶದ ವಿಶಿಷ್ಟ ಶಿಲ್ಪಗಳಾಗಿ ಕಂಡುಬರುತ್ತವೆ. ಇವರ ಜನಪದ ಪರಂಪರೆಯ ಶಿಲ್ಪಗಳು ಅನೇಕ ಕಡೆಗಳಲ್ಲಿ ಪ್ರದರ್ಶನಗೊಂಡಿವೆ. ಹಾಗೆಯೇ ಈ ಶಿಲ್ಪಿಗಳು 1985ರಲ್ಲಿ ಸುರಪುರದಲ್ಲಿ ನಡೆದ ಸಗರನಾಡು ದರ್ಶನ ಕಾರ್ಯಕ್ರಮದಲ್ಲಿ ಶಿಲ್ಪಗಳು ಪ್ರದರ್ಶನ ಕಂಡಿವೆ. 2002ರಲ್ಲಿ ಸುರಪುರದಲ್ಲಿ ನಡೆದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಆಯೋಜಿಸಿದ ಶಿಲ್ಪಕಲಾ ಶಿಬಿರದಲ್ಲಿಯೂ ಸಹ ಶಿಲ್ಪವನ್ನು ಕೆತ್ತನೆ ಮಾಡಿದ್ದಾರೆ. ಇವರ ನಿರಂತರ ಶಿಲ್ಪಕಲಾ ಸೇವೆಯನ್ನು ಗಮನಿಸಿ ಪ್ರೋತ್ಸಾಹಿಸಿ ಸ್ವಗ್ರಾಮದ

ಭೀಮರಾಯಗೌಡರು ಈ ಶಿಲ್ಪಿಗೆ ನಾಲ್ಕು ಎಕರೆ ಜಮೀನನ್ನು ಕಾಣಿಕೆಯಾಗಿ ನೀಡಿ ಕಲೆಗೆ ಪ್ರೋತ್ಸಾಹಿಸಿದ್ದಾರೆ.

ಅಲ್ಲದೆ 2007ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಬಸವಣ್ಣನವರ ಕಲಾಸೇವೆಗೆ ಗೌರವ ಪ್ರಶಸ್ತಿಯನ್ನು ನೀಡಿದೆ. ಹಾಗೆಯೇ ಕರ್ನಾಟಕ ಸರಕಾರವು ನಾಡು ನುಡಿ, ಕಲೆಯ ಸೇವೆಗಾಗಿ ಶ್ರಮಿಸಿದ ಕಲಾ ಸಾಧಕರಿಗೆ ನೀಡುವ ಜಕಣಾಚಾರ್ಯ ಪ್ರಶಸ್ತಿಯನ್ನು ಶಿಲ್ಪಿ ಬಸಣ್ಣನವರಿಗೆ 2013ನೇ ಸಾಲಿನ ಜಕಣಾಚಾರ್ಯ ಪ್ರಶಸ್ತಿಯೂ ಸಹ ಲಭಿಸಿದೆ. ಸಗರನಾಡಿನ ಈ ಜನಪದ ಕಲಾ ಪರಂಪರೆಯನ್ನು ನಾಡಿನ ಶ್ರೇಷ್ಠತೆಗೆ ದಾರಿಮಾಡಿ ತೋರಿಸಿದ ಶ್ರೀ ಬಸಣ್ಣನವರ ಕಲೆ ಪ್ರಸ್ತುತ ಮಕ್ಕಳಿಗೂ ಸಹ ಪರಂಪರೆಯ ನೆಲೆಯಾಗಿ ಮುಂದುವರೆದಿರುವುದು ಕಂಡುಬರುತ್ತದೆ. ಶಿಲ್ಪಿ ಬಸಣ್ಣನವರಿಗೆ ಹೆಂಡತಿ ಕಾಳಮ್ಮ, ಮಕ್ಕಳಾದ ಗಂಗಾಧರ (ಕಾರ್ಪೇಂಟರ್-ಬೆಂಗಳೂರು) ಪರಮಾನಂದ (ಕಾರ್ಪೇಂಟರ್ ಬೆಂಗಳೂರು) ದೇವಿಂದ್ರ (ಕಾರ್ಪೇಂಟರ್ ಬೆಂಗಳೂರು) ಮಲ್ಲಿಕಾರ್ಜುನ (ಶಿಲ್ಪಕಲಾವಿದ-ಕಲಬುರಗಿ) ಈರಮ್ಮ (ಮದುವೆ ಆಗಿದೆ) ಶ್ರೀಶೈಲ (ಶಿಲ್ಪಕಲಾವಿದರ ಕಲಬುರಗಿ) ಮೌನೇಶ (ಕಲಬುರಗಿ ಶಿಲ್ಪಿ) ಒಟ್ಟು ಎಳು ಜನ ಮಕ್ಕಳೊಂದಿಗೆ ಜೀವಿಸುತ್ತಿರುವ ಶಿಲ್ಪಿ ಬಸಣ್ಣನವರು ಇಂದು ತನ್ನ ವಂಶ ಪರಂಪರೆಗೆ ಮಾದರಿಯ ಗುರುಗಳಾಗಿ ಬೋಧನೆ ಮಾಡುತ್ತಾ ನಡೆದಿದ್ದಾರೆ. ಮಲ್ಲಿಕಾರ್ಜುನ ಮತ್ತು ಶ್ರೀಶೈಲ, ಮೌನೇಶ ಎಂಬ ಮೂರು ಜನ ಮಕ್ಕಳು ಮಾತ್ರ ಅತ್ಯುತ್ತಮ ಜನಪದ ಶಿಲ್ಪಗಳ ಕೆತ್ತನೆಯಲ್ಲಿ ತೊಡಗಿಸಿಕೊಂಡು ಕಲಾ ಜಗತ್ತಿನಲ್ಲಿ ಗುರುತಿಸಿಕೊಂಡಿದ್ದಾರೆ.

ಮಾನಯ್ಯ ತಂದೆ ನಾಗಣ್ಣ ಬಡಗಿಗೇರ

ಈ ಶಿಲ್ಪಿಯು ನಾಡೋಜ ನಾಗಣ್ಣ ಬಡಿಗೇರ ತಾಯಿ ಕಮಲಮ್ಮನವರ ಆರನೇಯ ಮಗನಾಗಿ 01 ಮೇ 1961 ರಲ್ಲಿ ಯಾದಗಿರಿ ಜಿಲ್ಲೆಯ ಸುರುಪುರ ತಾಲೂಕಿನ ಗೋನಾಲ (ಎಸ್.ಡಿ) ಗ್ರಾಮದಲ್ಲಿ ಜನಿಸಿದರು. ತಂದೆ ನಾಗಣ್ಣನವರ ಕಲೆ ಇವರ ಬದುಕಿನಲ್ಲಿ ರಸಬಳ್ಳಿಯಾಗಿ ಹಬ್ಬಿದೆ ಎಂಬುದು ವಿಶೇಷವಾಗಿ ಕಂಡುಬರುತ್ತದೆ. ಚಿತ್ರಕಲೆಯಲ್ಲಿ ಬಿಎಫ್.ಎ, ಎ.ಎಂ.ಸಿ, ಜಿ.ಡಿ, ಆರ್ಟ್ ಪದವಿಯನ್ನು ಪೂರೈಸಿದ್ದಾರೆ. ಇವರಿಗೆ ಶಿಲ್ಪಕಲಾ ಗುರುಗಳಾಗಿ ತಂದೆಯವರಾದ

ನಾಡೋಜ ನಾಗಣ್ಣ ಬಡಿಗೇರ ಪ್ರಥಮ ಗುರುಗಳಾಗಿರುತ್ತಾರೆ. ನಂತರ ವಿಜಯ ಹಾಗರಗುಂಡಗಿ, ಪ್ರೊ.ವಿ.ಜಿ.ಅಂದಾನಿ, ಎಂ.ಬಿ, ಲೋಹಾರ ಇವರೆಲ್ಲರು ಮಾನಯ್ಯ ಅವರಿಗೆ ಗುರುಗಳಾಗಿ ಬೋಧಿಸಿದವರು. ಮುಂದುವರೆದಂತೆ ಕಲಾ ಬೆಳವಣಿಗೆಗೆ ಪ್ರೇರಣೆಯಾದವರು. ಹಿರಿಯ ಚಿತ್ರಕಲಾವಿದ ಮೋಹನ ಸೀತನೂರು ಹಾಗೂ ಪೂಜ್ಯ ಶ್ರೀ ಡಾ. ಶರಣಬಸಪ್ಪ ಅಪ್ಪರವರು ಇವರೆಲ್ಲರ ಮಾರ್ಗದರ್ಶನ ಮತ್ತು ಪ್ರೇರಣೆಗೊಂಡಿರುವ ಶಿಲ್ಪಿ ಮಾನಯ್ಯನವರು ಜನಪದರ ನಂಬಿಕೆಗೆ ಬೇಕಾಗುವ ದೇವರ ವಿಗ್ರಹಗಳನ್ನು ಲೋಹ ಮಾಧ್ಯಮದಲ್ಲಿ ಅತ್ಯಂತ ಆಕರ್ಷಕವಾಗಿ ಮಾಡಿಕೊಟ್ಟಿದ್ದಾರೆ. ಅಲ್ಲದೇ ಅನೇಕ ಶಿಲ್ಪಕಲಾ ಶಿಬಿರಗಳಲ್ಲಿಯೂ ಭಾಗವಹಿಸಿದಲ್ಲದೆ ಹಲವು ಶಿಬಿರಗಳಿಗೆ ಸಂಚಾಲಕರಾಗಿ, ನಿರ್ದೇಶಕರಾಗಿ, ಮತ್ತು ಸಂಪನ್ಮೂಲ ವ್ಯಕ್ತಿಯಾಗಿ, ಹಾಗೂ ಕರ್ನಾಟಕ ಸರಕಾರ ನೀಡುವ ಜಕಣಾಚಾರ್ಯ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯರಾಗಿಯೂ ಸಹ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅನೇಕ ಶಿಬಿರಗಳಲ್ಲಿ ಪಾಲ್ಗೊಂಡು ಅತ್ಯುತ್ತಮ ಶಿಲ್ಪಕಲಾಕೃತಿಗಳನ್ನು ರಚಿಸಿ ಜನಮನ ಸೆಳೆದಿದ್ದಾರೆ. ಶಿಲ್ಪಿ ಮಾನಯ್ಯನವರ ಶಿಲ್ಪಗಳನ್ನು ಗಮನಿಸುವುದಾದರೆ ಈ ಕೆಳಗಿನಂತೆ ನೋಡಿ

- ಕುದುರೆ ಮೇಲೆ ಕುಳಿತಿರುವ ಮಲ್ಲಯ್ಯ ಮತ್ತು ಗಂಗೆ
- ಸರಸ್ವತಿ
- ಶಿವ,
- ಗಣಪತಿ,
- ನಂದಿ
- ಶಿಲಾಬಾಲಿಕೆ
- ದೇವರ ಮುಖ ಶಿಲ್ಪಿಗಳು
- ಇತರೆ ಶಿಲ್ಪಗಳು

ಹೀಗೆ ಹಲವು ಬಗೆಯ ಶಿಲ್ಪಗಳನ್ನು ಲೋಹ (ಕಂಚು) ಮಾಧ್ಯಮದಿಂದ ಸುಂದರವಾಗಿ

ಮಾಡುತ್ತಾರೆ. ಪ್ರತಿಯೊಂದು ಶಿಲ್ಪಗಳು ತನ್ನದೆಯಾದ ಜನಪದ ಅಂಶಗಳ ಶೈಲಿಯಾಗಿ, ಶಾಸ್ತ್ರಿಯ ನೆಲೆಯಲ್ಲಿ ರಚನೆಯಾಗಿರುತ್ತವೆ. ಸಗರನಾಡಿನ ಭಾಗವಲ್ಲದೆ ನಾಡಿನ ವಿವಿಧೆಡೆ ಇವರ ಶಿಲ್ಪಗಳು ಸಂಗ್ರಹಗೊಂಡಿವೆ. ಲೋಹ ಶಿಲ್ಪಗಳನ್ನು ಮಾಡುವುದಲ್ಲದೆ ತನ್ನ ಮನೆಯ ಎಲ್ಲ ಕಲಾವಿದರಿಗೆ ಜನಪದೀಯ ವಾಸ್ತು ವಿನ್ಯಾಸದ ಮಾದರಿಯ ಸುಂದರ ರೇಖಾಚಿತ್ರಗಳನ್ನು ರಚಿಸಿ ಮಾರ್ಗದರ್ಶನ ಮಾಡುವುದರೊಂದಿಗೆ ಮನೆಯ ಕಲಾ ಗುರುಗಳಾಗಿಯೂ ಸಹ ಕಲಾ ಬೋಧನೆಯಲ್ಲಿ ಮುಂದುವರೆದಿದ್ದಾರೆ. ಇವರ ಶಿಷ್ಯ ಪರಂಪರೆಯನ್ನು ಗಮನಿಸಿದಾಗ ಸುರೇಂದ್ರ ಕೆ ವಿಶ್ವಕರ್ಮ, ಮಲ್ಲಿಕಾರ್ಜುನ ಬಿ.ಚಿಕ್ಕನಹಳ್ಳಿ, ಶ್ರೀಶೈಲ ತಂದೆ ಬಸಣ್ಣ ಬಡಿಗೇರ, ವರದರಾಜ ಎಂ.ಬಿ., ಪೃಥ್ವಿರಾಜ ಎಂ.ಬಿ, ಹೀಗೆ ಹಲವರನ್ನು ಹೆಸರಿಸ ಬೇಕಾಗುತ್ತದೆ ಈ ಎಲ್ಲಾ ಶಿಲ್ಪಿಗಳು ಅತ್ಯುತ್ತಮ ಶಿಲ್ಪಗಳನ್ನು ರೂಪಿಸಿ ಪ್ರದರ್ಶಿಸುವದರಲ್ಲಿ ಉತ್ತಮ ಶಿಲ್ಪಿಗಳಾಗಿದ್ದಾರೆ. ಜನಪದ ಶಿಲ್ಪ ಪರಂಪರೆಯನ್ನು ಉನ್ನತ ಮಟ್ಟಕ್ಕೆ ಬೆಳೆಸಿದ ಶಿಲ್ಪಿ ಮಾನಯ್ಯ*ನವರಿಗೆ ಹೆಂಡತಿ ಶಕುಂತಲಾ, ಮಕ್ಕಳಾದ ವರದರಾಜ, ಪೃಥ್ವಿರಾಜ , ಮಗಳು ಮಾಧುರಿ ಇವರೆಲ್ಲರ ಜೊತೆಗೂಡಿ ಶಿಲ್ಪಕಲೆಯ ಬದುಕಿನಲ್ಲಿ ನಲಿದಾಡುತ್ತಿರುವ ವಿಶೇಷ ಕಲಾ ಕುಟುಂಬ ಈ ಮಾನಯ್ಯ ಬಡಿಗೇರವರದು. ನಿರಂತರ ಲೋಹ ಮಾಧ್ಯಮದಲ್ಲಿ ಶಿಲ್ಪಗಳನ್ನು ರಚಿಸುವುದರೊಂದಿಗೆ ತನ್ನ ಮನೆಯ ಎಲ್ಲಾ ಸದಸ್ಯರನ್ನು ಶಿಲ್ಪ ಕಲಾಕೃತಿ ರಚನೆಯೊಂದಿಗೆ ಸಾಗಿಸುತ್ತಿರುವ ಶಿಲ್ಪಿ ಮಾನಯ್ಯನವರಿಗೆ ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಆದರೆ ಶಿಲ್ಪಕಲಾ ಅಕಾಡೆಮಿಯಿಂದ ಗೌರವ ಪ್ರಶಸ್ತಿ ಮಾತ್ರ ಇನ್ನು ದೊರೆತಿಲ್ಲ.

ಶಕುಂತಲಾ ಮಾನಯ್ಯ ಬಡಿಗೇರ

ಶಿಲ್ಪಿ ಮಾನಯ್ಯ ಬಡಿಗೇರ ಅವರ ಪತ್ನಿಯಾದ ಶಕುಂತಲಾ ಬಡಿಗೇರ ಶಿಲ್ಪಿಗಳು 19 ಜೂನ್ 1967 ರಂದು ತಂದೆ ಅಯ್ಯಣ, ತಾಯಿ ಪಾರ್ವತಿಯವರ ಮಗಳಾಗಿ ಜನಿಸಿದ್ದಾರೆ. ಈ ಶಿಲ್ಪಿಗಳು ಸಗರನಾಡಿನ ಗೋನಾಲ (ಎಸ್.ಡಿ) ಗ್ರಾಮದ ಮಾನಯ್ಯವರನ್ನು ಮದುವೆಯಾದ ನಂತರ ಪುನಃ ಶಿಲ್ಪಕಲೆಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಶಿಲ್ಪ ರಚನೆಯ ಕಾರ್ಯದಲ್ಲಿ ಮುನ್ನಡೆಯುತ್ತಿದ್ದಾರೆ. ಶಿಲ್ಪಿ ಮಾನಯ್ಯನವರ ಪ್ರೋತ್ಸಾಹದಡಿಯಲ್ಲಿ ಅನೇಕ ತರಹದ ಶಿಲ್ಪಗಳನ್ನು ಮಾಡಿದ್ದಾರೆ. ಮೇಣ, ಲೋಹ ಮಾಧ್ಯಮದಿಂದ ಶಿಲ್ಪಗಳನ್ನು ರಚಿಸಿದ್ದಾರೆ.

ಜನಪದ ಶೈಲಿಯ ದೇವರ ಮುಖಭಾವ ಶಿಲ್ಪಗಳನ್ನು ಮೇಣದಿಂದ ಆಕರ್ಷಕ ನೆಲೆಯಲ್ಲಿ ಮಾಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಗಿನಂತೆ ಕಾಣುತ್ತೇವೆ.

- ಶಿವಲಿಂಗ
- ಗೌರಿ
- ಗಣಪತಿ
- ಸೀಗಮ್ಮ
- ಗೌರಮ್ಮ
- ನೀಲಕಂಠ
- ಗಂಗಾಧರ
- ನಂದಿ
- ಮಲ್ಲಯ್ಯ

ಹೀಗೆ ಹಲವಾರು ಜನ ಸಾಮಾನ್ಯರು ಪೂಜಿಸುವ ಶಿಲ್ಪಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ರಚನೆ ಮಾಡುತ್ತಾರೆ. ಇವರ ಹಲವು ಶಿಲ್ಪಗಳು 2005ರಿಂದ 2017ರ ವರೆಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಗಳಲ್ಲಿ ಇವರ ಶಿಲ್ಪಗಳು ಆಯ್ಕೆಗೊಂಡು ಪ್ರದರ್ಶನ ಕಂಡಿವೆ. ಅಲ್ಲದೆ ಕಲಬುರಗಿ ಕಂಪು, ಅಂತರ್‌ರಾಷ್ಟ್ರೀಯ ಸಿಂಪೋಜಿಯಂ ಶ್ರೀಗುರು ವಿದ್ಯಾಪೀಠ ಕಲಬುರಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸಿದ ಹಲವಾರು ಶಿಲ್ಪಕಲಾ ಶಿಬಿರ ಮತ್ತು ಕಲಾ ಪ್ರದರ್ಶನಗಳಲ್ಲಿ ಶಿಲ್ಪಗಳು ಪ್ರದರ್ಶನಗೊಂಡಿವೆ. 1995ರಿಂದ ನಿರಂತರವಾಗಿ ಶಕುಂತಲಾ ಶಿಲ್ಪಿಯವರು ಶಿಲ್ಪಕಲೆಯ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಶಿಲ್ಪ ರಚನೆಯಲ್ಲಿ ಮಗ್ನರಾಗಿದ್ದಾರೆ. ಅಂತೆಯೇ ಇವರ ಕಲಾ ಸೇವೆಗೆ ಹಲವು ಪ್ರಶಸ್ತಿ ಪುರಸ್ಕಾರ ಲಭಿಸಿವೆ. ಶಿಲ್ಪಿ ಶಕುಂತಲಾ ಮಾನಯ್ಯ ಬಡಿಗೇರ* ಅವರಿಗೆ ಮಾಧುರಿ, ವರದರಾಜ, ಪೃಥ್ವಿರಾಜ ಎಂಬ ಮೂರು ಜನ ಮಕ್ಕಳಿದ್ದಾರೆ. ಅವರು ಸಹ ಶಿಲ್ಪ ಕೆತ್ತನೆಯ ಹಾದಿಯಲ್ಲಿ ಮುಂದುವರೆದು ಸಗರನಾಡ ಜನಪದ ಕಲಾ ಪರಂಪರೆಗೆ ಹೊಸ

ಮೆರಗನ್ನು ನೀಡುತ್ತಿದ್ದಾರೆ. ಶಿಲ್ಪಕಲಾ ಕ್ಷೇತ್ರದಲ್ಲಿ ಮಹಿಳಾ ಶಿಲ್ಪಿಯಾಗಿ ಮುಂದುವರೆದ ಹಲವಾರು ಶಿಲ್ಪಕಲಾಕೃತಿಗಳನ್ನು ರಚಿಸಿ ಸಗರನಾಡ ಕಲಾ ಕೀರ್ತಿಯನ್ನು ನಾಡಿನೆಲ್ಲೆಡೆ ಪಸರಿಸುವ ವಿಶಿಷ್ಟ ಕಲಾವಿದೆ ಈ ಶಕುಂತಲಾ ಶಿಲ್ಪಿಯವರು.

ಮಾಧುರಿ ತಂದೆ ಮಾನಯ್ಯ ಬಡಿಗೇರ

ಸುರುಪುರ ತಾಲೂಕಿನ ಗೋನಾಲ (ಎಸ್.ಡಿ)ಗ್ರಾಮದಲ್ಲಿ ತಂದೆ ಮಾನಯ್ಯ ಬಡಿಗೇರ ತಾಯಿ ಶಕುಂತಲಾ ಎಂ. ಬಡಿಗೇರ ಅವರ ಪುತ್ರಿಯಾಗಿ 18 ನವೆಂಬರ್ 1995ರಲ್ಲಿ ಜನಿಸಿದರು. ಚಿಕ್ಕವರಿರುವಾಗಲೇ ಚಿತ್ರ, ಶಿಲ್ಪಕಲೆಯಲ್ಲಿ ಆಸಕ್ತಿ ಹೊಂದಿದ ಈ ಶಿಲ್ಪಿಗೆ ತಂದೆ ತಾಯಿಯ ಕಲಾ ಹಾರೈಕೆ ಮತ್ತು ಪ್ರೋತ್ಸಾಹ ದೊರೆಯುತ್ತದೆ. ಸಗರನಾಡ ಕಲಾ ಪರಂಪರೆಯಲ್ಲಿ ಜನಪದ ಶಿಲ್ಪಗಳನ್ನು ರಚಿಸುವದರೊಂದಿಗೆ ಮಾಧುರಿಯವರು (ಬಿ.ಇ, ವಾಸ್ತುಶಿಲ್ಪ ಅಭ್ಯಾಸಕ್ಕಾಗಿ ಬೆಂಗಳೂರನಲ್ಲಿ ನೆಲೆಸಿದ್ದಾರೆ. ಓದುವುದದರ ಜೊತೆಗೆ ಲೋಹ ಮತ್ತು ಜೇಡಿಮಣ್ಣು ಮಾಧ್ಯಮದಿಂದ ಹಲವಾರು ದೇವರ ಮುಖವಾಡ ಕಲಾಕೃತಿ ಶಿಲ್ಪಗಳನ್ನು ರಚಿಸಿದ್ದಾರೆ.

ಕೆಲವೊಂದು ಗಮನಿಸುವುದಾದರೆ–

- ಗಣಪತಿಯ ಶಿಲ್ಪ
- ಲಕ್ಷ್ಮೀ ಶಿಲ್ಪ
- ದೀಪಲಕ್ಷ್ಮೀ ಶಿಲ್ಪ
- ಗೌರಿ ಗಂಗೆಯ ಶಿಲ್ಪ
- ಮಲ್ಲಯ್ಯ ಶಿಲ್ಪ

ಹೀಗೆ ಪ್ರಮುಖ ಶಿಲ್ಪಗಳನ್ನು ಲೋಹ ಮಾಧ್ಯಮದಿಂದ ರಚಿಸಿದ್ದಾರೆ. ಶಿಲ್ಪಗಳ ರಚನೆ, ತಂತ್ರಗಾರಿಕೆ, ಶೈಲಿ, ಮನೆಯ ಹಿರಿಯ ಕಲಾವಿದರ ಹಾಗೆ ರೂಪಗೊಂಡಿವೆ. 2010ರಿಂದ ಶಿಲ್ಪಗಳನ್ನು ರಚಿಸುತ್ತಾ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಕ್ಕೆ ಆಯ್ಕೆಗೊಂಡು ಪ್ರದರ್ಶನ ಕಂಡಿವೆ. ಅಪ್ಪಟ ಜನಪದ ಪರಂಪರೆಯ ಶಿಲ್ಪಗಳನ್ನು ರಚಿಸುವ ಶಿಲ್ಪಿ ಮಾಧುರಿಯವರಿಗೆ ಹಲವು ಸಂಘ ಸಂಸ್ಥೆಗಳಿಂದ ಸನ್ಮಾನಗಳು ಸಹ ದೊರೆತಿವೆ.

ವರದರಾಜ ತಂದೆ ಮಾನಯ್ಯ ಬಡಿಗೇರ

ಈ ಯುವ ಶಿಲ್ಪಿಯು ತಂದೆ ಮಾನಯ್ಯ, ತಾಯಿ ಶಕುಂತಲಾ ಅವರ ಮಗನಾಗಿ 15 ಅಗಸ್ಟ್ 1990ರಲ್ಲಿ ಸುರಪುರ ತಾಲೂಕಿನ ಗೋನಾಲ (ಎಸ್.ಡಿ) ಗ್ರಾಮದಲ್ಲಿ ಜನಿಸಿದರು. ಹತ್ತನೇ ತರಗತಿಯವರೆಗೆ ಶಿಕ್ಷಣ ಪಡೆದ ಈ ಶಿಲ್ಪಿ ತಂದೆ ತಾಯಿಯ ಕಾಯಕವಾದ ಶಿಲ್ಪಕೆತ್ತನೆಯಲ್ಲಿ ಪ್ರಸ್ತುತ ಮಂದುವರೆದಿದ್ದಾರೆ. ಈ ಶಿಲ್ಪಿಗೆ ಕಲಾ ಗುರುಗಳಾಗಿ ನಾಡೋಜ ನಾಗಣ್ಣ ಬಡಿಗೇರ, ಮಾನಯ್ಯ ಬಡಿಗೇರ, ವಿಪಿನ್ ಬಹದೌರಿಯಾ, ಹಾಗೂ ಶಿಲ್ಪಿ ವೆಂಕಟಾಚಲಪತಿ ಮತ್ತು ಮಲ್ಲಿಕಾರ್ಜುನ ಬಿ, ಚಿಕನಹಳ್ಳಿಯವರು ಮಾರ್ಗದರ್ಶನ ಮಾಡಿದ್ದಾರೆ. 2006ರ ರಿಂದ ಶಿಲ್ಪ ಕೆತ್ತನೆಯಲ್ಲಿ ತೊಡಗಿಸಿಕೊಂಡು ವರದರಾಜ ಅವರು ಮುಂದುವರೆದಿದ್ದಾರೆ. ಅವರ ಶಿಲ್ಪಕಲಾಕೃತಿಗಳು ಈ ಕೆಳಗಿನಂತಿವೆ.

- ಆಂಜನೆಯ
- ನಂದಿ
- ಮಖರ ಪ್ರಾಣಿ,
- ಲಿಂಗಪೂಜೆ ಮಾಡುತ್ತಿರುವ ಬಸವಣ್ಣ
- ಹಂಸ, ಗಜಸಿಂಹ,
- ಆನೆ,
- ಗಣಪತಿ

ಅಲ್ಲದೆ ಮನೆಯ ತಲಬಾಗಿಲ ವಿನ್ಯಾಸಗಳಾದ ಡಪ್ಪೆ, ಗೀರು, ಗೋಲು, ಸುಳುವು, ಗೊಣಸು, ಬಳ್ಳಿತರೆ, ಗಿಳಿ, ಸಿಂಹ, ಕುದುರೆ, ಸೇರಿದಂತೆ ಹಲವಾರು ಬಗೆಯ ಶಿಲ್ಪಗಳನ್ನು ಮಾಡುತ್ತ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಕಲಾಪ್ರದರ್ಶನಗಳಲ್ಲಿ ಇವರ ಶಿಲ್ಪಕಲಾಕೃತಿಗಳು ಪ್ರದರ್ಶನ ಕಂಡಿವೆ. ಹಾಗೆಯೇ ಶಿಲ್ಪಕಲಾ ಸೇವೆಗೆ ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಸಹ ಪುರಸ್ಕಾರಗಳು ಲಭಿಸಿವೆ.

ಪೃಥ್ವಿರಾಜ ತಂದೆ ಮಾನಯ್ಯ ಬಡಿಗೇರ:-

ಯಾದಗಿರ ಜಿಲ್ಲೆಯ ಸುರಪುರ ತಾಲೂಕಿನ ಗೋನಾಲ (ಎಸ್.ಡಿ) ಗ್ರಾಮದ ಶಿಲ್ಪಿ ಮಾನಯ್ಯನವರ ಮಗನಾದ ಯುವ ಶಿಲ್ಪಿ ಪೃಥ್ವಿರಾಜ ಅವರು ಲೋಹ ಶಿಲ್ಪಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಶೈಕ್ಷಣಿಕವಾಗಿ ಡಿಪ್ಲೊಮಾ (ಇ ಮತ್ತು ಸಿ.ಇ) ಪದವಿ ಅಧ್ಯಯನ ಮಾಡುತ್ತಿದ್ದು ಪೃಥ್ವಿರಾಜರವರ ತಂದೆ ತಾಯಿಯವರ ಶಿಲ್ಪಕಲಾ ಕಾಯಕವನ್ನು ಮುಂದುವರೆಸಿಕೊಂಡು ನಡೆಯುತ್ತಿರುವುದು ಗಮನಾರ್ಹ ಸಂಗತಿ, ಈ ಶಿಲ್ಪಿಗೆ ಕಲಾ ಗುರುಗಳಾಗಿ ತಂದೆ ಮಾನಯ್ಯ ಬಡಿಗೇರ, ವಿಪಿನ ಬಹದ್ದೌರಿಯಾ ಅವರು ಕಂಡುಬರುತ್ತಾರೆ. ಮರ ಮತ್ತು ಲೋಹ ಮಾಧ್ಯಮದಿಂದ ಹಲವು ಕಲಾಕೃತಿಗಳನ್ನು ರಚಿಸಿದ್ದಾರೆ ಅವುಗಳನ್ನು ಇಲ್ಲಿ ಗಮನಿಸಬಹುದಾಗಿದೆ.

- ರಾಜಹಂಸ
- ಷಣ್ಮುಖ ದೇವನ ಶಿಲ್ಪ
- ಸರಸ್ವತಿ
- ಗಣಪತಿ
- ಶಿವಲಿಂಗ
- ಗ್ರಾಮೀಣ ದೇವತೆ ಮುಖಶಿಲ್ಪ
- ತಲಬಾಗಿಲ ವಿನ್ಯಾಸ
- ಹೂ, ಎಲೆ, ಬಳ್ಳಿ
- ಗೀರು ಗೋಲು
- ಕಾಲು,
- ಗಡ್ಡೆ ಸುಳುವು

ಕುದುರೆ ಶಿಲ್ಪಗಳು ಸೇರಿದಂತೆ ಹಲವಾರು ಬಗೆಯ ಶಿಲ್ಪಗಳನ್ನು ರಚಿಸಿದ್ದಾರೆ. 2008 ರಿಂದ ಪ್ರಾರಂಭವಾದ ಇವರ ಶಿಲ್ಪಕಲಾಕೃತಿ ಕೆತ್ತನೆ ಪ್ರಸ್ತುತ ದಿನಗಳವರೆಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಹಾಗೂ ಇತರೆ ಶಿಬಿರಗಳ ಮತ್ತು ಕಲಾ ಪ್ರದರ್ಶನಗಳನ್ನು ಮಾಡಿದ್ದಾರೆ. ಹಾಗೆಯೇ

ಇವರ ಕಲಾ ಸೇವೆಯನ್ನು ಪರಿಗಣಿಸಿ ಹಲವು ಸಂಸ್ಥೆಗಳಿಂದ ಸನ್ಮಾನವನ್ನು ಸಹ ಪಡೆದಿದ್ದಾರೆ.

ಮಲ್ಲಿಕಾರ್ಜುನ ತಂದೆ ಬಸಣ್ಣ ಚಿಕನಹಳ್ಳಿ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಹಂದ್ರಾಳ ಗೋನಾಲದಲ್ಲಿ ತಂದೆ ಬಸಣ್ಣ ತಾಯಿ ಕಾಳಮ್ಮನವರ ಮಗನಾಗಿ 10 ಮೇ 1976ರಂದು ಜನಿಸಿದರು. ಮುಂದೆ ಇವರನ್ನು ಚಿಕನಳ್ಳಿಯ ಗ್ರಾಮದ ಗಂಗಮ್ಮ ಕಾಳಪ್ಪನವರ ದತ್ತು ಪುತ್ರರಾಗುತ್ತಾರೆ. ಚಿಕ್ಕವರಿರುವಾಗಲೇ ಶಿಲ್ಪಕಲೆಯಲ್ಲಿ ಆಸಕ್ತಿಯಿರುವುದರಿಂದ ಮುಂದೆ ಹತ್ತನೇ ತರಗತಿಯವರೆಗೆ ಮಾತ್ರ ಓದಿ ನಂತರ ಶಿಲ್ಪಕಲಾಕೃತಿಗಳನ್ನು ರಚಿಸುವುದರೊಂದಿಗೆ ಶಿಲ್ಪಕಲಾವಿದರಾಗಿ ಮುಂದುವರೆಯುತ್ತಾರೆ. ಇವರಿಗೆ ಶಿಲ್ಪಕಲಾ ಗುರುಗಳಾಗಿ ನಾಡೋಜ ನಾಗಣ್ಣ ಬಡಿಗೇರ ತಂದೆಯವರಾದ ಬಸಣ್ಣ ಬಡಿಗೇರ, ಮಾನಯ್ಯ ಬಡಿಗೇರ ಇವರೆಲ್ಲರು ಉತ್ತಮ ಮಾರ್ಗದರ್ಶನ ಮಾಡುವುದರೊಂದಿಗೆ ಮಲ್ಲಿಕಾರ್ಜುನ ಅವರನ್ನು ಶಿಲ್ಪಿಗಳನ್ನಾಗಿ ರೂಪಿಸುತ್ತಾರೆ. ವಿಶೇಷವಾಗಿ ಮರ ಮತ್ತು ಲೋಹ ಮಾಧ್ಯಮದಲ್ಲಿ ಶಿಲ್ಪಗಳನ್ನು ಮಾಡುವುದರಲ್ಲಿ ನಿರತರಾಗಿದ್ದಾರೆ. ಲೋಹ ಮತ್ತು ಮರ ಮಾಧ್ಯಮದ ಶಿಲ್ಪಗಳು ನೋಡುಗರ ಮನ ಅರಳಿಸುವಂತೆ ಕೆತ್ತನೆ ಮಾಡುತ್ತಾರೆ. ಇವರ ಶಿಲ್ಪಗಳು ನಾಡಿನ ವಿವಿಧಡೆ ಪ್ರದರ್ಶನಗೊಂಡು ನೋಡುಗರ ಗಮನ ಸೆಳೆದಿವೆ. 2002ರಲ್ಲಿ ಬೀದರ 2005, 2006, 2007 ಮತ್ತು 2010ರಲ್ಲಿ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಗಳಲ್ಲಿ ಇವರ ಶಿಲ್ಪಗಳು ಪ್ರದರ್ಶನಗೊಂಡಿವೆ. ಅಲ್ಲದೆ ನಾಡಿನ ವಿವಿಧ ಶಿಲ್ಪಕಲಾ ಶಿಬಿರಗಳಲ್ಲಿಯೂ ಸಹ ಭಾಗವಹಿಸಿ ಉತ್ತಮ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ.

ಜನಪದ ಕಲಾಶೈಲಿಗಳಿಂದ ಕಂಗೊಳಿಸುವ ಇವರ ಶಿಲ್ಪಕಲಾಕೃತಿಗಳು ಹಲವಡೆ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿವೆ. ಉದಾಃ 2008 ರ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸಹಯೋಗದಲ್ಲಿ ಮೈಸೂರಿನ ರಾಮಸನ್ಸ್ ಕಲಾ ಪ್ರತಿಷ್ಠಾನ ನೀಡುವ ವಾರ್ಷಿಕ ಬಹುಮಾನವನ್ನು ಪಡೆದಿದ್ದಾರೆ.

ನಿರ್ಮಲಾ ಎಂ ಚಿಕನಹಳ್ಳಿ

ಈ ಶಿಲ್ಪಿಯು ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ಹಂದ್ರಾಳ ಗೋನಾಲ ಗ್ರಾಮದವರು.

ತಂದೆ ಕಾಳಪ್ಪ ತಾಯಿ ನಂದಮ್ಮನವರ ಮಗಳಾಗಿ 1984ರಲ್ಲಿ ಸುರಪುರ ತಾಲೂಕಿನ ಕಕ್ಕೇರಾ ಗ್ರಾಮದಲ್ಲಿ ಜನಿಸಿದರು. ಶಿಲ್ಪಿ ಮಲ್ಲಿಕಾರ್ಜುನ ಅವರನ್ನು ಮದುವೆಯಾದ ನಂತರ ಶಿಲ್ಪಕಲಾಕೃತಿಗಳನ್ನು ರಚಿಸುವಲ್ಲಿ ಗಮನಾರ್ಹವಾಗಿ ತೊಡಗಿಸಿಕೊಂಡಿದ್ದಾರೆ. ಇವರಿಗೆ ಕಲಾ ಗುರುಗಳಾಗಿ ಶಕುಂತಲಾ ಎಂ. ಬಡಿಗೇರ ಅವರು ಮಾರ್ಗದರ್ಶನ ಮಾಡಿದ್ದಾರೆ. ಇವರು ರಚಿಸಿದ ಶಿಲ್ಪಗಳು ಈ ಕೆಳಗಿನಂತಿವೆ

* ಶಿವಲಿಂಗ
* ಗೌರಿ ಗಂಗೆ
* ಸೀಗಮ್ಮ

ದೇವತಾ ಮುಖಭಾವ ಶಿಲ್ಪಗಳು ಸೇರಿದಂತೆ ಹಲವು ಬಗೆಯ ಮುಖವಾಡ ಶಿಲ್ಪಗಳು ಜಾನಪದ ಅಂಶಗಳಿಂದ ಕೂಡಿರುತ್ತವೆ. ಮೊದಲಿಗೆ ಮಣ್ಣಿನಿಂದ ಮೂರ್ತಿಯನ್ನು ಮಾಡಿಕೊಂಡು ಅದನ್ನು ಸುಡುವ ಮೂಲಕ ಬಣ್ಣಗಾರಿಕೆಯನ್ನು ತರುವ ತಂತ್ರಗಾರಿಕೆ ವಿಶೇಷವಾಗಿ ಮಾಡುತ್ತಾರೆ. ಲೋಹ ಮತ್ತು ಮಣ್ಣಿನ ಮಾದರಿ ಶಿಲ್ಪಗಳು ಏರಕ ಹೊಯ್ಯುವ ಮೂಲಕ ರಚಿಸುತ್ತಾರೆ. ಗ್ರಾಮದೇವತೆ ಮುಖಭಾವ ಶಿಲ್ಪಗಳು ಜನಪದರ ಆರಾಧನಾ ದೇವತೆಗಳಾಗಿ ಪೂಜಿಸುವಂತೆ ಕಲಾತ್ಮಕವಾಗಿ ರಚಿಸುತ್ತಾರೆ. ಹತ್ತನೇ ತರಗತಿಯವರೆಗೆ ಓದಿದ ನಿರ್ಮಲಾ ಅವರು ಮನೆಯಲ್ಲಿ ಕೇವಲ ಗೃಹಣಿಯಾಗಿರದೆ ಕಲೆಯಲ್ಲಿ ಉತ್ತಮ ಶಿಲ್ಪಿಗಳಾಗಿಯೂ ರೂಪಗೊಂಡಿದ್ದಾರೆ.

ಶ್ರೀಶೈಲ ತಂದೆ ಬಸಣ್ಣ ಬಡಿಗೇರ

ಸುರಪುರ ತಾಲೂಕಿನ ಹಂದ್ರಾಳ ಗೋನಾಲ ಗ್ರಾಮದಲ್ಲಿ ತಂದೆ ಬಸಣ್ಣ ತಾಯಿ ಕಾಳಮ್ಮನವರ ಮಗನಾಗಿ 20 ಜೂನ 1984ರಲ್ಲಿ ಜನಿಸಿದರು. ಶ್ರೀಶೈಲ ಶಿಲ್ಪಿಗಳು ಶಿಲ್ಪಕಲಾ ಕ್ಷೇತ್ರದ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ತಂದೆಯವರ ಜನಪದ ಮರಗೆತ್ತನೆಯ ಕಲೆಯನ್ನು ಸೂಕ್ಷ್ಮವಾಗಿ ಗಮನಿಸಿದ ಇವರು ಮರ ಮತ್ತು ಲೋಹ ಮಾಧ್ಯಮದಲ್ಲಿ ಹಲವಾರು ಉತ್ತಮ ಶಿಲ್ಪಗಳನ್ನು ರಚಿಸಿದ್ದಾರೆ.

* ಶಿವಲಿಂಗ

* ನಂದಿ
* ಗೌರಿ
* ಶಿವ
* ಲಕ್ಷ್ಮೀ
* ಸರಸ್ವತಿ
* ವೆಂಕಟೇಶ್ವರ
* ಮರದ ಕುದುರೆ ಶಿಲ್ಪಗಳು
* ತಲಬಾಗಿಲು ಕೆತ್ತನೆ

ಹೀಗೆ ಹಲವು ಬಗೆಯ ಶಿಲ್ಪಕಲಾಕೃತಿಗಳನ್ನು ಕೆತ್ತನೆ ಮಾಡುವುದರೊಂದಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2005, 2006, 2007, 2010ರ ವಾರ್ಷಿಕ ಕಲಾ ಪ್ರದರ್ಶನಗಳಲ್ಲಿ ಗಮನ ಸೆಳೆದು ಕಲಾ ವಿಮರ್ಶಕರ ಬರವಣಿಗೆಗೆ ಸಾಕ್ಷಿಯಾಗಿದ್ದಾರೆ. ಶಿವಾರ ಪಟ್ಟಣದಲ್ಲಿ ಶಿಲ್ಪಗಮೋಕ್ತ ಪಾರಂಪರಿಕ ಏರಕದ ಲೋಹ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿ ಶಿಲ್ಪ ಶಾಸ್ತ್ರೀಯ ರೂಪ ಲಕ್ಷಣ ಮತ್ತು ಮಾನಲಕ್ಷಣದ ಅನುಸಾರ ಶಿಲ್ಪಾಗಮದ ನೇಮಗಳನ್ನು ಪಾಲಿಸುತಾ ಮೂರ್ತಿ ನಿರ್ಮಿಸಿಕೊಟ್ಟಿದ್ದಾರೆ. ಹೀಗೆ ಹಲವಾರು ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿ ಅತ್ಯುತ್ತಮ ಹೆಸರನ್ನು ಮಾಡಿದ್ದಾರೆ. ಅಂತೆಯೇ 2005ರ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಯನ್ನು ಪಡೆದಿದ್ದಾರೆ.

ಪವಿತ್ರಾ ಎಸ್.ಬಡಿಗೇರ್

ಸುರಪುರ ತಾಲೂಕಿನ ಹಂದ್ರಾಳ ಗೋನಾಲ ಗ್ರಾಮದ ಶಿಲ್ಪಿ ಶ್ರೀಶೈಲ ಬಡಿಗೇರವರ ಪತ್ನಿಯಾದ ಪವಿತ್ರಾ ಅವರು ಸಗರನಾಡಿನ ಪ್ರತಿಭಾವಂತ ಮಹಿಳಾ ಶಿಲ್ಪಿಗಳು ಇವರು ತಂದೆ ಕಲ್ಲಣ್ಣ ತಾಯಿ ಕಾಳಮ್ಮನವರ ಮಗಳಾಗಿ 13 ಜನೇವರಿ 1997ರಲ್ಲಿ ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದಲ್ಲಿ ಜನಿಸಿದರು. ಶ್ರೀಶೈಲ ಬಡಿಗೇರವರನ್ನು ಮದುವೆಯಾದ ನಂತರ ಪವಿತ್ರಾವರು ನಿರಂತರವಾಗಿ ಮಣ್ಣು, ಮೇಣ, ಮತ್ತು ಲೋಹ ಮಾಧ್ಯಮದಲ್ಲಿ ಶಿಲ್ಪಕಲಾಕೃತಿಗಳನ್ನು

ರಚಿಸುತ್ತಿದಾರೆ. 2016ನೇ ಸಾಲಿನ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಕ್ಕೆ ಇವರ ಜನಪದ ಶೈಲಿಯ ಶಿಲ್ಪ ಕಲಾಕೃತಿ ಆಯ್ಕೆಗೊಂಡು ಪ್ರದರ್ಶನಗೊಂಡಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ರವೀಂದ್ರ ಕಲಾಕ್ಷೇತ್ರ 50 ವರ್ಷದ ನೆನಪಿನೋಕುಳಿ ಕಾರ್ಯಕ್ರಮದ ಶಿಬಿರದಲ್ಲಿ ಪವಿತ್ರಾ ಅವರು ಶಿಲ್ಪ ಕಲಾಕೃತಿಯನ್ನು ರಚಿಸಿದ್ದಾರೆ. ಹೀಗೆ ಹಲವು ಕಲಾ ಶಿಬಿರಗಳಲ್ಲಿ ಭಾಗವಹಿಸಿ ಉತ್ತಮ ಶಿಲ್ಪಗಳನ್ನು ಮಾಡಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಮಣ್ಣಿನಿಂದ ಶಿಲ್ಪವನ್ನು ಮಾಡಿ ಅದರ ಮೇಲೆ ಮೇಣವನ್ನು ತೆಳ್ಳಗೆ ಲೇಪಿಸಿ ಮುಂದೆ ಚೆನ್ನಾಗಿ ಸುಟ್ಟು, ಎರಕ ಹೊಯ್ದು ಲೋಹದಿಂದ ಶಿಲ್ಪಗಳನ್ನು ತಯಾರಿಸುತ್ತಾರೆ. ದೇವರ ಮೂರ್ತಿ ಶಿಲ್ಪಗಳನ್ನು ಅಪ್ಪಟ ಜನಪದ ಕಲಾ ಶೈಲಿಯಲ್ಲಿ ಜೀವ ತುಂಬುವ ವಿಶಿಷ್ಟ ಶಿಲ್ಪಿಯಾಗಿ ಪವಿತ್ರಾ ಅವರು ಕಮಡುಬರುತ್ತಾರೆ. ಇವರ ಕಲೆಯ ಸೇವೆ ಸಗರನಾಡ ಜನಪದ ಕಲಾ ಪರಂಪರೆ ಯಲ್ಲಿ ಅತ್ಯುತ್ತಮವಾಗಿದ್ದು, ಮರೆಯದ ಸಂಗತಿ.

ಮೌನೇಶ ತಂದೆ ಬಸಣ್ಣ ಬಡಿಗೇರ

ಜಕಣಾಚಾರ್ಯ ಪ್ರಶಸ್ತಿ ಪುರಸ್ಕೃತ ಬಸಣ್ಣ ಬಡಿಗೇರ ಅವರ ಮಗನಾದ ಮೌನೇಶ ಶಿಲ್ಪಿಯು ತಂದೆ ಬಸಣ್ಣ ತಾಯಿ ಕಾಳಮ್ಮನವರ ಮಗನಾಗಿ 20 ಜುಲೈ 1992ರಲ್ಲಿ ಸುರಪುರ ತಾಲೂಕಿನ ಹಂದ್ರಾಳ ಗೋನಾಲದಲ್ಲಿ ಜನಿಸಿದರು. ಶೈಕ್ಷಣಿಕವಾಗಿ ಮಾಸ್ಟರ್ ಆಫ್ ಟೆಕ್ನಾಲಜಿ (ಮೆಕಾನಿಕಲ್ ಇಂಜಿನಿಯರಿಂಗ್) ಅಧ್ಯಯನಕ್ಕೆ ತೊಡಗಿಸಿಕೊಂಡಿದ್ದಾರೆ. ಜೊತೆಗೆ ನಿರಂತರವಾಗಿ ಜನಪದ ಶೈಲಿಯ ಹಲವಾರು ಶಿಲ್ಪಗಳನ್ನು ರಚಿಸಿದ್ದಾರೆ. ಅವುಗಳನ್ನು ಗಮನಿಸುವುದಾದರೆ ಸಿಂಹ, ದೇವರ ಮುಖಗಳು, ನಂದಿ, ಶಿವಲಿಂಗ, ಮುಂತಾದ ಪ್ರಮುಖ ಶಿಲ್ಪಗಳನ್ನು ಕಾಣಬಹುದು. ಇವರ ಕಲಾ ನೈಪುಣ್ಯತೆ ಗುರುಗಳಾಗಿ ತಂದೆಯವರಾದ ಬಸಣ್ಣ ಬಡಿಗೇರ, ಲೋಹ ಶಿಲ್ಪಿ ಮಾನಯ್ಯ ಬಡಿಗೇರವರು ಉತ್ತಮ ಮಾರ್ಗದರ್ಶನ ಮಾಡಿದ್ದಾರೆ. ಇವರ ಶಿಲ್ಪಗಳು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಗಳಲ್ಲಿ ಪ್ರದರ್ಶನ ಕಂಡಿವೆ. ಇವರ ಕಲಾ ಸೇವೆಗೆ ಕಲಬುರಗಿ ಜಿಲ್ಲಾ ವಿಶ್ವಕರ್ಮ ಸಮಾಜದ ವತಿಯಿಂದ ಸನ್ಮಾನವನ್ನು ಮಾಡಿದ್ದಾರೆ. ಲೋಹ ಮಾಧ್ಯಮದಲ್ಲಿ ಶಿಲ್ಪಗಳನ್ನು ರಚಿಸುವ ಶಿಲ್ಪಿ ಮೌನೇಶ ಬಿ. ಬಡಿಗೇರರವರು ಸಗರನಾಡಿನ

ಸೂಕ್ಷ್ಮತೆಗಳು ನಗರ ಕೇಂದ್ರಿತ ವಲಯದಲ್ಲಿಯೂ ಸಹ ಸೂಕ್ಷ್ಮ ಚಿಂತನೆಯ ಫಲವಾಗಿ ಶಿಲ್ಪಗಳನ್ನು ಗಾಯತ್ರಿಯವರು ರಚಿಸುತ್ತಾರೆ. ತಂದೆ ಚಂದ್ರಶೇಖರ ತಾಯಿ ದೇವಕಿಯವರ ಮಗಳಾಗಿ 1988ರಲ್ಲಿ ಜನಿಸುತ್ತಾರೆ. ಸಂಗೀತ ಮತ್ತು ಶಿಲ್ಪಕಲಾ ಕ್ಷೇತ್ರದ ಅನುಭವವನ್ನು ಗಾಢವಾಗಿ ಪಡೆದುಕೊಂಡಿದ್ದಾರೆ. ಇವರ ಕಲೆಗೆ ತಂದೆಯ ವಂಶ ಪರಂಪರೆಯ ಮೆರಗು ಇದೆ, ಆ ಕಾರಣಕ್ಕಾಗಿ ಜನಪದ ಶಿಲ್ಪಗಳನ್ನು ಗಮನಾರ್ಹವಾಗಿ ಕೆತ್ತನೆ ಮಾಡುತ್ತಾರೆ. ಗಣೇಶ, ಕುದುರೆ, ಲಕ್ಷ್ಮೀ, ಸರಸ್ವತಿ, ಬುದ್ಧ, ಹಂಸ, ಸಿಂಹ, ದೇವರ ಮನೆ, ಬಾಗಿಲು, ದೇವರ ಗದ್ದುಗೆ, ಪಂಚಮುಖಿ ಗಣೇಶ, ಕುಬೇರ, ಕುಂಭಕಲೆ ಹೀಗೆ ಮುಂತಾದ ಜನಪದ ಪ್ರಕಾರದ ಶಿಲ್ಪಗಳನ್ನು ರಚಿಸಿದ್ದಾರೆ. ಇವರ ಶಿಲ್ಪಗಳು ನಾಡಿನ ವಿವಿಧೆಡೆ ಪ್ರದರ್ಶನಗಳು ರಚಿಸಿದ್ದಾರೆ. ಅಂತೆಯೇ 2005ನೇ ಸಾಲಿನ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಕಲಾಪ್ರದರ್ಶನದಲ್ಲಿ ಕುಬೇರ ಶಿಲ್ಪಕಲಾಕೃತಿಗೆ ಪ್ರಶಸ್ತಿ ದೊರಕಿದೆ. ಶಿಲಾ ಮಾಧ್ಯಮ ಮತ್ತು ಮರಗೆತ್ತನೆ ಕೆಲಸದಲ್ಲಿ ಅತ್ಯುತ್ತಮ ಶಿಲ್ಪಗಳನ್ನು ಗಾಯತ್ರಿಯವರು ಕೆತ್ತನೆ ಮಾಡಿದ್ದಾರೆ.

ಜೇವರ್ಗಿ ತಾಲೂಕಿನ ಜನಪದ ಶಿಲ್ಪಗಳು

ಸಗರನಾಡಿನ ವ್ಯಾಪ್ತಿಯಲ್ಲಿ ಬರುವಂತಹ ಜೇವರ್ಗಿ ತಾಲೂಕು ಅತ್ಯಂತ ಮಹತ್ವವುಳ್ಳ ಸಾಂಸ್ಕೃತಿಕ ನಗರವಾಗಿದೆ. ಈ ತಾಲೂಕಿನಲ್ಲಿ ಕಂಡುಬರುವಂತಹ ಜನಪದ ಕಲಾ ಪ್ರಕಾರದ ಶಿಲ್ಪಗಳು ಕರ್ನಾಟಕದ ಶಿಲ್ಪಕಲಾ ಕ್ಷೇತ್ರದಲ್ಲಿ ಅತ್ಯುನ್ನತ ಶಿಲ್ಪಿಗಳಾಗಿ ಕಂಡುಬರುತ್ತಾರೆ.

1) ನಾಗಪ್ಪ ತಂದೆ ಈರಪ್ಪ ಕಂಬಾರ

2) ಪ್ರಕಾಶ ತಂದೆ ನಾಗಪ್ಪ ಕಂಬಾರ

3) ಮೋನೇಶ ತಂದೆ ನಾಗಪ್ಪ ಕಂಬಾರ

4) ಕಲ್ಲಣ್ಣ ತಂದೆ ಸಾಯಬಣ್ಣ ಕಂಬಾರ

5) ದಿವಂಗತ, ಮಾನಪ್ಪ ತಂದೆ ಗುರಪ್ಪ ಕಂಬಾರ

6) ಈರಣ್ಣ ತಂದೆ ಮಾನಪ್ಪ ಕಂಬಾರ

---

* ಶಕುಂತಲಾ ಮಾನಯ್ಯ ಬಡೀಗೆರ: ಅವರೊಂದಿಗೆ ಸಂದರ್ಶನ ದಿ. 17.04.2017

7) ದೇವಿಂದ್ರಪ್ಪ ತಂದೆ ಪರಪ್ಪ ವಿಶ್ವಕರ್ಮ

8) ಪ್ರಭು ತಂದೆ ದೇವಿಂದ್ರಪ್ಪ ವಿಶ್ವಕರ್ಮ

9) ಲಕ್ಷ್ಮಣ ತಂದೆ ದೇವಿಂದ್ರಪ್ಪ ವಿಶ್ವಕರ್ಮ

10) ಗುಂಡಪ್ಪ ಕಮ್ಮಾರ, ಸಾತಖೇಡ ತಾ. ಜೇವರ್ಗಿ ಜಿ. ಕಲಬುರುಗಿ

11) ಜಕಣಾಚಾರ್ಯ ಯಲಗೋಡ, ತಾ. ಜೇವರ್ಗಿ ಜಿ. ಕಲಬುರಗಿ

ಹೀಗೆ ಹಲವು ಶಿಲ್ಪಿಗಳನ್ನು ಕಾಣುತ್ತೇವೆ. ಜೇವರ್ಗಿ ತಾಲೂಕಿನಲ್ಲಿ ಈ ಹತ್ತು ಶಿಲ್ಪಿಗಳೇ ಮಾತ್ರ ಅಲ್ಲದೇ ಅನೇಕ ಜನಪದ ಶಿಲ್ಪಕಲಾವಿದರು ಇರಬಹುದು. ಆದರೆ ಈ ಅಧ್ಯಯನದ ಅವಧಿಯ ಮಿತಿಯಲ್ಲಿ ಕಂಡು ಬಂದಿರುವ ಶಿಲ್ಪಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

1) ನಾಗಪ್ಪ ತಂದೆ ಈರಪ್ಪ ಕಂಬಾರ

ಶಿಲ್ಪಿ ನಾಗಪ್ಪನವರು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದಲ್ಲಿ ಜನಿಸಿದ್ದಾರೆ. ಸಗರನಾಡಿನ ವ್ಯಾಪ್ತಿಯಲ್ಲಿ ಬರುವಂತಹ ಈ ಗ್ರಾಮವು ಕುದುರೆ ಕೆತ್ತನೆಯಲ್ಲಿ ಅತ್ಯಂತ ಪ್ರಸಿದ್ಧಿ ಪಡೆದಿದೆ. ಜನಪದ ಪ್ರಕಾರದ ಶಿಲ್ಪಗಳನ್ನು ಕೆತ್ತನೆ ಮಾಡಿರುವ ಶಿಲ್ಪಿ ನಾಗಪ್ಪನವರು ಸಗರನಾಡಿನ ಪ್ರಮುಖ ಜನಪದ ಶಿಲ್ಪಿಗಳಲ್ಲಿ ಇವರು ಒಬ್ಬರು. ಬದುಕಿನೂದ್ದಕ್ಕೂ ಕುದುರೆ ಶಿಲ್ಪಗಳು, ಮನೆಯ ತಲಬಾಗಿಲುಗಳು ಮತ್ತು ಪಡಸಾಲೆ ಜೋಡಣೆ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅತ್ಯುನ್ನತ ಕಲಾಕೃತಿಗಳನ್ನು ಕೆತ್ನೆ ಮಾಡಿದ್ದಾರೆ. ಕೌಟುಂಬಿಕವಾಗಿ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತ ಮರಗೆತ್ತನೆಯ ಕೆಲಸವನ್ನೇ ತನ್ನ ಉಸಿರಾಗಿಸಿಕೊಂಡು ಜೀವಿಸಿದ್ದಾರೆ. ಜೇವರ್ಗಿ ತಾಲೂಕಿನ ಹಳ್ಳಿಗಳಲ್ಲದೇ ಬೇರೆ ಬೇರೆ ಕಡೆಗಳಲ್ಲೂ ಹಲವಾರು ಶಿಲ್ಪಗಳನ್ನು ಮಾಡಿಕೊಟ್ಟಿದ್ದಾರೆ. ಉದಾಃ ಬಿಳವಾರ, ಮಾರಡಗಿ, ಕೊಡಚಿ, ಆಂದೋಲಾ, ಸಾದ್ಯಾಪುರ, ಬೋಳಬಟ್ಟಿ ಸೇರಿದಂತೆ ಅನೇಕ ಊರುಗಳಲ್ಲಿ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ. ಪ್ರಸ್ತುತ ಎಂಬತ್ತು ವಯಸ್ಸನ್ನು ಪೂರೈಸಿದ ಶಿಲ್ಪಿ ನಾಗಪ್ಪವರು ಶಿಲ್ಪಕೆತ್ತನೆ ಕೆಲಸವನ್ನು ನಿಲ್ಲಿಸಿ ಅನಾರೋಗ್ಯದಿಂದ ಮಲಗಿದ್ದಾರೆ. ಅವರ ಈ ಕಲಾ ಕಾರ್ಯಗಳನ್ನು ಮಕ್ಕಳಾದ ಮೋನೇಶ ಕಂಬಾರ, ಮತ್ತು ಪ್ರಕಾಶ ಕಂಬಾರರವರು ಮುಂದುವರೆಸಿಕೊಂಡು ನಡೆದಿದ್ದಾರೆ. ಮರಗೆತ್ತನೆಯ ಕೆಲಸದಲ್ಲಿ ತಮ್ಮನ್ನು

ತಾವು ತೊಡಗಿಸಿಕೊಂಡ ಶಿಲ್ಪಿ ನಾಗಪ್ಪನವರಿಗೆ ಸರಕಾರದಿಂದ ಮಾಶಾಸನವಾಗಲಿ ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಯಾವುದೇ ಗೌರವ ಪ್ರಶಸ್ತಿ ಪುರಸ್ಕಾರಗಳು ಲಭಿಸಿರುವುದಿಲ್ಲ.

ಮೋನೇಶ ತಂದೆ ನಾಗಪ್ಪ ಕಂಬಾರ

ಸಾತಖೇಡ ಗ್ರಾಮದ ಶಿಲ್ಪಿ ನಾಗಪ್ಪ ಕಂಬಾರವರ ಹಿರಿಯ ಮಗನಾದ ಮೋನೇಶ ಶಿಲ್ಪಿಯವರು ಸಹ ಮರಗೆತ್ತನೆಯ ಮಾಧ್ಯಮಗಳಲ್ಲಿ ಮುಂದುವರೆದಿದ್ದಾರೆ. ಸಗರನಾಡಿನ ವಿವಿಧ ಗ್ರಾಮಗಳಲಿ ಕುದುರೆ ಶಿಲ್ಪ, ತಲಬಾಗಿಲುಗಳ ಕೆತ್ತನೆ, ಗೌರಿಮಾಡ, ಪಡಸಾಲಿ ಜೋಡಣೆ ಕೆಲಸವನ್ನು ಕಲಾತ್ಮಕವಾಗಿ ರಚಿಸಿದ್ದಾರೆ. ಸಾತಖೇಡ, ಬಿಳವಾರ, ಬೊಳಬಟ್ಟಿ, ಕೊಡಚಿ, ಸಾದ್ಯಾಪುರ ಸೇರಿದಂತೆ ಹಲವಾರು ಗ್ರಾಮೀಣ ಪ್ರದೇಶದಲ್ಲಿ ಜನರ ಅಭಿರುಚಿಯಂತೆ ಶಿಲ್ಪಗಳನ್ನು ಮಾಡಿದ್ದಾರೆ. ಅಂಕಿ ಸಂಖ್ಯೆಗಳ ಮಿತಿಯಲ್ಲಿ ಕಾಣುವುದಾದರೆ

ಕುದುರೆ ಶಿಲ್ಪಗಳು	–	300
ಮನೆಯ ತಲಬಾಗಿಲುಗಳ ಕೆತ್ತನೆ	–	10
ಗೌರಿಮಾಡ	–	350
ಪಡಸಾಲೆ ಜೋಡಣೆ	–	5

ಈ ರೀತಿ ಕೆಲಸ ಮಾಡಿದ ವಿವರವನ್ನು ಶಿಲ್ಪಿ ಮೋನೇಶರವರು ತಿಳಿಸುತ್ತಾರೆ. ಪ್ರಸ್ತುತ ಈ ಶಿಲ್ಪಿಗೆ ವಯಸ್ಸು ಐವತ್ತೆರಡು ಮುಗಿಯುತ್ತಿವೆ. ಆದರೂ ಸಹ ಶಿಲ್ಪ ಕೆತ್ತನೆಯ ಕೆಲಸದಲ್ಲಿ ಕ್ರಿಯಾಶೀಲರಾಗಿ ದುಡಿಯುತ್ತಿದ್ದಾರೆ. ಕೌಟುಂಬಿಕ ಜೀವನ ಸದಾ ಸರಳತೆಯ ಹಾದಿಯಲ್ಲಿ ನಡೆಯುತ್ತಿದೆ. ಹೆಂಡತಿ ಕಾಳಮ್ಮ, ಮಕ್ಕಳಾದ ಲಲಿತಾ, ರಾಜೇಶ್ವರಿ, ಮಲ್ಲಿಕಾರ್ಜುನ, ಸುಜಾತ ಅವರೊಂದಿಗೆ ಇರುವ ಅನುಕೂಲತೆಗಳೊಂದಿಗೆ ಸುಗಮವಾಗಿ ಬದುಕನ್ನು ನಡೆಸುತ್ತಿದ್ದಾರೆ. ಜನಪದ ಕಲಾ ಪ್ರಕಾರದ ಶಿಲ್ಪಗಳನ್ನು ರಚಿಸುವುದರೊಂದಿಗೆ ಕಾಲ ಸವೆಸುತ್ತಿರುವ ಈ ಶಿಲ್ಪಿಗೆ ಯಾವುದೇ ಪ್ರಶಸ್ತಿ ಪುರಸ್ಕಾರಗಳು ಲಭಿಸಿರುವುದು ಕಂಡುಬಂದಿರುವುದಿಲ್ಲ.

ಪ್ರಕಾಶ ತಂದೆ ನಾಗಪ್ಪ ಕಂಬಾರ

ಇವರು ಸಹ ಶಿಲ್ಪಿ ಮೋನೇಶ ಅವರ ಸಹೋದರರಾಗಿದ್ದು ಪ್ರಕಾಶ ಶಿಲ್ಪಿಯವರು ಅಕಾಡೆಮಿಕ್ ವಲಯದ ಅರಿವನ್ನು ಹೊಂದಿದ. ಇವರು ಅಪ್ಪಟ ಜನಪದ ಪ್ರಕಾರದ ಶಿಲ್ಪಗಳನ್ನೇ ರಚಿಸುವುದರಲ್ಲಿ ತೊಡಗಿಸಿಕೊಂಡಿದ್ದಾರೆ. ವಿಶೇಷವಾಗಿ ಕುದುರೆ ಶಿಲ್ಪ, ತಲಬಾಗಿಲು ಕೆಲಸ, ಗೌರಿಮಾಡಗಳನ್ನು ಸೂಕ್ಷ್ಮ ಗ್ರಹಿಕೆಯ ಸುಳಿವುಗಳಿಂದ ಕೆಲಸವನ್ನು ಮಾಡುತ್ತಾರೆ. ಮರಗೆತ್ತನೆಯ ಮಾಧ್ಯಮವೇ ಪ್ರಮುಖವಾಗಿಸಿಕೊಂಡು ಶಿಲ್ಪಗಳನ್ನು ಸೃಷ್ಟಿಸುತ್ತಾರೆ. ಪ್ರಕಾಶರವರು ಹೆಂಡತಿ ಈರಮ್ಮ, ಮಕ್ಕಳಾದ ರಾಜಶೇಖರ, ಪ್ರೇಮಾ, ಅವರೊಂದಿಗೆ ಸುಗಮ ಸಂಸಾರ ನಡೆಸಿದ್ದಾರೆ. ಆರ್ಥಿಕ ಭದ್ರತೆಗಾಗಿ ಶಿಲ್ಪಕಲೆಯ ಕಾಯಕವೇ ಹಸಿರಾಗಿ ತಂಪೆರೆದಿದೆ. ತಂದೆ ನಾಗಪ್ಪನವರ ಕಲಾ ಕಾರ್ಯವನ್ನು ಅತ್ಯಂತ ಶೃದ್ಧೆಯಿಂದ ಮಾಡುವುದರೊಂದಿಗೆ ಅನೇಕ ಶಿಲ್ಪಗಳನ್ನು ರಚಿಸಿದ್ದಾರೆ. ಇವರ ಪ್ರಮುಖ ಶಿಲ್ಪವೆಂದರೆ ಕುದುರೆ ಕೆತ್ತನೆಯಲ್ಲಿ ಅತ್ಯಂತ ಪ್ರತಿಭಾವಂತರು. ನೈಜ ಕುದುರೆಯ ಹಾಗೆ ಮರಗೆತ್ತನೆಯಲ್ಲಿ ಕುದುರೆಯನ್ನು ರೂಪಿಸುತ್ತಾರೆ. ಅದರ ಕಣ್ಣು, ನಾಲಿಗೆ, ಕಿವಿ, ಮೂಗು, ಹಣೆ ಸುಂದರ ಪಟ್ಟಿಕೆಗಳು ಸೇರಿದಂತೆ ಎಲ್ಲವೂ ಅಲಂಕಾರಿಕವಾಗಿ ಕೆತ್ತನೆ ಮಾಡುತ್ತಾರೆ. ಕೆಲವೊಂದು ಕುದುರೆ ಶಿಲ್ಪವನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಪ್ರದರ್ಶನಗಳಿಗೆ ಆಯ್ಕೆಗೊಂಡು ಪ್ರದರ್ಶನ ಕಂಡಿವೆ.

ಕಲ್ಲಣ್ಣ ತಂದೆ ಸಾಯಬಣ್ಣ ಕಂಬಾರ

ಈ ಶಿಲ್ಪಿಯೂ ಕೂಡ ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದವರು. ಮರಗೆತ್ತನೆಯ ಮಾಧ್ಯಮದಲ್ಲಿ ಕುದುರೆ, ತಲಬಾಗಿಲು, ಪಡಸಾಲೆ ಜೋಡಣೆ ಕೆಲಸ ಹಾಗೂ ಗೌರಿಮಾಡಗಳನ್ನು ಸಹ ಸುಂದರವಾಗಿ ಕೆತ್ತನೆ ಮಾಡಿದ್ದಾರೆ. ಅಂಕಿ ಅಂಶಗಳ ಪ್ರಕಾರ ಗಮನಿಸಬಹುದಾದರೆ ಈ ಕೆಳಗಿನಂತೆ ನೋಡಬೇಕಾಗುತ್ತದೆ.

ಕುದುರೆ ಶಿಲ್ಪಗಳು	–	1000
ಪಡಸಾಲೆ ಜೋಡಣೆ	–	60
ತಲಬಾಗಿಲು	–	150

ಇಷ್ಟೊಂದು ಕಲಾಕೃತಿಗಳನ್ನು ರಚಿಸಿದ ಶಿಲ್ಪಿ ಕಲ್ಲಣ್ಣನವರು ಸದಾ ಸರಳತೆಗೆ ಹೆಸರಾಗಿರುವರು. ಶಿಲ್ಪಗಳನ್ನು ಗಮನಿಸಲು ಬಂದ ಸಹೃದಯರನ್ನು ಪ್ರೀತಿಯಿಂದ ಕಾಣುವ, ಗೌರವಿಸುವ ಮನಸ್ಥಿತಿವುಳ್ಳವರು. ಚಿಕ್ಕ ಗಾತ್ರದ ಮತ್ತು ದೊಡ್ಡ ಗಾತ್ರದ ಕುದುರೆ ಶಿಲ್ಪಗಳನ್ನು ರಚಿಸುವ ಕಾರ್ಯದಲ್ಲಿ ಗಮನಾರ್ಹ ಶಿಲ್ಪಿಗಳು ಕುದುರೆಯ ನೈಜ ಪರಿಕಲ್ಪನೆ, ಅಲಂಕಾರಿಕ ವಿನ್ಯಾಸ ಕೆತ್ತನೆ ಎಲ್ಲವೂ ಆಕರ್ಷಕ ನೆಲೆಯಲ್ಲಿ ಶಿಲ್ಪಗಳು ಕಂಡುಬರುತ್ತಿವೆ. ಪಡಸಾಲೆ ಜೋಡಣೆಯ ಕೆಲಸದಲ್ಲಿಯೂ ಸಹ ಕಂಬ, ತಲೆ ಬೋದಿಗೆ, ಕಮಾನು ವಿನ್ಯಾಸದ ಸುರುಳಿ ಕೆತ್ತನೆ. ಅದರ ಸಂಯೋಜನೆಯಲ್ಲಿ ಗಿಳಿ, ನವಿಲು, ಹೂ, ಎಲೆ, ಬಳ್ಳಿ ತೆಂಗಿನಕಾಯಿ ಮಾವಿನ ಗೊಂಚಲು, ಹೀಗೆ ಅನೇಕ ವಿನ್ಯಾಸದ ಕೆತ್ತನೆ ನೋಡುಗನನ್ನು ಆಕರ್ಷಿಸುವಂತೆ ಕೆತ್ತನೆ ಮಾಡಿದ್ದಾರೆ. ಚಿಕ್ಕ ಗಾತ್ರದ ಕುದುರೆ, ದೊಡ್ಡ ಗಾತ್ರದ ಕುದುರೆಗಳು ಮನೆಯ ಅಂದವನ್ನು ಹೆಚ್ಚಿಸುವಂತೆ ರಚಿಸುತ್ತಾರೆ. ಹಾಗೆಯೇ ಮನೆಯ ತಲಬಾಗಿಲುಗಳು, ಗೌರಿಮಾಡಗಳನ್ನು ಸಹ ಕಲಾತ್ಮಕ ಕ್ರಿಯೆಯಿಂದ ಕೂಡಿರುವಂತೆ ಕೆತ್ತನೆ ಮಾಡಿದ್ದಾರೆ.

ಶಿಲ್ಪಿ ಕಲ್ಲಣ್ಣನವರಿಗೆ ಹೆಂಡತಿ ಕಾಳಮ್ಮ, ಮಕ್ಕಳಾದ ಶಂಕ್ರಮ್ಮ, ಮೀನಾಕ್ಷಿ, ಸಾವಿತ್ರಿ, ಈಶ್ವರಿ, ಗೋದಾವರಿ, ಪವಿತ್ರಾ, ಭೀಮಾಶಂಕರ, ಎಂಬ ಏಳು ಜನ ಮಕ್ಕಳಿದ್ದಾರೆ. ಮನೆಯ ಆರ್ಥಿಕ ಸ್ಥಿತಿಯನ್ನು ಶಿಲ್ಪಕೆತ್ತನೆಯ ಕಾಯಕದಿಂದಲೇ ಬಗೆಹರಿಸುತ್ತಾ ಹರ್ಷದಿಂದ ಬದುಕನ್ನು ಸಾಗಿಸುತ್ತಿದ್ದಾರೆ. ಪ್ರಸ್ತುತ ಈ ಶಿಲ್ಪಿಗೆ ಐವತ್ತೆಂಟು ವಯಸ್ಸು ಮೀರುತ್ತಿವೆ. ಆದರೂ ಸಹ ಶಿಲ್ಪ ಕೆತ್ತನೆಯ ಕೆಲಸದಲ್ಲಿ ಸದಾ ಕ್ರಿಯಾಶೀಲವಾಗಿ ಮುಂದುವರೆದಿದ್ದಾರೆ. ಇಂತಹ ಶಿಲ್ಪಿಗೆ ಸರಕಾದಿಂದ, ಅಕಾಡೆಮಿಗಳಿಂದ ಯಾವುದೇ ಪುರಸ್ಕಾರಗಳು ದೊರೆತಿಲ್ಲ. ಪ್ರಶಸ್ತಿ ಪ್ರಚಾರದ ಹಿಂದೇ ಬೀಳದೆ ತನ್ನ ಕಲಾ ಕಾಯಕದಲ್ಲಿ ಪುನಃ ತೊಡಗಿಸಿಕೊಂಡು ಹಲವಾರು ಅತ್ಯುತ್ತಮ ಶಿಲ್ಪಗಳನ್ನು ರಚಿಸಿದ ಶಿಲ್ಪಿ ಕಲ್ಲಣ* ಕಂಬಾರರು ನಮ್ಮ ಸಗರನಾಡಿನ ಹೆಮ್ಮೆಯ ಶಿಲ್ಪಿಯೆಂಬುದು ಮರೆಯುವಂತಿಲ್ಲ. ಕುದುರೆ ಶಿಲ್ಪಗಳನ್ನು ಕೆತ್ತನೆ ಮಾಡುವುದರಲ್ಲಿ ಈ ಶಿಲ್ಪಿ ಅತ್ಯಂತ ಪ್ರಸಿದ್ಧಿ ಪಡೆದವರಾಗಿದ್ದಾರೆ. ಇಂತವರನ್ನು ಸರಕಾರ ಗುರುತಿಸಿ ಪ್ರೋತ್ಸಾಹಿಸುವ ಕೆಲಸ ನಡೆಯಬೇಕಾಗಿದೆ.

ದಿವಂಗತ ಮಾನಪ್ಪ ತಂದೆ ಗುರಪ್ಪ ಕಂಬಾರ

ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದ ದಿವಂಗತ ಮಾನಪ್ಪ ತಂದೆ ಗುರಪ್ಪ ಕಂಬಾರವರು ಸಗರನಾಡಿನ ಹಿರಿಯ ತಲೆಮಾರಿನ ಜನಪದ ಶಿಲ್ಪಿಗಳು. ಇವರು ರಚಿಸಿದ ಶಿಲ್ಪಗಳು ಸಾತಖೇಡ ಗ್ರಾಮವಲ್ಲದೆ ಸುತ್ತಮುತ್ತಲಿನ ಗ್ರಾಮಗಳಿಗೂ ಸಹ ಜನಪದ ಶಿಲ್ಪಗಳನ್ನು ಮಾಡಿಕೊಟ್ಟಿದ್ದಾರೆ. ಕುದುರೆ ಶಿಲ್ಪಗಳು, ತಲಬಾಗಿಲು, ಗೌರಿಮಾಡಗಳು, ಮತ್ತು ಪಡಸಾಲೆ ಜೋಡಣೆಯೂ ಸಹ ಮಾಡಿದ್ದಾರೆ. ಶಿಲ್ಪಿ ಮಾನಪ್ಪನವರು ಬದುಕಿರುವವರೆಗೂ ಜನಪದರ ಆಸಕ್ತಿಯಂತೆ ಶಿಲ್ಪಗಳನ್ನು ರಚಿಸಿಕೊಟ್ಟಿದ್ದಾರೆ. ಕುದುರೆ ಶಿಲ್ಪಗಳಂತೂ ನೈಜ ಸ್ವರೂಪದ ಹಾಗೆ ಕೆತ್ತನೆ ಮಾಡಿದ್ದಾರೆ. ತಲಬಾಗಿಲ ತೋಳ ಪಟ್ಟಿಕೆಗಳು, ಹಣೆ ಪಟ್ಟಿಯ ಚಿತ್ರ ಮಾದರಿಗಳು, ಎಲ್ಲವೂ ಅಲಂಕಾರಿಕ ಸಂಕೇತವಾಗಿ ರಚನೆ ಮಾಡಿದ್ದಾರೆ. ಮರ ಮಾಧ್ಯಮದ ಶಿಲ್ಪಗಳು ಮಾನಪ್ಪನವರ ಕ್ರಿಯಾಶೀಲ ಶಿಲ್ಪಗಳ ರಚನೆಗೆ ಮಹತ್ವದ ಸಂವಹನ ಕ್ರಿಯೆಯಾಗಿ ಹೊರಹೊಮ್ಮಿದೆ. ಎಂಬತ್ತೈದು ವರ್ಷ ಬದುಕಿದ ಈ ಶಿಲ್ಪಿಯೂ ಬದುಕಿನ ಅಂತ್ಯದವರೆಗೂ ಜನಪದ ಶಿಲ್ಪಗಳ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕೊನೆಯ ಉಸಿರೆಳೆದರು. ಇವರ ಮರಗೆತ್ತನೆಯ ಕಲೆಯನ್ನು ಗಮನಿಸಿ ಸರಕಾರದಿಂದ ಯಾವುದೇ ಸಹಕಾರ, ಪ್ರೋತ್ಸಾಹ ದೊರೆತಿರುವ ಸಂಗತಿಗಳು ಕಂಡುಬಂದಿಲ್ಲ.

ಈರಣ್ಣ ತಂದೆ ಮಾನಪ್ಪ ಕಂಬಾರ

ಸಾತಖೇಡ ಗ್ರಾಮದ ದಿವಂಗತ ಶಿಲ್ಪಿ ಮಾನಪ್ಪನವರ ಮಗನಾದ ಶಿಲ್ಪಿ ಈರಣ್ಣನವರ ಜನಪದ ಕಲಾಕೃತಿಗಳನ್ನು ಕೆತ್ತನೆ ಮಾಡುವುದರೊಂದಿಗೆ ಜೀವನ ಸಾಗಿಸಿದವರು. ನಿರಂತರವಾಗಿ ಕುದುರೆ ಶಿಲ್ಪಗಳು, ಮನೆಯ ತಲಬಾಗಿಲು, ಪಡಸಾಲೆ ಜೋಡಣೆ, ಗೌರಿಮಾಡಗಳನ್ನು ರಚಿಸುವುದರೊಂದಿಗೆ ಜನಪದರ ಕಲಾ ಸೆಳೆತಕ್ಕೆ ಭಾಗಿಯಾದವರು. ಜನಪದರ ಆಸಕ್ತಿಗೆ ಸಂಬಂಧಿಸಿದಂತೆ ಶಿಲ್ಪಗಳನ್ನು ಸೃಷ್ಟಿಸಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ಅಂಕಿ ಸಂಖ್ಯೆಗಳನ್ನು ಗಮನಿಸಬಹುದಾಗಿದೆ.

ಕುದುರೆ ಶಿಲ್ಪಗಳು – 100

ತಲಬಾಗಿಲು	–	10
ಪಡಸಾಲೆ ಜೋಡಣೆ	–	05
ಗೌರಿಮಾಡಗಳು	–	150

ಅಲ್ಲದೇ ರೈತರ ವ್ಯವಸಾಯ ಉಪಕರಣ ಶಿಲ್ಪಗಳನ್ನು ಕೂಡ ನಿರಂತರವಾಗಿ ಮಾಡುತ್ತಿದ್ದಾರೆ. ಶಿಲ್ಪಿ ಈರಣ್ಣ*ನವರಿಗೆ ಹೆಂಡತಿ ಮಾಣಿಕಮ್ಮ, ಮಕ್ಕಳಾದ ರಂಜೀತಾ, ಮಹೇಂದ್ರ, ಮೋನೇಶ ಎಂಬುವವರಿದ್ದಾರೆ. ಮಗ ಮಹೇಂದ್ರ ಡಿಪ್ಲೋಮಾ, ಪದವಿ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದಾರೆ. ಶಿಲ್ಪಕೆತ್ತನೆಯ ಕಾಯಕದಿಂದ ಸಂಸಾರವನ್ನು ಮುನ್ನಡೆಸಿಕೊಂಡು ಹೋಗುತ್ತಿರುವ ಶಿಲ್ಪಿ ಈರಣ್ಣನವರು ಕಲೆಯ ಆಲಯದಲಿಯೇ ಬದುಕು ಸವೆಸುತ್ತಿರುವುದು ಅಭಿನಂದನೀಯವಾದದ್ದು. ಇವರ ನಿರಂತರ ಕಲೆಯ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ಪುರಸ್ಕಾರಗಳು ಲಭಿಸಿರುವುದು ಕಂಡುಬಂದಿರುವುದಿಲ್ಲ.

ದೇವಿಂದ್ರಪ್ಪ ತಂದೆ ಪರಪ್ಪ ವಿಶ್ವಕರ್ಮ

ಜೇವರ್ಗಿ ತಾಲೂಕಿನ ನಂದಿಹಳ್ಳಿ ಗ್ರಾಮದ ಶಿಲ್ಪಿ ದೇವಿಂದ್ರಪ್ಪನವರು ಸಗರನಾಡಿನ ಪ್ರಮುಖ ಜನಪದ ಶಿಲ್ಪಿಗಳು 01 ಜನೇವರಿ 1945ರಲ್ಲಿ ನಂದಿ ಹಳ್ಳಿ ಗ್ರಾಮದಲ್ಲಿ ಜನಿಸಿದರು. ಇವರು ರಚಿಸುವ ಶಿಲ್ಪಗಳು ಜನಪದರ ಆಧ್ಯಾತ್ಮಿಕ ನೆಲೆಯಲ್ಲಿ ಕಂಡುಬರುತ್ತವೆ. ವಿಶೇಷವಾಗಿ ರಥ ಶಿಲ್ಪಗಳು, ದೇವರ ಪಲ್ಲಕ್ಕಿ ಸಿಂಹ, ಹುಲಿ, ಆನೆ, ಅಶ್ವಗರುಡ, ನವಗ್ರಹ ಮೂರ್ತಿ ಶಿಲ್ಪಗಳು, ಕುದುರೆ ಶಿಲ್ಪ ಸೇರಿದಂತೆ ಹಲವಾರು ಬಗೆಯ ಶಿಲ್ಪಗಳನ್ನು ರಚಿಸುವಲ್ಲಿ ಗಮನಾರ್ಹ ಶಿಲ್ಪಿಯಾಗಿ ಕಂಡುಬರುತ್ತಾರೆ. ಇವರು ರಚಿಸಿದ ಶಿಲ್ಪಗಳನ್ನು ಗಮನಿಸುವುದಾದರೆ

ಗ್ರಾಮ ದೇವತೆ ಶಿಲ್ಪ –ಮೈಲೇಶ್ವರ, ಮುದ್ದೆಬಿಹಾಳ ತಾಲೂಕು

ಗ್ರಾಮದೇವತೆ ಶಿಲ್ಪಗಳು – ಕರೆಕಲ್, ಶಹಾಪುರ ತಾಲೂಕು

ರಥಶಿಲ್ಪ – ಹೊನಗುಂಟಿ, ಚಿತ್ತಾಪೂರ, ಜಿ. ಕಲಬುರಗಿ

35 ಅಡಿ ಎತ್ತರದ ರಥಶಿಲ್ಪ – ನಂದಿಹಳ್ಳಿ ತಾ.ಜೇವರ್ಗಿ, ಜಿ.ಕಲಬುರಗಿ

25 ಅಡಿ ಎತ್ತರದ ರಥಶಿಲ್ಪ – ಬಿಂದಲಬಾವಿ.

12 ಅಡಿ ಎತ್ತರದ ರಥಶಿಲ್ಪ – ಹೊನಗುಂಟಿ, ಚಿತ್ತಾಪುರ

ಪಲಕ್ಕಿ ಶಿಲ್ಪ – ಮಾರಡಗಿ, ಗ್ರಾಮಕ್ಕೆ

ಜೋಡು ಕುದುರೆ – ಹಾವನೂರು ಗ್ರಾಮಕ್ಕೆ ಮಾಡಿಕೊಟ್ಟಿದ್ದಾರೆ.

ಹೀಗೆ ಒಂದಲ್ಲ ಎರಡಲ್ಲ ತಮ್ಮ ಬದುಕಿನೂದ್ದಕ್ಕೂ ಜನಪದರ ನಂಬಿಕೆಗೆ ಅನುಗುಣವಾಗಿ ರಥ, ಕುದುರೆ, ಪಲ್ಲಕ್ಕಿ ಶಿಲ್ಪಗಳನ್ನು ರಚಿಸಿದ್ದಾರೆ. ಜನರ ಭಕ್ತಿ, ಭಾವ, ನಂಬಿಕೆಗೆ ಪೂರಕವಾಗಿರುವಂತೆ ಶಿಲ್ಪಗಳನ್ನು ರಚಿಸುತ್ತಾರೆ. ದೇವರನ್ನು ಕೂಡಿಸಿ ಸಂಭ್ರಮದಿಂದ ಎಳೆಯುವ ರಥಶಿಲ್ಪಗಳು ಅನೇಕ ಹೂ, ಎಲೆ, ಬಳ್ಳಿ, ದೇವರ ಉಬ್ಬು ಶಿಲ್ಪಗಳನ್ನು ಕೆತ್ತನೆ ಮಾಡುವುದರೊಂದಿಗೆ ಆರು, ಎಂಟು, ಮಹಲುಗಳ ವಿಧಾನದಲ್ಲಿ ರಥಶಿಲ್ಪಗಳು ನಿರ್ಮಾಣ ಮಾಡುತ್ತಾರೆ. ಪ್ರತಿ ಹಂತದ ಮಹಲಗಳಿಗೆ ದೇವರ ಮೂರ್ತಿ ಶಿಲ್ಪಗಳು ನೈಜತೆಗೆ ಪೂರಕವಾಗಿ ಜನರ ಭಕ್ತಿ ಭಾವವನ್ನು ಮೆರೆದಿವೆ. ಸಿಂಹ, ಆನೆ, ಆಶ್ವ ವಿವಿಧ ವಿನ್ಯಾಸದ ಕಂಬಗಳು, ಕಬ್ಬಿಣದ ವಿನ್ಯಾಸ ಹೂಗಳು, ಕಮಾನು ವಿನ್ಯಾಸದ ಅಲಂಕಾರಿಕ ಮಾದರಿಗಳು, ಎಲ್ಲವೂ ಸೂಕ್ಷ್ಮ ಕಲಾಕುಸುರಿ ಕೆತ್ತನೆಯಿಂದ ರಥಶಿಲ್ಪಗಳು ಮೂಡಿ ಬಂದಿವೆ. ಇವರ ಕೌಟುಂಬಿಕ ಜೀವನವನ್ನು ಗಮನಿಸಿದಾಗ ಶಿಲ್ಪಕೆತ್ತನೆಯ ಕಾಯಕದಿಂದಲೇ ಸುಗಮವಾದ ಮತ್ತು ಅಂದವಾದ ಬದುಕನ್ನು ನಡೆಸಿದ ವಿವರ ದೊರೆಯುತ್ತದೆ. ಇವರ ಇಬ್ಬರು ಮಕ್ಕಳಾದ ಪ್ರಭು ಮತ್ತು ಲಕ್ಷ್ಮಣ ಅವರು ಶಹಾಪೂರ ನಗರದಲ್ಲಿ ರಥಶಿಲ್ಪಿ ಎಂಬ ತಲೆಬರಹದಡಿಯಲ್ಲಿ ಮರಗೆತ್ತನೆಯ ಅಂಗಡಿಯೊಂದನ್ನು ತೆರೆದು ತಂದೆಯ ಕಾಯಕವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಶಿಲ್ಪಿ ದೇವಿಂದ್ರಪ್ಪನವರು ಕೇವಲ ರಥಶಿಲ್ಪವಲ್ಲದೇ ಮನೆಯ ತಲಬಾಗಿಲು, ಮತ್ತು ಕುದುರೆ ಕೆತ್ತನೆ, ಪಡಸಾಲಿ ಜೋಡಣೆ, ಗೌರಿಮಾಡ ಹಾಗೂ ರೈತರ ವ್ಯವಸಾಯಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಮಾಡುವುದರಲ್ಲಿ ಸದಾ ಕ್ರಿಯಾಶೀಲರಾಗಿದ್ದಾರೆ. ಇವರ ರಥಶಿಲ್ಪಕಲೆ ಹಾಗೂ ಜನಪದ ಕಲಾ ಪ್ರಕಾರದ ಅತ್ಯುತ್ತಮ ಕಲಾಸೇವೆಯನ್ನು ಗಮನಿಸಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಲ್ಲದೇ ಸ್ಥಳೀಯ ಸಂಘ ಸಂಸ್ಥೆಗಳಿಂದ, ಮಠ ಮಾನ್ಯಗಳಿಂದಲೂ ಹಲವಾರು ಸನ್ಮಾನ ಕಾರ್ಯಕ್ರಮಗಳು ನಡೆದಿದೆ.

ಪ್ರಭು ತಂದೆ ದೇವಿಂದ್ರಪ್ಪ ವಿಶ್ವಕರ್ಮ

ಈ ಶಿಲ್ಪಿಯು ರಥಶಿಲ್ಪಿ ದೇವಿಂದ್ರಪ್ಪನ ಮಗನಾಗಿದ್ದಾನೆ. ಮರಗೆತ್ತನೆಯ ಮಾಧ್ಯಮದಲ್ಲಿ ಹಲವಾರು ಜನಪದ ಪ್ರಕಾರದ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ.

ಕುದುರೆ ಶಿಲ್ಪಗಳು – 10

ತಲಬಾಗಿಲು – 20

ಗೌರಿಮಾಡ – 50

ನಗರ ಪ್ರದೇಶದ ಮನೆಯ ಕಲಾತ್ಮಕ ಬಾಗಿಲು – 150

ಗ್ರಾಮೀಣ ಪ್ರದೇಶದ ಪಡಸಾಲೆ ಜೋಡಣೆ – 20

ಹೀಗೆ ಹಲವಾರು ಬಗೆಯ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ. ಪ್ರತಿ ಶಿಲ್ಪಗಳ ರಚನೆ ಆಯಾ ವಸ್ತು ವಿಷಯದ ಹಿನ್ನಲೆಯಲ್ಲಿ ಕಲಾತ್ಮಕವಾಗಿ ರಚಿಸುತ್ತಾರೆ. ಅಲ್ಲದೆ ತಂದೆ ದೇವಿಂದ್ರಪ್ಪನವರ ಕಲಾ ಕಾರ್ಯದಲ್ಲಿ ಸಹ ಭಾಗಿಯಾಗಿ ಶಿಲ್ಪವನ್ನು ಕೆತ್ತನೆ ಮಾಡಿದ್ದಾರೆ. ಯುವಶಿಲ್ಪಿಗಳಾದ ಪ್ರಭು ಅವರು ತಂದೆಯ ಜನಪದ ಶಿಲ್ಪಗಳ ರಚನೆಯಂತೆ ಅನೇಕ ಶಿಲ್ಪಗಳನ್ನು ಸೃಷ್ಠಿಸುತ್ತಲೇ ನಡೆದಿದ್ದಾರೆ. ಉತ್ತಮ ಶಿಲ್ಪಕಲಾಕೃತಿಗಳನ್ನು ರಚಿಸುವ ಈ ಶಿಲ್ಪಿಗೆ ಶಿಲ್ಪಕಲಾ ಅಕಾಡೆಮಿಯಿಂದ ಹಲವು ಶಿಬಿರಗಳಲ್ಲಿ ಭಾಗವಹಿಸುವ ಅವಕಾಶ ದೊರೆತರೆ ಇನ್ನೂ ಹೆಚ್ಚಿನ ಜನಪದ ಕಲಾ ಶಿಲ್ಪಗಳಲ್ಲಿ ರಚಿಸುವಲ್ಲಿ ಗಮನಾರ್ಹ ಪಾತ್ರ ವಹಿಸುತ್ತಾರೆ.

ಲಕ್ಷ್ಮಣ ತಂದೆ ದೇವಿಂದ್ರಪ್ಪ ವಿಶ್ವಕರ್ಮ

ರಥಶಿಲ್ಪ ದೇವಿಂದ್ರಪ್ಪ ನವರ ಮಗನಾದ ಲಕ್ಷ್ಮಣನು ಸಹ ಮರಗೆತ್ತೆಯ ಕಾರ್ಯದಲ್ಲಿ ಪುನಃ ತೊಡಗಿಸಿಕೊಂಡಿದ್ದಾರೆ. ಇವರು ಕೂಡ ಶಹಾಪುರ ನಗರದಲ್ಲಿ ಕಾರ್ಪೇಂಟರ್ ಕೆಲಸದಲ್ಲಿ ನಿರತರಾಗಿದ್ದಾರೆ. ನಗರ ಪ್ರದೇಶದ ಕಲಾ ಕಾಯಕದಂತೆ ಜನಪದ ಪ್ರಕಾರದ ಕುದುರೆ, ತಲಬಾಗಿಲು, ಗೌರಿಮಾಡಗಳು, ಅಲ್ಲದೇ ಪಡಸಾಲೆ ಜೋಡಣೆ, ಹಾಗೆಯೇ (ರಥಶಿಲ್ಪಕ್ಕೆ ಸಹಾಯಕರಾಗಿ) ಗ್ರಾಮದೇವತೆ ಶಿಲ್ಪಗಳು, ಪಲ್ಲಕ್ಕಿ ಸೇರಿದಂತೆ ಹಲವಾರು ಬಗೆಯ ಜನಪದ ಶಿಲ್ಪಗಳನ್ನು ರಚಿಸುತ್ತಾರೆ.

ಕುದುರೆ ಶಿಲ್ಪಗಳು – 15

ತಲಬಾಗಿಲು - 10

ಗೌರಿಮಾಡ -50

ಪಡಸಾಲೆ ಜೋಡಣೆ - 05

ಹಾಗೆಯೇ ಗ್ರಾಮದೇವತೆ ಪಲ್ಲಕ್ಕಿ ರಥಶಿಲ್ಪ ನಿರ್ಮಾಣದಲ್ಲಿಯೂ ಸಹ ಶಿಲ್ಪಿಯಾಗಿ ಕೆಲಸ ಮುಂದುವರೆಸಿದ್ದಾರೆ. ಕೌಟುಂಬಿಕ ಪರಿಸರ ಸರಿಯಾದ ರೀತಿಯಲ್ಲಿ ಆರ್ಥಿಕವಾಗಿ ಸುಧಾರಿಸಿಕೊಂಡಿರುವ ಸಾಧ್ಯತೆಗಳಿಂದ ಮುಂದುವರೆದಿದ್ದಾರೆ. ಜನಪದ ಪ್ರಕಾರದ ಶಿಲ್ಪಗಳನ್ನು ರಚಿಸುತ್ತಿರುವ ಶಿಲ್ಪಿ ಲಕ್ಷ್ಮಣರವರು ಸಗರನಾಡಿನ ಪ್ರತಿಭಾವಂತ ಯುವ ಶಿಲ್ಪಿಗಳಾಗಿದ್ದು, ಅವರ ಸೃಜನಶೀಲ ಕಲೆಯ ಹೊಳಹುಗಳು ಅಕಾಡೆಮಿಕ ವಲಯದಲ್ಲಿ ಗುರುತಿಸಿಕೊಂಡರೆ ಮುಂದೆ ಸಗರನಾಡ ಜನಪದ ಕಲಾ ಪರಂಪರೆ ಮತ್ತಷ್ಟು ಚೆಲುವನ್ನು ಪ್ರತಿಬಿಂಬಿಸುತ್ತದೆ.

ಜಕಣಾಚಾರ್ಯ

ಯುವ ವಯಸ್ಕ ಶಿಲ್ಪಿ ಜಕಣಾಚಾರ್ಯ ಅವರು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಯಲಗೊಡ ಗ್ರಾಮದವರು. ಮರಗೆತ್ತನೆಯ ಮಾಧ್ಯಮದಲಿ ಕುದುರೆ, ತಲಬಾಗಿಲು, ಸುಂದರ ಕಿಟಕಿ, ಗೌರಿಮಾಡ, ಸಿಂಹ, ಹುಲಿ, ಆನೆ ಸೇರಿದಂತೆ ಹಲವು ಬಗೆಯ ಜನಪದ ಶೈಲಿಯ ಶಿಲ್ಪಗಳನ್ನು ಕೆತ್ತನೆ ಮಾಡುತ್ತಾರೆ. ಮರ ಮಾಧ್ಯಮದ ಶಿಲ್ಪಗಳನ್ನು ಮಾಡುವ ಶಿಲ್ಪಿ ಜಕಣಾಚಾರ್ಯರವರು ಸೃಜನಶೀಲ ಪ್ರತಿಭೆಗೆ ಸಾಕ್ಷಿಯಾಗಿದ್ದಾರೆ.

ಪಡಸಾಲೆ ಜೋಡಣೆ, ದೇವರ ಪಲ್ಲಕ್ಕಿ ಶಿಲ್ಪಗಳು, ತಲಬಾಗಿಲು, ರಥ ಶಿಲ್ಪ ಕೆತ್ತನೆ ಹೀಗೆ ಹಲವು ಪ್ರಕಾರದ ಶಿಲ್ಪಗಳು, ರಚಿಸುವುದರೊಂದಿಗೆ ಜನಪದ ಶಿಲ್ಪ ಪರಂಪರೆಯನ್ನು ಗಮನಾರ್ಹವಾಗಿ ಬೆಳಕಿಗೆ ತರುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಇವರ ಸಾಂಪ್ರದಾಯಿಕ ಜನಪದ ಶಿಲ್ಪಕ್ಕೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 12ನೇ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಬಹುಮಾನವನ್ನು ಪಡೆದಿದ್ದಾರೆ. ತರುಣ ಶಿಲ್ಪಿಯಾದ ಜಕಣಾಚಾರ್ಯರವರು ಚಿಕ್ಕವಯಸ್ಸಿನಲ್ಲಿಯೇ ಸಾಂಪ್ರದಾಯಿಕ ಶಿಲ್ಪಗಳನ್ನು ಕೆತ್ತನೆ ಮಾಡುವುದರೊಂದಿಗೆ ಸಗರನಾಡಿನ ಜನಪದ ಕಲಾ ಪರಂಪರೆಯಲ್ಲಿ ತನ್ನ ಹೆಸರನ್ನು ನಮೂದಿಸಿಕೊಂಡಿದ್ದಾರೆ.

ಗುಂಡಪ್ಪ ಎಸ್.ಕಮ್ಮಾರ

ಕಲಬುರಗಿ ಜಿಲ್ಲೆ ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದ ಶಿಲ್ಪಿ ಗುಂಡಪ್ಪನವರು ಸಗರನಾಡಿನ ಹಿರಿಯ ಜನಪದ ಶಿಲ್ಪಿಗಳು ತಂದೆ ಸಾಯಬಣ್ಣ ಕಮ್ಮಾರ, ತಾಯಿ ಗೋದುತಾಯಿ ಅವರ ಮಗನಾಗಿ 1 ಜನೇವರಿ 1956ರಲ್ಲಿ ಸಾತಖೇಡದಲ್ಲಿ ಜನಿಸಿದರು. ಚಿಕ್ಕಂದಿನಿಂದಲೇ ಜನಪದ ಶಿಲ್ಪಗಳನ್ನು ಅವಲೋಕಿಸುತ್ತ ಮುಂದೆ ಅದೇ ಪರಂಪರೆಯ ಶಿಲ್ಪಗಳನ್ನು ಕೆತ್ತನೆ ಮಾಡುವುದರೊಂದಿಗೆ ಜೀವನ ಕಳೆದಿದ್ದಾರೆ. ಇವರಿಗೆ ಶಿಲ್ಪಕಲಾ ಗುರುಗಳಾಗಿ ಮೋನಪ್ಪ ಕಮ್ಮಾರವರು ಉತ್ತಮ ಮಾರ್ಗದರ್ಶನವನ್ನು ಮಾಡಿದ್ದಾರೆ. ಶಿಲ್ಪಿ ಗುಂಡಪ್ಪನರ ಶಿಲ್ಪಗಳ ವೈವಿಧ್ಯತೆ ಈ ಕೆಳಗಿನಂತೆ ಗಮನಿಸಬೇಕಾಗುತ್ತದೆ.

* ದುರಗಮ್ಮ ದೇವಿಯ ಶಿಲ್ಪಗಳು
* ಮರಗಮ್ಮ ದೇವಿಯ ಶಿಲ್ಪಗಳು
* ಸೀಮೆ ಮರಗಮ್ಮ ದೇವಿಯ ಶಿಲ್ಪಗಳು
* ತಲಬಾಗಿಲು ಕೆತ್ತನೆ
* ಪಡಸಾಲಿ ಜೋಡಣೆ (3,5,7,2,1 ಅಂಕಣ ಪಡಸಾಲೆಗಳು)

ಹೀಗೆ ಹಲವು ಬಗೆಗಳಲ್ಲಿ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ. ಪ್ರತಿಯೊಂದು ಶಿಲ್ಪಗಳ ಕೆತ್ತನೆ ಅನೇಕ ತಂತ್ರಗಾರಿಕೆಯಿಂದ ರೂಪಿಸುತ್ತಾರೆ. ಇವರ ಶಿಲ್ಪಕಲಾಕೃತಿಗಳು ಶಹಾಪುರ, ಶಿರವಾಳ, ಇಟಗಿ, ಕೆಂಭಾವಿ, ಬೊಮ್ಮನಳ್ಳಿ, ಸೇರಿದಂತೆ ಸಗರನಾಡಿನ ವಿವಿಧೆಡೆ ಸಂಗ್ರಹಗೊಂಡಿವೆ. 1972ರಿಂದ ಜನಪದ ಶಿಲ್ಪಗಳನ್ನೇ ಕೆತ್ತನೆ ಮಾಡುತ್ತಿರುವ ಶಿಲ್ಪಿ ಗುಂಡಪ್ಪನವರಿಗೆ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಇವರ ಶಿಷ್ಯ ಪರಂಪರೆ ಹೀಗೆ ಬೆಳೆಯುತ್ತದೆ. ಬಂಡೆಪ್ಪ ಜಿ. ಪಂಚಾಳ, ರಾಮಚಂದ್ರ ಬಡಿಗೇರ, ಬಾಬುರಾವ ಪಂಚಾಳ, ಮಸ್ತಾನ ಸೇರಿದಂತೆ ಹಲವು ಶಿಷ್ಯರನ್ನು ಹುಟ್ಟು ಹಾಕಿ ಕಲೆಯ ಬೆಳವಣಿಗೆಗೆ ಶ್ರಮಿಸುವಂತೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸಾತಖೇಡದ ಗುಂಡಪ್ಪ ಕಮ್ಮಾರರು ನಮ್ಮ ಸಗರನಾಡಿನ ಹಿರಿಯ ತಲೆಮಾರಿನ ಜನಪದ ಶಿಲ್ಪಿಗಳಾಗಿ ಕಂಡುಬರುತ್ತಾರೆ.

ಜೇವರ್ಗಿ ತಾಲೂಕಿನ ನಂದಿಹಳ್ಳಿ ಗ್ರಾಮದ
ಶಿಲ್ಪಿ ದೇವಿಂದ್ರಪ್ಪ ತಂದೆ ಪರಪ್ಪ ಅವರ ಕಲಾಕೃತಿಗಳು



ಶಿಲ್ಪಿ ದೇವಿಂದ್ರಪ್ಪ ಅವರ ಭಾವಚಿತ್ರ



ರಥ ಶಿಲ್ಪ

ಜೇವರ್ಗಿ ತಾಲೂಕಿನ ನಂದಿಹಳ್ಳಿ ಗ್ರಾಮದ
ಶಿಲ್ಪಿ ಪ್ರಭು ತಂದೆ ದೇವಿಂದ್ರಪ್ಪ ಅವರ ಕಲಾಕೃತಿಗಳು



ಶಿಲ್ಪಿ ಪ್ರಭು ಅವರ ಭಾವಚಿತ್ರ



ಬಾಗಿಲ ಶಿಲ್ಪ

ಜೇವರ್ಗಿ ತಾಲೂಕಿನ ನಂದಿಹಳ್ಳಿ ಗ್ರಾಮದ
ಶಿಲ್ಪಿ ಲಕ್ಷ್ಮಣ ತಂದೆ ದೇವಿಂದ್ರಪ್ಪ ಅವರ ಶಿಲ್ಪ ಕಲಾಕೃತಿಗಳು



ಶಿಲ್ಪಿ ಲಕ್ಷ್ಮಣ ಅವರ ಭಾವಚಿತ್ರ



ರಥ ಶಿಲ್ಪ ಕೆಲಸದಲ್ಲಿ ಶಿಲ್ಪಿ ಲಕ್ಷ್ಮಣ

ಜೇವರ್ಗಿ ತಾಲೂಕಿನ ಯಲಗೋಡ ಗ್ರಾಮದ
ಶಿಲ್ಪಿ ಜಕಣಚಾರ್ಯ ಅವರ ಕಲಾಕೃತಿಗಳು



ಶಿಲ್ಪಿ ಜಕಣಾಚಾರ್ಯ ಅವರ ಭಾವಚಿತ್ರ



ರಾಣಿ ಚೆನ್ನಮ್ಮನ ಶಿಲ್ಪ

ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದ
ಶಿಲ್ಪಿ ನಾಗಪ್ಪ ತಂದೆ ಈರಪ್ಪ ಕಂಬಾರ ಅವರ ಕಲಾಕೃತಿಗಳು



ಶಿಲ್ಪಿ ನಾಗಪ್ಪ ಕಂಬಾರ ಅವರ ಭಾವಚಿತ್ರ



ಪಡಸಾಲೆ ಜೋಡಣೆ ಕಲೆ

ಜೇವರ್ಗಿ ತಾ॥ ಸಾತಖೇಡ ಗ್ರಾಮದ ಶಿಲ್ಪಿ ಪ್ರಕಾಶ ತಂದೆ ನಾಗಪ್ಪ ಕಂಬಾರ
ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಪ್ರಕಾಶ ಕಂಬಾರ ಅವರ ಭಾವಚಿತ್ರ



ಜೋಡು ಕುದುರೆಗಳ ಶಿಲ್ಪ



ಕುದುರೆ ಜೊತೆಯಲ್ಲಿ ಶಿಲ್ಪಿ ಪ್ರಕಾಶ ಕಂಬಾರ

ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದ
ಶಿಲ್ಪಿ ದಿ॥ ಮಾನಪ್ಪ ತಂದೆ ಗುರಪ್ಪ ಕಂಬಾರ ಅವರ ಶಿಲ್ಪ ಕಲಾಕೃತಿಗಳು



ದಿ॥ ಮಾನಪ್ಪ ತಂದೆ ಗುರಪ್ಪ ಕಂಬಾರ ಅವರ ಭಾವಚಿತ್ರ



ಪಡಸಾಲೆ ಜೋಡಣೆ ಶಿಲ್ಪ

ಮಾಳನೂರ ಗ್ರಾಮದ ಶಿಲ್ಪಿ ಪ್ರಭುಲಿಂಗಪ್ಪ ತಂದೆ ಗಂಗಪ್ಪ
ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಪ್ರಭುಲಿಂಗಪ್ಪ ಅವರ ಭಾವಚಿತ್ರ



ಕುದುರೆ ಕೆತ್ತನೆಯಲ್ಲಿ ಶಿಲ್ಪಿ ಪ್ರಭುಲಿಂಗಪ್ಪ ಮಾಳನೂರ

ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದ ಶಿಲ್ಪಿ ಕಲ್ಲಣ್ಣ ತಂದೆ ಸಾಯಬಣ್ಣ ಕಂಬಾರ
ಅವರ ಭಾವಚಿತ್ರ



ಶಿಲ್ಪಿ ಕಲ್ಲಣ್ಣ ತಂದೆ ಸಾಯಬಣ್ಣ ಕಂಬಾರ ಅವರ ಶಿಲ್ಪಕಲಾಕೃತಿಗಳು



ಪಡಸಾಲೆ ಜೋಡಣೆ ಮತ್ತು ಕುದುರೆ ಶಿಲ್ಪಗಳೊಂದಿಗೆ
ಕಲ್ಲಣ್ಣನವರು



ಜೋಡು ಕುದುರೆ ಶಿಲ್ಪಗಳು

ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದ ಶಿಲ್ಪಿ ಮೌನೇಶ ತಂದೆ ನಾಗಪ್ಪ ಕಂಬಾರ
ಅವರ ಭಾವಚಿತ್ರ



ಶಿಲ್ಪಿ ಮೌನೇಶ ಕಂಬಾರ ಅವರ ಭಾವಚಿತ್ರ



ಜೋಡು ಕುದುರೆ ಕೆತ್ತನೆಯಲ್ಲಿ ಶಿಲ್ಪಿ ಮೌನೇಶ ಕಂಬಾರ

ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದ
ಶಿಲ್ಪಿ ಗುಂಡಪ್ಪ ಬಡಿಗೇರ ಅವರ ಶಿಲ್ಪಕಲಾಕೃತಿಗಳು



ಶಿಲ್ಪಿ ಗುಂಡಪ್ಪ ಬಡಿಗೇರ ಅವರ ಭಾವಚಿತ್ರ



ಶೀಮೆ ಮರಗಮ್ಮನ ಮರಗೆತ್ತನೆಯ ಶಿಲ್ಪ

ಅಧ್ಯಾಯ – ೫

ಸಗರನಾಡಿನ ಜನಪದ ಶಿಲ್ಪಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಅಧ್ಯಾಯ-5

ಸಗರನಾಡಿನ ಜನಪದ ಶಿಲ್ಪಿಗಳ ಮೇಲಾದ ಪ್ರಭಾವ ಪ್ರೇರಣೆ ತಂತ್ರಗಾರಿಕೆ ಮತ್ತು ಶೈಲಿ

ಸಗರನಾಡಿನ ಜನಪದ ಶಿಲ್ಪಿಗಳು ತಮ್ಮ ಮನೆತನದ ಪರಂಪರೆಯ ಹಿನ್ನಲೆಯಾಗಿ ಶಿಲ್ಪಕೆತ್ತನೆಯ ವಿವಿಧ ಸಂಗತಿಗಳನ್ನು ಈಗಾಗಲೇ ಗ್ರಹಿಸಿಕೊಳ್ಳಲಾಗಿದೆ. ಜನಪದ ಕಲಾ ಪರಂಪರೆ ಅನ್ನುವುದು ಯಾವ ಕಾಲಕ್ಕೂ ಅಳಿಯದೇ ಅದು ಮುಂದಿನ ಪೀಳಿಗೆಗಾಗಿ ಪಸರಿಸಿಕೊಂಡಿರುವ ಆತ್ಮಾನುಭಾವದ ಮತ್ತು ಬದುಕಿನ ಬವಣೆಯನ್ನು ನಿಗಿಸಿಕೊಂಡು ಮುಂದೆ ಸಾಗುತ್ತಿರುವ ಪ್ರಕ್ರಿಯೆ ಎಂದೆನಿಸುತ್ತದೆ. ಆಯಾ ವಸ್ತುವಿನ ಹಿನ್ನಲೆ. ಅರ್ಥ, ಸ್ವರೂಪ, ಪ್ರತಿನಿತ್ಯ ಕಾರ್ಯ ಚಟುವಟಿಕೆಯ ಚಲನಕ್ರಿಯೆಯಾಗಿ ಕಂಗೊಳಿಸುತ್ತದೆ. ಯಾವುದೇ ವ್ಯಕ್ತಿ ಸಮಾಜ, ಸ್ಥಿತ್ಯಂತರಗಳು ಏನೇ ಇರಲಿ ಪ್ರತಿಯೊಂದಕ್ಕೂ ಕಾಲದ ಪ್ರಸ್ತುತೆ ಎಂಬಂತೆ ಆಯಾ ಮಿತಿಯೊಳಗೆ ತನ್ನದೆಯಾದ ಪ್ರಭಾವ ಪ್ರೇರಣೆಯನ್ನು ಪಡೆದುಕೊಂಡಿರುತ್ತದೆ. ಅಂತೆಯೇ ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕನ್ನು ಗಮನಿಸಿದಾಗ ಅಲ್ಲಿ ಉಂಟಾಗಿರುವ ವಿವಿಧ ವಿಷಯ, ಸಾಮರ್ಥ್ಯ, ಬೆಳವಣಿಗೆ, ಕಲಾ ವೈಶಿಷ್ಟ್ಯತೆಗಳಿಗೆ ಅವರದೇ ಆದಂತಹ ಪ್ರೇರಣೆ, ಪ್ರಭಾವ ಗಮನಾರ್ಹವಾಗಿ ಅವರ ಮೇಲೆ ಬೀರಿರುವ ಸಂಗತಿಗಳನ್ನು ಆಯಾ ನೋಡುಗನ ಮನದಲ್ಲಿ ಬೇರೆ-ಬೇರೆ

ರೀತಿಯಲ್ಲಿ ಕಂಡುಬರುತ್ತದೆ.

ಜನಪದ ಅನ್ನುವ ಪದದ ವ್ಯಾಪ್ತಿಯಲ್ಲಿ ನೈಸರ್ಗಿಕವಾದಂತಹ ಬದಲಾವಣೆಯ ಹಂತಗಳು ತನ್ನಿಂದ ತಾನಾಗಿಯೇ ಸೃಷ್ಠಿ ಬದಲಾದಂತೆ ಕಲಾ ವಿಧಾನ ದೃಷ್ಟಿಯೂ ಸಹಜವಾದ ಬದಲಾವಣೆಯನ್ನು ಕಾಣುತ್ತದೆ. ಹಾಗೆಯೇ ಸಗರನಾಡಿನ ಜನಪದ ಕಲಾ ಸೂಕ್ಷ್ಮತೆಗಳು ಕಾಲದ ವರ್ತಮಾನಕ್ಕನುಗುಣವಾದಂತೆ ಪ್ರಭಾವ ತನ್ನ ಮಿತಿಯಲ್ಲಿ ಆವರಿಸಿಕೊಂಡಿದೆ. ಜನಪದ ಕಲೆ ದಿನನಿತ್ಯದ ಕಾರ್ಯ ಚಟುವಟಿಕೆಗಳಲ್ಲಿ, ಕಾಣಿಸಿಕೊಂಡಂತೆ, ಶಿಷ್ಟ ಪರಂಪರೆ ಬಿಡುವಿನ ಸಮಯದಲ್ಲಿ (ಅಕಾಡೆಮಿಕ್) ವಿವಿಧ ಪ್ರಗತಿಯಲ್ಲಿ ರೂಪ ಪಡೆದಿರುತ್ತದೆ. ಈ ಎಲ್ಲಾ ಸೂಕ್ಷ್ಮತೆಗಳು ಸಗರನಾಡಿನ ಜನಪದ ಶಿಲ್ಪಿಗಳ ಮೇಲೆ ತನ್ನದೇಯಾದ ಸುಳಿವುಗಳ ಮೂಲಕ ಪ್ರಭಾವಿಸಿಕೊಂಡಂತೆ ಭಾಸವಾಗುತ್ತದೆ. ಇನ್ನು ಪ್ರಖರ ಪ್ರಕ್ರೀಯೆಯ ಸಂದರ್ಭಗಳನ್ನು ವಿವೇಚಿಸಿಕೊಳ್ಳುವುದಾದರೆ ಈ ಕೆಳಗಿನ ವಿಶ್ಲೇಷಣೆಯನ್ನು ಗಮನಿಸಿಬೇಕಾಗುತ್ತದೆ.

ಪ್ರಭಾವ

ಸಗರನಾಡು ಶರಣ, ಸಂತರು, ಜ್ಞಾನಿಗಳು, ಕಲಾವಿದರು, ಸಾಹಿತ್ಯ, ರಾಜಕೀಯ ಹೀಗೆ ಸುಸಂಸ್ಕೃತಿಯ ಜೀವ ತಾಣವಾಗಿದೆ. ಇಂತಹ ನೆಲದಲ್ಲಿ ಜನಪದ ಶಿಲ್ಪಕಲಾವಿದರ ಪರಂಪರೆ ಸಮೃದ್ಧವಾಗಿದೆ. ಈ ಭಾಗದಲ್ಲಿ ಸಗರನಾಡು ವ್ಯಾಪ್ತಿ (ಶಹಾಪುರ, ಸುರಪುರ, ಜೇವರ್ಗಿ) ಮೂರು ತಾಲೂಕಗಳನ್ನೊಳಗೊಂಡ ಸಗರನಾಡಿನಲ್ಲಿ ಸುಮಾರು ಅರವತ್ತಕ್ಕೂ ಹೆಚ್ಚು ಜನಪದ ಶಿಲ್ಪಿಗಳು ಕಂಡು ಬರುತ್ತಾರೆ. ಪ್ರತಿಯೊಬ್ಬ ಶಿಲ್ಪಿಗಳ ಕಲೆ ಮತ್ತು ಬದುಕಿಗೆ ಅವರವರದೇಯಾದ ಪ್ರಭಾವನ್ನು ಪಡೆದಿರುವ ಸಂಗತಿಗಳಿವೆ. ಆಯಾ ಶಿಲ್ಪಿಯ ಕಲಾಬದುಕು ಸಮೃದ್ಧಿ ಸಂಕೇತದ ದೀವಿಗೆಯಾಗಿ ಕಂಡುಬರುವುದಕ್ಕೆ ಪ್ರಭಾವ ಬೀರಿರುವ ಸಂದರ್ಭಗಳ ಅನೇಕ.

ಸಗರನಾಡಿನ ನೆಲದಲ್ಲಿ ಅನೇಕ ರಾಜ ಮನೆತನಗಳಾದ ಸುರಪುರ ಸಂಸ್ಥಾನಿಕರು, ಬಹಮನಿ ಸುಲ್ತಾನರು ನಿಜಾಮರು, ಹೈಹಯರು, ಕಲ್ಯಾಣ ಚಾಲುಕ್ಯರು, ಹೀಗೆ ಹಲವು ರಾಜಮನೆತನಗಳು ಸಂರಕ್ಷಿಸಿ, ಪೋಷಿಸಿದ ಕಲೆಯ ಹೊಳಹುಗಳು ಜನಪದ ಕಲಾ ಪರಂಪರೆಯಲ್ಲಿ ತಾನಾಗಿಯೇ ಪ್ರಭಾವಿಸಿಕೊಂಡಿರುವ ಸಾಧ್ಯತೆಗಳಿವೆ. ಅವುಗಳ ಸೂಕ್ಷ್ಮತೆಗಳು ತಲಬಾಗಿಲು,

ಗೌರಿಮಾಡ ವಿನ್ಯಾಸದಲ್ಲಿ ಕಾಣುತ್ತೇವೆ. ಉದಾಃ ಎಲೆ, ಹೂ, ಬಳ್ಳಿ, ಮುಂತಾದ ಕಲಾತ್ಮಕ ಸುಳಿವುಗಳನ್ನು ಗಮನಿಸಬಹುದು.

ಸಗರನಾಡ ಜನಪದ ಶಿಲ್ಪಿಗಳಿಗೆ ವಿಶೇಷವಾಗಿ ತಮ್ಮ ಮನೆತನದ ಹಿರಿಯರು, ತಾತ, ಅಪ್ಪ, ಅಣ್ಣ ಹೀಗೆ, ವಂಶಪರಂಪರೆ ಅತ್ಯಂತ ಪ್ರಭಾವ ಬೀರಿದನ್ನು ಗಮನಾರ್ಹವಾಗಿ ಕಾಣುತ್ತೇವೆ. ಅಲ್ಲದೇ ಜನಪದರ ಸಾಂಸ್ಕೃತಿಕ ಸಂಭ್ರಮದ ದೇವರುಗಳಿಂದ ಮರಗಮ್ಮ, ದ್ಯಾವಮ್ಮ, ಪಾಲಿಕೆಮ್ಮ, ದುರಗಮ್ಮ, ಕೆಂಚಮ್ಮ ಎಂಬ ಗ್ರಾಮದೇವತೆಗಳ ಜಾತ್ರೆ ಈ ಶಿಲ್ಪಿಗಳ ಮೇಲೆ ಪ್ರಭಾವ ಅತ್ಯಂತ ಪರಿಣಾಮಕಾರಿಯಾಗಿ ಬೀರಿರುವುದರಿಂದ ದೈವಶಕ್ತಿಯ ದೇವತಾಶಿಲ್ಪಗಳನ್ನು ಪ್ರಭಾವಿಸಿಕೊಂಡು ಶಿಲ್ಪ ಕೆತ್ತನೆಗೆ ಮುಂದಾಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಮನೆತನದ ಹಿರಿಯರ ಕಲೆ ತಲಾ ತಲಾಂತರದಿಂದ ಪ್ರಭಾವಿಸಿಕೊಳ್ಳುವುದರ ಜೊತೆಗೆ ಧಾರ್ಮಿಕ ನಂಬಿಕೆಯ ಆಚರಣೆ ಗಮನಾರ್ಹವಾಗಿ ಈ ಶಿಲ್ಪಿಗಳಿಗೆ ಪೂರಕವಾದಂತಿದೆ. ಉದಾ: ಗಮನಿಸುವುದಾದರೆ ಈ ಜನಪದ ಶಿಲ್ಪಿಗಳಿಗೆ ಆರಾಧ್ಯ ದೇವರಾಗಿ ಕಾಳಿಕಾದೇವಿ, ಮತ್ತು ತಿಂಥಣಿಯ ಮೌನೇಶ್ವರರು ಪ್ರಾರ್ಥನಾ ದೇವರಾಗಿ ಪ್ರಭಾವಿಸಿಕೊಂಡು ಸಮುದಾಯದ ಕಾಯಕ ಭಕ್ತಿಯ ಪೂರಕವಾಗಿ ಈ ದೇವರನ್ನು ಆರಾಧಿಸುತ್ತ ಶಿಲ್ಪಗಳನ್ನು ರಚಿಸುವುದರೊಂದಿಗೆ ಮುಂದುವರೆದಿದ್ದಾರೆ.

ಜನಪದ ಶಿಲ್ಪಿಗಳ ಮೇಲೆ ತಮ್ಮ ಪರಂಪರೆ ಮತ್ತು ಆರಾಧನಾ ದೇವತೆಗಳು ಹಾಗೂ ರಾಜಾಶ್ರಿತ ನೆಲೆಯ ಕಲಾ ಸೂಕ್ಷ್ಮತೆಗಳು ಹೀಗೆ ಪ್ರತಿಯೊಂದು ಪೂರಕವಾದ ವಸ್ತುವಿಷಯ ಎಂಬಂತೆ ಪ್ರಭಾವ ಪಡೆದ ರೀತಿ ಹೀಗೆ ಪಸರಿಸಿಕೊಳ್ಳುತ್ತದೆ. ಕುದುರೆ ಶಿಲ್ಪಗಳು, ತಲಬಾಗಿಲು, ಗೌರಿಮಾಡ, ಪಡಸಾಲೆ ಜೋಡಣೆ, ಗ್ರಾಮ ದೇವತೆಗಳ ಶಿಲ್ಪ ರಥ ಶಿಲ್ಪ, ಪಲ್ಲಕ್ಕಿ, ಶೀಗಮ್ಮ ಗಂಗೆ, ಮುಂತಾದ ಜನಪದ ಶಿಲ್ಪಗಳನ್ನು ಆಯಾ ವಸ್ತುವಿನ ನೆಲೆಯಲ್ಲೇ ಮತ್ತಲವರನ್ನು ಪ್ರಭಾವಿಸಿಕೊಂಡಿದ್ದಾರೆ. ಸಹ ಶಿಲ್ಪ ರಚನೆಯ ತಂತ್ರಗಾರಿಕೆ, ಶೈಲಿ ಒಂದೇ ತೆರನಾದ ಆಕಾರವಿರುತ್ತದೆ.

ಪ್ರೇರಣೆ

ಸಗರನಾಡಿನ ಜನಪದ ಶಿಲ್ಪಿಗಳಿಗೆ ಬಹುಮುಖ್ಯವಾಗಿ ಪ್ರೇರಣೆ ಪಡೆದ ರೀತಿ ಅನನ್ಯವಾದದ್ದು, ಈ ಶಿಲ್ಪಿಗಳಿಗೆ ತಮ್ಮ ತಮ್ಮ ಮನೆಗಳಲ್ಲಿ ಹಿರಿಯ ಪ್ರೇರಣೆಯಿದೆ. ಅವರು ಹಾಕಿಕೊಟ್ಟಿರುವ

ಮಾರ್ಗದಲ್ಲಿ ಮುನ್ನಡೆದಿರುವ ಸಂಗತಿಗಳಿವೆ, ಅವರು ಮುತ್ತಾತ, ಅಜ್ಜ (ತಾತ) ದೊಡ್ಡಪ್ಪ ಚಿಕ್ಕಪ್ಪ, ತಂದೆ, ಅಣ್ಣ, ತಮ್ಮ ಹೀಗೆ ಮನೆಯ ಹಿರಿಯ, ಕಿರಿಯ ಶಿಲ್ಪಿಗಳ ಕಲಾ ಸೂಕ್ಷ್ಮತೆಗಳು ಅವರವರ ಕಲಾ ಪಯಣಕ್ಕೆ ಪ್ರೇರಣೆಯನ್ನು ದೊರೆತಿವೆ. ಅಂತೆಯೇ ಪ್ರತಿಯೊಬ್ಬ ಶಿಲ್ಪಿಗಳ ಪೋಷಣೆಗೆ ಜನಪದರ ಸಹಕಾರ, ಪ್ರೋತ್ಸಾಹವು ಅತ್ಯಂತ ಪರಿಣಾಮಕಾರಿಯಾಗಿ ಪ್ರೇರಣಾದಾಯಕವಾಗಿದೆ. ಊರ ಗೌಡರ, ಬಲವಂತರ ಪ್ರೋತ್ಸಾಹ, ಕಲೆಯ ಮೇಲೆ ಪ್ರೀತಿಯಿರುವ ಊರ ಜನರ ಪ್ರೇರಣೆಯೂ ಈ ಸಗರನಾಡ ಜನಪದ ಶಿಲ್ಪಿಗಳ ಮೇಲಾಗಿದೆ. ಕಲಾ ಮನೆತನದ ಹಿರಿಯ ಕಲಾ ಗುರುಗಳ ಪ್ರಜ್ಞೆ, ಮಾರ್ಗದರ್ಶನ, ಇವೆಲ್ಲವೂ ಬಹು ಸೂಕ್ಷ್ಮದಾಯಕ ಪ್ರೇರಣೆಯ ಸಂಗತಿಗಳಾಗಿವೆ.

ತಂತ್ರಗಾರಿಕೆ

ಈ ವಿಷಯಕ್ಕೆ ಪೂರಕವಾದಂತಹ ಶಿಲ್ಪಗಳ ರಚನಾ ಕ್ರಮದಲ್ಲಿ ಮತ್ತು ಶಿಲ್ಪಗಳ ಕಲಾ ಕೆತ್ತನೆಯ ಕ್ರಮದಲ್ಲಿ ಹಲವು ತಂತ್ರಗಾರಿಕೆಯಿಂದ ಶಿಲ್ಪಗಳನ್ನು ರೂಪಿಸಿದ್ದಾರೆ. ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಮತ್ತು ಉಗಮ ಶಿಲೆ, ಲೋಹ, ಮರ, ಮಣ್ಣು, ಮಾಧ್ಯಮದ ಮೂಲಕ ಶಿಲ್ಪ ರಚನೆಗೊಂಡಿವೆ. ಆಯಾ ವಸ್ತುವಿನ ಹಿನ್ನಲೆಯಲ್ಲಿ ಶಿಲ್ಪಿಗಳನ್ನು ರೂಪಿಸಿದ ತಂತ್ರಗಾರಿಕೆ ಈ ಕೆಳಗಿನಂತೆ ಕಾಣುತ್ತೇವೆ.

ಸಗರನಾಡ ಜನಪದ ಶಿಲ್ಪಕೆತ್ತನೆಯಲ್ಲಿ ಮುಖ್ಯವಾಗಿ ಮರ ಬಳಕೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಮರದಿಂದ ಕೆತ್ತನೆ ಮಾಡಿದ ಶಿಲ್ಪಗಳೆಂದರೆ ಮನೆಯ ತಲಬಾಗಿಲುಗಳು, ಗೌರಿಮಾಡಗಳು, ಪಡಸಾಲೆ ಜೋಡಣೆ, ಗ್ರಾಮದೇವತೆ ಶಿಲ್ಪಗಳು, ರಥ, ಪಲ್ಲಕ್ಕಿ, ಕುದುರೆ ಶಿಲ್ಪಗಳು ಕಿಟಕಿ, ಸೇರಿದಂತೆ ರೈತರ ವ್ಯವಸಾಯ ಕೇಂದ್ರಿತ ಉಪಕರಣ ಶಿಲ್ಪಗಳನ್ನು ಮಾಡಲಾಗಿದೆ.

ಶಿಲ್ಪ ಕೆತ್ತನೆಗೆ ಉಪಯೋಗವಾದ ಮರಗಳೆಂದರೆ ಕರಿಜಾಲಿ, ಬೇವಿನಕಟ್ಟಿಗೆ ಹಾಗೆಯೇ ಗ್ರಾಮದೇವತೆ ಶಿಲ್ಪಗಳನ್ನು ಮಾಡಲು ಮಡ್ಡಿ ಮರದ ಕಟ್ಟಿಗೆಯನ್ನು ಬಳಸುತ್ತಾರೆ. ಕುದುರೆ, ತಲಬಾಗಿಲು, ಗೌರಿಮಾಡಗಳು, ಪಡಸಾಲೆ ಜೋಡಣೆ, ಶಿಲ್ಪಗಳನ್ನು ಮಾಡಲು ಬೇವಿನ ಮರದ ತುಂಡುಗಳನ್ನು ಉಪಯೋಗಿಸುತ್ತಾರೆ. ಯಾವುದೇ ಮರದ ಶಿಲ್ಪಗಳನ್ನು ಮಾಡಲು ಮರದ

ತುಂಡುಗಳನ್ನು ಚೆನ್ನಾಗಿ ಒಣಗಿಸಿ ಹಾರಿದ ನಂತರ ಶಿಲ್ಪ ನಿರ್ಮಾಣಕ್ಕೆ ಮುಂದಾಗುತ್ತಾರೆ. ತಲಬಾಗಿಲು ಅಳತೆ ಆಯಾ ಮನೆಯ ವಾಸ್ತುವಿನ್ಯಾಸದ ಹಿನ್ನಲೆಯಾಗಿ ರೂಪಗೊಂಡಿರುತ್ತವೆ. ತಲಬಾಗಿಲು ತಕ್ಕಂತೆ ಕುದುರೆ ಶಿಲ್ಪಗಳನ್ನು ಸಹ ಮಾಡುತ್ತಾರೆ. ಎರಡು ಮೂರು ಅಡಿ ಎತ್ತರದ ಗಾತ್ರದಲ್ಲಿ ಕುದುರೆಗಳನ್ನು ಮಾಡುತ್ತಾರೆ. ಸುಮಾರು ಒಂದು ಅಥವಾ ಎರಡು ತಿಂಗಳವರೆಗೆ ಕುದುರೆ ಶಿಲ್ಪಗಳನ್ನು ಪಡಸಾಲೆ ಜೋಡಣೆಯ ಕೆಲಸ ಅಂಕಣದ ಸಮಯಾವಧಿಯಲ್ಲಿ ಎರಡು ಮೂರು, ಆರು, ಹತ್ತು, ತಿಂಗಳ, ಒಂದು ವರ್ಷದ ಅವಧಿಯಲ್ಲಿ ಮಾಡಲಾಗುತ್ತದೆ. ಗೌರಿಮಾಡವು ಸಹ ಎರಡು ಮತ್ತು ಮೂರು ತಿಂಗಳ ಕಾಲಾವಧಿಯಲ್ಲಿ ಮಾಡಲಾಗುತ್ತದೆ. ರಥ ಶಿಲ್ಪಗಳು ಪಲ್ಲಕ್ಕಿ ಗ್ರಾಮದೇವತೆ ಶಿಲ್ಪಗಳು, ಹೀಗೆ ಹಲವು ಬಗೆಯ ಶಿಲ್ಪಗಳು ಆಯಾ ಅವಧಿಯ ಹಿನ್ನೆಲೆಯಲ್ಲಿ ಸುಂದರವಾಗಿ ಕಲಾತ್ಮಕವಾಗಿ ಕೆತ್ತನೆ ಮಾಡುತ್ತಾರೆ. ಪ್ರತಿಯೊಂದು ಶಿಲ್ಪಕಲೆಯ ಅಂತರಂಗ ಹಲವು ಬಗೆಯ ತಂತ್ರ, ವಸ್ತು ವಿನ್ಯಾಸದ ನೆಲೆಯಲ್ಲಿ ರೂಪ ಪಡೆದಿರುತ್ತವೆ.

ಮುಂದೆ ಲೋಹ, ಮತ್ತು ಶಿಲಾ ಮಾಧ್ಯಮದ ಶಿಲ್ಪಗಳು ಸಹ ತನ್ನದೆಯಾದ ತಂತ್ರಗಳಿಂದ ರೂಪ ಪಡೆದಿರುತ್ತವೆ. ಲೋಹ ಮಾಧ್ಯಮ ಶಿಲ್ಪಗಳು ಕೊಡೆಕಲ್ ಗ್ರಾಮದ ಶಿಲ್ಪಿ ದಿವಂಗತ ಅವಣೆಪ್ಪ ಪತ್ತಾರ, ಭದ್ರಪ್ಪ ಪತ್ತಾರರವರು ಬೆಳ್ಳಿ ಬಂಗಾರ, ಹಿತ್ತಾಳೆ ಮತ್ತು ಕಂಚು ಮಾಧ್ಯಮದಿಂದ ಜನಪದ ದೇವರ ಮೂರ್ತಿ, ತೊಟ್ಟಿಲು ಶಿಲ್ಪಗಳನ್ನು ಮಾಡಿಕೊಟ್ಟರೆ ಬೆಳ್ಳಿ ಬಂಗಾರ, ಹಿತ್ತಾಳೆ ತಾಮ್ರವನ್ನು ಬೆಂಕಿಯಲ್ಲಿ ಬೇಯಿಸಿ ಉಬ್ಬು ಶಿಲ್ಪದ ಹಾಗೂ ದುಂಡು ಶಿಲ್ಪದ ಮಾದರಿಯಲ್ಲಿ ಶಿಲ್ಪಗಳನ್ನು ಮಾಡಿದ್ದಾರೆ. ಇನ್ನು ಕಂಚು ಮಾಧ್ಯಮದಲ್ಲಿ ಮಾನಯ್ಯ ಬಡಿಗೇರ ಗೋನಾಲ (ಎಸ್.ಡಿ) ಗ್ರಾಮದವರು ಹಾಗೆಯೇ ಅವರ ಗರಡಿಯಲ್ಲಿ ಪಳಗಿದ ಶ್ರೀಶೈಲ ಬಡಿಗೇರವರು ಸಹ ಕಂಚಿನ ಲೋಹದಿಂದ ದೇವತಾ ಶಿಲ್ಪಗಳನ್ನು ಮಾಡಿದ್ದಾರೆ. ಮಣ್ಣು, ಮೇಣದಿಂದ ಶಿಲ್ಪವನ್ನು ಮಾಡಿ ನಂತರ ಲೋಹದಿಂದ ಎರಕಹೊಯ್ದು ಕಂಚಿನ ಶಿಲ್ಪಗಳನ್ನು ಮಾಡುವ ತಂತ್ರಗಾರಿಕೆ ಬಲು ವಿಶೇಷವಾಗಿದೆ.

ಶಿಲಾ ಮಾಧ್ಯಮದಿಂದ ನಾರಾಯಣಪುರ ಗ್ರಾಮದ ಮೇಘರಾಜ ಪತ್ತಾರ, ಕಲ್ಲದೇವನಹಳ್ಳಿಯ ನಿಂಗಯ್ಯ ಗಣಾಚಾರಿ, ನಾರಾಯಣಪುರ ಗ್ರಾಮದ ಕಾಳಪ್ಪ ತಂದೆ ಬಸಣ್ಣ

ಬಡಿಗೇರ, ಮೌನೇಶ ತಂದೆ ಕಾಳಪ್ಪ ಕಂಬಾರ, (ಕಕ್ಕೇರಾ), ಹಾಗೂ ಗಾಯತ್ರಿ ತಂದೆ ಚಂದ್ರಶೇಖರ ಶಿಲ್ಪಿ ಇವರೆಲ್ಲರೂ ಕಪ್ಪು ವರ್ಣದ ಶಿಲೆಯಿಂದ ಶಿಲ್ಪಗಳನ್ನು ಮಾಡುವ ತಂತ್ರಗಾರಿಕೆ ಆಕರ್ಷಕ, ಒರಟಾದ ಕಲ್ಲಿನ ಮೇಲೆ ದೇವರ ಚಿತ್ರಗಳನ್ನು ರೇಖೆಯ ಮುಖಾಂತರ ರಚಿಸಿಕೊಂಡು ನಂತರ ಉಳಿ ಮಷಿನ್ (ಯಂತ್ರ) ಚಿಕ್ಕ ಚಿಕ್ಕ ಗಾತ್ರದ ಮಳಿಗಳಿಂದ ಸುಂದರವಾಗಿ ಶಿಲ್ಪಗಳನ್ನು ಕೆತ್ತನೆ ಮಾಡುತ್ತಾರೆ. ನಂತರ ಕಲ್ಲನ್ನು ಚೆನ್ನಾಗಿ ಕಚ್ಚಾ ಪೇಪರ್‌ನಿಂದ ಉಜ್ಜಿ, ಬ್ರೇಶ್‌ನಿಂದ ಪುಡಿ ಧೂಳು ಊದಿದ ಮೇಲೆ ಕಪ್ಪು ಬಣ್ಣವನ್ನು ಲೇಪಿಸುತ್ತಾರೆ. ಒಂದೊಂದು ಶಿಲ್ಪವನ್ನು ರೂಪಿಸಲಿಕ್ಕೆ ಹಲವಾರು ತಿಂಗಳ ಸಮಯ ತೆಗೆದುಕೊಳ್ಳುತ್ತಾರೆ. ಇವರ ಹಾಗೆಯೇ ಮರಗೆತ್ತನೆಯ ಶಿಲ್ಪಿಗಳು ಸಹ ಶಿಲ್ಪಗಳನ್ನು ಕೆತ್ತನೆ ಮಾಡಲು ಹಲವು ಬಗೆಯ ಉಳಿಗಳು (ಉಕ್ಕಿನ ಸಾಮಗ್ರಿಗಳು) ಕೊಡ್ತಿ, ರಂಧ, ಗರಗಸ, ಬಾಳಚಿ, ಮಟಗಲ್ಲು (ಆಳತೆ ಮಾಪನ ಸಾಮಗ್ರಿ) ಪೆನ್ಸಿಲ್, ಹಾಗೂ ಲೇಪನ ಮಾಡಲು ತಿಳಿಬಣ್ಣ ಹೀಗೆಲ್ಲ ಸಾಮಗ್ರಿಗಳಿಂದ ವರ್ಷಾನುಗಟ್ಟಲೇ ಸಮಯ ತೆಗೆದುಕೊಂಡು ಶಿಲ್ಪಗಳನ್ನು ಕೆತ್ತನೆ ಮಾಡುವ ತಂತ್ರಗಾರಿಕೆಯಿದೆ. ಹಾಗೆಯೇ ಗ್ರಾಮದೇವತೆಯ ರಥಶಿಲ್ಪ, ಪಲ್ಲಕ್ಕಿ ಶಿಲ್ಪಗಳನ್ನು ಸಹ ಪ್ರಾಮಾಣಿಕತೆ, ದೈವಶಕ್ತಿ, ಪ್ರಾರ್ಥನೆ, ದಿನನಿತ್ಯ ಪೂಜೆ ವಿಧಾನಗಳನ್ನು ಅನುಸರಿಸುವುದರೊಂದಿಗೆ ಈ ಶಿಲ್ಪಗಳನ್ನು ರೂಪಿಸಲು ಅನೇಕ ಬಗೆಯ ತಂತ್ರಗಾರಿಕೆಯನ್ನು ಅಳವಡಿಸಿಕೊಂಡು ಸುಂದರವಾದ ಶಿಲ್ಪಗಳನ್ನು ರೂಪಿಸುತ್ತಾರೆ. ಅವರ ಶಿಲ್ಪಕಲೆಯ ಮೆರಗಿನಿಂದ ಜನಜೀವನದ ಸಾಂಸ್ಕೃತಿಕ ಸಂಭ್ರಮಗಳು ಅದ್ದೂರಿಯಾಗಿ ನಡೆಯುತ್ತಿವೆ.

ಶೈಲಿ

ಯಾವುದೇ ಕಲೆಯಿರಲಿ ಅದರದೇಯಾದ ಶೈಲಿಯೆಂದೆ ಗುರುತಿಸಿಕೊಂಡಿರುತ್ತದೆ. ಆ ನೆಲೆಯಲ್ಲಿ ಸಗರನಾಡಿನ ಜನಪದ ಶಿಲ್ಪಕಲೆಯ ಶೈಲಿಯೂ ಮಹತ್ವದ ಪಾತ್ರ ವಹಿಸಿದೆ. ಸಗರನಾಡಿನ ವ್ಯಾಪ್ತಿಯ ಶಿಲ್ಪಿಗಳನ್ನು ಗಮನಿಸಿದಾಗ, ಕುದುರೆ, ತಲಬಾಗಿಲು, ಪಡಸಾಲೆ ಜೋಡಣೆ, ರಥ, ಪಲ್ಲಕ್ಕಿ, ಗ್ರಾಮದೇವತೆ, ಗೌರಿಮಾಡ, ಇನ್ನಿತರ ಶಿಲ್ಪಗಳಿರಬಹುದು. ಎಲ್ಲವೂ ಒಂದೇ ತೆರನಾದ ಶಿಲ್ಪಗಳಾಗಿ ಕಂಡು ಬರುತ್ತವೆ. ಜನಪದರ ಆಸಕ್ತಿ ಮತ್ತು ಹೀಗೆ ಇರಬೇಕೆಂಬ ವಿಶಿಷ್ಟ ಶೈಲಿಯ ಶಿಲ್ಪಗಳಾಗಿ ಕಂಡುಬರುತ್ತವೆ. ಶಿಲ್ಪಗಳನ್ನು ಗಮನಿಸಿದಂತೆ ಇದು ಜನಪದ ಕಲಾ ಶೈಲಿಯೆಂದೆ

ಅನ್ನುವ ದೃಷ್ಟಿಯಲ್ಲಿ ಗುರುತಿಸುವಂತೆ ಈ ಜನಪದ ಶಿಲ್ಪ ಶೈಲಿ ಹುಟ್ಟಿಕೊಂಡಿವೆ. ಯಾವ ಪ್ರಕಾರದ ಶಿಲ್ಪಿಯೇ ಆಗಿರಲಿ, ಯಾವುದೇ ಜನಪದ ಶಿಲ್ಪಗಳನ್ನು ರಚಿಸಲಿ ಒಂದೇ ತಾಳಮಾಣ ರೂಪ, ಲಾವಣ್ಯ, ಸಾದೃಶ್ಯ ಅಪ್ಪಟ ಜನಪದ ಕಲೆಯ ಸುಳಿವುಗಳಿಂದ ತನ್ನ ವಿಶಿಷ್ಟತೆಯನ್ನು ಪ್ರಸ್ತುತ ಪಡೆಸುತ್ತದೆ. ಸಗರನಾಡಿನ ಶಿಲ್ಪಿಗಳ ಕಲಾ ಬದುಕು ಬೇರೆ ಬೇರೆ ರೀತಿಯಲಿ ಕಂಡರೂ ಸಹ ಶಿಲ್ಪ ಕೆತ್ತನೆಯ ತಂತ್ರಗಾರಿಕೆ, ಪ್ರಭಾವ, ಪ್ರೇರಣೆ, ಶೈಲಿ ವಿಶೇಷವಾಗಿ ಒಂದೇ ಎಂಬ ಸಮತಾಭಾವವನ್ನು ಸೃಷ್ಟಿಸುವ ಕಲೆ ಅದು ಸಗರನಾಡಿನ ಜನಪದ ಶಿಲ್ಪಕಲೆ. ಈ ಕಲೆಯನ್ನು ವಿಶಿಷ್ಟ ಶೈಲಿಯನ್ನು ಉಳಿಸುವ, ಬೆಳೆಸುವ, ಪ್ರೋತ್ಸಾಹಿಸುವ, ಪ್ರಾಮಾಣಿಕ ಕರ್ತವ್ಯ ಸರಕಾರ ಮತ್ತು ನಾವು ನಿವೆಲ್ಲರೂ ಮಾಡಬೇಕಾಗಿದೆ.

ಅಧ್ಯಾಯ –೬
ಸಮಾರೋಪ

ಅಧ್ಯಾಯ–6

ಸಮಾರೋಪ

ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕಿನ ಬವಣೆಯನ್ನು ಅಧ್ಯಯನ ಮಾಡುವ ದೃಷ್ಟಿಯಿಂದ ಕಲಾವಿದರ ಕಲಾವೈವಿಧ್ಯತೆ ಹಾಗೂ ಬದುಕಿನೊಂದಿಗೆ, ಪ್ರೇರಣಾದಾಯಕವಾದ ನೆಲದ ಮಹತ್ವವನ್ನು ಕುರಿತಂತೆ ಚಿಂತಿಸಲಾಗಿದೆ. ಸಗರನಾಡು ಕಲೆ ಸಾಹಿತ್ಯ ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದದ್ದು, ಗಮನಾರ್ಹ. ಇಂತಹ ನೆಲದಲ್ಲಿ ಸುಮಾರು ಅರವತ್ತಕ್ಕೂ ಹೆಚ್ಚಿನ ಜನಪದ ಕಲಾ ಪ್ರಕಾರದ ಶಿಲ್ಪಿಗಳಿರುವುದು ಒಂದು ವಿಶೇಷತೆ. ಯಾದಗಿರಿ, ಮತ್ತು ಕಲಬುರಗಿ ಜಿಲ್ಲೆಗಳ ಸಮೂಹ ಸಾಂಸ್ಕೃತಿಕ ವಲಯವಾಗಿ ಪ್ರತ್ಯೇಕ ಜಿಲ್ಲೆಗಳಾದ ಸುರಪುರ, ಶಹಾಪುರ (ಯಾದಗಿರ ಜಿಲ್ಲೆ) ಜೇವರ್ಗಿ (ಕಲಬರಗಿ ಜಿಲ್ಲೆ) ಮೂರು ತಾಲೂಕಗಳ ವ್ಯಾಪ್ತಿ ಸಗರನಾಡು ಎಂಬ ಪ್ರದೇಶವಾಗಿದೆ.

ಈ ವ್ಯಾಪ್ತಿಯ ಜನಪದ ಶಿಲ್ಪಿಗಳು ತಮ್ಮಷ್ಟಕ್ಕೆ ತಾವು ಕಲಾ ಲೋಕದಲ್ಲಿ ತಲ್ಲಿನರಾಗಿ ಅನೇಕ ತಲಬಾಗಿಲು, ಕುದುರೆ, ರಥಗಳು, ಪಲ್ಲಕ್ಕಿ ಪಡಸಾಲೆ ಜೋಡಣೆ. ಗ್ರಾಮದೇವತೆ ಹಾಗೂ

ರೈತರ ಬದುಕಿನ ಅತ್ಯಮೂಲ್ಯ ವ್ಯವಸಾಯ ಕೇಂದ್ರಿತ ಸಲಕರಣೆ ಶಿಲ್ಪಗಳನ್ನು ಮಾಡುತ್ತಲೇ ಜೀವನ ಕಳೆಯುತ್ತಿದ್ದಾರೆ. ಅವರೆಲ್ಲರೂ ರಚಿಸಿದ ಶಿಲ್ಪಕಲಾಕೃತಿಗಳು ಇಂದು ಜನರ ಸಾಂಸ್ಕೃತಿಕ ಆರಾಧನಾ ನೆಲೆಯ ಶಿಲ್ಪಗಳಾಗಿ ಪ್ರಸಿದ್ಧಿ ಪಡೆದಿವೆ. ಜಾತ್ರೆ, ಹಬ್ಬ, ಹರಿದಿನಗಳಲ್ಲಿ ಪೂಜೆ, ಪ್ರಾರ್ಥನೆ ಹಾಗೂ ಮನೆಯ ದೇವಸ್ಥಾನದ ಅಲಂಕಾರಿಕ ಮತ್ತು ಉತ್ತಮ ಶಿಲ್ಪಕಲಾಕೃತಿಗಳಾಗಿ ಜನಮನ ಸೆಳೆದಿವೆ. ಸಗರನಾಡಿನ ಜನಪದ ಶಿಲ್ಪಗಳುನಾಡಿನ ವಿವಿಧೆಡೆ ಉತ್ತಮ ಹೆಸರನ್ನು ಮಾಡುವುದರೊಂದಿಗೆ ಅತ್ಯುತ್ತಮ ಬೆಲೆಯಲ್ಲಿ ಮಾರಾಟವು ನಡೆದಿವೆ. ಎಲೆ ಮರೆಯ ಕಾಯಿಯಂತಿರುವ ಅನೇಕ ಜನಪದ ಶಿಲ್ಪಿಗಳ ಕಲಾತ್ಮಕ ಬದುಕು ಈ ಪ್ರಬಂಧದಲ್ಲಿ ಕಾಣುತ್ತೇವೆ. ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕಿನ ವಿವರವನ್ನು ಈ ಕೆಳಕಂಡ ಅಧ್ಯಾಯಗಳಂತೆ ಹಂತ ಹಂತವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಸಂಶೋಧನ ಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಿಂದ ಸಿದ್ಧವಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ಅದ್ಯಯನದ ವ್ಯಾಪ್ತಿ, ಮತ್ತು ವಿಧಾನದ ಕುರಿತಂತೆ ವಿವೇಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸಗರನಾಡಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಸಗರನಾಡಿನ ಜನಪದ ಶಿಲ್ಪ ಪರಂಪರೆಯನ್ನು ಲೋಹ, ಮರ, ಶಿಲಾ ಮಾಧ್ಯಮದ ಶಿಲ್ಪಗಳ ವಿವರಣಾತ್ಮಕವಲ್ಲದೆ ಶಿಲ್ಪಗಳ ರಚನಾ ಪದ್ಧತಿ ಸೇರಿದಂತೆ ಎಲ್ಲವುಗಳನ್ನು ಅಧ್ಯಯನದ ಮಿತಿಯಲ್ಲಿ ವಿವರಣೆ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸಗರನಾಡಿನ ಜನಪದ ಶಿಲ್ಪಿಗಳನ್ನು ಶಹಾಪುರ, ಸುರಪುರ, ಜೇವರ್ಗಿ ತಾಲೂಕಿನ ಶಿಲ್ಪಿಗಳೆಂದು ಪಟ್ಟಿಮಾಡಿ ಪ್ರತಿ ಹಂತದ ತಾಲೂಕು ಶಿಲ್ಪಗಳನ್ನು ವಿಂಗಡಿಸಿ ಅವರ ಕಲೆ ಮತ್ತು ಬದುಕಿನ ಹಲವು ವಾಸ್ತವ ಸಂಗತಿಗಳನ್ನು ತಿಳಿಸಲಾಗಿದೆ. ಸಗರನಾಡಿನ ಪ್ರತಿಯೊಬ್ಬ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದರಲ್ಲಿ ಸಗರನಾಡಿನ ಜನಪದ ಶಿಲ್ಪಿಗಳ ಮೇಲಾದ ಪ್ರಭಾವ, ಪ್ರೇರಣೆ

ಮತ್ತು ಶಿಲ್ಪ ರಚಿಸುವ ತಂತ್ರಗಾರಿಕೆ ಹಾಗೂ ಶೈಲಿಯ ಕುರಿತಂತೆ ವಿವರಿಸಲಾಗಿದೆ.

ಅಧ್ಯಾಯ ಆರು ಸಮಾರೋಪವಾಗಿದ್ದು, ಈ ಸಂಶೋಧನ ಪ್ರಬಂಧ ಅಧ್ಯಯನದ ಎಲ್ಲಾ ಅಧ್ಯಾಯಗಳನ್ನು ಸಮೀಕ್ಷೆ ಮಾಡಲಾಗಿದೆ. ಸಗರನಾಡಿನ ಜನಪದ ಶಿಲ್ಪಿಗಳ ಕಲೆ ಮತ್ತು ಬದುಕಿನ ವಿವಿಧ ಸಂದರ್ಭ ಸಗರನಾಡಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತ ಕಲೆಗಳು, ಕಲಾವಿದರ ಮೇಲಾದ ಪ್ರಭಾವ, ಪ್ರೇರಣೆ, ತಂತ್ರಗಾರಿಕೆ ಸೇರಿದಂತೆ ಈ ಪ್ರಬಂಧವು ಒಟ್ಟು ಆರು ಅಧ್ಯಾಯಗಳ ಸಮಗ್ರ ಸಮೀಕ್ಷೆ ಈ ಅಧ್ಯಾಯದಲ್ಲಿ ನೀಡಲಾಗಿದೆ.

ಈ ಅಧ್ಯಯನದಿಂದ ಕಂಡು ಬಂದಿರುವ ಪ್ರಮುಖ ಫಲಿತಗಳು

* ಸಗರನಾಡಿನ ತಾಲೂಕ ಕೇಂದ್ರಗಳಾದ ಶಹಾಪುರ, ಸುರಪುರ, ಜೇವರ್ಗಿ ಈ ಮೂರು ತಾಲೂಕ ವ್ಯಾಪ್ತಿಯಲ್ಲಿ ಕಂಡುಬರುವ ಜನಪದ ಶಿಲ್ಪಿಗಳು ಸುಮಾರು ಅರವತ್ತೈದು ಜನ ಶಿಲ್ಪಿಗಳಿದ್ದಾರೆ. ಅವರೆಲ್ಲರೂ ಕುದುರೆ, ತಲಬಾಗಿಲು, ಗೌರಿಮಾಡ, ಪಡಸಾಲೆ ಜೋಡಣೆ ವಿನ್ಯಾಸ, ಗ್ರಾಮದೇವತೆಗಳ ಕೆತ್ತನೆ, ರಥಶಿಲ್ಪ ನಿರ್ಮಾಣ, ಪಲ್ಲಕ್ಕಿ, ಗೌರಿ, ಗಂಗೆ, ಶೀಗಮ್ಮ ಸೇರಿದಂತೆ ಹಲವಾರು ಶಿಲ್ಪಗಳನ್ನು ರಚಿಸುವುದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.
* ಕುದುರೆ, ತಲಬಾಗಿಲು, ಪಡಸಾಲೆ ಜೋಡಣೆಯಲ್ಲಿ ಸಾಮಾನ್ಯವಾಗಿ ಎಲ್ಲರೂ ಸಹಜ ಕ್ರಿಯೆ ಎಂಬಂತೆ ಕೆತ್ತನೆ ಮಾಡಿದರೂ ಸಹ ಈ ಪ್ರಕಾರದ ಶಿಲ್ಪಕೆತ್ತನೆಯಲಿ ಚೆನ್ನೂರು (ಜೆ) ಗ್ರಾಮದ ಬನ್ನಪ್ಪ ಬಡಿಗೇರ ಅನವಾರ ಗ್ರಾಮದ ಕಾಶಿಪತಿ ಬಡಿಗೇರ, ಸಾತಖೇಡ ಗ್ರಾಮದ ಕಲ್ಲಣ್ಣ ಕಂಬಾರ, ನಾಘಪ್ಪ ಕಂಬಾರ, ಪ್ರಕಾಶ ಕಂಬಾರ, ಮೌನೇಶ ಕಂಬಾರ, ಈರಣ್ಣ ಕಂಬಾರ, ನಾಡೋಜ ನಾಗಣ್ಣ ಬಡಿಗೇರ, ಬಸಣ್ಣ ಬಡಿಗೇರ, ಚಂದ್ರಶೇಖರ ವೈ, ಮಲ್ಲಿಕಾರ್ಜುನ ಚಿಕನಳ್ಳಿ, (ಕೋನಾಳದ ಶಾಂತಮೂರ್ತಿ ಮಲ್ಲಿಕಾರ್ಜುನ, ಗುರುಬಸಪ್ಪ, ಈರಣ್ಣ) ಸುರಪುರದ ಗೋವಿಂದಪ್ಪ ಕುದುರಿಮನಿ ಇವರೆಲ್ಲರು ಪ್ರಮುಖರು.
* ಗ್ರಾಮದೇವತೆ ಶಿಲ್ಪಗಳನ್ನು ಕೆತ್ತನೆ ಮಾಡುವುದರಲ್ಲಿ ದಿವಂಗತ ಕಾಡಪ್ಪ ಕದರಾಪೂರ, ಬಸಪ್ಪ ಬಡಿಗೇರ, ಬಸಣ್ಣ ಕಂಚಗಾರ, ಪ್ರಭುಲಿಂಗಪ್ಪ ಮಾಳನೂರು, ಕಾಳಪ್ಪ ಬಡಿಗೇರ

ಹುಣಸಗಿ, ಗಂಗಾಧರ ತುಮಕೂರು, ಕರ್ಣಪ್ಪ ಕಂಚಗಾರ ದೋರನಹಳ್ಳಿ ಅನವಾರದ ಕಾಶಿಪತಿ ಬಡಿಗೇರ, ದೊಡ್ಡ ಸಗರದ ಶಶಿಕುಮಾರ ಆಚಾರ್ಯ, ಕಾಳಪ್ಪ ತಂದೆ ತಿಪ್ಪಣ್ಣ ಬಡಿಗೇರ, ಕರಣಪ್ಪ ಕಂಚಗಾರ ದೊರನಹಳ್ಳಿ ನಾಡೋಜ ನಾಗಣ್ಣ ಬಡಿಗೇರ, ಬಸಣ್ಣ ಬಡಿಗೇರ, ಚಂದ್ರಶೇಖರ ವೈ, ಗುಂಡಪ್ಪ ಸಾತಖೇಡ ಇವರೆಲ್ಲವರೂ ಈ ಗ್ರಾಮದೇವತೆ ಶಿಲ್ಪ ಕೆತ್ತನೆಯಲ್ಲಿ ಪ್ರಮುಖವಾಗಿ ಕಂಡುಬರುತ್ತಾರೆ.

* ಬೆಳ್ಳಿ ಬಂಗಾರ, ಹಿತ್ತಾಳೆ, ಕಂಚು (ಲೋಹ) ಮಾಧ್ಯಮದಲ್ಲಿ ಶಿಲ್ಪಗಳನ್ನು ಮಾಡುವುದರಲ್ಲಿ ಕೊಡೆಕಲ್ ಗ್ರಾಮದ ಅವಣೆಪ್ಪ ಪತ್ತಾರ, ಭದ್ರಪ್ಪ ಪತ್ತಾರ, ಗೋನಾಲ (ಎಸ್.ಡಿ) ಗ್ರಾಮದ ಮಾನಯ್ಯ ಬಡಿಗೇರ, ಶ್ರೀಶೈಲ ಬಡಿಗೇರ ಮಾನಪ್ಪ ಪತ್ತಾರ ಇವರೆಲ್ಲರೂ ಪ್ರಮುಖರು.

* ನಾಡೋಜ ನಾಗಣ್ಣ ಬಡಿಗೇರ ಅವರ ಮನೆತನವು ಜನಪದ ಕಲಾ ಪ್ರಕಾರದ ಶಿಲ್ಪಗಳನ್ನು ಮಾಡುವುದರಲ್ಲಿ ಪುನಃ ತೊಡಗಿಸಿಕೊಂಡಿದ್ದಾರೆ. ಅಲ್ಲದೇ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಪ್ರಶಸ್ತಿ ಹಾಗೂ ಬಹುಮಾನವನ್ನು ಪಡೆದಿದ್ದಾರೆ. ಇದೇ ಮನೆತನದ ಬಸಣ್ಣ ಬಡಿಗೇರ ಅವರಿಗೆ ಕರ್ನಾಟಕ ಸರಕಾರದಿಂದ ಜಕಣಾಚಾರ್ಯ ಪ್ರಶಸ್ತಿ ಲಭಿಸಿದೆ. ದಿವಂಗತ ಶಿಲ್ಪಿ ನಾಗಣ್ಣ ಬಡಿಗೇರ ಅವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಗೌರವ ಪದವಿ ದೊರೆತಿದೆ. ಹಾಗೆಯೇ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಗೌರವ ಪ್ರಶಸ್ತಿ ಮತ್ತು ಸರಕಾರದಿಂದ ರಾಜ್ಯೋತ್ಸವ ಪ್ರಶಸ್ತಿಯು ಸಹ ಲಭಿಸಿದೆ.

* ಸಗರನಾಡಿನ ಭಾಗದ ಹಿರಿಯ ಜನಪದ ಶಿಲ್ಪಿಗಳಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ 1998ರಲ್ಲಿ ನಾಗಣ್ಣ ಬಡಿಗೇರ ಗೋನಾಲ (ಎಸ್.ಡಿ) ಸುರಪುರ ತಾ. 2001ರಲ್ಲಿ ಕೊಡೆಕಲ್ ಗ್ರಾಮದ ಶಿಲ್ಪಿ ಅವಣೆಪ್ಪ ಪತ್ತಾರ, 2007ರಲ್ಲಿ ಬಸಣ್ಣ ಬಡಿಗೇರ ಹಂದ್ರಾಳ ಗೋನಾಲ ಸುರಪುರ ತಾ. 2012ರಲ್ಲಿ ಬಸಣ್ಣ ಕಂಚಗಾರ ಕೊಡೆಕಲ್ ಸುರಪುರ ತಾ. 2012 ರಲ್ಲಿ ಚಂದ್ರಶೇಖರ ವೈ ಶಿಲ್ಪಿ ಕಕ್ಕೇರಾ ಸುರಪುರ ತಾ. ಅವರಿಗೆ ಗೌರವ ಪ್ರಶಸ್ತಿಗಳು ಲಭಿಸಿವೆ. ಒಟ್ಟು ಐದು ಜನ ಸಗರನಾಡಿನ ಹಿರಿಯ ಶಿಲ್ಪಿಗಳಿಗೆ ಅಕಾಡೆಮಿಯ

ಗೌರವ ಪ್ರಶಸ್ತಿ ದೊರೆತಿವೆ.

* ಸಗರನಾಡಿನ ಕುದುರೆ ಶಿಲ್ಪಗಳು ದೆಹಲಿ ಸೇರಿದಂತೆ ದೇಶ ವಿದೇಶಗಳಿಗೆ ಕೂಡ ಮಾರಾಟವಾಗಿವೆ. ಮನೆಗೆ ತಲಬಾಗಿಲು ಮತ್ತು ಕುದುರೆಗಳಿದ್ದರೆ ಮನೆಯ ಅಂದಕ್ಕೂ ಹಾಗೂ ಸಿರಿವಂತಿಕೆಯ ಲಕ್ಷಣವೆಂಬ ನಂಬಿಕೆಯಿದೆ.

* ಜೇವರ್ಗಿ ತಾಲೂಕಿನ ಸಾತಖೇಡ ಗ್ರಾಮದ ಶಿಲ್ಪಿ ಗುಂಡಪ್ಪ ಕಮ್ಮಾರ ಶಹಾಪುರ ತಾಲೂಕಿನ ಗೋನಾಲ ಎಸ್.ಡಿ ಗ್ರಾಮ ದಿವಂಗತ ನಾಡೋಜ ನಾಗಣ್ಣ ಬಡಿಗೇರವರು ಸೀಮೆ ಮರಗಮ್ಮ ದೇವಿಯ ಶಿಲ್ಪಗಳನ್ನು ಮಾಡುವುದರಲ್ಲಿ ಪ್ರಮುಖವಾಗಿ ಕಾಣುತ್ತಾರೆ.

* ಸಗರನಾಡಿನ ಭಾಗದ ಜನಪದ ಶಿಲ್ಪಿಗಳಲ್ಲಿ ಬಹುತೇಕ ವಿಶ್ವಕರ್ಮ ಜನಾಂಗದವರೇ ಹೆಚ್ಚು ಶಿಲ್ಪಗಳನ್ನು ಕೆತ್ತನೆ ಮಾಡುತ್ತಾರೆ. ಆಕಾರಣಕ್ಕಾಗಿ ಅವರ ಅಧಿದೇವತೆ ಕಾಳಿಕಾಮಾತೆ ಹಾಗೂ ತಿಂಥಣಿಯ ಮಾನಪ್ಪಯ್ಯನು ಪ್ರಮುಖ ದೇವರಾಗಿದ್ದಾರೆ.

* ತಳಸಮುದಾಯದ ಜನಪದ ಶಿಲ್ಪಿಯಾಗಿ ಸುರಪುರ ನಗರದಲ್ಲಿರುವ ದಿವಂಗತ ಗೋವಿಂದಪ್ಪ ಕುದುರಿಮನಿ (ಮ್ಯಾದರ) ಹಾಗೂ ದಿವಂಗತ ಮರೆಪ್ಪ ಕುದುರಿಮನಿ ಈ ಶಿಲ್ಪಿಗಳು ಪರಿಶಿಷ್ಟ ಪಂಗಡ ಸಮುದಾಯದವರಾಗಿದ್ದಾರೆ. ಈ ಶಿಲ್ಪಿಗಳು ಬದುಕಿರುವವರೆಗೂ ತಲಬಾಗಿಲು ಮತ್ತು ಕುದುರೆ ಶಿಲ್ಪಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿದ್ದಾರೆ. ಗೋವಿಂದಪ್ಪನವರ ಕದುರೆ ಶಿಲ್ಪವನ್ನು ಗಮನಿಸಿದ ಅಂದಿನ ಸುರಪುರ ಸಂಸ್ಥಾನದ ಅರಸರು ಗೋವಿಂದಪ್ಪನವರ ಕುದುರೆ ಶಿಲ್ಪಗಳನ್ನು ಮೆಚ್ಚಿ ಪ್ರೋತ್ಸಾಹಿಸಿ ಸನ್ಮಾನಿಸಿದ್ದಾರೆ. ಆ ಕಾರಣಕ್ಕಾಗಿ ಈ ಕಲಾಮನೆತನ ಮುಂದೆ ಕುದುರಿ ಮನಿ ಎಂಬ ಹೊಗಳಿಕೆಗೆ ಕಾರಣವಾಗಿದೆ. ಮುಂದೆ ಏಳಿಗರ ಎಂಬ ಮನೆತನಕ್ಕೆ ಕುದುರಿಮನಿ ಎಂದು ಕರೆಯಲು ಕಾರಣವಾಯಿತು.

* ಗೋವಿಂದಪ್ಪನವರು ತಳಸಮುದಾಯದ ವ್ಯಕ್ತಿಯಾಗಿರುವುದರಿಂದ ಗ್ರಾಮದೇವತೆ ಶಿಲ್ಪಗಳನ್ನು ಕೆತ್ತನೆ ಮಾಡಿರುವುದಿಲ್ಲ. ಕಾರಣ ನಾವು ಮಾಡಿದ ದೇವತೆ ಶಿಲ್ಪಗಳು ಪೂಜೆಗೆ ಅರ್ಹವಾಗುವುದಿಲ್ಲ. ಎಂಬ ಜನರ ನಂಬಿಕೆಯ ಫಲವಾಗಿ ಗ್ರಾಮ ದೇವತೆ ಶಿಲ್ಪಗಳನ್ನು

ಮಾಡದಿರುವುದಕ್ಕೆ ಪ್ರಮುಖ ಕಾರಣವಾಗಿದೆ. ಈ ಅಂಶಗಳಿಂದ ಮೌಢ್ಯತೆ ಜನರಲ್ಲಿ ತುಂಬಿ ತುಳುಕುತ್ತಿತ್ತು ಎಂಬುದನ್ನು ತಿಳಿಯುತ್ತೇವೆ.

* ಹಂದ್ರಾಳ ಗೋನಾಲ ಗ್ರಾಮದ ಶಿಲ್ಪಿ ಬಸಣ್ಣ ಬಡಿಗೇರವರ ಕಲೆಗೆ ಪ್ರೋತ್ಸಾಹಿಸಿ ಗೋನಾಲ (ಎಸ್.ಡಿ) ಗ್ರಾಮದ ಭೀಮರಾಯಗೌಡರು ನಾಲ್ಕು ಎಕರೆ ಜಮೀನನ್ನು ಬಸಣ್ಣನವರಿಗೆ ಕಾಣಿಕೆಯಾಗಿ ನೀಡಿದ ಸಂಗತಿ ಗಮನಾರ್ಹವಾಗಿದೆ.
* ಗ್ರಾಮದೇವತೆ ಶಿಲ್ಪಗಳು ವಿಶ್ವಕರ್ಮ ಜನಾಂಗದ ಶಿಲ್ಪಿಗಳೇ ಕೆತ್ತನೆ ಮಾಡಿ ಬಣ್ಣ ಲೇಪಿಸಿ, ಆ ಶಿಲ್ಪಕ್ಕೆ ಪೂಜಾ ವಿಧಾನಗಳಿಂದ ಜೀವ ತುಂಬುವ ಕಾರ್ಯ ಇವರಿಗೆ ಮೀಸಲಿರುವುದು ಕಂಡುಬಂದಿದೆ.
* ಸಗರನಾಡಿನ ಹಿರಿಯ ಜನಪದ ಶಿಲ್ಪಿಗಳಿಗೆ ಕಲಾ ಸೇವೆಯನ್ನು ಪ್ರಾಮಾಣಿಕವಾಗಿ ಗಮನಿಸಿ ಗೌರವ ಪ್ರಶಸ್ತಿ ಹಾಗೂ ಜಕಣಾಚಾರ್ಯ, ಪ್ರಶಸ್ತಿ, ತಿಂಗಳ ಮಾಶಾಸನ, ಅಲ್ಲದೆ ಸರಕಾರದಿಂದ ನಿವೇಶನ, ಮನೆ ಸೇರಿದಂತೆ ಸರಕಾರದ ಎಲ್ಲ ಸವಲತ್ತುಗಳನ್ನು ಒದಗಿಸಬೇಕಾಗಿದೆ. ಹಾಗೆಯೇ ಅವರ ವಂಶ ಪರಂಪರೆ ಮುಂದೆ ಶಿಲ್ಪ ಕೆತ್ತನೆಯಲ್ಲಿ ತೊಡಗಿಸಿಕೊಂಡಿದ್ದನ್ನು ಗಮನಿಸಿ ಯುವ ಶಿಲ್ಪಿಗಳಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಕಲಾಚಟುವಟಿಕೆಗಳಲ್ಲಿ ಭಾಗವಹಿಸಲು ಸರಕಾರ ಪ್ರೋತ್ಸಾಹಿಸಬೇಕಾಗಿದೆ.
* ಒಟ್ಟಿನಲ್ಲಿ ಸಗರನಾಡಿನ ಜನಪದ ಶಿಲ್ಪಗಳು ನಾಡಿನ ಕಲಾಶ್ರೇಷ್ಠತೆಗಾಗಿ ದುಡಿಯುತ್ತಿದ್ದಾರೆ. ಅವರ ಬದುಕು ಮತ್ತು ಕಲೆಯ ಬೆಳವಣಿಗೆಗಾಗಿ ಸರಕಾರ ಅವರ ಹತ್ತಿರ ಗಮನ ಹರಿಸಿ ಸೂಕ್ತ ಸವಲತ್ತುಗಳನ್ನು ಒದಗಿಸಿಕೊಡಬೇಕಾದ ಅನಿವಾರ್ಯತೆ ಸರಕಾರ ಮಾಡಬೇಕಾಗಿದೆ.

ಅನುಬಂಧಗಳು

ಅನುಬಂಧ–೧

ಪರಾಮರ್ಶನ ಗ್ರಂಥಗಳು

೧. **ಕಲಾ ಸಿದ್ಧಾಂತ** – ವಿ.ಕೃ.ಗೋಕಾಕ

ಸಾಹಿತ್ಯ ಪ್ರಕಾಶನ, ಕೊಪ್ಪೀಕರ್ ಬೀದಿ,

ಹುಬ್ಬಳ್ಳಿ – ೨೦೦೪.

೨. **ಕಲಾ ಸಂಸ್ಕೃತಿ** – ಎಂ.ಎಚ್.ಕೃಷ್ಣಯ್ಯ

ಸಪ್ನ ಬುಕ್ ಹೌಸ್,

ಬೆಂಗಳೂರು – ೨೦೧೨.

೩. **ಕಲಾ ಪ್ರಪಂಚ** – ಡಾ. ಶಿವರಾಮ ಕಾರಂತ

ಸಪ್ನ ಬುಕ್ ಹೌಸ್,

ಬೆಂಗಳೂರು – ೧೯೭೮

೪. **ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ** – ಕೆ.ವಿ. ಸುಬ್ರಹ್ಮಣ್ಯಂ

ಪ್ರಕಾಶನ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಬೆಂಗಳೂರು – ೨೦೦೭

೫. **ಕಲಾಕೋಶ** – ಪಿ.ಆರ್.ತಿಪ್ಪೇಸ್ವಾಮಿ

ಕರ್ನಾಟಕ ಲಲಿತಕಲಾ ಅಕಾಡೆಮಿ,

ಬೆಂಗಳೂರು – ೧೯೯೪

೬. **ಕರ್ನಾಟಕ ಆಧುನಿಕ ಶಿಲ್ಪಕಲೆ** – **ಕೆ.ವಿ. ಸುಬ್ರಹ್ಮಣ್ಯಂ**

ಪ್ರಕಾಶನ : ಕರ್ನಾಟಕ ಲಲಿತಕಲಾ ಅಕಾಡೆಮಿ,

ಬೆಂಗಳೂರು – ೧೯೯೪

೭. **ಕರ್ನಾಟಕದ ಶಿಲ್ಪ ಕಲಾವಿದರು** – **ಡಾ.ಚೂಡಾಮಣಿ ನಂದಗೋಪಾಲ**

ಪ್ರಕಾಶನ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಬೆಂಗಳೂರು – ೨೦೧೭

೮. **ಕಲಾನ್ವೇಷಣೆ** – **ಬಸವರಾಜ ಎಸ್ ಕಲೆಗಾರ**

ರೇಖಾಚಿತ್ರ ಪ್ರಕಾಶನ

ಕೊಂಕಲ್– ೨೦೧೪

೯. **ಭೂತಾರಾಧನೆ** – **ಶಿವರಾಮ ಕಾರಂತ, ಕೆ.**

ಐ.ಬಿ.ಎಚ್. ಪ್ರಕಾಶನ,

ಬೆಂಗಳೂರು – ೧೯೭೦

೧೦. **ಪ್ರಾಚೀನ ಭಾರತ** – **ಆರ್.ಎಸ್.ಶರ್ಮ**

ಪ್ರಕಾಶನ : ನವಕರ್ನಾಟಕ

೧೯೯೭

೧೧. **ಮುಖಗಳೊಂದಿಗೆ ಮುಖಾಮುಖಿ** – **ಕೆ.ವಿ.ಸುಬ್ರಹ್ಮಣ್ಯಂ**

ಕರ್ನಾಟಕ ಲಲಿತಕಲಾ ಅಕಾಡೆಮಿ

ಬೆಂಗಳೂರು – ೨೦೦೪

೧೨.ಸುರಗಿರಿ – ಜಿ.ವಿ. ಶಿವಕುಮಾರ ಅಮ್ಮಾಪುರ

ಪ್ರಕಾಶಕರು : ಸ್ವಾಗತ ಸಮಿತಿ

ಯಾದಗಿರಿ ಜಿಲ್ಲಾ ಮೂರನೇ ಕನ್ನಡ

ಸಾಹಿತ್ಯ ಸಮ್ಮೇಳನ, ಸುರಪುರ – ೨೦೧೭

೧೩.ಶಿಲ್ಪಕಲಾ ಪ್ರಪಂಚ – ಪಿ.ಆರ್.ತಿಪ್ಪೇಸ್ವಾಮಿ

ಪ್ರಕಾಶನ : ಕರ್ನಾಟಕ ಲಲಿತಕಲಾ ಅಕಾಡೆಮಿ,

ಬೆಂಗಳೂರು – ೧೯೯೪

೧೪. ಸಗರನಾಡ ದರ್ಶನ – ಎ. ಕೃಷ್ಣ

ಮಹಾಕವಿ ಲಕ್ಷ್ಮೀಶ ವಾಚನ ಸಂಘ,

ಸುರಪುರ – ೧೯೮೫

೧೫. ದೃಶ್ಯಕಲಾ ಸಂವೇದನೆ – ಪ್ರೊ. ಎಸ್.ಸಿ.ಪಾಟೀಲ

ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ

ಧಾರವಾಡ – ೨೦೧೫

೧೬. ಸಗರನಾಡ ಸಂಪದ – ಮಾನು ಸಗರ

ಸಗರನಾಡು ಪ್ರಕಾಶನ

ಸಗರ –

ಅನುಬಂಧ –2

ಸಗರನಾಡಿನ ಜನಪದ ಶಿಲ್ಪಕಲಾವಿದರ ವೃಕ್ಷ

ಶಹಾಪುರ ತಾಲೂಕಿನ ಜನಪದ ಶಿಲ್ಪಿಗಳ ವಿಳಾಸ

1) ಬನ್ನಪ್ಪ ತಂದೆ ದೇವಿಂದ್ರಪ್ಪ ಬಡಿಗೇರ

ಸಾ. ಚೆನ್ನೂರು (ಜೆ) ತಾ॥ ಶಹಾಪುರ, ಜಿ॥ ಯಾದಗಿರಿ – 585355

ಮೊ: 9663946847 – 9900230293

2) ದೇವಣ್ಣ ತಂದೆ ದೇವಿಂದ್ರಪ್ಪ ಬಡಿಗೇರ

ಸಾ॥ ಚೆನ್ನೂರು (ಜೆ)

ತಾ॥ ಶಹಾಪುರ, ಜಿ॥ ಯಾದಗಿರಿ – 585355

3) ಕಾಶಿಪತಿ ತಂದೆ ಮೋನಪ್ಪ ಬಡಿಗೇರ

ಸಾ॥ ಅನವಾರ, ತಾ. ಶಹಾಪುರ ಜಿ॥ ಯಾದಗಿರಿ

ಮೊ: 9008987264

4) ಮಲ್ಲಯ್ಯ ತಂದೆ ಕಾಳಪ್ಪ

ಸಾ॥ ದೊಡ್ಡ ಸಗರ, ತಾ॥ ಶಹಾಪುರ ಜಿ॥ ಯಾದಗಿರಿ – 585223

5) ಕಾಳಪ್ಪ ತಂದೆ ತಿಪ್ಪಣ್ಣ ಬಡಿಗೇರ

ಸಾ॥ ದೊಡ್ಡ ಸಗರ, ತಾ॥ ಶಹಾಪುರ ಜಿ॥ ಯಾದಗಿರಿ – 585223

ಮೊ: 9731627958

6) ದಿವಂಗತ ಭಗವಂತಪ್ಪ ಆಚಾರ್ಯ

ಸಾ॥ ದೊಡ್ಡ ಸಗರ ತಾ॥ ಶಹಾಪುರ ಜಿ॥ ಯಾದಗಿರಿ – 585223

ಮೊ: 9663998868– 984531218

7) ಶಶಿಕುಮಾರ ತಂದೆ ಭಗವಂತಪ್ಪ ಆಚಾರ್ಯ

ಸಾ॥ ದೊಡ್ಡ ಸಗರ ತಾ॥ ಶಹಾಪುರ ಜಿ॥ ಯಾದಗಿರಿ –585223

ಮೊ: 9663998868– 984531218

8) ಸಿದ್ದಲಿಂಗಪ್ಪ ತಂದೆ ದೇವಿಂದ್ರಪ್ಪ ಕಂಬಾರ

ಸಾ॥ ಶಿರವಾಳ ತಾ॥ ಶಹಾಪುರ ಜಿ॥ ಯಾದಗಿರಿ

ಮೊ: 9148100489, 7813990625

9) ದಿವಂಗತ ದೇವಿಂದ್ರಪ್ಪ ಕಂಬಾರ

ಸಾ॥ ಶಿರವಾಳ, ತಾ॥ ಶಹಾಪುರ ಜಿ॥ ಯಾದಗಿರಿ

10) ಕರ್ಣಪ್ಪ ತಂದೆ ಗುರಪ್ಪ ಕಂಚಗಾರ

ಸಾ॥ ದೋರನಹಳ್ಳಿ ತಾ॥ ಶಹಾಪುರ ಜಿ॥ ಯಾದಗಿರಿ

11) ಮಲ್ಲೇಶಪ್ಪ ತಂದೆ ಸಂಗಪ್ಪ ಕಂಬಾರ

ಸಾ॥ ದೊರನಹಳ್ಳಿ ತಾ॥ ಶಹಾಪುರ ಜಿ॥ ಯಾದಗಿರಿ

12) ದಿ. ಗಂಗಾಧರ ತಂದೆ ಚನ್ನಬಸಪ್ಪ ಬಡಿಗೇರ

ಸಾ॥ ತುಮಕೂರು ತಾ॥ ಶಹಾಪುರ ಜಿ॥ ಯಾದಗಿರಿ–585355

13) ದಿವಂಗತ ಕಾಡಪ್ಪ ಬಡಿಗೇರ

ಸಾ॥ ಕದರಾಪೂರ, ತಾ॥ ಶಹಾಪುರ ಜಿ॥ ಯಾದಗಿರಿ

14) ದಿವಂಗತ ಶ್ರೀಧರ ಬಡಿಗೇರ

ಸಾ॥ ತುಮಕೂರು

ತಾ॥ ಶಹಾಪುರ ಜಿ॥ ಯಾದಗಿರಿ–585355

15) ಸುರೇಂದ್ರ ಕೆ. ವಿಶ್ವಕರ್ಮ

ಪೊ॥ ಕೊಳ್ಳೂರು ಎಮ್.

ತಾ॥ ಶಹಾಪುರ ಜಿ॥ ಯಾದಗಿರಿ

ಮೊ: 9739468402

16) ಗಾಯತ್ರಿ ಕೆ. ವಿಶ್ವಕರ್ಮ

ಪೊ॥ ಕೊಳ್ಳೂರು ಎಮ್.

ತಾ॥ ಶಹಾಪುರ ಜಿ॥ ಯಾದಗಿರಿ

17) ಮರೆಪ್ಪ ತಂದೆ ದೇವಿಂದ್ರಪ್ಪ ಕಂಬಾರ

ಸಾ॥ ಶಿರವಾಳ

18) ಮಾನಪ್ಪ ತಂದೆ ಕಾಳಪ್ಪ ವಿಶ್ವಕರ್ಮ

ಪೊ॥ ದೊಡ್ಡ ಸಗರ

ತಾ॥ ಶಹಾಪುರ ಜಿ॥ ಯಾದಗಿರಿ

ಸುರಪುರ ತಾಲೂಕಿನ ಜನಪದ ಶಿಲ್ಪಿಗಳ ವಿಳಾಸ

1) ಮಾನಪ್ಪ ತಂದೆ ಗಣಪತಿ ಬಡಿಗೇರ

ಸಾ॥ ದೇವಪುರ ತಾ॥ ಸುರಪುರ ಜಿ॥ ಯಾದಗಿರಿ

ಮೊ: 9844982917

2) ಗಂಗಪ್ಪ ತಂದೆ ಕಾಳಪ್ಪ ಬಡಿಗೇರ

ಸಾ॥ ದೇವಪುರ, ತಾ॥ ಸುರಪುರ ಜಿ॥ ಯಾದಗಿರಿ

3) ಶಂಭುಲಿಂಗಪ್ಪ ತಂದೆ ಕಾಳಪ್ಪ ಬಡಿಗೇರ

ಸಾ॥ ದೇವಾಪುರ, ತಾ॥ ಸುರಪುರ ಜಿ॥ ಯಾದಗಿರಿ

ಮೊ: 9900984463

4) ಶಾಂತಮೂರ್ತಿ ತಂದೆ ಕಾಳಪ್ಪ ಬಡಿಗೇರ

ಸಾ॥ ಕೋನಾಳ, ತಾ॥ ಸುರಪುರ ಜಿ॥ ಯಾದಗಿರಿ

ಮೊ: 988038634

5) ಮಲ್ಲಿಕಾರ್ಜುನ ತಂದೆ ಕಾಳಪ್ಪ ಬಡಿಗೇರ

ಸಾ॥ ಕೋನಾಳ ತಾ॥ ಸುರಪುರ ಜಿ॥ ಯಾದಗಿರಿ

ಮೊ: 9972558653

6) ಗುರುಬಸಪ್ಪ ತಂದೆ ದೇವಿಂದ್ರಪ್ಪ ವಿಶ್ವಕರ್ಮ

ಸಾ॥ ಕೋನಾಳ ತಾ॥ ಸುರಪುರ ಜಿ॥ ಯಾದಗಿರಿ

ಮೊ: 9731284780

7) ಮಲ್ಲಿಕಾರ್ಜುನ ತಂದೆ ಗುರುಬಸಪ್ಪ ವಿಶ್ವಕರ್ಮ

ಸಾ॥ ಕೋನಾಳ, ತಾ॥ ಸುರಪುರ ಜಿ॥ ಯಾದಗಿರಿ

ಮೊ: 973128478

8) ಈರಣ್ಣ ತಂದೆ ಗುರುಬಸಪ್ಪ ವಿಶ್ವಕರ್ಮ

ಸಾ॥ ಕೋನಾಳ ತಾ॥ ಸುರಪುರ ಜಿ॥ ಯಾದಗಿರಿ

ಮೊ: 9731284780

9) ಭದ್ರಪ್ಪ ತಂದೆ ಅವಣೆಪ್ಪ ಪತ್ತಾರ

ಸಾ॥ ಕೊಡೆಕಲ್ ತಾ॥ ಸುರಪುರ ಜಿ॥ ಯಾದಗಿರಿ –585237

ಮೊ: 9972902969

10) ದಿವಂಗತ ಅವಣೆಪ್ಪ ತಂದೆ ಭದ್ರಪ್ಪ ಪತ್ತಾರ

ಸಾ॥ ಕೊಡೆಕಲ್ ತಾ॥ ಸುರಪುರ ಜಿ॥ ಯಾದಗಿರಿ–585237

11) ಬಸಣ್ಣ ಕಂಚಗಾರ

ಸಾ॥ ಕೊಡೆಕಲ್ ತಾ॥ ಸುರಪುರ ಜಿ॥ ಯಾದಗಿರಿ–585237

ಮೊ: 9902717148

12) ಕರಣಪ್ಪ ತಂದೆ ಕಾಳಪ್ಪ ಪತ್ತಾರ

ಸಾ॥ ಕೊಡೆಕಲ್ ತಾ॥ ಸುರಪುರ ಜಿ॥ ಯಾದಗಿರಿ–585237

ಮೊ: 9902717148

13) ಮೇಘರಾಜ ತಂದೆ ಕಾಳಪ್ಪ ಪತ್ತಾರ

ಸಾ॥ ನಾರಾಯಣಪುರ ತಾ॥ ಸುರಪುರ ಜಿ॥ ಯಾದಗಿರಿ

14) ಪ್ರಭುಲಿಂಗಪ್ಪ ತಂದೆ ಗಂಗಪ್ಪ ವಿಶ್ವಕರ್ಮ

ಸಾ॥ ಮಾಳನೂರು ತಾ॥ ಸುರಪುರ ಜಿ॥ ಯಾದಗಿರಿ

15) ಕಾಳಪ್ಪ ತಂದೆ ದೇವಿಂದ್ರಪ್ಪ ಬಡಿಗೇರ

ಸಾ॥ ಹುಣಸಗಿ ತಾ॥ ಸುರಪುರ ಜಿ॥ ಯಾದಗಿರಿ

ಮೊ: 9740327946

16) ದಿವಂಗತ ಗೋವಿಂದಪ್ಪ ತಂದೆ ಭೀಮಣ್ಣ ಕುದುರೆಮನೆ

ಸಾ॥ ತಾ॥ ಸುರಪುರ ಜಿ॥ ಯಾದಗಿರಿ

17) ಮರೆಪ್ಪ ತಂದೆ ಭೀಮಣ್ಣ ಕುದುರೆಮನಿ

ಸಾ॥ ಸುರಪುರ ಜಿ॥ ಯಾದಗಿರಿ

ಮೊ: 9686307804

18) ದಿ॥ ನಾಡೋಜ ನಾಗಣ್ಣ ತಂದೆ ಮೋನಪ್ಪ ಬಡಿಗೇರ

ಗೋನಾಲ (ಎಸ್.ಡಿ)

ತಾ॥ ಸುರಪುರ ಜಿ॥ ಯಾದಗಿರಿ

19) ಬಸಣ್ಣ ತಂದೆ ಮೋನಪ್ಪ ಬಡಿಗೇರ

ಹಂದ್ರಾಳ ಗೋನಾಲ

ತಾ॥ ಸುರಪುರ ಜಿ॥ ಯಾದಗಿರಿ

20) ಮಾನಯ್ಯ ತಂದೆ ನಾಗಣ್ಣ ಬಡಿಗೇರ

ಗೋನಾಲ (ಎಸ್.ಡಿ)

ತಾ॥ ಸುರಪುರ ಜಿ॥ ಯಾದಗಿರಿ

21) ಶಕುಂತಲಾ ಎಮ್ ಬಡಿಗೇರ

ಗೋನಾಲ (ಎಸ್.ಡಿ)

ತಾ॥ ಸುರಪುರ ಜಿ॥ ಯಾದಗಿರಿ

22) ಮಲ್ಲಿಕಾರ್ಜುನ ತಂದೆ ಬಸಣ್ಣ ಚಿಕನಳ್ಳಿ

ಹಂದ್ರಾಳ ಗೊನಾಲ

ತಾ॥ ಸುರಪುರ ಜಿ॥ ಯಾದಗಿರಿ

23) ನಿರ್ಮಲಾ ಎಮ್ ಚಿಕನಳ್ಳಿ

ಹಂದ್ರಾಳ ಗೋನಾಲ

ತಾ॥ ಸುರಪುರ ಜಿ॥ ಯಾದಗಿರಿ

24) ಶ್ರೀಶೈಲ ತಂದೆ ಬಸಣ್ಣ

ಹಂದ್ರಾಳ ಗೋನಾಲ

ತಾ॥ ಸುರಪುರ ಜಿ॥ ಯಾದಗಿರಿ

25) ಪವಿತ್ರ ಎಸ್ ಬಡಿಗೇರ

ಹಂದ್ರಾಳ ಗೋನಾಲ

ತಾ॥ ಸುರಪುರ ಜಿ॥ ಯಾದಗಿರಿ

26) ಮಾಧುರಿ ತಂದೆ ಮಾನಯ್ಯ ಬಡಿಗೇರ

ಗೋನಾಲ (ಎಸ್.ಡಿ)

ತಾ॥ ಸುರಪುರ ಜಿ॥ ಯಾದಗಿರಿ

27) ವರದರಾಜ ತಂದೆ ಮಾನಯ್ಯ ಬಡಿಗೇರ

ಗೋನಾಲ (ಎಸ್.ಡಿ)

ತಾ॥ ಸುರಪುರ ಜಿ॥ ಯಾದಗಿರಿ

28) ಪೃಥ್ವಿರಾಜ ತಂದೆ ಮಾನಯ್ಯ ಬಡಿಗೇರ

ಗೋನಾಲ್ (ಎಸ್.ಡಿ)

ತಾ॥ ಸುರಪುರ ಜಿ॥ ಯಾದಗಿರಿ

29) ಮೌನೇಶ ತಂದೆ ಬಸಣ್ಣ ಬಡಿಗೇರ

ಹಂದ್ರಾಳ ಗೋನಾಲ

ತಾ॥ ಸುರಪುರ ಜಿ॥ ಯಾದಗಿರಿ

30) ಚಂದ್ರಶೇಖರ ವೈ.

ಕಕ್ಕೇರಾ ತಾ॥ ಸುರಪುರ ಜಿ॥ ಯಾದಗಿರಿ

31) ಗಾಯತ್ರಿ ತಂದೆ ಚಂದ್ರಶೇಖರ

ಕಕ್ಕೇರಾ ಗ್ರಾಮ

ತಾ॥ ಸುರಪುರ ಜಿ॥ ಯಾದಗಿರಿ

32) ಕಾಳಪ್ಪ ತಂದೆ ಶರಬಣ್ಣ

ಸಾ॥ ನಾರಾಯಣಪುರ

ತಾ॥ ಸುರಪುರ ಜಿ॥ ಯಾದಗಿರಿ

33) ಶರಣಪ್ಪ ತಂದೆ ಈರಣ್ಣ ಪತ್ತಾರ

ಸಾ॥ ನಗನೂರ

ತಾ॥ ಸುರಪುರ ಜಿ॥ ಯಾದಗಿರಿ

34) ಮಾನಪ್ಪ ತಂದೆ ವೀರಸಂಗಪ್ಪ ಪತ್ತಾರ

ಸಾ॥ ಕೊಡೆಕಲ್

ತಾ॥ ಸುರಪುರ ಜಿ॥ ಯಾದಗಿರಿ

35) ಮೌನೇಶ ತಂದೆ ಕಾಳಪ್ಪ ಕಂಬಾರ

ಸಾ॥ ಕಕ್ಕೇರಾ

ತಾ॥ ಸುರಪುರ ಜಿ॥ ಯಾದಗಿರಿ

36) ನಿಂಗಯ್ಯ ಎಂ. ಗಣಾಚಾರಿ

ಕಲ್ಲದೇವನಹಳ್ಳಿ, ಪೊ: ವಜ್ಜಲ,

ತಾ. ಸುರಪುರ ಜಿ. ಯಾದಗಿರಿ– 585215

ಜೇವರ್ಗಿ ತಾಲೂಕಿನ ಶಿಲ್ಪಿಗಳು

1) ಪ್ರಕಾಶ ತಂದೆ ನಾಗಪ್ಪ ಕಂಬಾರ

ಸಾ॥ ಸಾತಖೇಡ ತಾ॥ ಜೇವರ್ಗಿ ಜಿ॥ ಕಲಬುರಗಿ

ಮೊ: 8861562011

2) ಮೋನೇಶ ತಂದೆ ನಾಗಪ್ಪ ಕಂಬಾರ

ಸಾ॥ ಸಾತಖೇಡ ತಾ॥ ಜೇವರ್ಗಿ ಜಿ॥ ಕಲಬುರಗಿ

ಮೊ: 8861562011

3) ನಾಗಪ್ಪ ತಂದೆ ಈರಪ್ಪ ಕಂಬಾರ

ಸಾ॥ ಸಾತಖೇಡ ತಾ॥ ಜೇವರ್ಗಿ ಜಿ॥ ಕಲಬುರಗಿ

ಮೋ 8861562011

4) ಕಲ್ಲಣ್ಣ ತಂದೆ ಸಾಯಬಣ್ಣ ಕಂಬಾರ

ಸಾ॥ ಸಾತಖೇಡ ತಾ॥ ಜೇವರ್ಗಿ ಜಿ॥ ಕಲಬುರಗಿ

ಮೊ: 9008785517

5) ದಿವಂಗತ ಮಾನಪ್ಪ ತಂದೆ ಗುರಪ್ಪ ಕಂಬಾರ

ಸಾ॥ ಸಾತಖೇಡ ತಾ॥ ಜೇವರ್ಗಿ ಜಿ॥ ಕಲಬುರಗಿ

6) ಈರಣ್ಣ ತಂದೆ ಮಾನಪ್ಪ ಕಂಬಾರ

ಸಾ॥ ಸಾತಖೇಡ ತಾ॥ ಜೇವರ್ಗಿ ಜಿ॥ ಕಲಬುರಗಿ

ಮೊ: 9591920320

7) ದೇವಿಂದ್ರಪ್ಪ ತಂದೆ ಪರಪ್ಪ ವಿಶ್ವಕರ್ಮ

ಸಾ॥ ನಂದಿಹಳ್ಳಿ ತಾ॥ ಜೇವರ್ಗಿ ಜಿ॥ ಕಲಬುರಗಿ

ಮೊ: 9901301367, 9964131367

8) ಪ್ರಭು ತಂದೆ ದೇವಿಂದ್ರಪ್ಪ ವಿಶ್ವಕರ್ಮ

ಸಾ॥ ನಂದಿಹಳ್ಳಿ ಪೊ. ಯಲಗೋಡ

ತಾ॥ ಜೇವರ್ಗಿ ಜಿ॥ ಕಲಬುರಗಿ

ಮೊ: 9901301367, 9964131367

9) ಲಕ್ಷ್ಮಣ ತಂದೆ ದೇವಿಂದ್ರಪ್ಪ ವಿಶ್ವಕರ್ಮ

ಸಾ॥ ನಂದಿಹಳ್ಳಿ ಪೊ॥ ಯಲಗೋಡ

ತಾ॥ ಜೇವರ್ಗಿ ಜಿ॥ ಕಲಬುರಗಿ

ಮೊ: 8105854418, 9901301367

10) ಜಕಣಾಚಾರ್ಯ

ಪೊ॥ ಯಲಗೋಡ ತಾ॥ ಜೇವರ್ಗಿ ಜಿ॥ ಕಲಬುರಗಿ

ಮೊ: 9611501129

11) ಗುಂಡಪ್ಪ ಕಂಬಾರ

ಸಾ॥ ಸಾತಖೇಡ

ತಾ॥ ಜೇವರ್ಗಿ ಜಿ॥ ಕಲಬುರಗಿ

ಅನುಬಂಧ -೩

ಸಂಕ್ಷೇಪಗಳು

೧) ಕ.ವಿ.ವಿ.ಹಂ	–	ಕನ್ನಡ ವಿಶ್ವವಿದ್ಯಾಲಯ ಹಂಪಿ
೨) ಪ್ರ	–	ಪ್ರಕಾಶನ, ಪ್ರಕಾಶಕರು,
೩) ಕ.ಶಿ.ಅ.ಬೆಂ	–	ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು
೪) ಕ.ಲ.ಕ.ಅ.	–	ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು
೫) ಜ. ಶಿ	–	ಜನಪದ ಶಿಲ್ಪಿ
೬) ಕ.ವಿ.ವಿ.ಧಾ	–	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೭) ಗು.ವಿ.ಕ	–	ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ
೮) ಕ.ಗ್ರಂ	–	ಕನ್ನಡ ಗ್ರಂಥಗಳು
೯) ಲೋಹ	–	ಕಂಚು, ಬಂಗಾರ, ಬೆಳ್ಳಿ ಹಿತ್ತಾಳೆ ಇತ್ಯಾದಿ
೧೦) ಮರಗೆತ್ತನೆ	–	ಮರದ ತುಂಡುಗಳಿಂದ ಮಾಡಿದ ಶಿಲ್ಪಕಲಾಕೃತಿಗಳು
೧೧) ಮಾಧ್ಯಮ	–	ಕಲಾಕೃತಿ ರಚನೆಯಾದ ವಿಧ
೧೨) ವಿಶ್ವಕರ್ಮ	–	ಸಮುದಾಯದ ಹೆಸರು
೧೩) ಮ್ಯಾದರ	–	ತಳ ಸಮುದಾಯದ ಹೆಸರು



ಶಿಲ್ಪಿ

ಮಲ್ಲಿಕಾರ್ಜುನ ತಂದೆ ಬಸಣ್ಣ ಬಡಿಗೇರ